ಶನಿವಾರ, ಮಾರ್ಚ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 74 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರ ನೇಮಕ ಸರಿಯೇ?

24, 25ರಂದು ಬ್ಯಾಂಕ್ ನೌಕರರ ಹೋರಾಟ 12

ಚಿನ್ನ: ನಟಿಗುಂಟು ದೀರ್ಘ ನಂಟು 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹92,390 (ಬೆಂಗಳೂರು)	₹1.05ಲಕ್ಷ (ಬೆಂಗಳೂರು)	86.94

ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಮುಸ್ಲಿಮರಿಗೆ ಸೌಲಭ್ಯ: ಸಚಿವ ಸಂಪುಟ ತೀರ್ಮಾನ

ಗುತ್ತಿಗೆ: ₹2 ಕೋಟಿವರೆಗೆ ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ-ಪಂಗಡ, ಹಿಂದುಳಿದವರು ಹಾಗೂ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ₹2 ಕೋಟಿ ವೆಚ್ಚದ ಕಾಮಗಾರಿಗಳು, ₹1 ಕೋಟಿವರೆಗಿನ ಸರಕು ಮತ್ತು ಸೇವೆಗಳ ಪೂರೈಕೆಯ ಟೆಂಡರ್‌ನಲ್ಲಿ ಮೀಸಲಾತಿ ಕಲ್ಪಿಸುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ.

ಗುತ್ತಿಗೆ ಮೀಸಲಾತಿಯು ಈವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ 1ರವರೆಗೆ ಅನ್ವಯವಾಗುತ್ತಿತ್ತು. ಈ ಸೌಲಭ್ಯವನ್ನು ಮುಸ್ಲಿಮರಿಗೆ (ಪ್ರವರ್ಗ 2-ಬಿ) ವಿಸ್ತರಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು ಮಂಡಿಸಿದ 2025-26ನೇ ಸಾಲಿನ ಬಜೆಟ್‌ನಲ್ಲಿ ಈ ಘೋಷಣೆ ಮಾಡಿದ್ದರು.

9ನೇ ಪುಟ ನೋಡಿ

17.15%	6.95%	4%	15%	4%
ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗಗಳ ಪ್ರವರ್ಗ 1	ಹಿಂದುಳಿದ ವರ್ಗಗಳ ಪ್ರವರ್ಗ 2-ಎ	ಪ್ರವರ್ಗ 2ಬಿ (ಮುಸ್ಲಿಂ)

ಕೆಪಿಎಸ್‌ಸಿ ಸದಸ್ಯರ ಸಂಖ್ಯೆ 8ಕ್ಕೆ ಇಳಿಕೆ?

ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯವೈಖರಿ ಮತ್ತು ಅಕ್ರಮಗಳ ಕುರಿತು ವಿಧಾನಸಭೆಯಲ್ಲಿ ಇತ್ತೀಚೆಗೆ ಪಕ್ಷಾತೀತವಾಗಿ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಆಯೋಗದ ಸದಸ್ಯರ ಸಂಖ್ಯೆಯನ್ನು 8ಕ್ಕೆ (ಅಧ್ಯಕ್ಷರು ಸೇರಿ) ಇಳಿಸಲು ಸಚಿವ ಸಂಪುಟ ಸಭೆಯಲ್ಲಿ ಒಲವು ವ್ಯಕ್ತವಾಗಿದೆ. ಈಗ ಸದಸ್ಯರ ಸಂಖ್ಯೆ 15 ಇದೆ. ಆಯೋಗಕ್ಕೆ ಅರ್ಹರನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಶೋಧ ಸಮಿತಿಯೊಂದನ್ನು ರಚಿಸಲು ಸಭೆಯಲ್ಲಿ ಚರ್ಚೆಯಾಗಿದೆ.

ಕೆಪಿಎಸ್‌ಸಿಯಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಲ್ಲಿ ಭರವಸೆ ನೀಡಿದ್ದರು. ಅದರಂತೆ ಮುಂದಿನ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು ಎಂದು ಮೂಲಗಳು ತಿಳಿಸಿವೆ. ಟಿ.ಎಂ.ವಿಜಯಭಾಸ್ಕರ್ ಅವರು 2023ರ ಫೆಬ್ರುವರಿ 3ರಂದು ಸರ್ಕಾರಕ್ಕೆ ಸಲ್ಲಿಸಿದ 2ನೇ ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿ ಸದಸ್ಯರ ಸಂಖ್ಯೆ ಕಡಿಮೆ ಮಾಡುವಂತೆ ಶಿಫಾರಸು ಮಾಡಿದ್ದರು.

ಅವರು ತಮ್ಮ ಶಿಫಾರಸಿನಲ್ಲಿ, 'ಕರ್ನಾಟಕದಲ್ಲಿ ವರ್ಷದಿಂದ ವರ್ಷಕ್ಕೆ ಆಯೋಗದ ಸದಸ್ಯರ ಸಂಖ್ಯೆ ಹೆಚ್ಚುತ್ತಿದೆ. ಆಯೋಗವು ಗೋಪ್ಯ ವಿಷಯಗಳಲ್ಲಿ ವ್ಯವಹರಿಸುವುದರಿಂದ ಅಂತಹ ವಿಸ್ತರಣೆಗಳು ಆಯೋಗದ ಮೇಲೆ ಪರಿಣಾಮ ಬೀರುತ್ತವೆ. ಎಲ್ಲಾ ಗ್ರೂಪ್-ಸಿ ಮತ್ತು ಕೆಲವು ಗ್ರೂಪ್ -ಬಿ ಹುದ್ದೆಗಳಿಗೆ ಸಂದರ್ಶನಗಳನ್ನು ತೆಗೆದುಹಾಕಿರುವುದರಿಂದ, ಈಗ ಸಂದರ್ಶನಗಳನ್ನು ನಡೆಸಲು ಸದಸ್ಯರಿಗೆ ಹೊರೆ ಗಣನೀಯವಾಗಿ ಕಡಿಮೆ ಆಗಿದೆ. ಆದ್ದರಿಂದ ಸದಸ್ಯರ ಸಂಖ್ಯೆ ಕಡಿಮೆ ಮಾಡುವುದು ಸಮರ್ಥನೀಯ. ಲೋಕಸೇವಾ ಆಯೋಗಗಳ ಪೈಕಿ ಕೇರಳ ರಾಜ್ಯವು ಜಿಲ್ಲಾ ಮಟ್ಟದ ಪ್ರಾದೇಶಿಕ ಕಚೇರಿಗಳನ್ನು ಹೊಂದಿದ್ದು, ಉತ್ತರ ಪ್ರದೇಶ ಒಳಗೊಂಡಂತೆ ಬೇರೆ ಯಾವುದೇ ರಾಜ್ಯವು 8ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿಲ್ಲ. ಆದ್ದರಿಂದ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಸೇರಿ ಸದಸ್ಯರ ಸಂಖ್ಯೆಯನ್ನು ಇಳಿಸಬೇಕು' ಎಂದು ಹೇಳಿದ್ದರು.

ಈ ಕುರಿತು ಸಚಿವ ಸಂಪುಟ ಸಭೆ ವಿಸ್ತೃತ ಚರ್ಚೆ ನಡೆಸಿ, ಅಧ್ಯಕ್ಷರೂ ಸೇರಿ ಸದಸ್ಯರ ಸಂಖ್ಯೆಯನ್ನು 8ಕ್ಕೆ ಇಳಿಸಿ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) ನಿಯಮಕ್ಕೆ ತಿದ್ದುಪಡಿ ಮಾಡಲು ತೀರ್ಮಾನಿಸಲಾಯಿತು. ಅಲ್ಲದೇ, ಹೈಕೋರ್ಟ್‌ನ 2016 ಆದೇಶ ಮತ್ತು ಸುಪ್ರೀಂಕೋರ್ಟ್‌ನ 2018ರ ಆದೇಶದಲ್ಲಿ ಸೂಚಿಸಿರುವಂತೆ ಆಯೋಗಕ್ಕೆ ಅರ್ಹ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯ್ಕೆ ಮಾಡಲು ಶೋಧ ಸಮಿತಿ ರಚಿಸಲು ಸಭೆ ಚರ್ಚಿಸಿತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮದುವೆಯಾಗಲು ಒತ್ತಾಯಿಸಿದ್ದಕ್ಕೆ ಕೃತ್ಯ • ಯುವಕನ ಬಂಧನ

ಉಸಿರುಗಟ್ಟಿಸಿ ಶುಶ್ರೂಷಕಿಯ ಹತ್ಯೆ

ಪ್ರಜಾವಾಣಿ ವಾರ್ತೆ

ಸ್ವಾತಿ ಬ್ಯಾಡಗಿ

ನಯಾಜ್ ಬೆಣ್ಣಿಗೇರಿ

ದುರ್ಗಾಚಾರಿ

ವಿನಾಯಕ

ಹಾವೇರಿ: ರಾಣೆಬೆನ್ನೂರು ತಾಲ್ಲೂಕಿನ ಪತ್ತೇಪುರ ಬಳಿ ತುಂಗಭದ್ರಾ ನದಿಯಲ್ಲಿ ಶವವಾಗಿ ಪತ್ತೆಯಾಗಿದ್ದ ಸ್ವಾತಿ ಬ್ಯಾಡಗಿ (22) ಎಂಬುವರ ಕೊಲೆ ಪ್ರಕರಣವನ್ನು ಭೇದಿಸಿರುವ ಹಲಗೇರಿ ಠಾಣೆಯ ಪೊಲೀಸರು, ನಯಾಜ್ ಇಮಾಮ್‌ಸಾಬ್ ಬೆಣ್ಣಿಗೇರಿ (28) ಎಂಬ ಆರೋಪಿಯನ್ನು ಬಂಧಿಸಿದ್ದಾರೆ. ಕೃತ್ಯಕ್ಕೆ ಸಹಕರಿಸಿದ್ದರು ಎನ್ನಲಾದ ಆತನ ಸ್ನೇಹಿತರಾದ ಮಾಸೂರಿನ ದುರ್ಗಾಚಾರಿ ಬಡಿಗೇರ ಮತ್ತು ವಿನಾಯಕ ಪೂಜಾರ ತಲೆಮರೆಸಿಕೊಂಡಿದ್ದಾರೆ.

'ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರು ಗ್ರಾಮದ ಸ್ವಾತಿ, ರಾಣೆಬೆನ್ನೂರಿನ ಆಸ್ಪತ್ರೆಯಲ್ಲಿ ಶುಶ್ರೂಷಕಿ ಆಗಿದ್ದರು. ಮಾರ್ಚ್ 6ರಂದು ಅವರ ಮೃತದೇಹ ಪತ್ತೆಯಾಗಿತ್ತು. ಮರಣೋತ್ತರ ಪರೀಕ್ಷೆ ನಡೆಸಿದಾಗ, ಕೊಲೆ ಎಂಬ ಸುಳಿವು ಸಿಕ್ಕಿತ್ತು. ಹಿರೇಕೆರೂರು ತಾಲ್ಲೂಕಿನ ಹಳೇ ವೀರಾಪುರದ ಆರೋಪಿ ನಯಾಜ್, ಇಬ್ಬರು ಸ್ನೇಹಿತರ ಜೊತೆ ಸೇರಿ ಕೃತ್ಯ ಎಸಗಿದ್ದ. ಆತನ ಸ್ನೇಹಿತರ ಶೋಧ ಮುಂದುವರಿದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ತಿಳಿಸಿದರು.

ಹೋರಿ ಹಬ್ಬದ ಸ್ನೇಹ: ಹೋರಿ ಹಬ್ಬದ ಸಂದರ್ಭದಲ್ಲಿ ಸ್ವಾತಿಗೆ ನಯಾಜ್, ದುರ್ಗಾಚಾರಿ ಮತ್ತು ವಿನಾಯಕ ಪರಿಚಯ ಆಗಿತ್ತು. ಸ್ವಾತಿ ಮತ್ತು ನಯಾಜ್ ನಡುವಿನ ಸ್ನೇಹ, ಸಲುಗೆಗೆ ತಿರುಗಿತ್ತು. ಸ್ವಾತಿ ತಮ್ಮನ್ನು ಮದುವೆಯಾಗುವಂತೆ ಒತ್ತಾಯಿಸಿದ್ದರು. ಆದರೆ, ನಯಾಜ್ ಮದುವೆಗೆ ಒಪ್ಪಿರಲಿಲ್ಲ.

9ನೇ ಪುಟ ನೋಡಿ



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

JOB OPPORTUNITIES

Teachers/ Professors

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

BDA SITE for Sale, Residential and Prime Commercial, Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BDA SITE for Sale, Residential and Commercial, Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road, 30x40, 40x60, 50x80. 9916592400

Engg/ Production Technical

JOB TITLE: Cold Head Machine Operator/ Thread Rolling Machine Operator cum Setter (3- 5 Years Experience) Work Location: Peenya, Bangalore. Job Summary: Experienced Header Machine and Thread machine Operator cum Setter with 3- 5 years of experience in Automotive manufacturing Components. Education: Mechanical Engineering/ ITI/ Diploma. Contact: Mary- 7204894432, Mail ID: hr.devilog@gmail.com

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Banashankari

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage, 9th Block, BDA, 30x40sft, West Facing, Park attached, Rs.1.08Crore. Owner 9845259332

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

Bannerghatta Road

BANNERUGHATTA Road Akshaya nagar 2406 sft East Facing A Khata Prime Property For Sale 9845069739 7019619289 9886370968 9380613718

Basaweshwaranagar

SITE FOR sale 40*60 EF BDA with 40 ft road Rs 24000/- per sq/ft slightly negotiable Basaveshwaranagar. Contact: 9916826976.

Jayanagar

BDA SITE for Sale, Residential and Prime Commercial, Jayanagara, JP Nagara, BMT Layout, HSR Layout, Koramangala 30x40, 40x60, 50x80. 9916592400

Kumaraswamy Layout

40X60 BDA SITE SALE, Kumaraswamy Layout, South Face, Extra Margin Land, Near 108 Ganesha Temple. Call: 9886913658.

Magadi Road

30X45 BMRD WEST SITE SALE Raghavendra Layout, Kadabagere, Magadi Road, 5500/- Sft. Brokers Excuse. Call: 8105688602.

Kanakapura Road

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

BDA-SITE FOR-SALE 20x30 and 40x60 at Good Location In Nadaprabhu Kempegowda Layout Call:7676900174 6363496142

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

FOR SALE BDA allotted and BDA auction @ KEMPEGOWDA LAYOUT Near to Chalagatta metro station Mysore road. 30x40, 40x60, 50x80 and 15000sqft Corner plot available. 9916592400

SITE FOR-SALE Kempegowda Layout 7th Block'B'Sector 30x40 W/F #1976, 1crore not negotiable.Contact: 9341231231/9980939453

KEMPEGOWDA LAYOUT Site For Sale. 1.4th Block 4160 40X60.2.7th Block 2792 30X40 Call: 9900444944 /9844262220

Nagarabhavi

SALE: SITE 30x60 Nagarabhavi 2nd Stage, 'A' Khata, Immediate Registration. Genuine Buyers. Contact: 6361819741.

Ramanagar

RESIDENTIAL CONVERTED RCUDA Approved Site @ Ramanagar 10000Sqft Attached Rajiv Gandhi Health University 1500/- P.Sft Owner - 9900115519

Bangalore South

RESIDENTIAL, COMMERCIAL Properties, K.R.Road, Basavanagudi, Jayanagar, Banasankari`6th stage, Girinagar`30x50, 40x60, 60x80. 9243132082/ 9036756718/ 9019978780.

Multiple Locations

Anything and Everything in Real Estate.

FOR SALE

- ✧ Plot For Sale in BTM 2nd Stage, 50,000 Sqft , Rs 16000/ Sqft
- ✧ House For Sale 1350 Sqft, Corner Property with East End Main Road, Jayanagar 4th 'T' Block with Ground +2 Floors, Commercial Property.
- ✧ 12 Guntas for Sale , (13000 Sqft) in Nellguli Village, 1.5kms From Kanakpura Main Road, 25 Kms From Bangalore, Bangalore Urban, South.
- ✧ 10 Guntas for Sale in Chickandodi, 5kms from Harohalli, off Harohalli-Anekal Road, Near Devasandra.

CONTACT
VICTORY PROPERTIES
(A legend in real estate with 35 years of experience in the industry.)
7411692219
8618576685
info@victoryproperties.in
www.victoryproperties.in

Vishweshwariah Layout

40X60 NORTH FACE HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site Sale Reasonable Price Call:9945191143 9945694783.

"VISHVESWARAIAH 1ST-BLOCK 30x40 South/ West facing Site Sale Near 100`ft Road Genuine Buyers only: 9845268611"

VISHWESHWARAIA LAYOUT 40x60 BDA SITE Sale 3rd Block East Facing 40 Feet Road. Excellent Location. Contact: 9035470616

VISHVESHWARAIAH LAYOUT 3rd Block 40x60 South Facing 10,500/- and East Facing 13,500/-. Contact: 9686469799

BDA VISHWESHWARAIAH LAYOUT 4TH BLOCK 50X80 EAST FACE 80FT ROAD PARALLEL 7750 NEGOTIABLE CONTACT: 8892901567

VISHWESHWARAIAH LAYOUT 7th Block 20x30 West Facing Sites Available Near Ullal RTO Good Location: 9980433004

Rajajinagar

SALE 35X45, BDA, Single Owner, West Facing, 17th G main, Rajajinagar, Opp Karur Bank, 28000/sqft, PH 9916800300

Srirampura

SRIRAMPURAM FOR SALE SITE 30x100 (3000.Sqft) Single`Owner Walkable`to SRIRAMPURAM Metro Attached`to Malleshwaram, Rajajinagar Nearest to Mantri, Orion, Lulu`Mall. Best Location for P.G.,Apartment Godown, Especially for Malleshwaram Business,Houses. Brokers`Excuse. Genuine Buyers Contact: 9916800300.

Bidadi

EAGLETON GOLF GATED COMMUNITY (BIDADI) NORTH FACING, 5400SFT, FOR SALE FANTASTIC VIEW, BUYERS CONTACT 9845077219

House

Banashankari

HOUSE SALE (G+3) 2BHK Each Floor @ Banashankari 5th Stage BDA 30x40 South Plot Beside POORNAPRAGNA LAYOUT, Near PATALAMMA TEMPLE BUS STOP Rs. 3 Crore Negotiable. Deviprasad 7022063532/ Shivakumar 9845875555

Basavanagudi

SALE 20X40, BDA Site with 3000sft Building, E Katha, Rental income, 2.40Cr. Nego. Owner: 9845743555

Srirampura

HOUSE FOR SALE in Sriramapuram, Land measuring 1500 sqft. Building 4000+. Ground+2. Covered Parking for 2 Cars. Contact: 9500995889, 9171918285.

J P Nagar

SALE JPNAGAR 2nd Phase Corner Property 30x40 Duplex-House 3BHK 1700sqft Granite-flooring Price 4cr Classic Estates 9845302589

Kammanahalli

INDEPENDENT HOUSE Sale 37x25 East Facing 900 Sqft RS Palya Near Kammanahalli Rs. 1.15Cr Slty Negotiable 8989030325

Padmanabha Nagar

PADMANABHA NAGAR, Kidney Foundation 1350sft. (220sft. Extra land) West, 2 unit House 3,35,00,000/-, excellent location- 9845144365.

Andrahalli

FOR SALE 25x33 feet 3000 sqt 2 & 1 BHK 5 house building. good rent income. E Katha. Andrahalli Bangalore. Price 99 laks. Call : 9901889675

Flat

Jayanagar

JAYANAGAR 8TH Block, ADARSHA RESIDENTIAL APARTMENT for SALE 3 BHK 2200 sft. All Amenities. 2 Carpark. 9880629468.

Mysore Road

GREATER BANGALORE Beside Eagleton Golf Resort. 15000 Sqft Converted Approved Land 3BHK House. 2300/ Sqft. 9036207777/ 9611146463

Wilson Garden

SALE 2 Contiguous Flats 3BHK 1850Sqft each. Total 3700Sqft. 3rd Floor, Price 3.42Cr. 11th Cross. Owner: 9844005129

Nagarabhavi

PLATS FOR-SALE Near Nagharbhavi Circle 2 & 3 BHK @ Prime-Location Ready to`Move in`Just`1.km from Metro-Station 9538828808 9845066608

Commerical

Vishweshwariah Layout

"VISHVESWARAIAH 6TH-BLOCK 60ft Road 50x80 South facing Commercial Property with 75 Squares Building. 9845500019/ 7019314962"

Industrial & Factory

Out-Station

IMMEDIATE SALE: INDUSTRIAL LAND-5.71 Acres with 145000 sqft high roof sheds/buildings on Thally road, HOSUR. Call: 9059026979 (Genuine buyers only).

Agricultural Land

Mysore

100 ACRES AGRICULTURE LAND For SAL Nanjangud Taluk 35 Lakhs /acre Genuine Buyers Contact: 9739627282

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BANASHANKARI 6TH Stage BDA Site's Wanted 50x80 40x60 30x40 20x30 Contact Shivaraju 9741466369 9845146725

Hosur Road

WANTED KARNATAKA Housing Board KHB Sites in Suriyacity Attibele and Chandapura Hosur Road 20x30, 30x40, 30x50. Call: 9900640887

Multiple Locations

REQUIREMENT 30x40, 40x60,`50x80 BDA Commercial &.Residential for`genuine buyers`in Jayanagar, J.P.Nagar, BSK 6th`Stage, Narayan`Nagar, Judicial Layout (Brokers excuse) Suraj Realtors- 9845232711

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

WANTED BDA SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

BUILDING AVAILABLE for Lease/ Rent suitable to run school with a built up area of 30000sqft approximately with vacant land at Thimmasandra Grama, Doddaballapura (Doddaballapura-Chickallapura Road). 2.5Km from Travellers Bungalow Circle) Bangalore Rural. For details Contact Mob- 9845033041/ 9980620978

TO LET Restaurant space 4450 sqft. available for rent in 80 Ft. road Koramangala 7th block, Next to Van Heusen, 1.5KM from Forum Mall, For Inquiry contact: 9964485388, 6364431666, 9742003920

RENT FIRST and Second Floor 550 sqft each with Lift, nearRajajinagar Metro .Vinod 9844116589

Industrial And Factory

RENT VACANT Industrial. Converted land 4 Acres Near Nelamangala. 1 km from the state highway 74, 40ft Wide Road with acompound wall North Facing Property as per Vastu 9845038343 reddymrr@gmail.com

Accommodation Wanted

House

WANTED FOR RENT BTM 2ND STAGE, JAYANAGAR ALL BLOCKS, INDEPENDENT 4 BHK HOUSE AS PER VAASTU CONTACT 9686894972

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

AUTOMOTIVE

Four Wheelers Selling

Hyundai

SALE I10 2011, THIRD OWNER, AUTOMATIC, SILVER, 71000 KMS DONE, EXCELLENT CONDITION 7411692219 / 8618576685

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

PERSONAL

Change of Name

I, PUTTARAJU 35 years S/o Anjinappa, Residing No. 01, Kattigenahalli, Near Doddamma Temple, at Government School, Yelahanka, Bangalore-560064, have changed myname to MUNINANJAPPA affidavit dt: 27/06/2024. Adhar no. 4930 46389885 Notary- S.R. Ravikumar

CHANGE OF NAME
I, **B R MURALI**
S/o Rajashekaraiah H, R/at Bellikere Village, Mutsandra Post, Hoskote Taluk, Bengaluru - 560087 have changed my name to
NAGENDRA KUMAR R
vide affidavit dated 14.03.2025 before Notary N. Narayanaswamy, Bengaluru. Henceforth I shall be called as
NAGENDRA KUMAR R only

I, SMT. VARALAXMI Wife of Kodandarama Reddy R/at No. 26/1, 1st Main, Garden Avenue, Battarahalli, Bangalore-49. I am also called as Manjula. So I have changed my name as per affidavit dated 23/1/2025 in future called by the joint name as Smt. Varalaxmi Manjula, Wife of Kodandarama Reddy.

I PILLICHANNAMMA 54 years Residing no. 01, Kattigenahalli, near Doddamma temple BENGALURU north Yelahanka BENGALURU 560064, same as name PILLAMMA adhar no 3126 8330 0887

‘ಶಾಂತವೇರಿ ಜೀವನವೇ ಪಾಠ’

‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’ ಪ್ರದಾನ ಮಾಡಿದ ಬಸವರಾಜ ಹೊರಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತವೇರಿ ಗೋಪಾಲಗೌಡರ ಜೀವನ, ನಡವಳಿಕೆ ಮತ್ತು ತತ್ವಗಳನ್ನು ಇಂದಿನ ರಾಜಕಾರಣಿಗಳು ಕಲಿಯಬೇಕು, ಅಳವಡಿಸಿಕೊಳ್ಳಬೇಕು ಎಂದು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಇಲ್ಲಿ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಜನಪದ ವಿದ್ವಾಂಸ ಕಾಳೇಗೌಡ ನಾಗವಾರ ಅವರಿಗೆ ‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಶಾಂತವೇರಿ ಗೋಪಾಲಗೌಡ-ರಂತಹ ರಾಜಕಾರಣಿಗಳು ಸಿಗುವುದು ಕಷ್ಟ. ಸರಳತೆ, ಸಜ್ಜನಿಕೆ ಹಾಗೂ ಸಂಕಷ್ಟಗಳಿಗೆ ಸ್ಪಂದಿಸುವ ಗುಣ ಹೊಂದಿದ್ದ ಅವರು ನಾಡು ಕಂಡ ಶ್ರೇಷ್ಠ ನಾಯಕರೊಬ್ಬರು. ರಾಜಕಾರಣಿಯಾಗಿದ್ದರೂ ಸಾಮಾನ್ಯರಂತೆ ಬಸ್ಸಲ್ಲೇ ಓಡಾಡುತ್ತಿದ್ದರು. ಹಳ್ಳಿಗಳಿಗೆ ಸೈಕಲ್‌ನಲ್ಲಿ ತೆರಳಿ, ಕಟ್ಟೆಯ ಮೇಲೆ ಕೂತು ಸ್ಥಳೀಯರ ಸಮಸ್ಯೆಗಳನ್ನು ಆಲಿಸುತ್ತಿದ್ದರು. ಈಗಿನ ಮಂತ್ರಿಗಳು, ಶಾಸಕರು ಈ ಮಾದರಿಯನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜವನ್ನು ರೂಪಿಸುವುದು ಸಾಧ್ಯವಾಗಲಿದೆ’ ಎಂದರು.

‘ಗೋಪಾಲಗೌಡರು ಮೂಢ ನಂಬಿಕೆ, ಕಂದಾಚಾರಗಳನ್ನು ನಂಬುತ್ತಿರಲಿಲ್ಲ. ಇಂದಿನ ಕೆಲ ರಾಜಕಾರಣಿಗಳು ಅದಕ್ಕೆ ತದ್ವಿರುದ್ಧವಾಗಿ ಇದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕಾಳೇಗೌಡ ನಾಗವಾರ ಮಾತನಾಡಿ, ‘ಅಂಬೇಡ್ಕರ್ ಮತ್ತು ಲೋಹಿಯಾ ಚಿಂತನೆಗಳಿಗೆ ಶಾಂತವೇರಿ ಗೋಪಾಲಗೌಡ ಮನ್ನಣೆ ನೀಡಿದ್ದರು. ಬಡವರು, ರೈತರ ಪರವಾಗಿ ಅಪಾರ ಕಾಳಜಿ ಹೊಂದಿದ್ದ ಅವರು, ಸರಳ ಹಾಗೂ ಪ್ರಾಮಾಣಿಕತೆಯಿಂದ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಕಾರ್ಲ್‌ಮಾರ್ಕ್ಸ್ ಅವರ ಜನ್ಮದಿನವೂ ಇಂದೇ ಆಗಿದೆ’ ಎಂದು ನೆನಪು ಮಾಡಿಕೊಂಡರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಗೌರವಸಲಹೆಗಾರ ಪಿ.ಮಲ್ಲಿಕಾರ್ಜುನಪ್ಪ, ಸಮಾಜವಾದಿ ಬಿ.ಕೃಷ್ಣಪ್ಪ ಅವರು ಭಾಗವಹಿಸಿದ್ದರು.

ಕಾಳೇಗೌಡ ನಾಗವಾರ ಅವರಿಗೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ‘ಶಾಂತವೇರಿ ಗೋಪಾಲಗೌಡ ಪ್ರಶಸ್ತಿ’ ಪ್ರದಾನ ಮಾಡಿದರು. ಬಿ. ಕೃಷ್ಣಪ್ಪ, ಸಿ.ಕೆ. ರಾಮೇಗೌಡ, ಎಲ್‌.ಎನ್‌. ಮುಕುಂದರಾಜ್‌, ಪಿ.ಮಲ್ಲಿಕಾರ್ಜುನಪ್ಪ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಐಟಿಪಿಎಲ್–ಮೈಸೂರು ರಸ್ತೆ: 5 ನಿಮಿಷಕ್ಕೊಂದು ಮೆಟ್ರೊ ಸಂಚಾರ ಸೇವೆ

ಬೆಂಗಳೂರು: ಅಧಿಕ ಜನದಟ್ಟಣೆ ಇರುವ ಸಂಜೆ ವೇಳೆ ನಮ್ಮ ಮೆಟ್ರೊ ನೇರಳೆ ಮಾರ್ಗದ ಐಟಿಪಿಎಲ್ ನಿಲ್ದಾಣದಿಂದ ಮೈಸೂರು ರಸ್ತೆ ನಿಲ್ದಾಣದ ನಡುವೆ ಮಧ್ಯಾಹ್ನ 3.56ರಿಂದ ರಾತ್ರಿ 8 ಗಂಟೆವರೆಗೆ ಐದು ನಿಮಿಷಕ್ಕೊಂದು ಟ್ರಿಪ್ ನಡೆಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಐಟಿಪಿಎಲ್‌ನಿಂದ ಸಂಚರಿಸುವ ಪ್ರಯಾಣಿಕರ ಬೇಡಿಕೆ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಸಂಜೆ 6ರಿಂದ 8ರವರೆಗೆ ಐದು ನಿಮಿಷ ಆವರ್ತನದಲ್ಲಿ ಮೆಟ್ರೊ ಸಂಚರಿಸುತ್ತಿತ್ತು. ಅದನ್ನು 2 ತಾಸು ಮುಂಚಿತವಾಗಿ ಆರಂಭಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮಯೂರ ಸುಧಾ ಓದಿರಿ

‘ಭೂಮಿಕಾ ಕ್ಲಬ್’ ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆ ವತಿಯಿಂದ ಮಾರ್ಚ್ 15ರಂದು ಮಧ್ಯಾಹ್ನ 2.30ಕ್ಕೆ ಇಂದಿರಾನಗರ ಕ್ಲಬ್‌ನಲ್ಲಿ 25ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

‘ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್’, ‘ಮಣಿಪಾಲ್ ಆಸ್ಪತ್ರೆಗಳ ಸಮೂಹ’ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಚಲನಚಿತ್ರ ನಟಿ, ಬಿಗ್‌ಬಾಸ್ ಸ್ಪರ್ಧಿ ಅನುಷಾ ರೈ ಉದ್ಘಾಟಿಸಲಿದ್ದಾರೆ. ವಿಚಾರಸಂಕಿರಣ ಹಾಗೂ ಸಂಗೀತ ಕಾರ್ಯಕ್ರಮ ಸೇರಿ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರಲಿದೆ.

ಪಾವಣಿ ಡಿ. ಮತ್ತು ಭವಾನಿ ಅವರಿಂದ ನೃತ್ಯ ಪ್ರದರ್ಶನ ನೀಡಲಿದ್ದಾರೆ. ಪಶ್ಚಿಮ ವಿಭಾಗದ ‘ಸೆನ್’ ಎಸಿಪಿ ಉಮಾರಾಣಿ ಎಸ್. ಅವರು ಸೈಬರ್ ಅಪರಾಧದ ಕುರಿತು ಮಾಹಿತಿ ನೀಡಲಿದ್ದಾರೆ. ಮಹಿಳೆಯರ ಆರೋಗ್ಯದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರು ತಿಳಿಸಿಕೊಡಲಿದ್ದಾರೆ.

‘ಉತ್ತರ ಕರ್ನಾಟಕ ಅಡುಗೆ ಮನೆ’ ಯುಟ್ಯೂಬ್ ಚಾನೆಲ್‌ನ ತ್ರಿವೇಣಿ ಅವರು ಅಡುಗೆ ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಪ್ರವೇಶ ಉಚಿತವಾಗಿದ್ದು, ವಿವರಗಳಿಗಾಗಿ 7338018541 ಸಂಪರ್ಕಿಸಬಹುದು. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

Freedom Healthy Cooking Oils Presents ಭೂಮಿಕಾ ಕ್ಲಬ್ Powered by manipalhospitals LIFE'S ON

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500 028
Corporate Identity Number (CIN) - L13100AP1958GOI001674

CONTRACTS DEPARTMENT

Tender Enquiry No.: HO(Works) / Contracts / Integrated MRSS / DIOM / 2025 / 1068 / 244 Dated: 15/03/2025

NMDC Limited, A “NAVARATNA” Public Sector Company under Ministry of Steel, Govt. of India, invites **online bids** through **MSTC Portal** from experienced, reputed and competent **domestic bidders** for the work of “Design, Engineering, Manufacture, Supply, Storage, Handling at site, Civil & Structural Work, Erection, Testing, Commissioning and Demonstration of Performance Guarantee for an **Integrated Main Receiving and Stepdown Substation (MRSS)** at Screening Plant–II (SP-II) Complex, Donimalai, Karnataka”

The detailed NIT and Bid documents can be viewed and / or downloaded from **15/03/2025 to 16/04/2025** from following website links:

1. NMDC website - **https://nmdcportals.nmdc.co.in/nmdctender**
2. Central Public Procurement Portal (CPP PORTAL) **http://www.eprocure.gov.in/epublish/app** and
3. MSTC Portal - portal **https://www.mstcecommerce.com/eprocn/** and search NMDC **Tender Event No NMDC/Head Office/Contract/44-25/ET/845.** For further help refer to 'vendor guide' given in **MSTC** website.

The bidders are requested to submit their bids online through **MSTC portal only.** The details of submission of bid through online are given in NIT. The Bidders on regular basis are required to visit the NMDC's website / CPP Portal / MSTC website for corrigendum, if any, at a future date.

For further clarification, the following can be contacted:

1) GM (Project, Contract & Steel), NMDC Limited, Hyderabad
Tel No. +91-040-23533536, **email: contracts@nmdc.co.in**
2) Sr. General Manager & Head – Contract, M. N. Dastur & Company (P) Ltd., KolKata Ph: +91–033–2225 0500/ 5420, **email: Souvik.G@dastur.com**

Executive Director (Works)

ಶಂಕುಸ್ಥಾಪನೆ

ತುಮಕೂರಿನಲ್ಲಿ ಶೆಟ್ಟಿಹಳ್ಳಿ ಗೇಟ್ ಬದಲಿಗೆ ಪಾದಚಾರಿ ಸಬ್‌ವೇ

ದಿನಾಂಕ: 15 ಮಾರ್ಚ್ 2025 | ಸಮಯ: 09:00 ಗಂಟೆಗೆ | ಸ್ಥಳ: ಶೆಟ್ಟಿಹಳ್ಳಿ ಗೇಟ್

ಮತ್ತು

ತುಮಕೂರಿನ ಭೀಮಸಂದ್ರ ಗೇಟ್‌ನಲ್ಲಿ ಎಲ್‌ಸಿ 43ರ ಬದಲಿಗೆ ರಸ್ತೆ ಕೆಳ ಸೇತುವೆ

ದಿನಾಂಕ: 15 ಮಾರ್ಚ್ 2025 | ಸಮಯ: 10:00 ಗಂಟೆಗೆ | ಸ್ಥಳ: ಭೀಮಸಂದ್ರ ಗೇಟ್

ಪ್ರಯೋಜನಗಳು

ಪಾದಚಾರಿ ಸಬ್‌ವೇಯು ಪಾದಚಾರಿಗಳು ಮತ್ತು ರೈಲುಗಳ ನಡುವಿನ ಅಪಘಾತಗಳ ಅಪಾಯವನ್ನು ನಿವಾರಿಸುತ್ತದೆ

ಭೀಮಸಂದ್ರದಲ್ಲಿರುವ ರೈಲ್ವೆ ಕೆಳ ಸೇತುವೆಯಿಂದ ರಾಜ್ಯ ಹೆದ್ದಾರಿಯ ಮೂಲಕ ಭೀಮಸಂದ್ರ ಗ್ರಾಮಕ್ಕೆ ದ್ವಿಚಕ್ರ ವಾಹನಗಳು ಮತ್ತು ಪಾದಚಾರಿಗಳು ಸುಗಮವಾಗಿ ಸಾಗಲು ಅನುಕೂಲವಾಗುತ್ತದೆ

ರಸ್ತೆ ಮತ್ತು ರೈಲು ಸಂಚಾರವನ್ನು ಸುಗಮಗೊಳಿಸುತ್ತದೆ

ಸ್ಥಳೀಯ ಮತ್ತು ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸುತ್ತದೆ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ

ಇವರಿಂದ

ವಿ. ಸೋಮಣ್ಣ

ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು

ನಿಮಗೆ ಆದರದ ಸುಸ್ವಾಗತ

ನೈಋತ್ಯ ರೈಲ್ವೆ

ನಗುಮುಖದಿಂದ ನಮ್ಮ ಸೇವೆ

PUB/848/AAF/PRB/SWR/2024-25

www.swr.indianrailways.gov.in | South Western Railways-SWR | SWRRLY | SWRRLY | sw_railways

ಬಣ್ಣದಲ್ಲಿ ಮಿಂದೆದ್ದ ಯುವತಿ –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಹೋಳಿ ಹಬ್ಬದಲ್ಲಿ ವಿದೇಶಿ ಮಹಿಳೆಯರು ಸಂಭ್ರಮಿಸಿದರು

ಬಣ್ಣ ಭಾವದ ಪುಳಕ

ನಗರದಲ್ಲಿ ಹೋಳಿ ಸಂಭ್ರಮ
ಪರಸ್ಪರ ಬಣ್ಣ ಎರಚಿ ಕುಣಿದು ಕುಪ್ಪಳಿಸಿದರು

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಜೈನ್ ಏಕ್ತಾ ಮಂಚ್ ವತಿಯಿಂದ ಹೋಳಿ ಹಬ್ಬ ಆಚರಿಸಲಾಯಿತು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪರಸ್ಪರ ಬಣ್ಣ ಎರೆಚಾಡಿ ನರ್ತಿಸಿದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಬಣ್ಣದ ಹಬ್ಬ ಹೋಳಿಯನ್ನು ಶುಕ್ರವಾರ ಸಡಗರದಿಂದ ಆಚರಿಸಲಾಯಿತು. ಬಿಸಿಲಿನ ನಡುವೆಯೂ ಮಕ್ಕಳು, ಯುವಕರು, ಹಿರಿಯರು, ಕುಟುಂಬದವರೊಂದಿಗೆ ದಿನಪೂರ್ತಿ ಬಣ್ಣ ಎರಚಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ, ಮನೆ, ಶಾಲಾ–ಕಾಲೇಜು, ಹೋಟೆಲ್‌ಗಳು, ಮೈದಾನಗಳಲ್ಲಿ ಪರಸ್ಪರ ಬಣ್ಣ ಹಚ್ಚಿ ಕುಣಿದಾಡಿದರು. ವಿವಿಧ ಬಡಾವಣೆಗಳಲ್ಲಿಯೂ ಮತಭೇದ ಮರೆತು ಸ್ನೇಹ, ಪ್ರೀತಿಯ ಸಂಕೇತವಾಗಿ ಬಣ್ಣಗಳ ಎರಚಿ ಸಂಬಂಧಗಳ ರಂಗು ಹೆಚ್ಚಿಸಿಕೊಂಡರು. ಹಲವು ರಸ್ತೆಗಳು ಬಣ್ಣದೋಕುಳಿಯಲ್ಲಿ ಮಿಂದವು.

ಚಿಕ್ಕಮಕ್ಕಳು ಪಿಚಕಾರಿಯಿಂದ ದೊಡ್ಡವರಿಗೆ ಬಣ್ಣ ಎರೆಚುತ್ತಿರುವುದು ಸಾಮಾನ್ಯವಾಗಿ ಕಂಡುಬಂತು. ಬಗೆಬಗೆಯ ಬಣ್ಣಗಳಲ್ಲಿ ಮಿಂದೆದ್ದು ಗುರುತು ಸಿಗಲಾರದಂತೆ ಆಗಿದ್ದರು. ಈ ಸಂಭ್ರಮಕ್ಕೆ ಸಂಗೀತ ಮತ್ತಷ್ಟು ಉತ್ಸಾಹ ತುಂಬಿತು.

ನಗರದಲ್ಲಿ ನೆಲಸಿರುವ ಉತ್ತರ ಕರ್ನಾಟಕ ಭಾಗದ ಜನ ಕಾಮದಹನ ಮಾಡಿ, ಬಣ್ಣದೋಕುಳಿ ಆಡಿದರು. ಖಾಸಗಿ ಕಂಪನಿಗಳ ಕಚೇರಿಗಳಲ್ಲಿ ಹೋಳಿ ಸಂಭ್ರಮ ಜೋರಾಗಿತ್ತು. ಕೆಲವು ವಸತಿ ಸಮುಚ್ಚಯಗಳು ಹಾಗೂ ಮನೆಗಳಲ್ಲಿ ಪರಸ್ಪರ ಬಣ್ಣ ಹಚ್ಚಿ, ಸಿಹಿ ಸವಿದರು. ಮತ್ತೆ ಕೆಲ ಯುವಕರು ಸ್ನೇಹಿತರೊಂದಿಗೆ ಗುಂಪು ಗುಂಪಾಗಿ ದ್ವಿಚಕ್ರ ವಾಹನದಲ್ಲಿ ನಗರದ ಪ್ರಮುಖ ಬಡಾವಣೆಗಳಲ್ಲಿ ಸಂಚರಿಸಿ ಹೋಳಿ ಆಚರಿಸಿದರು. ಹಿರಿಯರು ಸಹ ಹಬ್ಬದ ಸಂಭ್ರಮಕ್ಕೆ ಸಾಕ್ಷಿಯಾದರು.

ಚಿಕ್ಕಪೇಟೆಯಲ್ಲಿ ವ್ಯಾಪಾರಿಗಳು, ವಿಜಯನಗರ, ದಾಸರಹಳ್ಳಿ, ದೀಪಾಂಜಲಿನಗರ, ದೊಮ್ಮಲೂರು, ಇಂದಿರಾನಗರ, ಕಮ್ಮಗೊಂಡನಹಳ್ಳಿ, ಯಲಹಂಕ, ರಾಜಾಜಿನಗರ, ಪೀಣ್ಯ, ಸುಮ್ಮನಹಳ್ಳಿ, ವಿ.ವಿ.ಪುರಂ, ವಸಂತನಗರ, ಕೆಂಗೇರಿ, ನಾಯಂಡಹಳ್ಳಿ, ಬನಶಂಕರಿ, ಬಸನಗುಡಿ, ಜೆ.ಪಿ.ನಗರ ಸೇರಿದಂತೆ ಹಲವು ಬಣ್ಣ ಎರಚಿ ಖುಷಿಪಟ್ಟರು.

ಚರ್ಚ್ ಸ್ಟ್ರೀಟ್, ಶೇಷಾದ್ರಿಪುರ, ಕುಮಾರಕೃಪಾ ವೃತ್ತದಲ್ಲಿ ಯುವಕ–ಯುವತಿಯರು ಬಣ್ಣದಾಟದಲ್ಲಿ ತೊಡಗಿದ್ದರು. ಡಿ.ಜೆ ಸಂಗೀತಕ್ಕೆ ಮೈಮರೆತು ಯುವಜನರು ಕುಣಿದು ಕುಪ್ಪಳಿಸಿದರು.

ಬಣ್ಣದೋಕುಳಿ ಮಿಂದೆದ್ದು ಬಂದವರಿಗೆ ಮೆಟ್ರೊದಲ್ಲಿ ಪ್ರಯಾಣಿಸಲು ಅವಕಾಶ ನೀಡಲಿಲ್ಲ. ಮೈ ಮತ್ತು ಬಟ್ಟೆ ಮೇಲೆ ಬಣ್ಣ ಸುರಿದುಕೊಂಡು ಬಂದಿದ್ದವರನ್ನು ಮೆಟ್ರೊ ಸಿಬ್ಬಂದಿ ಪ್ರವೇಶ ದ್ವಾರದಲ್ಲೇ ತಡೆದು ವಾಪಸ್ ಕಳುಹಿಸಿದ್ದ ದೃಶ್ಯ ಕಂಡುಬಂತು.

ಪಿಚಕಾರಿ ಹಿಡಿದು ಸಂಭ್ರಮಿಸಿದ ಮಗು

ಸುದ್ದಿ 2 ನಿಮಿಷ

ನಿರ್ವಾಹಕಿಯ ಚಾಣಾಕ್ಷತನ ಮೂವರ ಬಂಧನ

ಬೆಂಗಳೂರು: ಬಿಎಂಟಿಸಿ ಬಸ್‌ನ ನಿರ್ವಾಹಕಿ ಹಾಗೂ ಚಾಲಕನ ಚಾಣಾಕ್ಷತನದಿಂದಾಗಿ ಪ್ರಯಾಣಿಕರ ಮೊಬೈಲ್, ಚಿನ್ನಾಭರಣ ಕಳ್ಳತನ ಮಾಡಿದ್ದ ಓಜಿಕುಪ್ಪಂ ತಂಡದ ಮೂವರನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಓಜಿಕುಪ್ಪಂನ ಅಮೃತಾ (36), ಕೋಕಿಲಾ (34), ನಕ್ಷತ್ರಾ (30) ಬಂಧಿತರು.

ಮಾರ್ಚ್ 10ರಂದು ರಾತ್ರಿ ಮೆಜೆಸ್ಟಿಕ್‌ನಿಂದ ದೇವನಹಳ್ಳಿ ಬಳಿಯ ವಿಜಿಪುರಕ್ಕೆ ತೆರಳುತ್ತಿದ್ದ ಬಿಎಂಟಿಸಿ ಬಸ್ ಅನ್ನು ಆರೋಪಿಗಳು ಏರಿದ್ದರು. ಬಸ್‌ನಲ್ಲಿದ್ದ ಮಹಿಳಾ ಪ್ರಯಾಣಿಕ-ರೊಬ್ಬರ ಬ್ಯಾಗ್‌ನಲ್ಲಿದ್ದ ಮೊಬೈಲ್ ಅನ್ನು ತಂಡದ ಒಬ್ಬ ಮಹಿಳೆ ಕಳ್ಳತನ ಮಾಡಿದ್ದಳು. ಇದನ್ನು ಬಿಎಂಟಿಸಿ ಬಸ್‌ನ ನಿರ್ವಾಹಕಿ ಗಮನಿಸಿದ್ದರು. ಕೂಡಲೇ ಚಾಲಕನ ಗಮನಕ್ಕೆ ತಂದರು. ಚಾಲಕ ಬಸ್‌ನ ಬಾಗಿಲುಗಳನ್ನು ಲಾಕ್ ಮಾಡಿದರು. ಇದರಿಂದ ಆತಂಕಗೊಂಡ ಮಹಿಳೆ, ‘ಮಗು ಅಳುತ್ತಿದೆ. ನಾವು ಹೋಗಬೇಕು, ಬಾಗಿಲು ತೆಗೆಯಿರಿ’ ಎಂದು ಹೇಳಿ ಪರಾರಿಯಾಗಲು ಯತ್ನಿಸಿದ್ದಳು. ಇದಕ್ಕೆ ಚಾಲಕ ಒಪ್ಪದೇ ಪೊಲೀಸರಿಗೆ ಮಾಹಿತಿ ನೀಡಿದರು. ಕೊನೆಗೆ ಪೊಲೀಸರು ಸ್ಥಳಕ್ಕೆ ಧಾವಿಸುತ್ತಿದ್ದಂತೆಯೇ, ಕದ್ದ ಮೊಬೈಲ್ ಹಾಗೂ ಮಾಂಗಲ್ಯ ಸರವನ್ನು ಆರೋಪಿಗಳು ಸೀಟಿನ ಕೆಳಗೆ ಎಸೆದಿದ್ದರು. ಪೊಲೀಸರು ಬಂದು ಆರೋಪಿಗಳ ಬ್ಯಾಗ್ ಪರಿಶೀಲಿಸಿದಾಗ ಬ್ಯಾಗ್‌ನಲ್ಲಿ ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ಕೆಲವು ಮೊಬೈಲ್‌ಗಳು ಪತ್ತೆಯಾದವು. ಅದನ್ನು ವಶಕ್ಕೆ ಪಡೆದುಕೊಂಡರು’ ಎಂದು ಮೂಲಗಳು ತಿಳಿಸಿವೆ.

ಚಿನ್ನಾಭರಣ ಕಳವು: ಬಂಧನ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಆರೋಪಿ ಮೂರ್ತಿಯನ್ನು (27) ಬಂಡೇಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹3.5 ಲಕ್ಷ ಮೌಲ್ಯದ 83 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಫೆಬ್ರುವರಿ 28ರಂದು ಬಂಡೇಪಾಳ್ಯದ ಅಣ್ಣಮ್ಮನ ಪಾಳ್ಯದಲ್ಲಿನ ಮನೆಯಲ್ಲಿ ಆರೋಪಿ ಕಳ್ಳತನ ಮಾಡಿದ್ದ. ಹೊಂಗಸಂದ್ರ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಶ್ಯಾಮರಾಜಪುರದ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಕಳ್ಳತನ ಮಾಡಿದ್ದ ಆರೋಪಿ ಸಂಜಯ್ ಎಂಬಾತನನ್ನು ಯಲಹಂಕ ನ್ಯೂಟೌನ್ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ಎರಡು ಕೆ.ಜಿ ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಅತ್ತೆ– ಮಾವನ ಮೇಲೆ ವೈದ್ಯೆ ಹಲ್ಲೆ

ಬೆಂಗಳೂರು: ಅತ್ತೆ ಹಾಗೂ ಮಾವನ ಮೇಲೆ ಹಲ್ಲೆ ನಡೆಸಿದ ಆರೋಪದಡಿ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯೆ ಪ್ರಿಯದರ್ಶಿನಿ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈದ್ಯೆ ಹಲ್ಲೆ ನಡೆಸುತ್ತಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ.

ಇ.ಎಸ್.ಐ ಆಸ್ಪತ್ರೆಯ ದಂತ ವೈದ್ಯ ನವೀನ್ ಕುಮಾರ್ ಮತ್ತು ವಿಕ್ಟೋರಿಯಾ ಆಸ್ಪತ್ರೆ ವೈದ್ಯೆ ಪ್ರಿಯದರ್ಶಿನಿ 2007ರಲ್ಲಿ ವಿವಾಹ ಆಗಿದ್ದರು. ದಂಪತಿ ಮಧ್ಯೆ ವೈಮನಸ್ಸು ಉಂಟಾಗಿ ವಿಚ್ಛೇದನ ಪಡೆಯಲು ಮುಂದಾಗಿದ್ದರು. ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ ಎಂದು ಮೂಲಗಳು ತಿಳಿಸಿವೆ.

‘ಅತ್ತೆ– ಮಾವನಿಗೆ ಪ್ರಿಯದರ್ಶಿನಿ ಕಿರುಕುಳ ನೀಡುತ್ತಿರುವ ಆರೋಪವಿದೆ. ಹೀಗಾಗಿ, ಪೋಷಕರೊಂದಿಗೆ ನವೀನ್ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಪ್ರಿಯದರ್ಶಿನಿ ಮಕ್ಕಳ ಜೊತೆ ವಾಸವಾಗಿದ್ದಾರೆ. ಮಾರ್ಚ್ 10ರಂದು ರಾತ್ರಿ ಪ್ರಿಯದರ್ಶಿನಿ ಅವರು ವೃದ್ಧ ದಂಪತಿ ವಾಸವಾಗಿರುವ ನಿವಾಸಕ್ಕೆ ಆಗಮಿಸಿ ಹಲ್ಲೆ ಮಾಡಿದ್ದಾರೆ ಎಂಬುದಾಗಿ ದೂರು ನೀಡಲಾಗಿದೆ’ ಎಂದು ಪೊಲೀಸರು ಹೇಳಿದರು.

ರೈಲ್ವೆ ಪೊಲೀಸರ ಕಾರ್ಯಾಚರಣೆ: ಮೂವರ ಬಂಧನ

ಮಾಜಿ ಪ್ರಿಯಕರನ ಕೊಲೆ: ಕೃತ್ಯಕ್ಕೆ ಪತಿ ನೆರವು

ಪ್ರಜಾವಾಣಿ ವಾರ್ತೆ

ಲೋಗನಾಥನ್

ಸತ್ಯವಾಣಿ

ವರದರಾಜು

ಶ್ರೀನಿವಾಸ್

ಬೆಂಗಳೂರು: ಮಾಜಿ ಪ್ರಿಯಕರನನ್ನು ಕೊಲೆ ಮಾಡಿ, ರೈಲು ಹಳಿಯ ಮೇಲೆ ಮೃತದೇಹ ಎಸೆದಿದ್ದ ಯುವತಿ, ಆಕೆಯ ಪತಿ ಸೇರಿದಂತೆ ಮೂವರನ್ನು ರೈಲ್ವೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ತಮಿಳುನಾಡು ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ದೊಡ್ಡೂರು ಗ್ರಾಮದ ನಿವಾಸಿ ಸತ್ಯವಾಣಿ(27), ಕೋನೇರಪಲ್ಲಿಯ ವರದರಾಜ್(23) ಹಾಗೂ ಬೆಂಗಳೂರಿನ ದಾಸನಪುರ ಹೋಬಳಿಯ ಆಲೂರು ಗ್ರಾಮದ ಸಿ.ಶ್ರೀನಿವಾಸ್ ಬಂಧಿತರು.

ಈ ಮೂವರೂ ಸೇರಿಕೊಂಡು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಶೂಲಗಿರಿ ಸಮೀಪದ ವಿ.ಐ.ಪಿ ನಗರದ ನಿವಾಸಿ ಲೋಗನಾಥನ್(24) ಎಂಬಾತನನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದರು.

ಫೆ.19ರಂದು ಚಿಕ್ಕಬಾಣಾವಾರ–ನೆಲಮಂಗಲ ರೈಲು ನಿಲ್ದಾಣಗಳ ಮಧ್ಯೆ 25ರಿಂದ 30 ವರ್ಷದ ಅಂದಾಜಿನ ಪುರುಷನ ಮೃತದೇಹವು ಪತ್ತೆ ಆಗಿತ್ತು. ಮೃತದೇಹ ತುಂಡಾದ ಸ್ಥಿತಿಯಲ್ಲಿ ಬಿದ್ದಿತ್ತು. ಪರಿಶೀಲನೆ ನಡೆಸಿದಾಗ ತಲೆ ಹಾಗೂ ಕುತ್ತಿಗೆ ಭಾಗಕ್ಕೆ ಹರಿತವಾದ ಆಯುಧದಿಂದ ಹಲ್ಲೆ ನಡೆಸಿದ್ದು ಕಂಡುಬಂದಿತ್ತು.

ಅಲ್ಲಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದವು. ಆಲೂರುಪಾಳ್ಯ–ನರಸೀಪುರ ರಸ್ತೆಯ ಪಕ್ಕದಲ್ಲಿಯೂ ರಕ್ತದ ಕಲೆಗಳು ಪತ್ತೆ ಆಗಿದ್ದವು. ದುಷ್ಕರ್ಮಿಗಳು ಕೊಲೆ ಮಾಡಿ ಮೃತದೇಹವನ್ನು ರೈಲು ಹಳಿಯ ಮೇಲೆ ತಂದು ಹಾಕಿದ್ದು ಮೇಲ್ನೋಟಕ್ಕೆ ಕಂಡುಬಂದಿತ್ತು. ಪ್ರಕರಣ ಮುಚ್ಚಿಹಾಕಲು ಹೀಗೆ ಮಾಡಲಾಗಿತ್ತು. ಅದೇ ಮಾರ್ಗದಲ್ಲಿ ರೈಲು ಚಲಿಸಿದ್ದರಿಂದ ಮೃತದೇಹವು ಎರಡು ತುಂಡಾಗಿತ್ತು. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು ಎಂದು ರೈಲ್ವೆ ಪೊಲೀಸರು ಹೇಳಿದರು.

ಆರು ತಂಡ ರಚನೆ: ‘ಕೊಲೆ ಪ್ರಕರಣ ಭೇದಿಸಲು ರೈಲ್ವೆ ಇಲಾಖೆ ಎಸ್‌ಪಿ ಮಾರ್ಗದರ್ಶನದಲ್ಲಿ ಬೆಂಗಳೂರು ದಂಡು ರೈಲ್ವೆ ವೃತ್ತದ ಸಿಪಿಐ ಜಿ.ಕಾಶೀನಾಥ್ ಅವರ ನೇತೃತ್ವದಲ್ಲಿ ಆರು ತಂಡಗಳನ್ನು ರಚಿಸಲಾಗಿತ್ತು. ಮೃತನ ಚಹರೆ ಹಾಗೂ ಹೋಲಿಕೆ ಗಮನಿಸಿದಾಗ ತಮಿಳುನಾಡು ಮೂಲದವನಂತೆ ಕಂಡುಬಂದಿತ್ತು. ಮೂರು ತಂಡಗಳು ತಮಿಳುನಾಡಿಗೆ ತೆರಳಿದ್ದವು. ಹೊಸೂರು ಸೇರಿದಂತೆ ಸುತ್ತಮುತ್ತಲ ಠಾಣೆಯಲ್ಲಿ ವಿಚಾರಣೆ ನಡೆಸಿದಾಗ ಶೂಲಗಿರಿ ಠಾಣೆಯಲ್ಲಿ ವ್ಯಕ್ತಿಯ ನಾಪತ್ತೆ ಪ್ರಕರಣ ದಾಖಲಾಗಿತ್ತು. ಫೋಟೊ ಪರಿಶೀಲಿಸಿದಾಗ ಮೃತ ವ್ಯಕ್ತಿಗೆ ಹೋಲಿಕೆ ಆಗಿತ್ತು. ಅದನ್ನು ಆಧರಿಸಿ ತನಿಖೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಸಹಜೀವನ ನಡೆಸುತ್ತಿದ್ದರು’: ‘ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣ ಬಯಲಾಯಿತು. ಹೂವಿನ ವ್ಯಾಪಾರಿ ಸತ್ಯವಾಣಿ ಹಾಗೂ ಲೋಗನಾಥನ್ ನಾಲ್ಕು ವರ್ಷಗಳಿಂದ ಸಹಜೀವನ ನಡೆಸುತ್ತಿದ್ದರು. ನಂತರ, ಲೋಗನಾಥನ್‌ಗೆ ತಿಳಿಯದಂತೆ ವರದರಾಜ್‌ನನ್ನು ಸತ್ಯವಾಣಿ ಮದುವೆ ಆಗಿದ್ದಳು. ಮದುವೆ ವಿಷಯ ಗೊತ್ತಾಗಿ ತನ್ನೊಂದಿಗೆ ಬರುವಂತೆ ಸತ್ಯವಾಣಿಗೆ ಲೋಗನಾಥನ್ ತಾಕೀತು ಮಾಡಿದ್ದ. ಆಕೆಗೆ ಅವನ ಜತೆಗೆ ತೆರಳಲು ಇಷ್ಟವಿರಲಿಲ್ಲ. ನಂತರ, ಲೋಗನಾಥನ್ ಕೊಲೆಗೆ ಸಂಚು ರೂಪಿಸಿ, ಶೂಲಗಿರಿಯಿಂದ ಪುಸಲಾಯಿಸಿ ಆಲೂರಿಗೆ ಕರೆತಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಸಿ.ಶ್ರೀನಿವಾಸ್ ನೆರವು ಪಡೆದು ರೈಲ್ವೆ ಹಳಿಯ ಮೇಲೆ ಮೃತದೇಹ ಎಸೆದಿದ್ದರು’ ಎಂದು ಮೂಲಗಳು ತಿಳಿಸಿವೆ.

ಎರಡು ಎಟಿಎಂ ದರೋಡೆಗೆ ಯತ್ನ

ಬೆಂಗಳೂರು: ನಗರದ ಎರಡು ಎಟಿಎಂಗಳ ದರೋಡೆಗೆ ದುಷ್ಕರ್ಮಿ-ಯೊಬ್ಬ ಯತ್ನಿಸಿದ್ದು, ಆತನ ಪತ್ತೆಗೆ ಪೊಲೀಸರು ಶೋಧ ಆರಂಭಿಸಿದ್ದಾರೆ.

ವಿಲ್ಸನ್ ಗಾರ್ಡನ್ ಠಾಣಾ ವ್ಯಾಪ್ತಿಯ ಸ್ವಾತಿ ಜಂಕ್ಷನ್ ಬಳಿಯಿರುವ ಎಟಿಎಂ ಕೇಂದ್ರಕ್ಕೆ ನುಗ್ಗಿದ್ದ ಆರೋಪಿ, ಎಟಿಎಂನಿಂದ ಹಣ ಕಳ್ಳತನಕ್ಕೆ ಯತ್ನಿಸಿದ್ದಾನೆ. ನಂತರ, ತಿಲಕ್ ನಗರದ ಬೈಲ್‌ಸಂದ್ರ ಮುಖ್ಯರಸ್ತೆಯ ಎಟಿಎಂ ಕೇಂದ್ರಕ್ಕೆ ನುಗ್ಗಿ ಹಣ ತೆಗೆಯಲು ಯತ್ನಿಸಿದ್ದಾನೆ. ಹಣ ಕಳ್ಳತನ ಮಾಡಲು ಸಾಧ್ಯವಾಗದೇ ಪರಾರಿ ಆಗಿದ್ದಾನೆ.

ಎಟಿಎಂ ಕೇಂದ್ರದ ನಿರ್ವಹಣೆ ಮಾಡುತ್ತಿರುವ ಸಂಸ್ಥೆಯ ಸಿಬ್ಬಂದಿ ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ಬಂದು ಪೊಲೀಸರು ಪರಿಶೀಲನೆ ನಡೆಸಿದರು.

ನಗರದ ಇನ್ನಷ್ಟು ಸುದ್ದಿಗಳು 7A 7B

₹50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ, ವೈಟ್‌ಫೀಲ್ಡ್ ಹಾಗೂ ಕೋಣನಕುಂಟೆ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ₹50 ಲಕ್ಷ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಹೊರ ರಾಜ್ಯದ ಇಬ್ಬರು ಸೇರಿದಂತೆ ಏಳು ಮಂದಿಯನ್ನು ಬಂಧಿಸಿದ್ದಾರೆ.

ಕೋಣನಕುಂಟೆ ಠಾಣೆಯ ಪೊಲೀಸರು ಇಬ್ಬರನ್ನು ಬಂಧಿಸಿ 1 ಕೆ.ಜಿ. 122 ಗ್ರಾಂ ಗಾಂಜಾ, 3 ಕೆ.ಜಿ. 44 ಗ್ರಾಂ ಹಶಿಷ್ ಆಯಿಲ್, ಒಂದು ಕಾರನ್ನು ಜಪ್ತಿ ಮಾಡಿದ್ದಾರೆ. ಇವುಗಳ ಮೌಲ್ಯ ₹46.10 ಲಕ್ಷ ಎಂದು ಅಂದಾಜಿಸಲಾಗಿದೆ.

ಕಾರಿನಲ್ಲಿ ಡ್ರಗ್ಸ್ ತಂದು ದೊಡ್ಡಕಲ್ಲಸಂದ್ರದ ನಾರಾಯಣ ನಗರದ ಜೋಡಿರಸ್ತೆಯಲ್ಲಿ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಇನ್ನು ದೇವನಹಳ್ಳಿ ಠಾಣೆಯ ಪೊಲೀಸರು, ಮೂವರನ್ನು ಬಂಧಿಸಿದ್ದಾರೆ. 3 ಕೆ.ಜಿ. ಗಾಂಜಾ, ಒಂದು ದ್ವಿಚಕ್ರ ವಾಹನ ಹಾಗೂ ಎರಡು ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಿದ್ದಾರೆ. ವೈಟ್‌ಫೀಲ್ಡ್ ಠಾಣೆಯ ಪೊಲೀಸರು, ಹೊರ ರಾಜ್ಯದ ಇಬ್ಬರನ್ನು ಬಂಧಿಸಿ 12 ಕೆ.ಜಿ. ಗಾಂಜಾ ಹಾಗೂ ಒಂದು ಕಾರನ್ನು ಜಪ್ತಿ ಮಾಡಿದ್ದಾರೆ.

ಸಿಸಿಬಿ ದಾಳಿ: ₹45 ಲಕ್ಷ ಮೌಲ್ಯದ ತಂಬಾಕು ಉತ್ಪನ್ನ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ನಗರದ ಎರಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು, ₹45 ಲಕ್ಷ ಮೌಲ್ಯದ ತಂಬಾಕು ಉತ್ಪನ್ನಗಳು ಹಾಗೂ ₹10.50 ಲಕ್ಷ ಮೌಲ್ಯದ ಡ್ರಗ್ಸ್ ಅನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಕಲಾಸಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಗೋದಾಮಿನ ಮೇಲೆ ದಾಳಿ ನಡೆಸಿ, ದುಷ್ಪರಿಣಾಮಗಳ ಸೂಚನೆಗಳಿಲ್ಲದ ಹನ್ಸ್ ಹಾಗೂ ಗಣೇಶ ಕಂಪನಿಯ ತಂಬಾಕು ಉತ್ಪನ್ನಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿ ದಿಲೀಪ್‌ನನ್ನು ಬಂಧಿಸಲಾಗಿದೆ. ಇದೇ ಪ್ರಕರಣದಲ್ಲಿ ಇನ್ನೂ ಇಬ್ಬರು ಆರೋಪಿಗಳು ಭಾಗಿಯಾಗಿದ್ದು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯ ರಾಮ್ ರಾವ್ ಲೇಔಟ್‌ನ ಮೈದಾನದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 55.20 ಗ್ರಾಂ ಎಂ.ಡಿ.ಎಂ.ಎ ಕ್ರಿಸ್ಟಲ್ ಹಾಗೂ 1 ಕೆ.ಜಿ 905 ಗ್ರಾಂ ಗಾಂಜಾವನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹10.50 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಅಪ್ಪು’ ಮರುಬಿಡುಗಡೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 23 ವರ್ಷಗಳ ಬಳಿಕ ‘ಅಪ್ಪು’ವನ್ನು ಸಂಭ್ರಮಿಸುವ ಗಳಿಗೆ ಹತ್ತಿರವಾಗುತ್ತಿತ್ತು... ಚಿತ್ರಮಂದಿರಗಳೆದುರು ಸೇರಿದ್ದ ನೂರಾರು ಅಭಿಮಾನಿಗಳಿಗೆ ತಮ್ಮ ನೆಚ್ಚಿನ ನಟನನ್ನು ಮತ್ತೆ ತೆರೆ ಮೇಲೆ ನೋಡುವ ಕಾತರ... ಪ್ರತಿಧ್ವನಿಸುವ ‘ಅಪ್ಪು..ಅಪ್ಪು..’ ಜೈಕಾರದ ನಡುವೆ ಪಟಾಕಿಯ ಸದ್ದು, ‘ಅಪ್ಪು’ ಸಿನಿಮಾದ ಹಾಡುಗಳಿಗೆ ಅಭಿಮಾನಿಗಳ ಹೆಜ್ಜೆ...ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಾಯಕರಾಗಿ ನಟಿಸಿದ್ದ ಮೊದಲ ಸಿನಿಮಾ ‘ಅಪ್ಪು’ ಶುಕ್ರವಾರ (ಮಾರ್ಚ್ 14) ಮರುಬಿಡುಗಡೆಯಾದ ಸಂದರ್ಭದಲ್ಲಿ ಕಂಡ ದೃಶ್ಯಗಳಿವು.

ಸೋಮವಾರ (ಮಾರ್ಚ್ 17) ಪುನೀತ್ ಅವರ 50ನೇ ಜನ್ಮದಿನ. ಈ ಹೊಸ್ತಿಲಲ್ಲಿ ಪೂರಿ ಜಗನ್ನಾಥ್ ನಿರ್ದೇಶನದ ‘ಅಪ್ಪು’ ಕರ್ನಾಟಕದಾದ್ಯಂತ 100ಕ್ಕೂ ಅಧಿಕ ಏಕಪರದೆ ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಮರು ಬಿಡುಗಡೆಯಾಯಿತು. ಈ ಸಂಭ್ರಮಕ್ಕೆ ‘ಅಪ್ಪು’ ಚಿತ್ರದ ನಾಯಕಿ ರಕ್ಷಿತಾ, ಸಂಗೀತ ನಿರ್ದೇಶಕ ಗುರುಕಿರಣ್, ನಟರಾದ ರಾಘವೇಂದ್ರ ರಾಜ್‌ಕುಮಾರ್, ಯುವರಾಜ್‌ಕುಮಾರ್, ಕಾರ್ತಿಕ್ ಮಹೇಶ್, ನಿರ್ದೇಶಕರಾದ ಸಂತೋಷ್ ಆನಂದರಾಮ್, ಸಿಂಪಲ್ ಸುನಿ, ಚೇತನ್, ನಟಿ ಅನುಶ್ರೀ ಸೇರಿದಂತೆ ಚಿತ್ರರಂಗದ ಹಲವರು ಜೊತೆಯಾದರು.

‘ಅಪ್ಪು’ ಚಿತ್ರ ನೋಡಲು ವೀರೇಶ್ ಚಿತ್ರಮಂದಿರಕ್ಕೆ ಬಂದಿದ್ದ ನಟಿ ರಕ್ಷಿತಾ

ಈ ಸಿನಿಮಾ ಬಿಡುಗಡೆಯಾದಾಗ ಅಮ್ಮ, ಅಪ್ಪಾಜಿ, ಅಪ್ಪು ಎಲ್ಲರೂ ಇದ್ದರು. 23 ವರ್ಷ ಕಳೆದರೂ ಜನ ಈ ಸಿನಿಮಾದ ಡೈಲಾಗ್, ಹಾಡುಗಳನ್ನು ಮರೆತಿಲ್ಲ
ರಾಘವೇಂದ್ರ ರಾಜ್‌ಕುಮಾರ್
ನಟ

ಇಷ್ಟು ವರ್ಷವಾದರೂ ಈ ಸಿನಿಮಾ ಇನ್ನೂ ತಾಜಾತನದಿಂದ ಕೂಡಿದೆ. ನಾನು ಮೊದಲ ಬಾರಿ ‘ಅಪ್ಪು’ ಸಿನಿಮಾವನ್ನು ಓರ್ವ ಅಭಿಮಾನಿಯಾಗಿ ನೋಡಿದೆ
ರಕ್ಷಿತಾ
ನಟಿ

ಆರು ಶೋ ಹೌಸ್‌ಫುಲ್

ಮಾಗಡಿ ರಸ್ತೆಯ ವೀರೇಶ್ ‘ಅಪ್ಪು’ ಮುಖ್ಯ ಚಿತ್ರಮಂದಿರಗಳಲ್ಲಿ ಒಂದಾಗಿತ್ತು. ಇಲ್ಲಿ ಶುಕ್ರವಾರ ಒಟ್ಟು ಆರು ಪ್ರದರ್ಶನಗಳು ನಡೆದಿದ್ದು, ಒಟ್ಟು 5,700 ಜನರು ‘ಅಪ್ಪು’ ವೀಕ್ಷಿಸಿದ್ದಾರೆ. ಈ ಕುರಿತು ಮಾತನಾಡಿರುವ ಚಿತ್ರಮಂದಿರದ ಮಾಲೀಕ ಕೆ.ವಿ.ಚಂದ್ರ ಶೇಖರ್, ‘ಶುಕ್ರವಾರ ಎಲ್ಲಾ ಶೋಗಳು ಹೌಸ್‌ಫುಲ್ ಆಗಿದ್ದವು. ಬೆಂಗಳೂರಿನಲ್ಲೇ 37 ಏಕಪರದೆ ಚಿತ್ರಮಂದಿರಗಳಲ್ಲಿ ಸಿನಿಮಾ ರೀ ರಿಲೀಸ್ ಆಗಿದೆ’ ಎಂದರು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 63/2024, ದಿನಾಂಕ: 07.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ದಿನಾಂಕ
1	ಎಲ್8255316	ಹೆವಿ ಡ್ಯೂಟಿ ರಿವರ್ಸಿಬಲ್ ಟೈಪ್ ಎಸ್ಕಲೇಟರುಗಳ ವಿನ್ಯಾಸ, ತಯಾರಿಕೆ, ಪೂರೈಕೆ, ಸ್ಥಾಪನೆ, ಪರಿಶೀಲನೆ, ಕಾರ್ಯಾರಂಭ ಮತ್ತು ನಿರ್ವಹಣೆ. (ಪರಿಮಾಣ: 02 ಸಂ.)	14.04.2025 10:30 ಗಂಟೆಗೆ
2	ಎಲ್8255407	ಎಲ್‌ಹೆಚ್‌ಬಿ ಹಾಟ್ ಬುಲೆಟ್ ಕೋಚ್‌ಗಳಿಗೆ ಮಾಡ್ಯುಲರ್ ಇಂಟಿಗ್ರೇಟೆಡ್ ಪ್ಯಾಂಟ್ರಿ ಘಟಕ. (ಪರಿಮಾಣ: 04 ಸಂ.)	07.04.2025 10:30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/841/AAF/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ: ಅ.ಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಕಾ.ನಿ.ಇಂ(ಕ)/ಕಿ.ಇಂ(ವಿ)–1/2024–25/9576–81 ದಿನಾಂಕ:13.03.2025

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯ ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಪ್ರ(ಕಾ)/ವೃತ್ತ–ದಕ್ಷಿಣ/ಕಾ.ನಿ.ಇಂ(ವಿ)/ಸ.ಕಾ.ಇಂ(4)/ಕಿ.ಇಂ–1/24–25/ಇ.ಪಿ.ಆರ್–82 ದಿನಾಂಕ: 01.02.2025 ರ ಅನ್ವಯ “ವಿವಿಧ ಉಪಕೇಂದ್ರಗಳಿಗೆ ಅವಶ್ಯವಿರುವ 66ಕೆವಿ ಪೊಟೆನ್ಷಿಯಲ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡಲು” ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.inಗೆ ಹೈಪರ್‌ಲಿಂಕ್ ‘E Procurement KPTCL’ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 15.03.2025 ಅಥವಾ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ, ಕವಿಪ್ರನಿನಿ, ಆನಂದ್ ರಾವ್ ವೃತ್ತ, ಬೆಂಗಳೂರು–09

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ&ಕ್ಯೂಸಿ) ವಿಭಾಗ, ಯಲಹಂಕ ವಲಯ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು– 560 002.

ಸಂಖ್ಯೆ:ಕಾಪಾಅ(ಕ್ಯೂಎ&ಕ್ಯೂಸಿ)/ಯಲಹಂಕ/ಟೆಂಡರ್/87/2024–25/2ನೇ ಕರೆ ದಿನಾಂಕ:14.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ), ಇವರು ಈ ಕೆಳಕಂಡ ಕಾಮಗಾರಿಗಳಿಗೆ ತದ್ರೂಪಿ ಕೆಲಸಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿ/ಸಂಸ್ಥೆಗಳಿಂದ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸಲು ಪ್ರಸ್ತಾವನೆ ಕೋರಿಕೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ವಿಸ್ತೃತ ಯೋಜನೆ ವರದಿ ಸಿದ್ದಪಡಿಸುವಿಕೆ, ಭೂಸ್ವಾಧೀನ ವೆಚ್ಚ, ರಚನಾತ್ಮಕಗಳ ನೆಲಸಮಗೊಳಿಸುವಿಕೆ, ಪ್ರಸ್ತುತವಿರುವ ರಸ್ತೆಗೆ ಮರು ಡಾಂಬರೀಕರಣ ಒಳಗೊಂಡಂತೆ ರೈಲ್ವೆ ಹಳಿಯಿಂದ ಕೆಪಿಎಸ್‌ಸಿ ಬಡಾವಣೆವರೆಗೆ ಜಕ್ಕೂರು ರಸ್ತೆಯನ್ನು ಅಗಲೀಕರಣ ಮಾಡುವ ಕಾಮಗಾರಿಗಾಗಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸುವುದು. (2ನೇ ಕರೆ) ಯೋಜನೆಯ ಮೊತ್ತ: ₹.392.00 ಲಕ್ಷಗಳು, ಇಎಂಡಿ ಮೊತ್ತ: ₹.9,800/–

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **15.03.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **18.03.2025**ರ ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **25.03.2025**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **26.03.2025**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ&ಕ್ಯೂಸಿ)–ಯಲಹಂಕ ವಲಯ

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

ಎಕ್ಸ್ಚೇಂಜ್ ಮೇಳ ₹8,000 ಫ್ಲಾಟ್ ಆಫ್ ಆನ್ ಹಳೆಯ ಎಸಿ*

ಬೃಹತ್ ಡಿಸ್ಕೌಂಟ್ಸ್ ₹40,000 ವರೆಗೂ ಕಡಿತ, ಹೊಸ ಎಸಿ* ಖರೀದಿ ಮೇಲೆ

ಕೂಲೆಸ್ಟ್ ಸಮ್ಮರ್ ಸೇಲ್

UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ

UPTO 10,000 ಕ್ಯಾಶ್ ಬ್ಯಾಕ್

ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ* ₹20,000

ಉಚಿತ ಇನ್‌ಸ್ಟಾಲೇಷನ್*

CASH BACK Upto 20% ಕ್ರೆಡಿಟ್ ಕಾರ್ಡ್‌ಗಳ ಮೇಲೆ

AXIS BANK, citi, HDFC BANK, HSBC, ICICI Bank, IndusInd Bank, kotak, RBL BANK, Union Bank, YES BANK, Standard Chartered, Bank of Baroda, FEDERAL BANK, SBI card

ಮೆಗಾ ಎಕ್ಸ್‌ಚೇಂಜ್ ಕೊಡುಗೆ ಅಪ್ಡೇಟ್

UPTO ₹25,000 ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ*

ಫೈನಾನ್ಸ್ ಬೊನಾಂಜಾ

1 ಇ.ಎಮ್.ಐ ಉಚಿತ*

ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*

ಇನ್ಸ್ಟಂಟ್ ಲೋನ್ ಅಪ್ರೂವಲ್ UPTO ₹4,00,000*

STORE LOCATOR

Brand	Product	Offer
Godrej	2.0TON 3STAR INVERTER SPLIT AIR CONDITIONER	ಇ.ಎಮ್.ಐ ₹3,965
Haier	1.5TON 3STAR INVERTER SPLIT AIR CONDITIONER	ಇ.ಎಮ್.ಐ ₹2,994
Symphony, KENSTAR, BAJAJ	WIDEST RANGE OF AIRCOOLERS	EMI STARTS FROM ₹1,333
DAIKIN	1.0 TON 3STAR INVERTER SPLIT AIR CONDITIONER	ಇ.ಎಮ್.ಐ ₹3,313
VOLTAS	1.0 TON 3STAR INVERTER SPLIT AIR CONDITIONER	ಇ.ಎಮ್.ಐ ₹2,989
SAMSUNG	1.5 TON 3 STAR SPLIT AIR CONDITIONER AR50F18D13H	ಇ.ಎಮ್.ಐ ₹3,833
LG	1.5 TON 3 STAR SPLIT AIR CONDITIONER US-Q18ENXE	ಇ.ಎಮ್.ಐ ₹3,583
BLUE STAR	1.5TON 3STAR INVERTER SPLIT AIR CONDITIONER	ಇ.ಎಮ್.ಐ ₹3,573
HITACHI	1.0 TON 3 STAR SPLIT AIR CONDITIONER	ಇ.ಎಮ್.ಐ ₹3,068
Panasonic	1.0 TON 3 STAR SPLIT AIR CONDITIONER	ಇ.ಎಮ್.ಐ ₹3,180
LG	650 LITRES SIDE BY SIDE REFRIGERATOR WITH HYGIENE FRESH+ GL-B257DBM3	ಇ.ಎಮ್.ಐ ₹4,999
SAMSUNG	653ಲೀ ಸೈಡ್ ಬೈ ಸೈಡ್ RS76CG8103S9HL	ಇ.ಎಮ್.ಐ ₹4,990
Haier (NEW ARRIVAL)	520 LITRES BLACK GLASS 4 DOOR SIDE BY SIDE WI-FI REFRIGERATOR	ಇ.ಎಮ್.ಐ ₹2,994
Whirlpool	260 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR	ಇ.ಎಮ್.ಐ ₹2,499
Panasonic	235 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ DOUBLE DOOR	ಇ.ಎಮ್.ಐ ₹2,166

ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Brand	Product	Offer	Free gift
LAPTOP	10% CASH BACK; ₹32,990 Onwards	EMI STARTS FROM ₹2,749	ಉಚಿತ: GIFTS UPTO ₹8990*
OPPO	F27 5G 8+128; ₹2,000* CASH BACK; SPECIAL PRICE ₹19,690*	ಇ.ಎಮ್.ಐ ₹1,641	ಉಚಿತ: 10,000 MAH POWER BANK WORTH ₹1499*
vivo	V50; EFFECTIVE PRICE ₹34,499* (PRICE AFTER CASH BACK)	ಇ.ಎಮ್.ಐ ₹1,590	ಉಚಿತ: SMART WATCH WORTH ₹8499*
realme	14X 5G 6 + 128; EFFECTIVE PRICE ₹13,490* (PRICE AFTER CASH BACK)	ಇ.ಎಮ್.ಐ ₹1,208	ಉಚಿತ: BT NECKBAND WORTH ₹1499*
iPhone	16 / 16E; EFFECTIVE PRICE ₹54,890* (PRICE AFTER CASH BACK)	EMI STARTS FROM ₹3,272	ಉಚಿತ: MAGSAFE POWERBANK 10000 MAH WORTH ₹7499
SAMSUNG	S25; EFFECTIVE PRICE ₹73,999* (PRICE AFTER CASH BACK)	EMI STARTS FROM ₹3,375	

Brand	Product	Offer
LG	77 OLED EVO AI 4K SMART ಎಲ್ಇಡಿ OLED77C46LA	ಇ.ಎಮ್.ಐ ₹6,999
SAMSUNG	65 4K ULTRA HD SMART ಓಎಲ್ಇಡಿ 65S90D	ಇ.ಎಮ್.ಐ ₹6,990
SONY	65 4K ULTRA HD SMART LED GOOGLE TV K-65S25	ಇ.ಎಮ್.ಐ ₹6,500
IFB	8 ಕೆಜಿ ಫ್ರಂಟ್ ಲೋಡಿಂಗ್	ಇ.ಎಮ್.ಐ ₹3,416
Godrej	8 ಕೆಜಿ ಫ್ರಂಟ್ ಲೋಡಿಂಗ್	ಇ.ಎಮ್.ಐ ₹3,166
LG	SOUNDBAR S40T 2.1 CH, 300W, AI SOUND PRO, DOLBY DIGITAL; SPECIAL PRICE: ₹11,650; MRP: ₹26,990	ಇ.ಎಮ್.ಐ ₹971
BOSCH	13 PLACE SETTINGS, FREE STANDING DISHWASHER	ಇ.ಎಮ್.ಐ ₹4,333
LG	28ಲೀ ಕನ್‌ವೆಕ್ಷನ್ ಮೈಕ್ರೋವೇವ್ MC-2846BR	ಇ.ಎಮ್.ಐ ₹1,358
EUREKA FORBES, HAVELLS, LG, Livpure	WATER PURIFIERS	EMI STARTS FROM ₹1,000
EUREKA FORBES, LG, Panasonic, dyson	VACCUM CLEANERS	EMI STARTS FROM ₹875
Preethi, Panasonic, Butterfly, HAVELLS, BAJAJ, BOSCH, V-GUARD, Prestige	MIXER GRINDER	EMI STARTS FROM ₹1,167

LG SAMSUNG SONY Haier Panasonic ONIDA AIWA IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL BLUE STAR HAFELE Symphony HAVELLS USHA DAIKIN GENERAL Prestige VOLTAS HITACHI voltas beko Butterfly Preethi ULTRA EUREKA FORBES pureit Livpure FABER KENSTAR BAJAJ Crompton V-GUARD ZEBRONICS KAFF OZONE

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಂತೆ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳಲ್ಲಿ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ಉಚಿತ. ಆಯ್ದ ನಗರಗಳಲ್ಲಿ ಮಾತ್ರ ಅನ್ವಯಿಸುತ್ತದೆ. ... ಉಚಿತ ಇನ್‌ಸ್ಟಾಲೇಷನ್ ಮಾನ್ಯವಾಗಿರುತ್ತದೆ.

171 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA

ಸುಖಮಯ ಸಂಧ್ಯಾರಾಗಕ್ಕೆ...

ಪವಿತ್ರಾ ಭಟ್

ಹಲವು ಜವಾಬ್ದಾರಿಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಸಮರ್ಥವಾಗಿ ನಿಭಾಯಿಸುವ ಶಕ್ತಿ ಹೆಣ್ಣಿಗಿದೆ. ಮನೆ, ಕುಟುಂಬ ಮಾತ್ರವಲ್ಲದೆ ಉದ್ಯಮಿಯಾಗಿ ಕೆಲಸದ ಸ್ಥಳದಲ್ಲಿ ಪ್ರೋತ್ಸಾಹಕರ ವಾತಾವರಣ ನಿರ್ಮಿಸುವುದರಿಂದ ಹಿಡಿದು ದೂರ ದೃಷ್ಟಿಕೋನದ ಯೋಜನೆಯನ್ನು ರೂಪಿಸುವ ಧೀಮಂತಿಕೆ ಮಹಿಳೆಯದ್ದು ಎನ್ನುತ್ತಾರೆ ಸುಕೂನ್ ಅನ್‌ಲಿಮಿಟೆಡ್ ಸಂಸ್ಥೆಯ ಸ್ಥಾಪಕಿ ವಿಭಾ ಸಿಂಘಾಲ್.

ಕೋಲ್ಕತ್ತ ಮೂಲದ ವಿಭಾ, ಎಂಬಿಎ ಪದವೀಧರೆ. ಐದಕ್ಕೂ ಹೆಚ್ಚು ಐ.ಟಿ ಕಂಪನಿಗಳಲ್ಲಿ ಕೆಲಸ ಮಾಡಿದ ಬಳಿಕ 2024ರಲ್ಲಿ ಹಿರಿಯರ ಆರೈಕೆಗಾಗಿ ಸುಕೂನ್ ಅನ್‌ಲಿಮಿಟೆಡ್ ಎನ್ನುವ ಸಂಸ್ಥೆ ಆರಂಭಿಸಿ ಮುನ್ನಡೆಸುತ್ತಿದ್ದಾರೆ.

‘ಒಂಟಿತನ ಎನ್ನುವುದು ಯಾವ ವಯಸ್ಸಿನಲ್ಲಾದರೂ ಕಾಡಬಹುದು. ಆದರೆ ವಯಸ್ಸಾದ ಮೇಲೆ ಕಾಡುವ ಒಂಟಿತನವನ್ನು ಅಥವಾ ಮಾನಸಿಕ ಖಿನ್ನತೆಯನ್ನು ಹೊರಗಿನ ಪ್ರಪಂಚಕ್ಕೆ ತೋರಿಸಿಕೊಳ್ಳಲು ಹಿರಿಯರು ಹಿಂಜರಿಯುತ್ತಾರೆ. ಅದು ನನಗೆ ಅರ್ಥವಾಗಿದ್ದು ನನ್ನ ತಂದೆಯ ಕಾಲಾನಂತರ. ಕೋವಿಡ್ ಸಮಯದಲ್ಲಿ ನನ್ನ ತಂದೆಯನ್ನು ಕಳೆದುಕೊಂಡೆ. ಜೀವನೋತ್ಸಾಹಿಯಾಗಿದ್ದ ಅವರನ್ನು ಕಳೆದುಕೊಂಡ ಮೇಲೆ ನನ್ನ ತಾಯಿ ಒಂಟಿಯಾದರು. ಮೂರು ದಶಕಗಳಿಗೂ ಹೆಚ್ಚು ಕಾಲ ಒಟ್ಟಿಗಿದ್ದ ಜೀವ ದೂರಾದ ನೋವು ಅವರನ್ನು ಕಾಡುತ್ತಿತ್ತು. ಕುಟುಂಬ ಸದಸ್ಯರೊಂದಿಗೆ ಮುಕ್ತ ಸಂಭಾಷಣೆಗೂ ಒಗ್ಗಿಕೊಳ್ಳುತ್ತಿರಲಿಲ್ಲ. ಇದನ್ನು ನೋಡಿ ಈ ರೀತಿಯ ಅನೇಕ ಕುಟುಂಬಗಳಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡು ಒಂಟಿತನ ಎದುರಿಸುತ್ತಿದ್ದಾರೆ ಎನ್ನುವುದು ನನ್ನ ಅರಿವಿಗೆ ಬಂದಿತ್ತು. ಅಂಥ ಸಂದರ್ಭಗಳಲ್ಲಿ ಅವರಿಗೆ ಬೇಕಾಗಿರುವುದು ಅನುಕಂಪವಲ್ಲ, ಸಹಾನುಭೂತಿ ಮತ್ತು ಬೆಂಬಲ ಎನ್ನುವುದು ಅರ್ಥವಾಗಿತ್ತು. ನನ್ನ ಕುಟುಂಬದಲ್ಲಿ ಆದಂತೆಯೇ ಅನೇಕ ಕುಟುಂಬಗಳು ಈ ರೀತಿಯ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಅರಿಯುವುದು ಕಷ್ಟವಾಗಲಿಲ್ಲ ಆಗ ಹುಟ್ಟಿಕೊಂಡಿದ್ದೇ ‘ಸುಕೂನ್ ಅನ್‌ಲಿಮಿಟೆಡ್’.

ತಂಡ ಮುನ್ನಡೆಸುವುದೇ ಸವಾಲು...

ಆರಂಭದಲ್ಲಿ ಬಹಳಷ್ಟು ಸವಾಲಗಳು ಎದುರಾಗಿದ್ದವು. ಈಗಲೂ ಸವಾಲುಗಳಿವೆ. ಆದರೆ ನಿರ್ವಹಿಸುವ ನಿಪುಣತೆ ಈಗ ಕರಗತವಾಗಿದೆ ಎನ್ನುವುದೇ ಖುಷಿಯ ಸಂಗತಿ. ಕಾರ್ಪೋರೇಟ್ ಕಂಪನಿಗಳಲ್ಲಿ ಒಬ್ಬ ಉದ್ಯೋಗಿಯಾಗಿ ಕೆಲಸ ಮಾಡುವಾಗ ಹೇರಳವಾದ ಸಂಪನ್ಮೂಲಗಳು ಸಿಗುತ್ತವೆ. ಅಲ್ಲದೆ ಕೆಲಸದಲ್ಲಿ ಸ್ಪಷ್ಟತೆ ಇರುತ್ತದೆ. ಆದರೆ ಸ್ವಂತ ಉದ್ಯಮ ಆರಂಭಿಸಿದಾಗ ಸರಿಯಾದ ಯೋಜನೆ, ಉದ್ದೇಶ, ಲಾಭ, ಜನರನ್ನು ತಲುಪುವ ಬಗೆ ಎಲ್ಲವನ್ನೂ ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಅವೆಲ್ಲಕ್ಕಿಂತ ನಮ್ಮೊಂದಿಗಿರುವ ತಂಡವನ್ನು ಪ್ರೇರೇಪಿಸಿ ಜತೆಯಾಗಿ ಕರೆದುಕೊಂಡು ಹೋಗುವ ಗುರುತರ ಜವಾಬ್ದಾರಿ ನನ್ನದಾಗಿತ್ತು.

ಹತಾಶೆ ಮೆಟ್ಟಿ ನಿಂತೆ...

ಸಾಮಾಜಿಕ ಉದ್ದೇಶದಿಂದ ಕಾರ್ಯನಿರ್ವಹಿಸುವ ಸುಕೂನ್‌ನಂತಹ ಸ್ಟಾರ್ಟ್‌ಅಪ್‌ಗಳಿಗೆ ಸರಿಯಾದ, ನಂಬಿಕಸ್ಥ ತಂಡದ ಸದಸ್ಯರ ಆಯ್ಕೆ ಅಗತ್ಯವಾಗಿರುತ್ತದೆ.

ಹೀಗಾಗಿ ಸ್ಟಾರ್ಟ್‌ಅಪ್‌ಗಳಲ್ಲಿ ತಂಡ ಕಟ್ಟುವುದೇ ಅಡಿಪಾಯ. ಎಲ್ಲವನ್ನೂ ನಿಭಾಯಿಸುವುದು ಕೆಲವೊಮ್ಮೆ ಭಾರವೆನಿಸುತ್ತದೆ. ಕೆಲವೊಮ್ಮೆ ಹತಾಶೆ ಕಾಡುವುದೂ ಉಂಟು. ಅಂತಹ ಯೋಚನೆಗಳು ತಲೆಯಲ್ಲಿ ಸುಳಿದಾಗಲೆಲ್ಲ ಈ ಪ್ರಯಾಣ ಕೇವಲ ನನ್ನದಲ್ಲ, ನನ್ನ ಉದ್ಯಮ ನಿಜವಾಗಿ ಯಾರನ್ನು ತಲುಪಬೇಕೋ ಅವರ ಬಳಿ ಸಾಗಬೇಕು ಎನ್ನುವುದನ್ನು ನೆನಪಿಸಿಕೊಂಡು ಮತ್ತೆ ಎದ್ದು ಮುಂದೆ ಸಾಗುತ್ತೇನೆ.

ಸುಕೂನ್ ಅನ್‌ಲಿಮಿಟೆಡ್ ಪಯಣಕ್ಕೆ ದೊಡ್ಡ ಬೆನ್ನೆಲುಬೇ ಕುಟುಂಬ. ಅದರಲ್ಲೂ ನನ್ನ ಅಜ್ಜ, ಅಜ್ಜಿ ನೀಡುವ ಪ್ರೋತ್ಸಾಹ ಇನ್ನಷ್ಟು ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ. ನನ್ನ ಚಿಕ್ಕ ಸಾಧನೆಯನ್ನೂ ಬೆಂಬಲಿಸಿ, ಪ್ರೋತ್ಸಾಹಿಸಿ ಹೆಮ್ಮೆಪಡುತ್ತಾರೆ.

ಬೆಂಗಳೂರಿನಲ್ಲಿ ನನ್ನ ಸ್ಟಾರ್ಟ್‌ಅಪ್‌ಗೆ ಸರಿಹೊಂದುವಂತಹ ಪ್ರತಿಭೆ ಹುಡುಕುವುದು ಸುಲಭ ಎನ್ನುವ ಕಾರಣಕ್ಕೆ ಪ್ರಧಾನ ಕಚೇರಿಯನ್ನು ಬೆಂಗಳೂರಲ್ಲಿಯೇ ಆರಂಭಿಸಿದೆ. ಅದಕ್ಕಿಂತ ಮುಖ್ಯವಾಗಿ ಇಲ್ಲಿನ ಜನರ ಹೊಸ ಪ್ರಯತ್ನಕ್ಕೆ ಸಿದ್ಧರಿರುವ ಮನಸ್ಥಿತಿ ಉದ್ಯಮ ಆರಂಭಿಸುವ ಹುರುಪು ನೀಡಿತು.

ಸುಕೂನ್ ಆರಂಭಿಸಿ ಒಂದು ವರ್ಷ ಕಳೆದಿದೆ. ಎಷ್ಟೋ ಹಿರಿಯರು ಮನೆಯ ತುಂಬ ಜನರಿದ್ದರೂ, ಕುಟುಂಬದೊಂದಿಗಿದ್ದರೂ ಒಂಟಿತನದಿಂದ ಬಳಲುತ್ತಿದ್ದಾರೆ. ಒಬ್ಬಂಟಿಯಾಗಿಯೇ ಸ್ವಾವಲಂಬಿಗಳಾಗಿ ಜೀವಿಸುತ್ತಿದ್ದಾರೆ. ಜನರ ಮಧ್ಯೆ, ಕುಟುಂಬದ ಮಧ್ಯೆ ಇದ್ದಾಕ್ಷಣ ಒಂಟಿತನ ಕಾಡುವುದಿಲ್ಲ ಎನ್ನುವುದು ಸುಳ್ಳು. ಕೆಲವೊಮ್ಮೆ ಎಲ್ಲವೂ ಇದ್ದು ಏನೂ ಇಲ್ಲವೆಂಬ ಭಾವ ಆವರಿಸಬಹುದು ಎನ್ನುವುದು ಈ ಪ್ರಯಾಣ ಕಲಿಸಿರುವ ದೊಡ್ಡ ಪಾಠ. ❖

ಉದ್ಯಮಿಯಾಗುವ ಅಥವಾ ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸುವ ಮಹಿಳೆಯರಿಗೆ ಹೇಳುವುದಿಷ್ಟೇ... ನಿಮ್ಮನ್ನು ನೀವು ಮೊದಲು ನಂಬಿ. ಸಾಧಿಸಲು ಸಾಧ್ಯವಾಗದೇ ಇರುವುದು ಯಾವುದೂ ಇಲ್ಲ. ಅಗತ್ಯವಿದ್ದಾಗ ಆಪ್ತರ ನೆರವು ಕೇಳಿ. ಸಹಾಯಕ್ಕೆ ಸಾಕಷ್ಟು ಹಸ್ತಗಳಿವೆ. ಆದರೆ ನೀವು ಕೈಯೊಡ್ಡಿ ಕೇಳಬೇಕಷ್ಟೆ.

ವಿಭಾ ಸಿಂಘಾಲ್

ಬೇಸಿಗೆಗೆ ಸೊಬಗಿನ ಉಡುಗೆ

ಫ್ಯಾಷನ್

ನಡುನೆತ್ತಿ ಸುಡುವ ಬಿಸಿಲು ಹೆಚ್ಚಾಗುತ್ತಿದ್ದಂತೆ ಚರ್ಮದ ಕೋಶಗಳೆಲ್ಲ ಉಸಿರಾಡಬೇಕೆನ್ನುತ್ತವೆ. ಬೆವರ ಹನಿಗಳು ಮುತ್ತಿನ ಮಾಲೆಯಾಗಿ ಚರ್ಮವನ್ನಲಂಕರಿಸುವಾಗ ವಸ್ತ್ರವೈರಾಗ್ಯ ಮೂಡುವುದು ಸಹಜ. ಬೇಸಿಗೆಯ ಬೇಗೆಯನ್ನು ಹೀರಿ, ಆರಾಮದಾಯಕ ಅನುಭವ ನೀಡಬಲ್ಲ ವಸ್ತ್ರಗಳ ಆಯ್ಕೆ ಮಾಡುವುದು ಹೇಗೆ?

ಬಿಸಿಲನ್ನು ಹೀರಿಕೊಳ್ಳುವಂಥ ಜವಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಗಾಳಿಯಾಡಬಹುದಾದ ಹತ್ತಿಯ ಉಡುಪುಗಳು, ಆಫೀಸಿಗೆ ಹೋಗುವಾಗ ಧರಿಸಲು ತಿಳಿಬಣ್ಣದ ಲೆನಿನ್‌ಗಳು ಉತ್ತಮ ಆಯ್ಕೆಯಾಗಿವೆ.

ಖಾದಿವಸ್ತ್ರವನ್ನೂ ಧರಿಸಬಹುದಾಗಿದೆ. ಖಾದಿ ಜೊತೆಗೆ ಮಸ್ಲಿನ್ ಸಹ ಆರಾಮದಾಯಕವಾಗಿರುತ್ತದೆ. ಬೆವರನ್ನು ಹೀರುವ, ಗಾಳಿಯಾಡಲು ಸುಲಭವಾಗುವಂಥ ನೇಯ್ಗೆ ಇರುವ ಬಟ್ಟೆಗಳನ್ನು ಖರೀದಿಸುವುದು ನಿಮ್ಮ ಆಯ್ಕೆಯಾಗಿರಲಿ.

ದೊಗಲೆಯಾದಷ್ಟೂ ಆರಾಮ: ಬೇಸಿಗೆಯ ಉಡುಗೆಗಳು ಚರ್ಮಕ್ಕೆ ಅಂಟಿಕೊಳ್ಳುವಂತಿರದೆ ದೊಗಲೆಯಾಗಿರಬೇಕು. ಗಾಳಿಯಾಡಲು ಅವಕಾಶ ಇರುವಂತಿರಬೇಕು. ಚರ್ಮ ಬಿಸಿಲುಣ್ಣುವಂಥ ಉಡುಗೆಗಳನ್ನೂ ಧಾರಾಳವಾಗಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ನಡುಮಧ್ಯಾಹ್ನ ಮತ್ತು ಬಿರುಬಿಸಿಲಿನಲ್ಲಿ ಓಡಾಡುವ ಸಂದರ್ಭ ಇದ್ದಲ್ಲಿ ತೆಳುವಾದ ಮೈ ಮುಚ್ಚುವ ಉಡುಗೆಗಳನ್ನೇ ಆಯ್ಕೆ ಮಾಡಿಕೊಳ್ಳಿ. ಇಳಿ ಸಂಜೆ, ಸವಿಬೆಳಗಿನ ಹೊತ್ತಿಗೆ ಚರ್ಮಕ್ಕೆ ಬಿಸಿಲು ತಾಕುವಂಥ ಉಡುಗೆಗಳನ್ನೂ ಆಯ್ಕೆ ಮಾಡಿಕೊಳ್ಳಬಹುದು.

ಬಿಳಿ–ತಿಳಿಬಣ್ಣಗಳಿರಲಿ: ತಿಳಿನೀಲಿ, ತಿಳಿಗುಲಾಬಿ, ತಿಳಿಹಳದಿ, ತಿಳಿಹಸಿರು, ನಿಂಬೆ ಹಳದಿ, ನಿಂಬೆ ಹಸಿರು ಇವೆಲ್ಲವೂ ಬೇಸಿಗೆಯ ಬಣ್ಣಗಳಾಗಿವೆ. ಬಿಸಿಲಿನಲ್ಲಿ ಉಡುಪಿನ ಬಣ್ಣ ನೋಡಿದಾಗಲೇ ಶಾಂತವೆನಿಸುವಂಥ, ಹೊರಗಿನ ತಾಪ, ಒಳಗುದಿಗಳನ್ನೆಲ್ಲ ಸೆಳೆದಿಡುವಂಥ ಬಣ್ಣಗಳು ಇವಾಗಿವೆ. ಬಿಳಿ ಬಣ್ಣದ ಹಿನ್ನೆಲೆಯಲ್ಲಿ ಹೂ ಬಳ್ಳಿಗಳ ಪ್ರಿಂಟ್ ಇರುವ ವಸ್ತ್ರಗಳನ್ನು ಧಾರಾಳವಾಗಿ ಆಯ್ಕೆ ಮಾಡಿಕೊಳ್ಳಬಹುದು.

ಗಾಢ ಬಣ್ಣಗಳ ವಸ್ತ್ರಗಳು ಬಿಸಿಲಿನ ತಾಪ ಹೀರಿ ಇನ್ನಷ್ಟು ಸೆಕೆಯ ಅನುಭವ ನೀಡುವುದರಿಂದ ತಿಳಿ ಬಣ್ಣಗಳ ಆಯ್ಕೆ ಒಳಿತು.

ವಸ್ತ್ರಗಳ ಆಯ್ಕೆ: ಚಂದದ ಫ್ರಾಕುಗಳು, ಸ್ಕರ್ಟುಗಳು, ಬ್ಯಾಗಿ ಪ್ಯಾಂಟುಗಳು, ಪಲಾಝೋಗಳು, ಶಾರ್ಟ್ಸ್‌ಗಳು, ಉದ್ದನೆಯ ಕ್ಯಾಮಿಸೋಲ್‌ಗಳು, ಫ್ರಿಲ್ಸ್‌ಗಳು ಇವನ್ನೆಲ್ಲ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಬೇಸಿಗೆಯನ್ನೂ ಹಿತವಾಗಿ ಕಳೆಯಬೇಕೆಂದರೆ, ಆಹ್ಲಾದಕರವೆನಿಸಬೇಕಾದರೆ ಪ್ರಕೃತಿಯ ಪ್ರಿಂಟ್ ಇರುವ ವಸ್ತ್ರಗಳು ನಿಮ್ಮ ಸಂಗ್ರಹದಲ್ಲಿ ಹೆಚ್ಚಾಗಲಿ. ಸೀರೆ ಉಡುವವರು ಬಂಗಾಲಿ ಕಾಟನ್, ಮಾಹೇಶ್ವರಿ, ಗದ್ವಾಲ್, ಕಂಚಿ, ಕೊಯಮತ್ತೂರು, ಮಧುರೈ ಕಾಟನ್ ಸೀರೆಗಳನ್ನು ತಮ್ಮ ಸಂಗ್ರಹಕ್ಕೆ ಸೇರಿಸಬಹುದಾಗಿದೆ. ಜರಿ ಇಲ್ಲದ, ನೂಲಿನ ಅಂಚು, ಸೆರಗು ಇರುವ ಸೀರೆಗಳು ಕಣ್ಣಿಗೆ ಹಿತವಾಗಿರುತ್ತವೆ. ಮೈಮನಗಳಿಗೆ ಮುದ ನೀಡುತ್ತವೆ. ❖

ನಿರುತ್ಸಾಹ ಒದ್ದೋಡಿಸುವ ಬಗೆ

ದಿನನಿತ್ಯದ ಬದುಕಿನಲ್ಲಿ ಕೆಲವೊಮ್ಮೆ ನಿರುತ್ಸಾಹ ನಮಗೆ ಗೊತ್ತಿಲ್ಲದೆ ನುಸುಳುತ್ತದೆ. ಅದನ್ನ ಒದ್ದೋಡಿಸುವ ಕೆಲವು ಸರಳ ಟಿಪ್ಸ್ ಇಲ್ಲಿವೆ.



ಡಾ. ಬ್ರಹ್ಮಾನಂದ ನಾಯಕ

ಬೆಳಗಾನೆದ್ದರೆ ಯಾರೊಟ್ಟಿಗೂ ಮಾತು ಬೇಡವೆನಿಸುತ್ತದೆ. ಬ್ರಷ್ ಮಾಡುವುದೂ ಬೇಡವೆನಿಸುವಂಥ ನಿರುತ್ಸಾಹವೂ ಕೆಲವೊಮ್ಮೆ ಇರುತ್ತದೆ. ಇವನ್ನು ತೊಡೆದುಹಾಕಲು ಮಾತು ಬೇಕು. ಪ್ರೀತಿಯುಣಿಸುವ ಜೀವದೊಂದಿಗೆ ಒಂದಷ್ಟು ಮಾತಾಡಲು ಸಮಯ ಮೀಸಲಿಡಿ.

ಸಾಮಾಜಿಕ ಸಂಪರ್ಕಗಳು ಅವಶ್ಯಕವಾಗಿವೆ. ಸ್ನೇಹಿತರು ಮತ್ತು ಕುಟುಂಬದೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿರುವುದು ಉತ್ಸಾಹವನ್ನು ಕಾಯ್ದುಕೊಳ್ಳಲು ಸಹಾಯಕವಾಗಿದೆ. ‘ನನ್ನ ಆಪ್ತ ಗೆಳತಿಯೊಬ್ಬಳಿಗೆ ಮಾತ್ರ ದಿನಾಲೂ ಫೋನ್ ಮಾಡುತ್ತೇನೆ, ಆ ಹತ್ತು ನಿಮಿಷಗಳೇ ದಿನದ ಅತ್ಯಂತ ಉತ್ತಮ ಸಮಯ’ ಎಂದು ಭಾರತಿ ಒಪ್ಪಿಕೊಂಡಳು. ‘ಆಕೆಯೊಂದಿಗೆ ಮಾತನಾಡಿದ ನಂತರ, ನನ್ನಲ್ಲಿ ಹೊಸ ಶಕ್ತಿ ಉಕ್ಕುತ್ತದೆ’.

ಜೀವನದ ನದಿಯಲ್ಲಿ ಕೇವಲ ತೇಲುತ್ತಿರುವುದು ಮತ್ತು ಇತರರನ್ನು ದಡ ಸೇರಿಸುವುದು ಮಾತ್ರ ಸಾಲದು. ನಿಮ್ಮ ಸ್ವಂತ ಪಯಣದಲ್ಲಿ, ಪ್ರವಾಹಗಳನ್ನು ಎದುರಿಸಲು ಮತ್ತು ಪ್ರತಿಕೂಲ ಪರಿಸ್ಥಿತಿಗಳ ವಿರುದ್ಧ ಈಜಲು ಧೈರ್ಯ ಬೇಕು. ನದಿಯ ಪ್ರವಾಹವು ಎಷ್ಟೇ ಭೀಕರವಾಗಿದ್ದರೂ, ಅದರ ಪ್ರವಾಹದ ವಿರುದ್ಧ ನಿಲ್ಲುವ ಶಕ್ತಿ ಪ್ರತಿ ಮಹಿಳೆಯಲ್ಲೂ ಅಡಗಿದೆ.

ಇತ್ತೀಚೆಗೆ ಹದಿನೆಂಟು ವರ್ಷದ ಯುವತಿ ಸುನಿಧಿ ಹೇಳಿದಳು, ‘ನಾನು ಪ್ರತಿದಿನ ಸಂಜೆ ದಿನಚರಿಯನ್ನು ಬರೆಯುತ್ತೇನೆ, ನನ್ನ ದಿನದ ಮೂರು ಸಕಾರಾತ್ಮಕ ಅಂಶಗಳನ್ನು ನಮೂದಿಸುತ್ತೇನೆ. ಈ ಅಭ್ಯಾಸವು ನನ್ನನ್ನು ಧನಾತ್ಮಕವಾಗಿ ಇರಿಸುತ್ತದೆ’ ಇಂತಹ ಸರಳ ಅಭ್ಯಾಸಗಳು ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುತ್ತವೆ.

ಮತ್ತೊಬ್ಬ ರೋಗಿಯಾದ ಮೀನಾಕ್ಷಿ, ತನ್ನ ಎಪ್ಪತ್ತು ವರ್ಷದ ವಯಸ್ಸಿನಲ್ಲಿಯೂ ಪ್ರತಿದಿನ ಯೋಗಾಸನ ಮಾಡುತ್ತಾಳೆ. ಅವರು ಹೇಳುತ್ತಾರೆ: ‘ಡಾಕ್ಟರ್, ಹಿಂದೆ ನಾನು ಒಂದು ದಿನ ಯೋಗ ಮಾಡದಿದ್ದರೂ ನಿರಾಶೆಗೊಳಗಾಗುತ್ತಿದ್ದೆ. ಆದರೆ ಈಗ, ಪ್ರತಿದಿನ ಕೇವಲ ಹತ್ತು ನಿಮಿಷಗಳ ಯೋಗಾಭ್ಯಾಸದ ನಂತರ, ನನ್ನಲ್ಲಿ ಯುವತಿಯಂತೆ ಹೊಸ ಚೈತನ್ಯ ತುಂಬಿರುತ್ತದೆ’

ಆಯುರ್ವೇದದಲ್ಲಿ ಹೇಳಿದ ಮೂಲಭೂತ ಸೂತ್ರಗಳು ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ. ದಿನಂಪ್ರತಿ ಬೆಳಗಿನ ಸೂರ್ಯನ ಬೆಳಕು, ಸಮತೋಲಿತ ಆಹಾರ, ಮಿತವಾದ ವ್ಯಾಯಾಮ, ಸಾಕಷ್ಟು ನೀರಿನ ಸೇವನೆ, ಉತ್ತಮ ನಿದ್ರೆ, ಮತ್ತು ಭಾವನಾತ್ಮಕ ಸ್ಥಿರತೆ - ಇವುಗಳು ಉತ್ಸಾಹಭರಿತ ಜೀವನಕ್ಕೆ ಮೂಲಾಧಾರವಾಗಿವೆ.

ನಾವು ಶಾರೀರಿಕ ಆರೋಗ್ಯಕ್ಕೆ ನೀಡುವಷ್ಟೇ ಆದ್ಯತೆಯನ್ನು ಮಾನಸಿಕ ಆರೋಗ್ಯಕ್ಕೂ ನೀಡಬೇಕಿದೆ. ಉತ್ಸಾಹಹೀನತೆಯ ಕಾರ್ಮೋಡಗಳು ಕವಿದಾಗ, ನೀವು ಸಣ್ಣ ಹೆಜ್ಜೆಗಳನ್ನಿಡಲು ಆರಂಭಿಸಿ. ಆ ಸಣ್ಣ ಸಾಧನೆಗಳು ದೊಡ್ಡ ಬದಲಾವಣೆಗಳಿಗೆ ದಾರಿಮಾಡಿಕೊಡುತ್ತವೆ. ❖

ಕಾಳಜಿ

ಸ್ನಾಯು ಸೆಳೆತ

ಡಾ.ಅಮಿತ್ ಕುಲಕರ್ಣಿ

ಸ್ನಾಯು ಸೆಳೆತವು ಹಠಾತ್‌ನೆ ಸಂಭವಿಸುವ ಪ್ರಕ್ರಿಯೆಯಾಗಿದ್ದು, ದೇಹದ ಯಾವುದೇ ಭಾಗದ ಸ್ನಾಯುಗಳಲ್ಲಿಯೂ ಈ ಸೆಳೆತ ಉಂಟಾಗಬಹುದು. ಸ್ನಾಯುಗಳ ಸಂಕುಚನ ಉಂಟಾದಾಗ ಅತಿಯಾದ ನೋವು ಉಂಟಾಗಬಹುದು. ಒಂದು ಕ್ಷಣ ಏನು ಮಾಡಲಾಗದಂಥ ಪರಿಸ್ಥಿತಿ ಬರಬಹುದು. ಸ್ನಾಯು ಸೆಳೆತ ಸಮಸ್ಯೆ ಮಹಿಳೆಯರಲ್ಲಿ ಹೆಚ್ಚಾಗಿದ್ದು, ಅದಕ್ಕೆ ಕೆಲವು ಕಾರಣಗಳು ಹೀಗಿವೆ.

- ಅತಿಯಾದ ಸ್ನಾಯುಗಳ ಚಟುವಟಿಕೆಯು ಸ್ನಾಯುಸೆಳೆತಕ್ಕೆ ಕಾರಣವಾಗಬಹುದು.
- ವ್ಯಾಯಾಮ ಅತಿಯಾದಾಗಲೂ ಸೆಳೆತ ಉಂಟಾಗಬಹುದು. ಸ್ನಾಯುಗಳಿಗೆ ಸರಿಯಾದ ವಿಶ್ರಾಂತಿ ಸಿಗದೇ ಇದ್ದಾಗ ಸೆಳೆತ ಬರಬಹುದು.
- ಸೋಡಿಯಂ, ಪೊಟ್ಯಾಸಿಯಂ ಮತ್ತು ಮೆಗ್ನೀಸಿಯಂನಂಥ ಅಗತ್ಯವಾದ ಖನಿಜಗಳ ಕೊರತೆ ಉಂಟಾದಾಗ ಸ್ನಾಯುಗಳ ಕಾರ್ಯವೈಖರಿಯಲ್ಲಿ ವ್ಯತ್ಯಯ ಉಂಟಾಗಬಹುದು. ದೇಹವು ನಿರ್ಜಲೀಕರಣ ಸಮಸ್ಯೆಯಿಂದ ಬಳಲುತ್ತಿದ್ದರೆ ಸ್ನಾಯು ಸೆಳೆತ ಉಂಟಾಗಬಹುದು.
- ಸ್ನಾಯುಗಳಿಗೆ ರಕ್ತದ ಪೂರೈಕೆ ಕಡಿಮೆಯಾದಾಗ, ಶೀತಪ್ರಕೃತಿಯಿಂದ ರಕ್ತನಾಳಗಳು ಸಂಕುಚಿತಗೊಂಡಾಗಲೂ ಸೆಳೆತ ಕಾಣಿಸಿಕೊಳ್ಳಬಹುದು.
- ಹೈಪೋಥೈರಾಯ್ಡ್, ಕಿಡ್ನಿ ಸಂಬಂಧಿತ ಕಾಯಿಲೆ, ಮಲ್ಟಿಪಲ್ ಸ್ಕ್ಲೆರೋಸಿಸ್, ರೆಸ್ಟ್‌ಲೆಸ್ ಲೆಗ್ಸ್ ಸಿಂಡ್ರೋಮ್, ನರಸಂಬಂಧಿತ ಸಮಸ್ಯೆಗಳಿಂದಲೂ ಸ್ನಾಯುಗಳಲ್ಲಿ ಸೆಳೆತ ಕಾಣಿಸಿಕೊಳ್ಳಬಹುದು.

ಪರಿಹಾರವೇನು?

ಸ್ನಾಯುಗಳು ಬಿಗಿಗೊಂಡು ಹಠಾತ್ ಸೆಳೆತ ಉಂಟಾದರೆ ಆದಷ್ಟು ಆರಾಮ ಮಾಡಿ. ಸ್ನಾಯುಗಳನ್ನು ಬಿಗಿಗೊಳಿಸಬೇಡಿ. ಈ ಸಂದರ್ಭದಲ್ಲಿ ಚಟುವಟಿಕೆ ನಡೆಸದಂತೆ ನೋಡಿಕೊಳ್ಳಿ.

- ನಿತ್ಯ ಎರಡು ಲೀಟರ್ ನೀರನ್ನು ಕಡ್ಡಾಯವಾಗಿ ಕುಡಿಯಿರಿ. ಮೆಗ್ನೀಸಿಯಂ, ಪೊಟ್ಯಾಶಿಯಂ ಹೇರಳವಾಗಿರುವ ಆಹಾರವನ್ನು ಸೇವಿಸಿ. ರಾತ್ರಿಯಲ್ಲಿ ಬೆಚ್ಚಗಿನ ಸಾಕ್ಸ್ ಧರಿಸಿ. ನಿರ್ದಿಷ್ಟ ಸ್ನಾಯುಗಳ ಮೇಲೆ ಅತಿಯಾದ ಬಲ ಹಾಕದಂತೆ ನೋಡಿಕೊಳ್ಳಿ.
- **ಮಸಾಜ್:** ಸ್ನಾಯುಗಳನ್ನು ನಿಧಾನವಾಗಿ ವಿಸ್ತರಿಸಿ, ಮಸಾಜ್ ಮಾಡುವುದರಿಂದ ಸ್ನಾಯು ಸೆಳೆತವನ್ನು ನಿವಾರಿಸಬಹುದು.
- ಅತಿಯಾದ ಚಟುವಟಿಕೆಗಳ ನಡುವೆ ಆಗಾಗ್ಗೆ ವಿಶ್ರಾಂತಿ ಪಡೆಯುವುದು. ದೀರ್ಘ ಉಸಿರಾಟ, ಧ್ಯಾನದಂಥ ತಂತ್ರಗಳಿಂದ ಸ್ನಾಯುವಿನ ಮೇಲೆ ಒತ್ತಡ ಬೀಳದಂತೆ ನೋಡಿಕೊಳ್ಳಬಹುದು.
- ಸೆಳೆತ ಪೀಡಿತ ಸ್ನಾಯುಗಳ ಮೇಲೆ ಬೆಚ್ಚಗಿನ ಅಥವಾ ತಣ್ಣನೆಯ ಪ್ಯಾಕ್‌ಗಳನ್ನು ಹಾಕುವುದರಿಂದ ನೋವನ್ನು ನಿವಾರಿಸಲು ಮತ್ತು ಸ್ನಾಯು ಸೆಳೆತ ಕಡಿಮೆ ಮಾಡಬಹುದು. ಇದರ ಜತೆಗೆ ಬಿಗಿಯಾದ ಸ್ನಾಯುಗಳನ್ನು ಸಡಿಲಗೊಳಿಸಲು ನೋವು ನಿವಾರಕಗಳಿವೆ. ❖

ಸ್ಪಂದನ



ಡಾ. ವೀಣಾ ಎಸ್. ಭಟ್

ಎಚ್‌ಪಿವಿ ವ್ಯಾಕ್ಸಿನ್ ಎಂದರೇನು?

- **9ನೇ ತರಗತಿ ಕಲಿಯುತ್ತಿದ್ದೇನೆ. ಗರ್ಭಕಂಠದ ಕ್ಯಾನ್ಸರ್‌ಗೆ ಲಸಿಕೆ ಹಾಕಿಸಿಕೊಳ್ಳಲು ಶಾಲೆಯಲ್ಲಿ ಒತ್ತಡ ಹಾಕುತ್ತಿದ್ದಾರೆ. ಇಷ್ಟು ಚಿಕ್ಕವಯಸ್ಸಿನಲ್ಲಿ ಲಸಿಕೆ ಹಾಕಿಸಬಹುದೇ?. ನಮ್ಮಮ್ಮನಿಗೆ 38 ವರ್ಷ. ಅವರೂ ಹಾಕಿಸಬಹುದೇ? ಈ ಬಗ್ಗೆ ವಿವರವಾಗಿ ತಿಳಿಸಿ. ಅರುಣಾ, ಊರು ತಿಳಿಸಿಲ್ಲ.**

ಸರ್ವಿಕಲ್ ಕ್ಯಾನ್ಸರ್ ಅಥವಾ ಗರ್ಭಕಂಠದ ಕ್ಯಾನ್ಸರ್ ಭಾರತದಲ್ಲಿ ಮಹಿಳೆಯರನ್ನು ಬಾಧಿಸುತ್ತಿರುವ ಎರಡನೆಯ ಅತಿ ಹೆಚ್ಚು ಕ್ಯಾನ್ಸರ್ ಆಗಿದೆ. ಗರ್ಭಕಂಠದ ಕ್ಯಾನ್ಸರ್‌ಗೆ ಕಾರಣ (ಶೇ 70ಕ್ಕೂ ಹೆಚ್ಚು) ಹ್ಯೂಮನ್ ಪ್ಯಾಪಿಲೋಮ ವೈರಸ್ (ಎಚ್.ಪಿ.ವಿ) ಇವುಗಳಲ್ಲಿ ಹಲವು ವಿಧಗಳಿವೆ. ಇವು ಎಲ್ಲಾ ಮಹಿಳೆಯರಲ್ಲೂ ಇರುವಂಥದ್ದೆ. ಪ್ರಮುಖವಾಗಿ ಚರ್ಮದಿಂದ ಚರ್ಮಕ್ಕೆ ಹರಡುವುದರಿಂದ ಲೈಂಗಿಕಕ್ರಿಯೆ ಸೋಂಕು ಹರಡುವಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮತ್ತು ಈ ಸೋಂಕು ಲೈಂಗಿಕವಾಗಿ ಸಕ್ರಿಯವಾಗಿರುವವರಿಗೆಲ್ಲಾ ಒಂದಲ್ಲ ಒಂದು ಸಂದರ್ಭಗಳಲ್ಲಿ ಕಾಡಬಹುದು. ಆದರೆ ಸ್ವಾಭಾವಿಕ ರೋಗನಿರೋಧಕ ಶಕ್ತಿ ಹೆಚ್ಚಾಗಿದ್ದಾಗ ಈ ಎಚ್.ಪಿ.ವಿ ಸೋಂಕು ಯಾವುದೇ ತೊಂದರೆಯನ್ನುಂಟು ಮಾಡುವುದಿಲ್ಲ. ರೋಗನಿರೋಧಕ ಶಕ್ತಿ ಕಡಿಮೆಯಾದ ಮಹಿಳೆಯರಲ್ಲಿ ಎಚ್.ಪಿ.ವಿ ವೈರಸ್ ತನ್ನ ಚಟುವಟಿಕೆ ಹೆಚ್ಚಿಸಿ, ಸೂಕ್ತ ಸಮಯದಲ್ಲಿ ಚಿಕಿತ್ಸೆಕೊಡದೇ ಹೋದಾಗ ಕ್ಯಾನ್ಸರ್ ಲಕ್ಷಣಗಳು ಕಂಡುಬರುವುದು.

ಸರ್ವಿಕಲ್ ಕ್ಯಾನ್ಸರ್‌ನ ಅಪಾಯಕಾರಿ ಅಂಶಗಳೆಂದರೆ, ಬಹುಮಂದಿಯೊಡನೆ ಸ್ವಚ್ಛಂದದ ಲೈಂಗಿಕ ಸಂಪರ್ಕವಿದ್ದಾಗ, ಚಿಕ್ಕವಯಸ್ಸಿನಲ್ಲಿಯೇ ಲೈಂಗಿಕ ಚಟುವಟಿಕೆ ಆರಂಭಿಸಿದ್ದಾಗ, ಮಕ್ಕಳನ್ನು ಪದೇ ಪದೇ ಅಂತರವಿಲ್ಲದೇ ಹಡೆದಾಗ, ಧೂಮಪಾನ, ಮದ್ಯಪಾನ, ತಂಬಾಕು ಸೇವಿಸುವ ಮಹಿಳೆಯರಲ್ಲಿ, ಲೈಂಗಿಕ ರೋಗ ಇರುವವರಲ್ಲಿ, ದೀರ್ಘಾವಧಿ ಸಂತಾನ ನಿರೋಧ ಗುಳಿಗೆಗಳನ್ನು ನುಂಗುವುದರಿಂದ, ಕುಂದಿದ ರೋಗನಿರೋಧಕಶಕ್ತಿ, ಶುಚಿತ್ವದ ಕೊರತೆ, ಅಪೌಷ್ಟಿಕತೆ.

ಈ ಕ್ಯಾನ್ಸರ್ ಜತೆಗೆ ಯೋನಿ ಮತ್ತು ಜನನಾಂಗದ ನರೋಲಿಗಳ ಸಮಸ್ಯೆಗಳು ಮತ್ತು ಗುದದ್ವಾರದ ಸಮಸ್ಯೆಗಳು, ಓರೋಫ್ಯಾರಂಜಿಯಲ್ ಕ್ಯಾನ್ಸರ್‌ಗಳು ಉಂಟಾಗಬಹುದು.

ಲೈಂಗಿಕವಾಗಿ ಸಕ್ರಿಯವಾಗುವ ಮೊದಲೇ 9ರಿಂದ 14ವರ್ಷದೊಳಗೆ ಹೆಣ್ಣುಮಕ್ಕಳಿಗೆ ಲಸಿಕೆ ನೀಡಲು ವಿಶ್ವ ಆರೋಗ್ಯಸಂಸ್ಥೆ ಸೂಚಿಸಿದೆ. ಅವರು 0 ಮತ್ತು 6 ತಿಂಗಳಲ್ಲಿ 2 ಡೋಸ್ ವೇಳಾಪಟ್ಟಿಯ ಪ್ರಕಾರ ಕೊಡಬೇಕು. 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹೆಣ್ಣುಮಕ್ಕಳಿಗೆ 3 ಡೋಸ್ ವೇಳಾಪಟ್ಟಿ ಅಂದರೆ ಎಚ್.ಪಿ.ವಿ ಲಸಿಕೆ 0, 2 ಮತ್ತು 6 ತಿಂಗಳಲ್ಲಿ ನೀಡಬೇಕು. ಶೇಕಡ 80ರಷ್ಟು ಹೆಣ್ಣುಮಕ್ಕಳಿಗೆ ಲಸಿಕೆ ನೀಡುವುದರಿಂದ ಎಚ್.ಪಿ.ವಿ ಸೋಂಕು ಗಂಡು ಮಕ್ಕಳಿಗೂ ಹರಡುವುದನ್ನು ತಡೆಯಬಹುದಾಗಿದೆ.

ದ್ವಿತೀಯ ಹಂತದಲ್ಲಿ 15ವರ್ಷ ಮೇಲ್ಪಟ್ಟ ಹೆಣ್ಣುಮಕ್ಕಳು, ಗಂಡುಮಕ್ಕಳು, ಪುರುಷರು ಮತ್ತು ಸಲಿಂಗಕಾಮಿ ಪುರುಷರಿಗೆ ಆದ್ಯತೆ ನೀಡಲಾಗುತ್ತದೆ. ಇದನ್ನು ಸೂಕ್ತ ತಾಪಮಾನದಲ್ಲಿ ಸಂಗ್ರಹಿಸಿ ಕೊಟ್ಟಾಗ ಅಡ್ಡಪರಿಣಾಮಗಳು ಕಡಿಮೆ. ಕೆಲವರಲ್ಲಿ ಸಣ್ಣ ಪ್ರಮಾಣದ ತಲೆನೋವು, ತಲೆಸುತ್ತು, ಹೊಟ್ಟೆನೋವು ವಾಕರಿಕೆ ಬರುವ ಅನುಭವಗಳಾಗಬಹುದು. ಜಾಗತಿಕ ವ್ಯಾಕ್ಸಿನ್ ಸುರಕ್ಷತಾ ಸಮಿತಿಯು ಯಾವುದೇ ರೀತಿಯ ಅಪಾಯಕಾರಿ ತೊಂದರೆಗಳನ್ನು ಗುರುತಿಸಿಲ್ಲ. ಗರ್ಭಾವಸ್ಥೆಯಲ್ಲಿ ಈ ವ್ಯಾಕ್ಸಿನ್ ಬೇಡ. ಎದೆಹಾಲುಣಿಸುವಾಗ ಕೊಡಬಹುದು. ಆದರೆ ನೆನಪಿಡಬೇಕಾದ ಅಂಶಗಳೆಂದರೆ ಕೇವಲ ಎಚ್.ಪಿ.ವಿ ಲಸಿಕೆ ಪಡೆದ ಮಾತ್ರಕ್ಕೆ ನಿರ್ಲಕ್ಷ್ಯ ಸಲ್ಲದು. ಸ್ವಚ್ಛಂದ ಲೈಂಗಿಕತೆಯೂ ಸೇರಿ ಇನ್ನಿತರೆ ಮೇಲೆ ತಿಳಿಸಿದ ಅಪಾಯಕಾರಿ ಅಂಶಗಳನ್ನು ದೂರವಿಡಬೇಕು. ಕಾಲ ಕಾಲಕ್ಕೆ ವಿಶ್ವಾಸಾರ್ಹ ಸ್ಕ್ರೀನಿಂಗ್ ಪರೀಕ್ಷೆಯಾದ ಪ್ಯಾಪ್‌ಸ್ಮಿಯರ್ ಪರೀಕ್ಷೆಗೆ ನಿಮ್ಮ ತಾಯಿ ಹಾಗೂ ನೀವು ಒಳಗಾಗುವುದು ಅಗತ್ಯ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಚಾಲ್ತಿಯಲ್ಲಿ ಇಲ್ಲದ ಖಾತೆಗೆ ₹20 ಲಕ್ಷ ಜಮೆ • ಜಾಲದ ಬೆನ್ನು ಹತ್ತಿದ ಡಿಆರ್‌ಐ

ಚಿನ್ನ: ನಟಿಗುಂಟು ದೀರ್ಘ ನಂಟು

• ಕೆ.ಎಸ್.ಸುನಿಲ್

ಬೆಂಗಳೂರು: ಚಿನ್ನ ಕಳ್ಳಸಾಗಣೆಯಲ್ಲಿ ನಟಿ ರನ್ಯಾ ರಾವ್ ಅವರು ದೀರ್ಘಕಾಲದ ನಂಟು ಹೊಂದಿರುವುದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ತನಿಖೆ ವೇಳೆ ಪತ್ತೆಯಾಗಿದೆ.



ರನ್ಯಾ ರಾವ್

ನಟಿಯ ಬ್ಯಾಂಕ್ ಖಾತೆಯೊಂದಕ್ಕ ಸಂಶಯಾಸ್ಪದ ಮೂಲದಿಂದ 2024ರ ಅಕ್ಟೋಬರ್‌ನಲ್ಲೇ ₹20 ಲಕ್ಷ ಸಂದಾಯವಾಗಿರುವುದು ಪತ್ತೆಯಾಗಿದೆ. ನಗದು ವರ್ಗಾವಣೆ ಆದ ಸಂದರ್ಭದಲ್ಲಿ ಈ ಖಾತೆ ಚಾಲ್ತಿಯಲ್ಲೇ ಇರಲಿಲ್ಲ. ಈ ಪಾವತಿಯ ಹಿಂದೆ ಚಿನ್ನ ಕಳ್ಳಸಾಗಣೆ ಜಾಲದ ನಂಟು ಇರಬಹುದು ಎಂಬ ಶಂಕೆಯಲ್ಲಿ ತನಿಖೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

ಮೊದಲ ಬಾರಿಗೆ ದುಬೈನಿಂದ ಬೆಂಗಳೂರಿಗೆ ಚಿನ್ನ ಕಳ್ಳಸಾಗಣೆ ಮಾಡಿರುವುದಾಗಿ ವಿಚಾರಣೆ ವೇಳೆ ರನ್ಯಾ ಹೇಳಿದ್ದಾರೆ. ಆದರೆ, ತನಿಖಾ ತಂಡ ನಟಿಯ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸಿದ್ದು, ವಹಿವಾಟು ಕುರಿತು ಮಾಹಿತಿ ಸಂಗ್ರಹಿಸಿದೆ.

ಚಾಲ್ತಿಯಲ್ಲಿ ಇಲ್ಲದ ರನ್ಯಾ ಖಾತೆಗೆ ಹಣ ಸಂದಾಯವಾಗಿದ್ದು ಬಿಟ್ಟರೆ, ಈ ಖಾತೆಗೆ ಹಣ ವರ್ಗಾವಣೆ ಆಗಿಲ್ಲ. ಯಾವ ಖಾತೆಯಿಂದ ವರ್ಗಾವಣೆ ಆಗಿದೆ? ಯಾರು ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ.

ಮೊದಲು ಸಿಕ್ಕಿಬಿದ್ದಿದ್ದರೇ?: ರನ್ಯಾ ಅವರನ್ನು ಹಿಂದೊಮ್ಮೆ ಚಿನ್ನ ಕಳ್ಳಸಾಗಣೆಗೆ ಯತ್ನಿಸುತ್ತಿದ್ದ ಶಂಕೆಯ ಮೇಲೆ ದುಬೈ ತನಿಖಾ ಸಂಸ್ಥೆಗಳು ವಶಕ್ಕೆ ಪಡೆದಿದ್ದ ಮಾಹಿತಿ ಡಿಆರ್‌ಐಗೆ ಲಭ್ಯವಾಗಿದೆ. ನಟಿ ಹಿಂದಿನಿಂದಲೂ ಚಿನ್ನ ಕಳ್ಳಸಾಗಣೆ ಜಾಲದಲ್ಲಿ ಸಕ್ರಿಯರಾಗಿದ್ದರು ಎಂಬ ಅನುಮಾನಕ್ಕೆ ಇದು ಪುಷ್ಟಿ ನೀಡಿದೆ.

‘ಹೆಚ್ಚು ಪ್ರಮಾಣದ ಚಿನ್ನದೊಂದಿಗೆ ಬೆಂಗಳೂರಿನತ್ತ ಹೊರಟಿದ್ದ ರನ್ಯಾ ಅವರನ್ನು ದುಬೈನ ವಿಮಾನ ನಿಲ್ದಾಣದಲ್ಲಿ ತನಿಖಾ ಸಂಸ್ಥೆಗಳು ವಶಕ್ಕೆ ಪಡೆದಿದ್ದವು. ಆಗ, ‘ಭಾರತಕ್ಕೆ ಹೊರಟಿಲ್ಲ, ಜಿನೀವಾಕ್ಕೆ ಪ್ರಯಾಣಿಸುತ್ತಿದ್ದೇನೆ’ ಎಂದು ನಟಿ ಉತ್ತರಿಸಿದ್ದರು. ಜಿನೀವಾಕ್ಕೆ ಚಿನ್ನ ಕೊಂಡೊಯ್ಯಲು ನಿರ್ಬಂಧಗಳಿಲ್ಲದ ಕಾರಣದಿಂದ ನಟಿಯ ಮಾತನ್ನು ನಂಬಿದ್ದ ತನಿಖಾ ಸಂಸ್ಥೆಗಳ ಅಧಿಕಾರಿಗಳು ಬಿಟ್ಟು ಕಳುಹಿಸಿದ್ದರು ಎಂಬ ಮಾಹಿತಿ ದೊರೆತಿದೆ. ಈ ಕುರಿತು ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಕಳ್ಳ ಸಾಗಣೆ ಮೂಲಕ ತರುತ್ತಿದ್ದ ಚಿನ್ನವನ್ನು ರನ್ಯಾ ರಾವ್, ತರುಣ್ ರಾಜು ಅವರಿಗೆ ನೀಡುತ್ತಿದ್ದರು. ಹವಾಲಾ ದಂಧೆ ಮೂಲಕ ಭಾರತದಿಂದ ಹಣ ದುಬೈ ತಲುಪಿ, ಬಳಿಕ ಚಿನ್ನದ ಗಟ್ಟಿ ರೂಪದಲ್ಲಿ ಬೆಂಗಳೂರಿಗೆ ವಾಪಸ್ ಬರುತ್ತಿತ್ತು. ಈ ಚಿನ್ನವನ್ನು ಬೆಂಗಳೂರಿನಲ್ಲಿ ಆಯ್ದ ಚಿನ್ನದ ವ್ಯಾಪಾರಿಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಒಂದು ಕೆ.ಜಿ ಚಿನ್ನಕ್ಕೆ ₹5 ರಿಂದ ₹10 ಲಕ್ಷದವರೆಗೂ ಕಮಿಷನ್ ದೊರೆಯುತ್ತಿತ್ತು ಎಂಬುದು ತನಿಖಾ ತಂಡಕ್ಕೆ ಗೊತ್ತಾಗಿದೆ.

ಪ್ರಕರಣದಲ್ಲಿ ಬಂಧಿತರಾಗಿರುವ ನಟಿಯ ಸ್ನೇಹಿತ ತರುಣ್ ರಾಜು ಅವರು ತೆಲುಗು ಸಿನಿಮಾ ರಂಗದಲ್ಲಿ ಸಕ್ರಿಯವಾಗಿದ್ದಾರೆ. ಹಾಗಾಗಿ ಅವರು ಉದ್ಯಮಿಗಳು, ರಾಜಕಾರಣಿಗಳು ಮತ್ತು ನಟರ ನಂಟು ಇದ್ದು, ಆ ಆಯಾಮದಿಂದಲೂ ತನಿಖಾ ತಂಡ ಮಾಹಿತಿ ಕಲೆಹಾಕುತ್ತಿದೆ.

ಹೈಕಮಾಂಡ್‌ಗೆ ಕಾಂಗ್ರೆಸ್ ವರದಿ

ಚಿತ್ರ ನಟಿ ರನ್ಯಾ ರಾವ್ ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮಾಡಿದ್ದ ಪ್ರಕರಣದಲ್ಲಿ ರಾಜ್ಯದ ಕಾಂಗ್ರೆಸ್ ನಾಯಕರು, ಸರ್ಕಾರದ ಸಚಿವರು ಭಾಗಿಯಾಗಿಲ್ಲ ಎಂದು ಪಕ್ಷದ ಹೈಕಮಾಂಡ್‌ಗೆ ಕೆಪಿಸಿಸಿ ವರದಿ ನೀಡಿದೆ.

‘ಮಾಧ್ಯಮಗಳಲ್ಲಿ ವರದಿ ಬಿತ್ತರವಾದಂತೆ ಪ್ರಕರಣದಲ್ಲಿ ಸರ್ಕಾರದ ಯಾವ ಸಚಿವರು, ಕಾಂಗ್ರೆಸ್ ನಾಯಕರ ಕೈವಾಡ ಇಲ್ಲ. ಆರೋಪಿ ರನ್ಯಾ ಅವರು ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರ ರಾವ್ ಅವರ ಮಲಮಗಳು. ಅವರು ರಾಜ್ಯ ಕೇಡರ್‌ನ ಐಪಿಎಸ್ ಅಧಿಕಾರಿ. ಹಾಗಾಗಿ, ಅವರ ಕುಟುಂಬದ ಪರಿಚಯ ಹಲವರಿಗಿದೆ. ಅವರ ಕುಟುಂಬದ ಮದುವೆ ಮತ್ತಿತರ ಸಮಾರಂಭಗಳಲ್ಲಿ ಭಾಗಿಯಾಗಿದ್ದಾರೆ. ವೈಯಕ್ತಿಕ ಸ್ನೇಹ, ನಂಟಿನ ಹೊರತು ಆರೋಪಿಗೆ ಯಾವುದೇ ಸಹಕಾರವನ್ನು ಯಾರೊಬ್ಬರೂ ನೀಡಿಲ್ಲ ಎಂದು ಹೈಕಮಾಂಡ್‌ಗೆ ನೀಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ಹೇಳಿವೆ.

ಪ್ರಕರಣ ಪತ್ತೆಯಾದ ನಂತರ ಸರ್ಕಾರದ ಕೆಲ ಸಚಿವರೊಂದಿಗೆ ರನ್ಯಾ ರಾವ್ ನಂಟಿದೆ ಎಂಬ ಸುದ್ದಿಗಳು ಬಿತ್ತರವಾದ ಕಾರಣ ಕೆಪಿಸಿಸಿ, ದೆಹಲಿ ನಾಯಕರಿಗೆ ಸ್ಪಷ್ಟನೆ ನೀಡಿದೆ.

ಚಿನ್ನಾಭರಣ ಕಂಪನಿಗಳ ಕೈವಾಡದ ಶಂಕೆ

ರನ್ಯಾ ರಾವ್ ಮತ್ತು ಇತರರು ಭಾಗಿಯಾಗಿರುವ ಚಿನ್ನ ಕಳ್ಳಸಾಗಣೆ ಪ್ರಕರಣದ ಜಾಲದಲ್ಲಿ ದೇಶದ ಕೆಲವು ಪ್ರತಿಷ್ಠಿತ ಚಿನ್ನಾಭರಣ ಕಂಪನಿಗಳ ಕೈವಾಡ ಇರುವ ಶಂಕೆಯೂ ಬಲವಾಗಿದೆ. ಈ ಜಾಡು ಹಿಡಿದು ಡಿಆರ್‌ಐ ಮುಂದೆ ಸಾಗುತ್ತಿದೆ.

ಬೆಂಗಳೂರಿನಲ್ಲಿರುವ ಕೆಲವು ಪ್ರತಿಷ್ಠಿತ ಚಿನ್ನಾಭರಣ ಕಂಪನಿಗಳು ಕಳ್ಳಸಾಗಣೆಯಿಂದ ಬಂದ ಚಿನ್ನವನ್ನು ಬಳಕೆ ಮಾಡಿಕೊಂಡಿರುವ ಸುಳಿವು ತನಿಖಾ ತಂಡಗಳಿಗೆ ಲಭಿಸಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಜಾಮೀನು ಅರ್ಜಿ ತಿರಸ್ಕೃತ

ಬಂಧನಕ್ಕೊಳಗಾಗಿರುವ ನಟಿ ರನ್ಯಾ ರಾವ್ ಅವರಿಗೆ ಬೆಂಗಳೂರು ವಿಶೇಷ ಆರ್ಥಿಕ ಅಪರಾಧ ನ್ಯಾಯಾಲಯ ಶುಕ್ರವಾರ ಜಾಮೀನು ನಿರಾಕರಿಸಿದೆ.

ನ್ಯಾಯಾಧೀಶ ವಿಶ್ವನಾಥ್ ಚನ್ನಬಸಪ್ಪ ಗೌಡರ್ ಅವರು ರನ್ಯಾ ಪರ ವಕೀಲರು ಮತ್ತು ಡಿಆರ್‌ಐ ವಕೀಲರ ವಾದಗಳನ್ನು ಆಲಿಸಿದ ನಂತರ ಈ ಆದೇಶವನ್ನು ಹೊರಡಿಸಿದ್ದಾರೆ. ಹಾಗಾಗಿ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ರನ್ಯಾ ಇರಲಿದ್ದಾರೆ.

ಜಾಮೀನು ಅರ್ಜಿ ವಿರೋಧಿಸಿದ ಡಿಆರ್‌ಐ, ಈ ಪ್ರಕರಣವು ‘ರಾಷ್ಟ್ರೀಯ ಭದ್ರತೆಯ ವಿಷಯವಾಗಿದೆ’ ಮತ್ತು ರನ್ಯಾ ತನಿಖೆಗೆ ಸಹಕರಿಸಿಲ್ಲ ಎಂದು ಮಾಹಿತಿ ನೀಡಿತು.

ಇದೇ ವೇಳೆ, ಪ್ರಕರಣದ ಎರಡನೇ ಆರೋಪಿ ತರುಣ್ ರಾಜುಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಜಾಮೀನು ಕೋರಿ ತರುಣ್ ರಾಜು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ತರುಣ್ ರಾಜು ಮನವಿಗೆ ಆಕ್ಷೇಪಣೆ ಸಲ್ಲಿಸಲು ಡಿಆರ್‌ಐ ಪರ ವಕೀಲರು ಕಾಲಾವಕಾಶ ಕೇಳಿರುವುದರಿಂದ ಅರ್ಜಿ ವಿಚಾರಣೆಯನ್ನು ಶನಿವಾರ ಮಧ್ಯಾಹ್ನ 3 ಗಂಟೆಗೆ ಮುಂದೂಡಿ, ಆಕ್ಷೇಪಣೆ ಸಲ್ಲಿಸುವಂತೆ ಡಿಆರ್‌ಐ ಅಧಿಕಾರಿಗಳಿಗೆ ಸೂಚಿಸಿದೆ.

‘ಇಬ್ಬರು ಸಚಿವರ ಸೆಟ್ಲ್‌ಮೆಂಟ್ ಆಗಲಿದೆ’

‘ರನ್ಯಾ ರಾವ್ ಪ್ರಕರಣ ಮುಂದಿಟ್ಟುಕೊಂಡು, ಮುಖ್ಯಮಂತ್ರಿ ಆಕಾಂಕ್ಷಿ ಆಗಿರುವವರೊಬ್ಬರ ಸೆಟ್ಲ್‌ಮೆಂಟ್ ಆಗುತ್ತದೆ. ಅದು ಯಾವ ರೀತಿ ಆಗುತ್ತದೆ ಎಂಬುದನ್ನು ಕಾದು ನೋಡಬೇಕು’ ಎಂದು ಬಿಜೆಪಿ ಶಾಸಕ ಮುನಿರತ್ನ ಮಾರ್ಮಿಕವಾಗಿ ನುಡಿದರು.

ಮುನಿರತ್ನ

ಸುದ್ದಿಗಾರರ ಜತೆ ಮಾತನಾಡಿದ ಅವರು ಪರೋಕ್ಷವಾಗಿ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದರು.

‘ರಮೇಶ ಜಾರಕಿಹೊಳಿ ಅವರದ್ದು ಮೊದಲೇ ಸೆಟ್ಲ್‌ಮೆಂಟ್ ಆಗಿತ್ತು. ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣೆ ಆದ ನಂತರ ನನ್ನ ಮತ್ತು ಯೋಗೀಶ್ವರ್ ಅವರ ಸೆಟ್ಲ್‌ಮೆಂಟ್ ಆಯಿತು. ಈಗ ಯಾರಿಗೆ ಕಾದಿದೆ ನೋಡಬೇಕು. ಯಾವ ರೀತಿ ಸೆಟ್ಲ್‌ಮೆಂಟ್ ಮಾಡಿದ್ದಾರೆ ಎನ್ನುವುದನ್ನು ಕಾದು ನೋಡಬೇಕು. ರನ್ಯಾ ಪ್ರಕರಣದಲ್ಲಿ ಇಬ್ಬರು ಸಚಿವರ ಹೆಸರು ಕೇಳಿಬಂದಿದೆ. ಮುಂದೆ ಏನಾಗುತ್ತದೆ ನೋಡೋಣ’ ಎಂದರು.

ಜತಿನ್ ಹುಕ್ಕೇರಿ ವಿಚಾರಣೆ

ದುಬೈನಿಂದ ಭಾರತಕ್ಕೆ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಶೋಧ ಮುಂದುವರಿಸಿರುವ ಜಾರಿ ನಿರ್ದೇಶನಾಲಯವು (ಇ.ಡಿ), ನಟಿ ರನ್ಯಾ ರಾವ್ ಪತಿ ಜತಿನ್ ಹುಕ್ಕೇರಿ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದೆ.

ಜತಿನ್ ಅವರ ಫ್ಲ್ಯಾಟ್‌ಗೆ ಶುಕ್ರವಾರ ಬಂದಿದ್ದ ಇ.ಡಿ ಅಧಿಕಾರಿಗಳು ರಾತ್ರಿಯವರೆಗೂ ವಿಚಾರಣೆ ನಡೆಸಿದರು. ಉದ್ಯಮಿ ತರುಣ್ ರಾಜು, ರನ್ಯಾ ರಾವ್ ನಡುವಣ ಹಣಕಾಸು ವ್ಯವಹಾರ, ಜತಿನ್ ಅವರ ಹಣಕಾಸು ವಹಿವಾಟುಗಳ ಬಗ್ಗೆ ತನಿಖಾಧಿಕಾರಿಗಳು ಪ್ರಶ್ನೆಗಳನ್ನು ಕೇಳಿದರು ಎಂದು ಮೂಲಗಳು ತಿಳಿಸಿವೆ.

ತರುಣ್ ಮತ್ತು ಜತಿನ್ ಅವರ ಉದ್ಯಮಗಳ ಜತೆ ಹಣಕಾಸು ವ್ಯವಹಾರ ಇರಿಸಿಕೊಂಡಿರುವ ಇತರ ಉದ್ಯಮಿಗಳು ಮತ್ತು ಉದ್ಯಮಗಳ ಬಗ್ಗೆಯೂ ಮಾಹಿತಿ ಕಲೆಹಾಕಲಾಗಿದೆ. ಗುರುವಾರದ ಶೋಧ ಕಾರ್ಯದ ವೇಳೆ ಕಲೆಹಾಕಿದ್ದ ದಾಖಲೆಗಳ ಬಗ್ಗೆ ಜತಿನ್ ಅವರಿಂದ ವಿವರಣೆ ಕೇಳಲಾಗಿದೆ ಎಂದು ಮಾಹಿತಿ ನೀಡಿವೆ.

ಗುರುವಾರದ ಶೋಧದ ವೇಳೆ ನಗರದ ಕೆಲ ಚಿನ್ನದ ವ್ಯಾಪಾರಿಗಳ ಜತೆ ಹಣಕಾಸು ವ್ಯವಹಾರ ನಡೆದಿರುವ ಬಗ್ಗೆ ಸುಳಿವು ದೊರೆತಿದೆ. ಅವರಿಗೆ ಸಮನ್ಸ್ ನೀಡಿ, ವಿಚಾರಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಆಗುಂಬೆ: ಅಧಿಕ ಉಷ್ಣಾಂಶ

ಕಾದ ಬಾಣಲೆಯಂತಾಗಿದೆ ಕರ್ನಾಟಕದ ಚಿರಾಪುಂಜಿ

• ವೆಂಕಟೇಶ ಜಿ.ಎಚ್

ಶಿವಮೊಗ್ಗ: ರಾಜ್ಯದಲ್ಲೇ ಅತಿಹೆಚ್ಚು ಮಳೆ ಸುರಿಯುತ್ತಿದ್ದುದರಿಂದ ಕರ್ನಾಟಕದ ಚಿರಾಪುಂಜಿ ಎಂದು ಹೆಸರಾಗಿದ್ದ ಆಗುಂಬೆಯಲ್ಲೇ ಅತಿಹೆಚ್ಚು ಬಿಸಿಲು ಕಂಡುಬರುತ್ತಿದೆ.

ಭಾರತೀಯ ಹವಾಮಾನ ಇಲಾಖೆಯ ಮಾಹಿತಿಯಂತೆ ದಕ್ಷಿಣ ಒಳನಾಡಿನ ಮಲೆನಾಡು ಒಳಗೊಂಡಂತೆ 13 ಜಿಲ್ಲೆಗಳ ಪೈಕಿ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಗುರುವಾರ (ಮಾರ್ಚ್ 13) ಅತಿಹೆಚ್ಚು 36.2 ಡಿಗ್ರಿ ಉಷ್ಣಾಂಶ ದಾಖಲಾಗಿದೆ. ಇದು ಹವಾಮಾನ ವೈಪರೀತ್ಯದ ಪರಿಣಾಮವನ್ನು ತೋರಿಸುತ್ತಿದೆ.

ಈ ಪಟ್ಟಿಯಲ್ಲಿ ದಾವಣಗೆರೆ (36 ಡಿಗ್ರಿ ಸೆಲ್ಸಿಯಸ್) 2ನೇ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿರುವ ಶಿವಮೊಗ್ಗದಲ್ಲಿ 35.6 ಡಿಗ್ರಿ ಉಷ್ಣಾಂಶ ದಾಖಲಾಗಿದೆ. ವಿಶೇಷವೆಂದರೆ ಬಯಲು ಸೀಮೆಯ ಚಿತ್ರದುರ್ಗ (35.1 ಡಿಗ್ರಿ) ಹಾಗೂ ಕೋಲಾರ ಜಿಲ್ಲೆಯ ಚಿಂತಾಮಣಿಗಿಂತ (33.1 ಡಿಗ್ರಿ) ಶಿವಮೊಗ್ಗದಲ್ಲಿ ಹೆಚ್ಚು ಉಷ್ಣಾಂಶ ದಾಖಲಾಗಿದೆ!

‘ಅಭಿವೃದ್ಧಿ’ಯಿಂದಾಗಿ ಹಸಿರುಡುಗೆ ಕಳೆದುಕೊಳ್ಳುತ್ತಿರುವ ಮಲೆನಾಡಿನಲ್ಲಿ ತಂಪನೆಯ ವಾತಾವರಣ ಕಾಣೆಯಾಗಿದೆ. ವೈಶಾಖದ ದಿನಗಳು ಪ್ರಖರವಾಗುತ್ತಿವೆ. ತುಂಗೆ-ಭದ್ರೆ, ಶರಾವತಿ, ಕುಮದ್ವತಿ ನದಿಗಳ ವೈಯಾರದಿಂದ ತಂಪಿನ ಒಸಗೆ ಆಗಿದ್ದ ಸಹ್ಯಾದ್ರಿಯ ತಪ್ಪಲು ಈಗ ಬಿಸಿ ಬಾಣಲೆಯಾಗಿ ಮಾರ್ಪಟ್ಟಿದೆ.

ಕಳೆದ ವರ್ಷ 42 ಡಿಗ್ರಿ ಉಷ್ಣಾಂಶ ದಾಖಲು: 2019ರಿಂದ ಈಚೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಬಿಸಿಲಿನ ಬೇಗೆ ತೀವ್ರಗೊಂಡಿದೆ. 2022ರ ಏಪ್ರಿಲ್ 15ರಂದು ಜಿಲ್ಲೆಯಲ್ಲಿ ಉಷ್ಣಾಂಶ 42 ಡಿಗ್ರಿ ತಲುಪಿತ್ತು. 2024ರ ಮಾರ್ಚ್ 28ರಂದು 41 ಡಿಗ್ರಿ, ಏಪ್ರಿಲ್ 8ರಂದು 42 ಡಿಗ್ರಿ ಉಷ್ಣಾಂಶ ದಾಖಲಾಗಿತ್ತು ಎಂಬುದನ್ನು ಭಾರತೀಯ ಹವಾಮಾನ ಇಲಾಖೆಯ ಅಂಕಿ-ಅಂಶಗಳು ದೃಢೀಕರಿಸುತ್ತವೆ.

‘ಬಯಲು ಸೀಮೆಗಿಂತ ಬಿಸಿಲು ಇಲ್ಲಿ ಹೆಚ್ಚಾಗಿದೆ. ಇದು ಮಲೆನಾಡಿನ ಜನರಿಗೆ ಎಚ್ಚರಿಕೆ ಗಂಟೆ. ಜಿಲ್ಲೆಯಲ್ಲಿ ಈಗ ನಿಜವಾದ ಕಾಡು ಉಳಿದಿಲ್ಲ. ಈಗ ನೀಲಗಿರಿ, ಅಕೇಶಿಯಾ, ರಬ್ಬರ್, ಅಡಿಕೆ ಮಾತ್ರ ಕಾಣಸಿಗುತ್ತಿದೆ’ ಎಂದು ಪರಿಸರ ಹೋರಾಟಗಾರ ಪ್ರೊ.ಬಿ.ಎಂ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸುತ್ತಾರೆ.

> ತೀರ್ಥಹಳ್ಳಿಯಲ್ಲಿ 1,200 ಮರಗಳನ್ನು ಕಡಿಯುತ್ತಿದ್ದೇವೆ. ಶರಾವತಿ ಪಂಪ್ಡ್ ಸ್ಟೋರೇಜ್ ಹೆಸರಲ್ಲಿ ಸಿಂಗಳೀಕ ಅಭಯಾರಣ್ಯ ಹಾಳು ಮಾಡಲು ಹೊರಟಿದ್ದೇವೆ
> **ಪ್ರೊ.ಬಿ.ಎಂ.ಕುಮಾರಸ್ವಾಮಿ** ಪರಿಸರ ಹೋರಾಟಗಾರ

> ಮರ-ಗಿಡಗಳ ಸಂಖ್ಯೆ ಕಡಿಮೆ ಆಗಿದೆ. ಬಿಸಿಲಾಘಾತದಿಂದ ಮುಂಜಾಗರೂಕತೆ ವಹಿಸುವಂತೆ ಸಾರ್ವಜನಿಕರಿಗೂ ಮಾಹಿತಿ ನೀಡುತ್ತಿದ್ದೇವೆ
> **ಸಿ.ಎಸ್.ಪಾಟೀಲ,** ನಿರ್ದೇಶಕರು, ಭಾರತೀಯ ಹವಾಮಾನ ಇಲಾಖೆ

ಬಿಸಿಲು ಮಾತ್ರವಲ್ಲ ಉಷ್ಣಾಂಶದಲ್ಲೂ ಹೆಚ್ಚಳ

‘ಬರೀ ಬಿಸಿಲು ಮಾತ್ರವಲ್ಲ. ದೈನಂದಿನ ಉಷ್ಣಾಂಶ ಮಟ್ಟದಲ್ಲಿನ ವ್ಯತ್ಯಾಸ ಕೂಡ ಬಹಳ ಹೆಚ್ಚುತ್ತಿದೆ. ಮೊದಲೆಲ್ಲ ದಿನದಲ್ಲಿ ಕನಿಷ್ಠ ಹಾಗೂ ಗರಿಷ್ಠ ಉಷ್ಣಾಂಶದ ನಡುವಿನ ವ್ಯತ್ಯಾಸ 2ರಿಂದ 3 ಡಿಗ್ರಿ ಇರುತ್ತಿತ್ತು. ಅದೀಗ 5ರಿಂದ 6 ಡಿಗ್ರಿ ಇರುತ್ತದೆ. ಕೆಲವೊಮ್ಮೆ 10 ಡಿಗ್ರಿಗೆ ಹೆಚ್ಚುತ್ತಿದೆ’ ಎಂದು ಇಲ್ಲಿನ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಗ್ರಾಮೀಣ ಕೃಷಿ ಹಾಗೂ ಹವಾಮಾನ ಸೇವಾ ವಿಭಾಗದ ಪ್ರಧಾನ ನೋಡಲ್ ಅಧಿಕಾರಿ ಡಾ.ಎಸ್. ಶ್ರೀಧರ್ ಹೇಳುತ್ತಾರೆ.

ಡಾ.ಎಸ್.ಶ್ರೀಧರ್

‘ನಸುಕಿನಲ್ಲಿ ಹೆಚ್ಚು ಚಳಿ ಇದ್ದರೆ ಬೆಳಿಗ್ಗೆ 10 ಗಂಟೆಯ ಹೊತ್ತಿಗೆ ಭಾರಿ ಬಿಸಿಲು ಕಾಣುತ್ತಿದ್ದೇವೆ. ಇದರಿಂದ ವಾತಾವರಣದಲ್ಲಿ ಆರ್ದ್ರತೆ ಬಹಳಷ್ಟು ಕಡಿಮೆ ಆಗುತ್ತಿದೆ. ಇದು ಮನುಷ್ಯ ಹಾಗೂ ಬೆಳೆಗಳ ಮೇಲೆ ಪರಿಣಾಮ ಬೀರುತ್ತಿದೆ. ವಾತಾವರಣಕ್ಕೆ ಆಗುವ ಆವಿಯ ಪ್ರಮಾಣ ಹೆಚ್ಚಿ ನೀರಿನ ಅಭಾವ ಆಗುತ್ತಿದೆ. ಪ್ರಕೃತಿ ಜೊತೆ ಹೊಂದಿಕೊಂಡು ಹೋಗುವ ಬದಲು ಅದರ ಮೇಲೆ ಆಕ್ರಮಣ ಮಾಡಿದ್ದರ ಪರಿಣಾಮವನ್ನು ಈಗ ಎದುರಿಸುತ್ತಿದ್ದೇವೆ. ಹವಾಮಾನ ಬದಲಾಗುತ್ತಿದೆ. ಮಲೆನಾಡಿನಲ್ಲಿ ಮಳೆಯೂ ಕಡಿಮೆ ಆಗಬಹುದು’ ಎಂದು ಅವರು ಹೇಳುತ್ತಾರೆ.

ಯೋಗೇಂದ್ರಗೆ ‘ಲೋಹಿಯಾ ಪ್ರಶಸ್ತಿ’

ಬೆಂಗಳೂರು: ಭಾರತ ಯಾತ್ರಾ ಕೇಂದ್ರ ನೀಡುವ ‘ಡಾ.ರಾಮಮನೋಹರ ಲೋಹಿಯಾ ಪ್ರಶಸ್ತಿ’ಗೆ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ ₹25 ಸಾವಿರ ನಗದು, ಫಲಕ ಒಳಗೊಂಡಿದೆ. ಬಿ.ಆರ್. ಪಾಟೀಲ ಮತ್ತು ಬಿ.ಎಲ್. ಶಂಕರ್ ಅವರಿದ್ದ ಸಮಿತಿ ಈ ಆಯ್ಕೆ ಮಾಡಿದೆ. ಕೇಂದ್ರವು ಇದೇ 23ರ ಸಂಜೆ 4 ಗಂಟೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಅ.ರಾ. ಮಿತ್ರಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ‘ಅ.ನ.ಕೃಷ್ಣ ರಾಯರ ಸ್ಮಾರಕ: ವಿದ್ಯಾರಣ್ಯ ಸಮಗ್ರ ಸಾಹಿತ್ಯ ಪ್ರಶಸ್ತಿ’ಗೆ ಸಾಹಿತಿ ಅ.ರಾ. ಮಿತ್ರ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ. ವಿದ್ಯಾರಣ್ಯ ಪ್ರತಿಷ್ಠಾನವು ಕಸಾಪದಲ್ಲಿ ₹20 ಲಕ್ಷ ದತ್ತಿ ಇರಿಸಿದೆ. ನಾಡು ನುಡಿಗೆ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಗೌರವಿಸುವುದು ಈ ದತ್ತಿ ಪ್ರಶಸ್ತಿಯ ಆಶಯವಾಗಿದೆ.

ಕುಮಾರ ವ್ಯಾಸ ಭಾರತದ ವ್ಯಾಖ್ಯಾನ, ಹಾಸ್ಯೋತ್ಸವಗಳ ಮೂಲಕ ಅ.ರಾ. ಮಿತ್ರ ಅವರು ಜನಪ್ರಿಯರಾಗಿದ್ದಾರೆ. ಅವರ ‘ಛಂದೋಮಿತ್ರ’ ಕೃತಿಯು ಸುಲಭವಾಗಿ ಕನ್ನಡ ಛಂದಸ್ಸನ್ನು ಅರಿಯಲು ನೆರವಾಗಲಿದೆ. ಪ್ರಾಚೀನ ಕಾವ್ಯಗಳನ್ನು ಅಧ್ಯಯನ ಮಾಡಿರುವ ಅವರು, ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯದ ಎಲ್ಲ ಕ್ಷೇತ್ರಗಳಿಗೂ ಗಣನೀಯ ಕೊಡುಗೆ ನೀಡಿದ್ದಾರೆ ಎಂದು ಕಸಾಪ ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹೊಟ್ಟೆ ತುಂಬಿದವರಿಗೆ ಬೇರೆಯವರು ಕಷ್ಟದಲ್ಲಿದ್ದಾಗ ಮರುಕ ಹುಟ್ಟುವುದೇ?

–ನಾ.ಕಸ್ತೂರಿ

ಕಸ ವಿಲೇವಾರಿ: ತಪ್ಪುಗಳಿಂದ ಪಾಠ ಕಲಿಯದ ಬಿಬಿಎಂಪಿ

ಬೆಂಗಳೂರಿನ ಕಸದ ಸಮಸ್ಯೆ ಈಗ ಮತ್ತೆ ದೊಡ್ಡ ಸುದ್ದಿಯಾಗುತ್ತಿದೆ. ಈ ಹಿಂದೆ, ಮಾವಳ್ಳಿಪುರ ಕಸ ಸಂಗ್ರಹ ಘಟಕ ಬಂದ್ ಆದಾಗ, ಮಂಡೂರು ಭೂಭರ್ತಿ ಘಟಕ ತುಂಬಿಹೋದಾಗ, ಅಲ್ಲಿನ ರಸ್ತೆಗಳು ತ್ಯಾಜ್ಯ ಸಂಗ್ರಹ ಘಟಕಗಳಂತೆ ಗೋಚರಿಸಿ ಜಾಗತಿಕ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು. ಆಗಿನ ಮಾವಳ್ಳಿಪುರ–ಮಂಡೂರು ಜಾಗದಲ್ಲಿ ಈಗ ಮಿಟ್ಟಗಾನಹಳ್ಳಿ–ಬೆಳ್ಳಹಳ್ಳಿ ಇವೆ. ಅಷ್ಟೇ ಬದಲಾವಣೆ. ಮಿಟ್ಟಗಾನಹಳ್ಳಿ ಭೂಭರ್ತಿ ಘಟಕದಲ್ಲಿ ಕಸ ವಿಲೇವಾರಿಯು ವೈಜ್ಞಾನಿಕವಾಗಿ ಆಗುತ್ತಿಲ್ಲ ಎಂದು ದೂರಿರುವ ಗ್ರಾಮಸ್ಥರು, ಕಸ ಹೊತ್ತು ತಂದಿರುವ 300ಕ್ಕೂ ಅಧಿಕ ಕಾಂಪ್ಯಾಕ್ಟರ್‌ಗಳನ್ನು ರಸ್ತೆಯಲ್ಲೇ ತಡೆದಿದ್ದಾರೆ. ನಾಲ್ಕು ದಿನಗಳಿಂದಲೂ ಕಸವನ್ನು ಘಟಕದಲ್ಲಿ ಸುರಿದು ಹೋಗಲು ಬಿಟ್ಟಿಲ್ಲ. ಕಾಂಪ್ಯಾಕ್ಟರ್‌ಗಳು ಮರಳಿ ಬಾರದಿರುವ ಕಾರಣ ಅವುಗಳಿಗೆ ಕಸ ವರ್ಗಾಯಿಸಲು ಸಾಧ್ಯವಾಗದೆ ಆಟೊ ಟಿಪ್ಪರ್‌ಗಳು ನಗರದ ರಸ್ತೆಗಳಲ್ಲಿ ಹಾಗೇ ನಿಂತಿವೆ. ಹೀಗಾಗಿ, ಹಲವು ವಾರ್ಡ್‌ಗಳಲ್ಲಿ ರಸ್ತೆಗಳ ಮೇಲೆಯೇ ಕಸ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ. ದುರ್ನಾತವೂ ಹರಡಿದೆ. ಬೆಂಗಳೂರಿನ ಜನಸಂಖ್ಯೆಯು ವಿಪರೀತ ಎನಿಸುವಷ್ಟು ಬೆಳೆದಿರುವುದು, ವಾರ್ಡ್ ಮಟ್ಟದಲ್ಲಿ ಡಂಪ್‌ಯಾರ್ಡ್ ಇಲ್ಲದಿರುವುದು, ದಿನದ 24 ಗಂಟೆ ಕೆಲಸದ ಸಂಸ್ಕೃತಿ ಬೆಳೆದಿರುವುದು, ಜೀವನಶೈಲಿಯಲ್ಲಿ ಭಾರಿ ಬದಲಾವಣೆ ಆಗಿರುವುದು, ಕಸ ವಿಲೇವಾರಿಗೆ ಕೇಂದ್ರೀಕೃತ ವ್ಯವಸ್ಥೆಯನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವುದು–ಕಸದ ಸಮಸ್ಯೆಯ ಪ್ರಮುಖ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು. ಈ ಸಮಸ್ಯೆಯು ಬಿಗಡಾಯಿಸುವಂತೆ ನೋಡಿಕೊಂಡಿದ್ದು ಮಾತ್ರ ರಾಜಕೀಯ ನಂಟು ಹೊಂದಿರುವ ಕಸದ ಮಾಫಿಯಾ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಚೇರಿಯ ಪ್ರತಿ ಕಂಬವೂ ಉಸುರುತ್ತದೆ. ಕಸ ವಿಲೇವಾರಿ ಸಮಸ್ಯೆ ದೈತ್ಯಾಕಾರ ತಾಳಿದಾಗಲೆಲ್ಲ ಬಿಬಿಎಂಪಿಯು ಮೈಕೊಡವಿ ಮೇಲೆದ್ದಂತೆ ಒಂದಿಷ್ಟು ಚಟುವಟಿಕೆಗಳಲ್ಲಿ ತೊಡಗಿದಂತೆ ಮಾಡುವುದು, ನಂತರ ಮತ್ತೆ ಕುಂಭಕರ್ಣ ನಿದ್ರೆಗೆ ಜಾರುವುದು ದಶಕಗಳಿಂದ ನಡೆಯುತ್ತಿರುವ ವಿದ್ಯಮಾನ. ಶಾಶ್ವತ ಪರಿಹಾರಕ್ಕೆ ಕಾರಣವಾಗುವಂತಹ ಸುಸ್ಥಿರ ವ್ಯವಸ್ಥೆಯೊಂದನ್ನು ರೂಪಿಸುವಲ್ಲಿ ಅದು ಸಂಪೂರ್ಣವಾಗಿ ಸೋತಿದೆ. ರಾಜಧಾನಿಯ ಈ ಸಮಸ್ಯೆಗೆ ತಕ್ಕ ಪರಿಹಾರ ಒದಗಿಸಲು ಇದುವರೆಗೆ ಸರ್ಕಾರ ಕೂಡ ಇಚ್ಛಾಶಕ್ತಿಯನ್ನು ಪ್ರದರ್ಶಿಸಿಲ್ಲ.

ಬಿಬಿಎಂಪಿ ಈಗಲಾದರೂ ತನ್ನ ಹೊಣೆಯನ್ನು ಸರಿಯಾಗಿ ನಿಭಾಯಿಸಬೇಕು. ಸುಸ್ಥಿರ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು

ಮಂಡೂರಿನಲ್ಲಿ ಸಮಸ್ಯೆ ಬಿಗಡಾಯಿಸಿದಾಗ ಮೂಲದಲ್ಲೇ ಕಸ ಬೇರ್ಪಡಿಸಬೇಕು, ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿ ವ್ಯವಸ್ಥೆಯನ್ನು ಮಾಡಬೇಕು, ಪ್ರತಿ ವಾರ್ಡ್‌ನಲ್ಲಿ ಒಣಕಸ ಸಂಗ್ರಹ ಕೇಂದ್ರ ತೆರೆಯಬೇಕು ಮತ್ತು ಭೂಭರ್ತಿ ಮಾಡುವ ಕಸದ ಪ್ರಮಾಣವನ್ನು ಒಟ್ಟು ನಗರ ಕಸ ಉತ್ಪಾದನೆಯ ಶೇಕಡ 20ಕ್ಕೆ ಸೀಮಿತಗೊಳಿಸಬೇಕು ಎಂಬ ನಿರ್ಣಯಕ್ಕೆ ಬಿಬಿಎಂಪಿ ಬಂದಿತ್ತು. ಹದಿಮೂರು ವರ್ಷಗಳಷ್ಟು ಹಿಂದೆಯೇ ಕೈಗೊಂಡ ಈ ನಿರ್ಣಯಗಳನ್ನು ಒಂದುವೇಳೆ ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದ್ದರೆ ಈ ವೇಳೆಗೆ ಕಸ ವಿಲೇವಾರಿಯ ಸಮಸ್ಯೆ ಬಹುಪಾಲು ನೀಗುತ್ತಿತ್ತು. ಬಹುತೇಕ ವಾರ್ಡ್‌ಗಳಲ್ಲಿ ಒಣಕಸ ಸಂಗ್ರಹ ಕೇಂದ್ರಗಳನ್ನೇನೋ ತೆರೆಯಲಾಗಿದೆ. ಆದರೆ, ಮೂಲದಲ್ಲಿ ಕಸ ಬೇರ್ಪಡಿಸುವ ನಿಯಮ ಸರಿಯಾಗಿ ಜಾರಿಯಾಗದ ಕಾರಣ ಮಿಶ್ರಕಸ ಭೂಭರ್ತಿ ಘಟಕಗಳ ಕಡೆಗೆ ಹೋಗುತ್ತಿದೆಯೇ ವಿನಾ ಮರುಬಳಕೆ ಮಾಡಬಹುದಾದ ತ್ಯಾಜ್ಯ ವಸ್ತುಗಳು ಒಣಕಸ ಕೇಂದ್ರಗಳನ್ನು ತಲುಪುತ್ತಿಲ್ಲ. ಪಕ್ಕದ ಗೋವಾ ರಾಜ್ಯದ ಪಣಜಿ ನಗರದ ಉದಾಹರಣೆಯನ್ನೇ ನೋಡಿ. ಮರುಬಳಕೆ ಮಾಡಬಹುದಾದ ತ್ಯಾಜ್ಯವನ್ನು ಶಾಲೆಗೆ ತಂದರೆ ಮಕ್ಕಳಿಗೆ ಬಹುಮಾನ ನೀಡಲಾಗುತ್ತದೆ. ಅಲ್ಲಿನ ಕಾಲೊನಿಗಳಲ್ಲಿ ಹಸಿಕಸವನ್ನು ಗೊಬ್ಬರವಾಗಿ ಪರಿವರ್ತಿಸಲು ಮುನ್ಸಿಪಾಲಿಟಿ ವತಿಯಿಂದಲೇ ಮನೆಗಳ ಸಂಖ್ಯೆಗೆ ಅನುಗುಣವಾಗಿ ಗುಂಡಿಗಳನ್ನು ನಿರ್ಮಿಸಿಕೊಡಲಾಗುತ್ತದೆ. ಕಣ್ಣು ತೆರೆದು ನೋಡಿದರೆ ಸುತ್ತಲೂ ಇಂತಹ ಬೇಕಾದಷ್ಟು ಒಳ್ಳೆಯ ಮಾದರಿಗಳು ಕಾಣುತ್ತವೆ. ಬಿಬಿಎಂಪಿ ಈಗಲಾದರೂ ತನ್ನ ಹೊಣೆಯನ್ನು ಸರಿಯಾಗಿ ನಿಭಾಯಿಸಬೇಕು. ಸುಸ್ಥಿರ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು. ಕಸದ ಅವೈಜ್ಞಾನಿಕ ವಿಲೇವಾರಿಯಿಂದ ಆರೋಗ್ಯ ಸಮಸ್ಯೆ ಎದುರಿಸಬೇಕಿದೆ, ಅಂತರ್ಜಲವೂ ಕಲುಷಿತಗೊಳ್ಳುತ್ತಿದೆ ಎಂಬ ಮಿಟ್ಟಗಾನಹಳ್ಳಿ–ಬೆಳ್ಳಹಳ್ಳಿ ಗ್ರಾಮಸ್ಥರು ವ್ಯಕ್ತಪಡಿಸಿರುವ ಆತಂಕ ಸಹಜವಾದದ್ದು. ಅವರ ಆತಂಕ ದೂರ ಮಾಡುವಂತಹ ಕ್ರಮಗಳನ್ನು ಕೈಗೊಂಡು, ಅವರಲ್ಲಿ ವಿಶ್ವಾಸ ತುಂಬಿ ಸಹಕಾರ ಪಡೆಯುವಂತಹ ಕೆಲಸ ಬಿಬಿಎಂಪಿಯಿಂದ ಆಗಬೇಕು. ಬೆಂಗಳೂರಿನ ಜನ ಬಿಬಿಎಂಪಿಯೇ ಎಲ್ಲವನ್ನೂ ಮಾಡಲಿ ಎಂದು ಮಿಶ್ರಕಸ ಕೊಡುವಂತಹ ಹೊಣೆಗೇಡಿತನ ಪ್ರದರ್ಶಿಸದೆ ‘ಮೂಲದಲ್ಲೇ ಕಸ ಬೇರ್ಪಡಿಸುವಿಕೆ, ಗರಿಷ್ಠ ಮರುಬಳಕೆ, ಭೂಭರ್ತಿ ಘಟಕಕ್ಕೆ ಕನಿಷ್ಠ’ ಎಂಬ ನಿಯಮ ಅಳವಡಿಸಿಕೊಳ್ಳಬೇಕು.

ದಿನದ ಟ್ವೀಟ್

ಇನ್ನಾದರೂ ನ್ಯಾಯ ಸಿಗಲಿ

ಈ ಅನ್ಯಾಯವನ್ನು ನಾವು ಪ್ರತಿವರ್ಷ ನೆನಪಿಸಿಕೊಳ್ಳುತ್ತೇವೆ. ಆದರೆ ಅಂತಿಮವಾಗಿ ನ್ಯಾಯದಾನ ಯಾವಾಗ?
#justiceforDalith #kambalapalli

(ಏಳು ಮಂದಿ ದಲಿತರನ್ನು ಸಜೀವವಾಗಿ ದಹಿಸಿದ ಕಂಬಾಲಪಲ್ಲಿ ದುರ್ಘಟನೆಗೆ 25 ವರ್ಷ ತುಂಬಿದ್ದರೂ ಆರೋಪಿಗಳಿಗೆ ಇನ್ನೂ ಶಿಕ್ಷೆಯಾಗದಿರುವ ಬಗ್ಗೆ ಪ್ರತಿಕ್ರಿಯೆ)

ಕಾಳಾಮುಖ, ಸಂಶೋಧನಾ ವಿದ್ಯಾರ್ಥಿ

ಕಿಡಿನುಡಿ

ಬೆಂಗಳೂರಿನ ಅಲಿ ಅಸ್ಗರ್ ರಸ್ತೆಯಲ್ಲಿ ಹಳೆಯ ಬೃಹತ್ ಮರಗಳನ್ನು ಸರ್ಕಾರಿ ಕಟ್ಟಡದ ಸಲುವಾಗಿ ಕಡಿಯಲಾಗುತ್ತಿದೆ. ಸರ್ಕಾರ ಹೀಗೆ ಮಾಡಲು ಹೇಗೆ ಸಾಧ್ಯ? ಮುಖ್ಯಮಂತ್ರಿಯವರೇ, ಇದು ಸರಿಯಲ್ಲ. ದಯಮಾಡಿ ನಿಲ್ಲಿಸಿ. ಇವು 50ಕ್ಕೂ ಹೆಚ್ಚು ವರ್ಷಗಳಾಗಿರುವ ಮರಗಳು– ಪರಿಸರವನ್ನು ನಾಶ ಮಾಡಲಾಗುತ್ತಿದೆ. ಸಚಿವರೇ ದಯವಿಟ್ಟು ನಿಲ್ಲಿಸಿ.

ಮೋಹನ್‌ದಾಸ್ ಪೈ, ಉದ್ಯಮಿ

25 ವರ್ಷಗಳ ಹಿಂದೆ

ಬುಧವಾರ, 15-3-2000

● **ಸಲ್ಡಾನ ನೀಡಿದ 56 ತೀರ್ಪು ರದ್ದು**

ಬೆಂಗಳೂರು, ಮಾರ್ಚ್ 14– ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಗಳ ವಿಚಾರಣೆಯನ್ನು ವಿಭಾಗೀಯ ನ್ಯಾಯಪೀಠ ನಡೆಸಬೇಕೆಂದು ಆಜ್ಞೆ ಹೊರಡಿಸಿದ ಮೇಲೂ ನ್ಯಾಯಮೂರ್ತಿ ಎಂ.ಎಫ್. ಸಲ್ಡಾನ ಅವರು ವಿಚಾರಣೆ ನಡೆಸಿ ನೀಡಿರುವ 56 ತೀರ್ಪುಗಳನ್ನು ಹೈಕೋರ್ಟಿನ ಐವರು ನ್ಯಾಯಮೂರ್ತಿಗಳಿದ್ದ ವಿಶೇಷ ನ್ಯಾಯಪೀಠ ಇಂದು ರದ್ದುಗೊಳಿಸಿತು.

ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಗಳನ್ನು ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸುವ ವ್ಯವಸ್ಥೆ ಮಾಡಿ ಮುಖ್ಯ ನ್ಯಾಯಮೂರ್ತಿಯವರು 1997ರಲ್ಲಿ ಆಡಳಿತಾತ್ಮಕ ಆದೇಶ ಹೊರಡಿಸಿರುವುದು ಸರಿಯೇ ಎಂಬ ಬಗ್ಗೆ ಮತ್ತು ಹಾಗೆ ಅಧಿಸೂಚನೆ ಹೊರಡಿಸಿದ ಮೇಲೂ ಏಕ ನ್ಯಾಯಮೂರ್ತಿಯವರೇ (ಎಂ.ಎಫ್. ಸಲ್ಡಾನ) ಕೆಲವು ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಆದೇಶ ನೀಡಿರುವುದರ ಕ್ರಮಬದ್ಧತೆ ಪರಿಶೀಲನೆಗೆ ನ್ಯಾಯಪೀಠ ರಚಿಸಲಾಗಿತ್ತು.

● **ಅಪಘಾತದ ಗಾಯಾಳುಗಳ ಜೀವರಕ್ಷಣೆಗೆ ವ್ಯವಸ್ಥೆ**

ಬೆಂಗಳೂರು, ಮಾರ್ಚ್ 14– ಬೆಂಗಳೂರು ನಗರದಲ್ಲಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ಗಾಯಗೊಂಡವರಿಗೆ ತಕ್ಷಣ ಚಿಕಿತ್ಸೆ ನೀಡುವ ಉದ್ದೇಶದಿಂದ ಬೆಂಗಳೂರಿನ ನರವೈದ್ಯರ ಸಂಸ್ಥೆಯು ಹೊಸ ವ್ಯವಸ್ಥೆಯನ್ನು ಮಾರ್ಚ್ 18ರಂದು ಆರಂಭಿಸಲಿದೆ. ಇದಕ್ಕಾಗಿ ‘ಕಾಂಪ್ರಿಹೆನ್ಸಿವ್ ಟ್ರೌಮಾ ಕನ್ಸಾರ್ಶಿಯಮ್’ ಅನ್ನು ಸ್ಥಾಪಿಸಲಾಗಿದ್ದು, ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಉದ್ಘಾಟಿಸಲಿದ್ದಾರೆ.

ನಿಮ್ಹಾನ್ಸ್, ಮಣಿಪಾಲ್ ಆಸ್ಪತ್ರೆ, ಹಾಸ್‌ಮ್ಯಾಟ್, ಮಲ್ಲಿಗೆ ಮೆಡಿಕಲ್ ಸೆಂಟರ್, ಸೇಂಟ್ ಜಾನ್ಸ್ ಆಸ್ಪತ್ರೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮತ್ತು ಬೆಂಗಳೂರು ಆಸ್ಪತ್ರೆಗಳನ್ನು ಕನ್ಸಾರ್ಶಿಯಮ್‌ನಡಿ ಸೇರಿಸಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 15-3-1975

● **ಒಂದೇ ನಿಮಿಷದಲ್ಲಿ 24 ಕೋಟಿ ರೂ. ಅಸ್ತು**

ಬೆಂಗಳೂರು, ಮಾರ್ಚ್ 14– ಒಂದೇ ನಿಮಿಷದಲ್ಲಿ ಸರ್ಕಾರಕ್ಕೆ ಇಂದು ವಿಧಾನಸಭೆ ಧ್ವನಿಮತದ ಮೂಲಕ 24 ಕೋಟಿ 20 ಲಕ್ಷ ರೂಪಾಯಿಗಳನ್ನು ನೀಡಿತು.

ವಿರೋಧ ಪಕ್ಷದವರು ಸಭೆಯಲ್ಲೇ ಧರಣಿ ಹೂಡಿದಾಗ ಅಧ್ಯಕ್ಷೆ ಕೆ.ಎಸ್. ನಾಗರತ್ನಮ್ಮ ಅವರು ಅವರನ್ನು ತಮ್ಮ ಪೀಠಗಳಿಗೆ ಹಿಂದಿರುಗುವಂತೆ ಮನವಿ ಮಾಡಿದರೂ ಫಲವಾಗದಿದ್ದಾಗ ಕಾರ್ಯಕ್ರಮದ ರೀತ್ಯ ಸಮಾಜ ಕಲ್ಯಾಣ ಸಮುದಾಯ ಅಭಿವೃದ್ಧಿ, ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಮೊದಲಾದ ಬಾಬುಗಳ ಬೇಡಿಕೆಗಳನ್ನು ವಿರೋಧ ಪಕ್ಷದವರ ಪ್ರತಿಭಟನೆಯ ನಡುವೆ ಮತಕ್ಕೆ ಹಾಕಿದರು.

ಅಧಿಕ ಸಂಖ್ಯೆಯಲ್ಲಿ ಹಾಜರಿದ್ದ ಆಡಳಿತ ಪಕ್ಷದ ಸದಸ್ಯರು ಜೋರಾಗಿ ‘ಏ’ (ಒಪ್ಪಿಗೆ) ಎಂದು ಕೂಗಿದರು. ವಿರೋಧ ಪಕ್ಷದವರು ‘ನೇ’ (ನಕಾರ) ಎಂದು ಪ್ರತಿಭಟನೆಯ ನಡುವೆ ಧರಣಿ ಕುಳಿತಲ್ಲಿಂದಲೇ ಕೂಗಿದರು. ಅಧ್ಯಕ್ಷರು ಬೇಡಿಕೆಗಳು ಒಪ್ಪಿಗೆ ಪಡೆದಿವೆ ಎಂದು ಸಾರಿ ಸಭೆಯನ್ನು ನಾಳೆಗೆ ಮುಂದೂಡಿದರು.

ಜನಸಂಖ್ಯೆಯಷ್ಟೇ ಆಧಾರವಾದರೆ ವ್ಯವಸ್ಥೆಯ ಮೂಲ ಭಿತ್ತಿಯಲ್ಲೇ ಬದಲಾವಣೆ ಆಗುತ್ತದೆ

ಕ್ಷೇತ್ರ ಮರುವಿಂಗಡಣೆ: ಸಮತೋಲನಕ್ಕೆ ಧಕ್ಕೆ?

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

2026ರ ನಂತರದಲ್ಲಿ ನಡೆಯಬೇಕಿರುವ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯು ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಹಾಗೂ ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ಮುಂದೆ ನಡೆಯಲಿರುವ ಕ್ಷೇತ್ರ ಮರುವಿಂಗಡಣೆ ಕಾರ್ಯವು ದಕ್ಷಿಣದ ರಾಜ್ಯಗಳ ಮೇಲಿನ ತೂಗುಗತ್ತಿ ಎಂದು ಭಾವಿಸಿರುವ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಈ ವಿಚಾರವಾಗಿ ಚರ್ಚಿಸಲು ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳ ಸಭೆ ನಡೆಸಿದ್ದಾರೆ. ಅಲ್ಲದೆ, ಕೆಲವು ಮುಖ್ಯಮಂತ್ರಿಗಳಿಗೆ ಪತ್ರ ಕೂಡ ಬರೆದಿದ್ದಾರೆ.

ಮರುವಿಂಗಡಣೆ ವಿಚಾರವಾಗಿ ದಕ್ಷಿಣ ಭಾರತದಲ್ಲಿ ಇರುವ ಆತಂಕವನ್ನು ತಗ್ಗಿಸಲು ಯತ್ನಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರಗಳ ಮರುವಿಂಗಡಣೆ ನಡೆದ ನಂತರದಲ್ಲಿ ದಕ್ಷಿಣದ ಯಾವುದೇ ರಾಜ್ಯದ ಲೋಕಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿ ಒಂದಿನಿತೂ ಕಡಿಮೆ ಆಗುವುದಿಲ್ಲ ಎಂದಿದ್ದಾರೆ. ಕ್ಷೇತ್ರಗಳ ಸಂಖ್ಯೆಯಲ್ಲಿನ ಹೆಚ್ಚಳದಲ್ಲಿ ದಕ್ಷಿಣದ ರಾಜ್ಯಗಳು ನ್ಯಾಯಸಮ್ಮತ ಪಾಲು ಪಡೆಯುತ್ತವೆ ಎಂದು ಭರವಸೆ ನೀಡಿದ್ದಾರೆ. ಆದರೆ ಈ ಹೇಳಿಕೆಯನ್ನು ಹಲವು ಬಗೆಗಳಲ್ಲಿ ವ್ಯಾಖ್ಯಾನಿಸಲಾಗುತ್ತಿರುವ ಕಾರಣ ವಿವಾದ ತಣ್ಣಗಾಗಿಲ್ಲ.

ಮುಂದಿನ ಜನಗಣತಿ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ ದೇಶದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕಾರ್ಯ ಆರಂಭವಾಗಲಿದೆ. ಈ ಮರುವಿಂಗಡಣೆ ಪ್ರಕ್ರಿಯೆಯು ಲೋಕಸಭಾ ಕ್ಷೇತ್ರಗಳನ್ನು ಹೊಸದಾಗಿ ರಚಿಸುವಲ್ಲಿ ಮಹತ್ವದ ಪರಿಣಾಮ ಬೀರಲಿದೆ, ಭವಿಷ್ಯದ ಲೋಕಸಭೆಯಲ್ಲಿ ವಿವಿಧ ರಾಜ್ಯಗಳಿಗೆ ಇರುವ ಪ್ರಾತಿನಿಧ್ಯದ ಮೇಲೆ ನೇರ ಪರಿಣಾಮ ಉಂಟುಮಾಡಲಿದೆ. ಸಂವಿಧಾನಕ್ಕೆ 2002ರಲ್ಲಿ ತಂದ 84ನೇ ತಿದ್ದುಪಡಿಯ ಅನ್ವಯ 2026ರ ನಂತರ ಕ್ಷೇತ್ರಗಳ ಮರುವಿಂಗಡಣೆ ಕಾರ್ಯ ನಡೆಯುವ ನಿರೀಕ್ಷೆ ಇದೆ.

2021ರಲ್ಲಿ ನಡೆಯಬೇಕಿದ್ದ ಜನಗಣತಿಯು ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ನಡೆಯಲಿಲ್ಲ, ಇಂದಿಗೂ ಅದು ನಡೆದಿಲ್ಲ. ಹೀಗಾಗಿ, ಜನಗಣತಿ ಕೆಲಸ ಪೂರ್ಣಗೊಂಡ ನಂತರ, ಮರುವಿಂಗಡಣೆ ಆಯೋಗದ ರಚನೆಯ ನಂತರ ಕ್ಷೇತ್ರಗಳ ಗಡಿಗಳನ್ನು ಗುರುತಿಸುವ ಕೆಲಸವು ಶುರುವಾಗುತ್ತದೆ. ದೇಶದ ಜನಸಂಖ್ಯೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು, ದೇಶದ ಒಟ್ಟು ಜನಸಂಖ್ಯೆಯಲ್ಲಿ ರಾಜ್ಯಗಳ ಜನಸಂಖ್ಯೆಯ ಶೇಕಡಾವಾರು ಪ್ರಮಾಣದಲ್ಲಿ ಆಗುವ ಬದಲಾವಣೆಗಳ ಕಾರಣದಿಂದಾಗಿ ಮರುವಿಂಗಡಣೆಯ ಕಾರ್ಯದಿಂದ ಆಗುವ ಪರಿಣಾಮಗಳು ಮಹತ್ವ ಪಡೆದುಕೊಳ್ಳುತ್ತವೆ.

ಕಡೆಯ ಬಾರಿ ನಡೆದ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯು ಆಗ ಹೊಸದಾಗಿ ಲಭ್ಯವಿದ್ದ ಜನಸಂಖ್ಯಾ ಅಂಕಿ–ಅಂಶಗಳನ್ನು ಪರಿಗಣಿಸಿತಾದರೂ ಅದು ಪ್ರತಿ ರಾಜ್ಯಕ್ಕೆ ನಿಗದಿಯಾಗಿದ್ದ ಕ್ಷೇತ್ರಗಳ ಸಂಖ್ಯೆಯನ್ನು ಬದಲಿಸುವ ಕೆಲಸ ಮಾಡಲಿಲ್ಲ. ರಾಜ್ಯಗಳ ಒಳಗೆಯೇ ಕ್ಷೇತ್ರಗಳ ಗಡಿಗಳನ್ನು ಮರುಹೊಂದಾಣಿಕೆ ಮಾಡಲಾಯಿತು. ಮುಂದೆ ನಡೆಯಲಿರುವ ಜನಗಣತಿಯನ್ನು ಆಧಾರವಾಗಿ ಇರಿಸಿಕೊಂಡು ಮುಂದಿನ ಕ್ಷೇತ್ರ ಮರುವಿಂಗಡಣೆ ಸಮಿತಿಯು ಕ್ಷೇತ್ರ ಮರುವಿಂಗಡಣೆ ಮಾಡುವುದಾದಲ್ಲಿ, ಪ್ರತಿ ರಾಜ್ಯದ ಜನಸಂಖ್ಯೆ ಪ್ರಮಾಣದಲ್ಲಿ ಆಗಿರುವ ಬದಲಾವಣೆಗಳನ್ನು ಅದು ಗಮನಕ್ಕೆ ತೆಗೆದುಕೊಳ್ಳುತ್ತದೆಯೇ ಅಥವಾ ಹಿಂದೆ ಮಾಡಿದಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆಯೇ?

2011ರ ಜನಗಣತಿಯನ್ನು ಆಧರಿಸುವುದಾದಲ್ಲಿ, ಪ್ರತಿ ರಾಜ್ಯದ ಜನಸಂಖ್ಯಾ ಪ್ರಮಾಣದಲ್ಲಿಯೂ ದೊಡ್ಡ ಬದಲಾವಣೆ ಆಗಿದೆ. 2011ರ ಜನಗಣತಿಯ ಅಂಕಿ–ಅಂಶ ಆಧರಿಸಿ ಮರುವಿಂಗಡಣೆ ಕಾರ್ಯ ನಡೆದಲ್ಲಿ, ರಾಜ್ಯಗಳಿಗೆ ಸಿಗುವ ಕ್ಷೇತ್ರಗಳ ಸಂಖ್ಯೆಯಲ್ಲಿ ಬದಲಾವಣೆಗಳು ಆಗುತ್ತವೆ. ಏಳು ರಾಜ್ಯಗಳು ಹೊಂದಿರುವ ಕ್ಷೇತ್ರಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತದೆ, 10 ರಾಜ್ಯಗಳ (ಹಾಗೂ ದೆಹಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳ) ಕ್ಷೇತ್ರಗಳ ಸಂಖ್ಯೆಯು ಈಗಿರುವಂತೆಯೇ ಉಳಿದುಕೊಳ್ಳುತ್ತದೆ, ಉಳಿದ ರಾಜ್ಯಗಳ ಸೀಟುಗಳ ಸಂಖ್ಯೆಯಲ್ಲಿ ಇಳಿಕೆ ಆಗಲಿದೆ.

2011ರ ಜನಗಣತಿಯ ಆಧಾರದಲ್ಲಿ ಮರುವಿಂಗಡಣೆ ಆದಲ್ಲಿ ದೇಶದ ದಕ್ಷಿಣ, ಪೂರ್ವ ಮತ್ತು ಈಶಾನ್ಯ ಭಾಗದ ರಾಜ್ಯಗಳು ಒಟ್ಟು 25 ಲೋಕಸಭಾ ಸ್ಥಾನಗಳನ್ನು ಕಳೆದುಕೊಳ್ಳುತ್ತವೆ. ಉತ್ತರ, ಪಶ್ಚಿಮ ಮತ್ತು ಮಧ್ಯ ಭಾರತದ ರಾಜ್ಯಗಳಿಗೆ ಗಳಿಕೆ ಆಗುತ್ತದೆ. ತಮಿಳುನಾಡು ಎಂಟು ಸ್ಥಾನಗಳನ್ನು ಕಳೆದುಕೊಳ್ಳಬಹುದು. ನಂತರದ ಸ್ಥಾನಗಳಲ್ಲಿ ಕೇರಳ (5 ಸ್ಥಾನ ಇಳಿಕೆ), ಆಂಧ್ರಪ್ರದೇಶ (3), ಒಡಿಶಾ (2) ಇರಲಿವೆ. ಕರ್ನಾಟಕ, ಮೇಘಾಲಯ, ಮಣಿಪುರ, ಗೋವಾ, ತೆಲಂಗಾಣ, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ, ಪಂಜಾಬ್ ತಲಾ ಒಂದು ಸ್ಥಾನ ಕಳೆದುಕೊಳ್ಳಲಿವೆ. ಉತ್ತರ ಪ್ರದೇಶವು ಏಳು ಸ್ಥಾನಗಳನ್ನು, ಬಿಹಾರ ಮತ್ತು ರಾಜಸ್ಥಾನ ತಲಾ 5 ಸ್ಥಾನಗಳನ್ನು, ಮಧ್ಯಪ್ರದೇಶವು 4 ಸ್ಥಾನಗಳನ್ನು, ಮಹಾರಾಷ್ಟ್ರ 2 ಸ್ಥಾನಗಳನ್ನು, ಜಾರ್ಖಂಡ್ ಮತ್ತು ಹರಿಯಾಣ ತಲಾ ಒಂದು ಸ್ಥಾನವನ್ನು ಪಡೆದುಕೊಳ್ಳಬಹುದು. ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕಾರ್ಯವನ್ನು ಜನಸಂಖ್ಯೆಯನ್ನು ಮಾತ್ರ ಆಧರಿಸಿ ನಡೆಸಿದಲ್ಲಿ ಅಧಿಕಾರದ ಸಮತೋಲನ ತಪ್ಪುತ್ತದೆ, ದೇಶದ ಉತ್ತರ, ಕೇಂದ್ರ ಮತ್ತು ಪಶ್ಚಿಮ ಭಾಗದಲ್ಲಿ ಇರುವ ಹಿಂದಿ ಭಾಷಿಕ ರಾಜ್ಯಗಳಿಗೆ ಇನ್ನಷ್ಟು ಹೆಚ್ಚಿನ ಮಹತ್ವ ಸಿಗುತ್ತದೆ.

ಹೊಸದಾಗಿ ನಿರ್ಮಾಣ ಆಗಿರುವ ಸಂಸತ್ ಭವನದ ಲೋಕಸಭೆಯಲ್ಲಿ 888 ಸದಸ್ಯರಿಗೆ ಆಸನಗಳ ವ್ಯವಸ್ಥೆ ಇದೆ. ಹೀಗಾಗಿ, ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು 888ಕ್ಕೆ ಹೆಚ್ಚಿಸಿದಾಗ, ದಕ್ಷಿಣ ಮತ್ತು ಪೂರ್ವ ಭಾಗದ ರಾಜ್ಯಗಳ ಸೀಟುಗಳ ಸಂಖ್ಯೆಯಲ್ಲಿ ಕಡಿಮೆಯೇನೂ ಆಗುವುದಿಲ್ಲ ಎಂಬ ವಾದ ಇದೆ. ಸಂಖ್ಯೆಯ ದೃಷ್ಟಿಯಿಂದ ಮಾತ್ರ ಗಮನಿಸಿದರೆ ಈ ವಾದ ಸತ್ಯವೆಂದು ಅನ್ನಿಸಬಹುದು. ಯಾವ ರಾಜ್ಯವೂ ತನ್ನ ಲೋಕಸಭಾ ಸೀಟುಗಳ ಸಂಖ್ಯೆಯಲ್ಲಿ ಇಳಿಕೆ ಕಾಣದು ಎಂದು ಕೇಂದ್ರ ಗೃಹ ಸಚಿವರು ಹೇಳಿರುವುದು ಸತ್ಯ. ಆದರೆ 888 ಸೀಟುಗಳನ್ನು ಜನಸಂಖ್ಯೆಯ ಆಧಾರದಲ್ಲಿ (2011ರ ಜನಗಣತಿಯ ಅಂಕಿ-ಅಂಶಗಳನ್ನು ಆಧರಿಸಿ) ಮರುಹಂಚಿಕೆ ಮಾಡಿದಾಗ, ತಮಿಳುನಾಡು, ಕೇರಳ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ಗೋವಾ, ಮಣಿಪುರ ರಾಜ್ಯಗಳ ಸೀಟುಗಳ ಶೇಕಡಾವಾರು ಪ್ರಮಾಣ ಕಡಿಮೆ ಆಗುತ್ತದೆ. ಉತ್ತರಪ್ರದೇಶ, ಬಿಹಾರ, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಮತ್ತು ಜಾರ್ಖಂಡ್ ರಾಜ್ಯಗಳ ಸೀಟುಗಳ ಶೇಕಡಾವಾರು ಪ್ರಮಾಣವು ಈಗ ಅವು ಹೊಂದಿರುವ ಪ್ರಮಾಣಕ್ಕಿಂತ ಹೆಚ್ಚಾಗುತ್ತದೆ.

ಲೋಕಸಭಾ ಕ್ಷೇತ್ರಗಳ ಮರುಹಂಚಿಕೆಯ ಕಾರ್ಯವನ್ನು ಆರಂಭಿಸಿದಾಗ, ಪ್ರತಿ ರಾಜ್ಯವು ದೇಶದ ಒಟ್ಟು ಜನಸಂಖ್ಯೆಯಲ್ಲಿ ಹೊಂದಿರುವ ಪ್ರಮಾಣವನ್ನು ಮಾತ್ರವೇ ಆಧಾರವಾಗಿ ಇರಿಸಿಕೊಳ್ಳಬೇಕೇ ಅಥವಾ ಬೇರೆ ಅಂಶಗಳನ್ನೂ ಆಧಾರವಾಗಿ ಇರಿಸಿಕೊಂಡು ಸಮತೋಲನವೊಂದನ್ನು ಸಾಧಿಸುವುದನ್ನು ಪರಿಗಣಿಸಲಾಗುತ್ತದೆಯೇ ಎಂಬ ಚರ್ಚೆಗಳು ಆಗಬೇಕು. ಕ್ಷೇತ್ರಗಳ ಮರುಹಂಚಿಕೆಯ ಸಂದರ್ಭದಲ್ಲಿ ಜನಸಂಖ್ಯೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಳ್ಳುವುದಾದರೆ, ಲೋಕಸಭೆಯ ಒಟ್ಟು ಸೀಟುಗಳಲ್ಲಿ ದಕ್ಷಿಣ ಭಾರತದ ಹಾಗೂ ಪೂರ್ವ ಭಾರತದ ಹಲವು ರಾಜ್ಯಗಳ ಸೀಟುಗಳ ಪ್ರಮಾಣವು ಕಡಿಮೆ ಆಗುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ.

ಲೋಕಸಭೆಯ ಒಟ್ಟು ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಬಹುದು. ಆಗ ಎಲ್ಲ ರಾಜ್ಯಗಳ ಸೀಟುಗಳ ಸಂಖ್ಯೆ ಹೆಚ್ಚಾಗಬಹುದು. ಆದರೆ ಇಲ್ಲಿ ಇರುವ ಪ್ರಶ್ನೆ ರಾಜ್ಯಗಳ ಸೀಟುಗಳ ಪ್ರಮಾಣದಲ್ಲಿ ಯಾವ ಬಗೆಯಲ್ಲಿ ಬದಲಾವಣೆ ಆಗುತ್ತದೆ ಎಂಬುದಾಗಿದೆ. ಜನಸಂಖ್ಯೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡು ಕ್ಷೇತ್ರಗಳ ಮರುವಿಂಗಡಣೆ ಆದಲ್ಲಿ, ಒಕ್ಕೂಟ ವ್ಯವಸ್ಥೆಯಲ್ಲಿನ ಸಮತೋಲನದಲ್ಲಿ ಬದಲಾವಣೆ ಆಗುವುದು ಖಚಿತ. ಆಗ ದೇಶದ ಕೆಲವು ಪ್ರದೇಶಗಳ ರಾಜಕೀಯ ಪ್ರಾಬಲ್ಯವು ಇನ್ನಷ್ಟು ಹೆಚ್ಚಾಗಲಿದೆ. ಹೀಗೆ ಆದಲ್ಲಿ ಒಕ್ಕೂಟ ಆಡಳಿತ ವ್ಯವಸ್ಥೆಯ ಮೂಲ ಭಿತ್ತಿಯಲ್ಲಿ ಬದಲಾವಣೆ ಆಗುತ್ತದೆ.

ಚುರುಮುರಿ

ಬೈ ಬೈ ದುಬೈ!

● ತುರುವೇಕೆರೆ ಪ್ರಸಾದ್

‘ಪೇಪರ್ ಓದುದ್ಯೇನೇ? ಕರ್ಣಂ ಮಲ್ಲೇಶ್ವರಿ 110 ಕೆ.ಜಿ. ವೇಟ್ ಎತ್ತುದ್ರೂ ಚಿನ್ನ ಸಿಗದೆ ಕಂಚು ಸಿಕ್ಕಿತ್ತು. ಈಕೆ ಯಾರೋ ಪುಣ್ಯಾತ್ಗಿತ್ತಿ 14 ಕೆ.ಜಿ. ಚಿನ್ನನೇ ಸಲೀಸಾಗಿ ಎತ್ಕೊಂಡು ಬಂದಿದಾಳೆ’ ಎಂದ ಪರ್ಮೇಶಿ.

‘ಅಯ್ಯೋ ಅಂತಾದ್ದೆಲ್ಲಾ ಓದಬಾರದು. ಆ ವೈಭವಾನ ಟೀವೀಲಿ ನೋಡಿ ಕಣ್ತುಂಬ್ಕೊಬೇಕು. ಜೀವನವೆಲ್ಲಾ ನಿಮ್ಮನ್ನ ಹಿಂಡುದ್ರೂ ಕಾಲು ಕೆ.ಜಿ. ಚಿನ್ನನೂ ಉದುರ್ಲಿಲ್ವಲ್ಲ’ ಅಂದರು ಪದ್ದಮ್ಮ.

‘ಅದು ಸ್ಮಗಲ್ಡ್ ಕಣೆ. ನೀನೆಂದೂ ದುಬಾಯಿ ಚಿನ್ನ ಬೇಕು ಅಂದೋಳಲ್ಲ, ಆ ಮಟ್ಟಿಗೆ ನೀನು ರನ್ಯಾ ಅಲ್ಲ ಅನನ್ಯ, ಅಪ್ಪಟ ಸವರನ್’.

‘ಹೀಗೆ ರೈಲು ಹತ್ಸಿದ್ದೇ ಆಯ್ತು ಬಿಡಿ. ಒಂದು ಚಿನ್ನದ ಲಾಕೆಟ್ ಮಾಡಿಸ್ಕೊಡ್ಲಿಲ್ಲ ನೀವು’.

‘ಅಷ್ಟೊಂದು ದುಡ್ಡು ಎಲ್ಲಿದೆಯೇ? ಹೆಂಡ್ತಿಗೆ ಲಾಕೆಟ್ ಮಾಡ್ಸಕ್ಕೆ ಅಂತ ಸ್ಮಗ್ಲಿಂಗ್ ರಾಕೆಟ್ ನಡ್ಸಕ್ಕಾಗುತ್ತಾ? ನೀನೇ ಚಿನ್ನ ಕಣೆ, ನಿನಗೆಂತ ಚಿನ್ನ?’

‘ಎಲ್ಲ ಗಂಡಸರೂ ಹೀಗೇ ಹೇಳಿ ಹೇಳಿ ಒನ್ ಗ್ರಾಂ ತಗಡಿಗೇ ಹೆಂಗಸರು ಲಾಯಕ್ ಅನ್ನೋ ಹಾಗಾಗಿದೆ. ನನ್ ಯೋಗ್ಯತೆಗೆ ಒಂದೆರಡು ಬಿಸ್ಕತ್ತಾದ್ರೂ ಬೇಡ್ವಾ?’

‘ಈಗ ಬಿಸ್ಕತ್ ತರ ಹಾಕ್ತಿರೋ ಸಂಬಳದಲ್ಲಿ ಅದೆಲ್ಲಾ ಎಲ್ ಸಾಧ್ಯ? ನಮ್ಮನೆ ನಾಯಿ ಬಿಸ್ಕತ್ತಿಗೇ ಕಾಸಿರಲ್ಲ’.

‘ಈ ತರ ಓಳುಬಿಡೋ ಬದ್ಲು ನೀವೂ ದುಬೈಗೆ ಹೋಗಿ ಚಿನ್ನ ತರ್ಬೇಕು. ಅಲ್ಲಿ ಚಿನ್ನ ಅಗ್ಗ ಅಂತಲ್ಲ’.

‘ಆಂ! ನಾನೂ ಗೋಲ್ಡ್ ಸ್ಮಗ್ಲಿಂಗ್ ಮಾಡ್ಬೇಕಾ?’

‘ಸ್ಮಗ್ಲಿಂಗ್ ಅಲ್ಲ, ಅಲ್ಲೇ ಹೋಗ್ ಕೆಲಸ ಮಾಡಿ! ಚಿನ್ನ ಎಲ್ ಹಾಕ್ಕಂಡ್ರೇನು? ನನ್ನನ್ನೇ ಅಲ್ಲಿಗೆ ಕರುಸ್ಕೊಂಡ್ರಾಯ್ತು!’

‘ಅಯ್ಯೋ, ನಿನ್ ತಲೆ. ಇಲ್ಲಿ ತರ ಅಲ್ಲಿ ಬೇಕಾಬಿಟ್ಟಿ ಇರಕ್ಕಾಗಲ್ಲ ಕಣೆ. ಸಾಲ ಮಾಡಿ ವಾಪಸ್ ಮಾಡದೋರನ್ನ ಸಾಲಗಾರರ ಜೈಲಿಗೆ ಹಾಕ್ಬಹುದು, ಚೆಕ್ ಬೌನ್ಸ್ ಆದ್ರೂ ವರ್ಷಗಟ್ಟಲೆ ಅಲೆದಾಡ್ಸಕ್ಕಾಗಲ್ಲ, ಅಲ್ಲಿ ಸುಖಾಸುಮ್ಮನೆ ಚಳವಳಿ ಮಾಡಕ್ಕಾಗಲ್ಲ. ಇಲ್ಲೂ ಸಲೀಸಾಗಿ ಚಿನ್ನ ಮಾಡ್ಬಹುದಲ್ಲ, ಲೋಕಾಯುಕ್ತದೋರು ಒಂದೊಂದು ದಾಳೀಲೂ ಮೂರ್ನಾಲ್ಕು ಕೋಟಿ ರೂಪಾಯಿ ಬೆಲೆಯ ಚಿನ್ನ ಪತ್ತೆ ಮಾಡಲ್ವಾ? ಇಂಡಿಯಾನೇ ಸೈ! ಬೈ ಬೈ ದುಬೈ’ ಎಂದು ಪಂಚೆ ಕೊಡವಿಕೊಂಡು ಎದ್ದು ಹೋದ ಪರ್ಮೇಶಿ.

ಸಂಗತ

ಕಾಡು ಉಳಿಸಿದ ಸಹಕಾರಿ ಧುರೀಣ

ಅರಣ್ಯ ಸಚಿವರಾಗಿ ಕಾಡಿನ ಉಳಿವಿಗೆ ಕೆ.ಎಚ್.ಪಾಟೀಲ ಕೊಡುಗೆ ಅನನ್ಯ

● ಲಕ್ಷ್ಮೀಕಾಂತ ಜೋಷಿ

ಅದು 1970ರ ದಶಕ. ದೇವರಾಜ ಅರಸು ನೇತೃತ್ವದ ಸಂಪುಟದಲ್ಲಿ ಕೆ.ಎಚ್.ಪಾಟೀಲ ಅರಣ್ಯ ಸಚಿವರಾಗಿದ್ದರು. ಒಮ್ಮೆ ಪಾಟೀಲರು ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆಗೆ ತೆರಳಿದ್ದರು. ಕಾಡಿನಲ್ಲಿದ್ದ ಅತಿಥಿಗೃಹಕ್ಕೆ ಹೋಗುತ್ತಿದ್ದಾಗ, ದಾರಿಯುದ್ದಕ್ಕೂ ಲೋಡುಗಟ್ಟಲೆ ಸೌದೆಯನ್ನು ತುಂಬಿಕೊಂಡು ಹೋಗುತ್ತಿದ್ದ ಎತ್ತಿನ ಗಾಡಿಗಳನ್ನು ನೋಡಿ ಗಾಬರಿಯಾದರು. ಜತೆಯಲ್ಲಿದ್ದ ಅರಣ್ಯಾಧಿಕಾರಿಗಳನ್ನು ಈ ಕುರಿತು ವಿಚಾರಿಸಿದಾಗ, ಜನ ತಮ್ಮ ಅಗತ್ಯಕ್ಕೆ ಬೇಕಾಗುವಷ್ಟು ಸೌದೆಯನ್ನು ಕಾಡಿನಿಂದ ತೆಗೆದುಕೊಂಡು ಹೋಗುತ್ತಿದ್ದಾರೆ, ಅದಕ್ಕೆ ನಾವೇನೂ ಆಕ್ಷೇಪ ಮಾಡುವುದಿಲ್ಲ ಎಂಬ ಉತ್ತರ ಬಂದಿತು.

ರಾಜ್ಯದಲ್ಲಿ ಆಗ ಆರ್ಥಿಕ ಪರಿಸ್ಥಿತಿಯೇನೂ ಚೆನ್ನಾಗಿರಲಿಲ್ಲ. ಜನ ಕಾಡನ್ನು ಸ್ವಂತ ಆಸ್ತಿಯೆಂಬಂತೆ ಕಬಳಿಸುತ್ತಿದ್ದರು. ಬಿಗಿ ಕಾನೂನುಗಳು ಇದ್ದರೂ ಪ್ರಯೋಜನವಿರಲಿಲ್ಲ. ಕಾಡಿಗೆ ಹೋಗಿ ಮರ ಕಡಿಯುವುದಕ್ಕೆ ಯಾರ ಅನುಮತಿಯನ್ನೂ ಪಡೆಯಬೇಕಾದ ಅಗತ್ಯ ಇರಲಿಲ್ಲ. ಅಡುಗೆ ಮಾಡಲು, ಸ್ನಾನಕ್ಕೆ ನೀರು ಕಾಯಿಸಲು ಮಾತ್ರವಲ್ಲದೆ ಬೇರೆ ಯಾವ ಕಾರ್ಯಕ್ಕೆಲ್ಲ ಬೇಕೋ ಅದಕ್ಕೆಲ್ಲವೂ ಜನ ಮರವನ್ನು ಕಡಿದುಕೊಂಡು ಬರಲು ಕಾಡಿಗೆ ನುಗ್ಗುತ್ತಿದ್ದರು. ಹೀಗೆ ಮನಬಂದಂತೆ ಕಾಡಿಗೆ ಹೋಗಿ ಮರ ಕಡಿಯುವುದರ ಮೇಲೆ ಯಾವ ನಿಯಂತ್ರಣವೂ ಇರಲಿಲ್ಲ. ಅರಣ್ಯ ಇಲಾಖೆಗೆ ಎರಡೂವರೆ ರೂಪಾಯಿ ಶುಲ್ಕ ಪಾವತಿಸಿದರೆ ಅಷ್ಟೇ ಸಾಕಿತ್ತು. ಸೌದೆಯನ್ನು ಕೆಲವರು ತಲೆಯ ಮೇಲೆ ಹೊತ್ತುಕೊಂಡು ಬಂದರೆ ಮತ್ತೆ ಕೆಲವರು ಎತ್ತಿನ ಗಾಡಿಗಳಲ್ಲಿ ತುಂಬಿಸಿಕೊಂಡು ಬರುತ್ತಿದ್ದರು.

ಅವರವರ ಮನೆಯ ಅಗತ್ಯಕ್ಕೆಂದು ಸೌದೆ ಕಡಿದು ತರಲು ಕೊಟ್ಟಿದ್ದ ಅನುಮತಿ ಕ್ರಮೇಣ ವಾಣಿಜ್ಯೀಕರಣಗೊಳ್ಳತೊಡಗಿತು. ಜನ ಕಾಡಿನಿಂದ ಸೌದೆ ತಂದು ನಗರಗಳಲ್ಲಿ ಮಾರಾಟ ಮಾಡತೊಡಗಿದರು. ಒಂದು ಊರಿನಿಂದ 5 ಅಥವಾ 10 ಗಾಡಿಗಳಲ್ಲಿ ತರಲಾಗುತ್ತಿದ್ದ ಸೌದೆ ಬರಬರುತ್ತಾ 100ಕ್ಕೆ ಏರಿತ್ತು. ಇದರಿಂದ ಕಾಡಿನಲ್ಲಿದ್ದ ಮರಗಳನ್ನು ಕಡಿದು ವಿಪರೀತ ಲೂಟಿ ಮಾಡುವ ಕೆಲಸ ಆರಂಭವಾಯಿತು.

ಈ ವಿದ್ಯಮಾನ ಅರಣ್ಯ ಸಚಿವ ಪಾಟೀಲರನ್ನು ಕಂಗೆಡಿಸಿತು. ಅರಣ್ಯವೇ ಇಲ್ಲದ ಗದಗ ತಾಲ್ಲೂಕಿನಿಂದ ಬಂದಿದ್ದ ಪಾಟೀಲರು ಕಾಡಿನ ಸಂಪತ್ತನ್ನು ಜನ ಈ ರೀತಿ ಕೊಳ್ಳೆ ಹೊಡೆಯಲು ಶುರು ಮಾಡಿದ್ದನ್ನು ನೋಡಿ ಕಂಗಾಲಾಗಿಬಿಟ್ಟರು. ಇದಕ್ಕೆ ಏನಾದರೂ ಮಾಡಬೇಕೆಂಬ ಗಟ್ಟಿ ನಿರ್ಧಾರಕ್ಕೆ ಬಂದರು. ರಾಜ್ಯದ ಅರಣ್ಯಗಳಿಗೆ ಎತ್ತಿನಗಾಡಿಗಳ ಪ್ರವೇಶವನ್ನು ನಿಷೇಧಿಸಿದ್ದಷ್ಟೇ ಅಲ್ಲ ಕಾಡಿನಿಂದ ಸೌದೆ ತರುವುದಕ್ಕೆ ಜನರಿಗೆ ನೀಡಿದ್ದ ಅನುಮತಿಯನ್ನೂ ರದ್ದು ಮಾಡಿಬಿಟ್ಟರು.

ಸರ್ಕಾರದ ಈ ಆದೇಶ ಜನರ ಮೇಲೆ ಭಾರಿ ಪರಿಣಾಮ ಬೀರಿತು. ಎಲ್ಲೆಡೆ ವಿರೋಧ ವ್ಯಕ್ತವಾಯಿತು. ವಿಧಾನಸಭೆ ಅಧಿವೇಶನದಲ್ಲಿ ವಿರೋಧ ಪಕ್ಷಗಳ ಜತೆಗೆ ಕಾಂಗ್ರೆಸ್ ಪಕ್ಷದ ಸದಸ್ಯರೂ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಆದರೆ, ‘ಹುಲಕೋಟಿಯ ಹುಲಿ’ ಎಂದೇ ಹೆಸರಾಗಿದ್ದ ಪಾಟೀಲರು ಯಾವುದಕ್ಕೂ ಜಗ್ಗಲಿಲ್ಲ. ಆದೇಶ ವಾಪಸ್ ಪಡೆಯುವಂತೆ ಮುಖ್ಯಮಂತ್ರಿ ಹೇಳಿದರೂ ಪಟ್ಟು ಬಿಡಲಿಲ್ಲ.

ಒತ್ತಡ ಜಾಸ್ತಿಯಾದಾಗ ಪಾಟೀಲರು ಸುಮಾರು 40ಕ್ಕೂ ಹೆಚ್ಚು ಶಾಸಕರನ್ನು ಬೆಂಗಳೂರಿನಲ್ಲಿ ಚಹಾಕೂಟಕ್ಕೆ ಆಹ್ವಾನಿಸಿದರು. ಹಿರಿಯ ಅರಣ್ಯಾಧಿಕಾರಿ ಶ್ಯಾಮಸುಂದರ್ ಜತೆಯಲ್ಲಿದ್ದರು. ಎಲ್ಲ ಶಾಸಕರಿಗೂ ಮನಮುಟ್ಟುವಂತೆ ಕಾಡಿನ ಮಹತ್ವವನ್ನು ವಿವರಿಸಿದ ಸಚಿವರು ಕಡೆಗೂ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು. ಪಾಟೀಲರ ಹಟಕ್ಕೆ ಮಣಿದ ಮುಖ್ಯಮಂತ್ರಿ ಅರಸು ಸಹ ಸುಮ್ಮನಾದರು.

ಇಷ್ಟೇ ಅಲ್ಲ, ಪಾಟೀಲರು ಮಾಡಿದ ಒಂದು ಅದ್ಭುತ ಕೆಲಸ ಇಡೀ ದೇಶವೇ ಅವರಿಗೆ ಚಿರಋಣಿಯಾಗುವಂತೆ ಮಾಡಿತು. ದೇಶದ ಯಾವುದೇ ರಾಜಕಾರಣಿ, ಸಚಿವರೂ ಯೋಚನೆ ಮಾಡದಂತಹ ಕೆಲಸವನ್ನು ಅವರು ಮಾಡಿದ್ದರು. ಆ ದಿನಗಳಲ್ಲಿ ಅರಣ್ಯ ಸಚಿವರಿಗೆ ಅತ್ಯಧಿಕವಾದ ವ್ಯಕ್ತಿಗತ ಅಧಿಕಾರ ಇತ್ತು. ಸಚಿವರು ಅರಣ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಬಗೆಯ ಆದೇಶವನ್ನು ನೀಡಬಹುದಾಗಿತ್ತು. ಯಾವ ಅರಣ್ಯ ಭೂಮಿಯನ್ನು ಯಾರಿಗೆ ಬೇಕಾದರೂ ಬರೆದು ಕೊಡಬಹುದಾಗಿತ್ತು. ಅಂತಹ ದಿನಗಳಲ್ಲಿ ಪಾಟೀಲರು ಸಚಿವರಿಗೆ ಇದ್ದ ಈ ವ್ಯಕ್ತಿಗತ ಅಧಿಕಾರವನ್ನು ಶಾಸನಸಭೆಗೆ ಹಸ್ತಾಂತರಿಸಿಬಿಟ್ಟರು. ಅರಣ್ಯ ಭೂಮಿಯ ಮೇಲೆ ಶಾಸನಸಭೆಯ ನಿಯಂತ್ರಣ ತಂದರು. ಇಡೀ ದೇಶದಲ್ಲೇ ಈ ಕಾನೂನನ್ನು ಜಾರಿ ಮಾಡಿದ ಮೊದಲ ರಾಜ್ಯ ಕರ್ನಾಟಕ ಎನ್ನುವಂತಹ ಹೆಗ್ಗಳಿಕೆ ಪಡೆಯಲು ಕಾರಣರಾದರು.



ಕಾಡಿನಿಂದ ಮರ ಕಡಿದು ತರುವುದನ್ನು ನಿಷೇಧಿಸದೇ ಇದ್ದಿದ್ದರೆ, ಅರಣ್ಯ ಭೂಮಿಯ ಮೇಲಿದ್ದ ಸಚಿವರ ಅಧಿಕಾರವನ್ನು ಶಾಸಕಾಂಗ ಸಭೆಗೆ ವರ್ಗಾಯಿಸದೇ ಇದ್ದಿದ್ದರೆ ಈಗಿರುವ ಎಷ್ಟೋ ಅರಣ್ಯ ಭೂಮಿ ಇರುತ್ತಲೇ ಇರಲಿಲ್ಲ.

ಕೆ.ಎಚ್.ಪಾಟೀಲರದ್ದು ಮೇರು ವ್ಯಕ್ತಿತ್ವ. ಸಹಕಾರಿ ಹಾಗೂ ಶೈಕ್ಷಣಿಕ ಸಂಘ– ಸಂಸ್ಥೆಗಳನ್ನು ಅವರು ಕಟ್ಟಿದರು. ಸಹಕಾರಿ ಕ್ರಾಂತಿಯನ್ನೇ ಉಂಟುಮಾಡಿದ ಗದಗ ಜಿಲ್ಲೆಯ ಅಂದಿನ ಪುಟ್ಟ ಹಳ್ಳಿ ಹುಲಕೋಟಿಗೆ ಸಹಕಾರಿ ಭೂಪಟದಲ್ಲಿ ಒಂದು ಶಾಶ್ವತ ಸ್ಥಾನ ದೊರೆಯುವಂತೆ ಮಾಡಿದರು. ನಾಳೆ (ಮಾರ್ಚ್- 16) ಈ ನಿಷ್ಠುರ ರಾಜಕಾರಣಿಯ ಜನ್ಮದಿನ. ಇದು, ಅವರ ಜನ್ಮಶತಮಾನೋತ್ಸವದ ವರ್ಷ ಸಹ. ಪರಿಸರದ ಉಳಿವಿಗೆ, ಸಹಕಾರಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಅವರು ಸದಾ ಸ್ಮರಣೀಯರು.

ವಾಚಕರ ವಾಣಿ

ಸಾಮಾಜಿಕ ಮಾಧ್ಯಮಗಳು ಹೊಣೆ ಅರಿಯಲಿ

ವಿದೇಶದಿಂದ ಚಿನ್ನ ಕಳ್ಳಸಾಗಣೆ ಮಾಡುವ ವಿಧಾನವನ್ನು ಯೂಟ್ಯೂಬ್ ನೋಡಿ ಕಲಿತಿದ್ದಾಗಿ ನಟಿ ರನ್ಯಾ ರಾವ್ ವಿಚಾರಣೆ ವೇಳೆ ಹೇಳಿಕೆ ನೀಡಿರುವುದು ಆಘಾತಕಾರಿ ವಿಷಯವಾಗಿದೆ. ಸಾಮಾನ್ಯವಾಗಿ ಮಹಿಳೆಯರು ಸಕಾರಾತ್ಮಕ ನೆಲೆಯಲ್ಲಿ ಕಲಿಕೆಯ ಸಲುವಾಗಿ ಯೂಟ್ಯೂಬ್ ನೋಡುವುದಿದೆ. ಆದರೆ ಈ ರೀತಿ ಕಳ್ಳತನಕ್ಕೆ ಸಹಾಯ ಮಾಡಬಲ್ಲ ವಿಷಯಗಳು ಯೂಟ್ಯೂಬ್‌ನಲ್ಲಿ ದೊರೆಯುತ್ತವೆ ಎಂದಾದರೆ, ಸಂಬಂಧಪಟ್ಟವರು ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಇಂದಿನ ಯುವಪೀಳಿಗೆ, ದಿನನಿತ್ಯ ಅಗಾಧ ಜ್ಞಾನ ಭಂಡಾರವನ್ನು ಹೊತ್ತು ತರುವ ದಿನಪತ್ರಿಕೆಯನ್ನು ಕಡೆಗಣಿಸಿ ಸಾಮಾಜಿಕ ಮಾಧ್ಯಮಗಳನ್ನು ಅವಲಂಬಿಸಿರುವ ಈ ಕಾಲಘಟ್ಟದಲ್ಲಿ, ಅವು ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯ ನಿರ್ವಹಿಸಬೇಕಾಗಿದೆ.

ಭಾಸ್ಕರ್ ಶೆಟ್ಟಿ, ಹಾಸನ

ಸಕಾಲದಲ್ಲಿ ಕೆಲಸ: ಅಧಿಕಾರಿಯ ಮಾದರಿ ನಡೆ

ಬೆಂಗಳೂರು ನಗರ ಸಾರಿಗೆಯ ‘ಶಕ್ತಿ’ ಯೋಜನೆಯನ್ನು ನಿರಾಕರಿಸಿ, ತಿಂಗಳ ಪಾಸ್ ಜೊತೆಗಿಟ್ಟುಕೊಂಡು ದಿನವೂ ಓಡಾಡುತ್ತೇನೆ. ಇತ್ತೀಚೆಗೆ ಪಾಸ್ ನವೀಕರಿಸಬೇಕಿತ್ತು. ಹುಳಿಮಾವುದಿಂದ ಮೆಜೆಸ್ಟಿಕ್‌ಗೆ ಹೋಗುವ ವಿದ್ಯುತ್‌ಚಾಲಿತ ಬಸ್‌ನಲ್ಲಿ ಪ್ರಯಾಣಿಸಿ ಮೈಸೂರು ಬ್ಯಾಂಕ್ ನಿಲ್ದಾಣದಲ್ಲಿ ಇಳಿದೆ. ಆದರೆ ನನ್ನ ಕೈಚೀಲವನ್ನು ಬಸ್‌ನಲ್ಲೇ ಬಿಟ್ಟಿದ್ದುದು ತಕ್ಷಣ ಗಮನಕ್ಕೆ ಬಂತು. ಸಿಗ್ನಲ್‌ನಲ್ಲಿ ಹಸಿರು ನಿಶಾನೆ ತೋರಿದ್ದರಿಂದ ಬಸ್ ಹೊರಟಿತು. ಹಿಂದೆಯೇ ಇನ್ನೊಂದು ಬಸ್ ಹತ್ತಿ ಮೆಜೆಸ್ಟಿಕ್‌ಗೆ ಬಂದೆ. ಅಲ್ಲಿ ನನಗೆ ಬೇಕಾದ ಬಸ್ ಯಾವುದೆಂದು ಗೊತ್ತಾಗಲಿಲ್ಲ. ತಕ್ಷಣ ಕಂಟ್ರೋಲ್ ರೂಮ್‌ಗೆ ಓಡಿ ಹೋಗಿ ವಿಷಯ ವಿವರಿಸಿದೆ. ನನ್ನ ಬಳಿ ಇದ್ದ ಟಿಕೆಟ್ ತೋರಿಸಿದೆ. ಅಲ್ಲಿ ಕುಳಿತಿದ್ದ ಅಧಿಕಾರಿ ಶಾಂತವಾಗಿ ಆಲಿಸಿ ‘ಹಣವೇನಾದರೂ ಇತ್ತಾ’ ಎಂಬ ಒಂದೇ ಪ್ರಶ್ನೆ ಕೇಳಿದರು. ಮಿಕ್ಕ ಎಲ್ಲ ವಿವರ ಕಲೆಹಾಕಿ ತಕ್ಷಣ ಅಲ್ಲಿಯ ಟಿ.ಸಿಗೆ ಫೋನ್ ಮಾಡಿದರು. ಆ ಟಿಕೆಟ್‌ನಲ್ಲಿರುವ ನಂಬರಿನ ಬಸ್ ಇಲ್ಲ ಎಂಬ ಉತ್ತರ ಬಂತು. ಜಿಗಣಿ ಡಿಪೊಗೆ ಫೋನ್ ಮಾಡಿ, ಆ ಬಸ್ಸಿನ ಕಂಡಕ್ಟರ್ ನಂಬರ್ ಪಡೆದು ಅವರಿಗೆ ಫೋನ್ ಮಾಡಿದರು. ಅಲ್ಲೇ ಸಮೀಪ ತಿಂಡಿ ತಿನ್ನುತ್ತಿದ್ದ ಕಂಡಕ್ಟರ್ ಕೆಲ ನಿಮಿಷಗಳಲ್ಲಿ ಬಂದು ಕೈಚೀಲ ಎತ್ತಿಕೊಟ್ಟರು.

ಹೀಗೆ ಮಾನವೀಯತೆಯುಳ್ಳ ಚಲುವಯ್ಯ ಎಂಬ ಆ ದಕ್ಷ ಅಧಿಕಾರಿಯು ಒಂದು ಕ್ಷಣವನ್ನೂ ವ್ಯರ್ಥ ಮಾಡದೇ ಕೆಲಸ ಮಾಡಿದ್ದರಿಂದ ನನ್ನ ಕೈಚೀಲ ಹೆಚ್ಚಿನ ಕಷ್ಟವಿಲ್ಲದೇ ಸಿಕ್ಕಿತು. ಈ ಅಧಿಕಾರಿಯ ಬಗ್ಗೆ ನಿಜಕ್ಕೂ ಹೆಮ್ಮೆ ಎನಿಸಿತು. ‘ಎಷ್ಟು ಬೇಜವಾಬ್ದಾರಿ ನಿಮ್ಮದು, ಯಾರೂ ಎತ್ತಿ ಒಯ್ದಿಲ್ಲವೆಂದರೆ ಜಿಗಣಿ ಡಿಪೊದಲ್ಲಿ ಇಟ್ಟಿರುತ್ತಾರೆ, ಹೋಗಿ ತಗೊಳ್ಳಿ’ ಎಂದು ಅವರು ಹೇಳಿರಬಹುದಿತ್ತು. ಅನವಶ್ಯಕ ಪ್ರಶ್ನೆಗಳನ್ನು ಕೇಳುತ್ತ ಒಂದಿಷ್ಟು ಹೊತ್ತು ಕಳೆದಿದ್ದರೂ ಬಸ್ ಅಲ್ಲಿಂದ ಹೊರಟಿರುತ್ತಿತ್ತು. ಸಾರ್ವಜನಿಕ ಸೇವಾ ವಲಯದಲ್ಲಿ ಚಲುವಯ್ಯ ಅವರಂತಹ ಅಧಿಕಾರಿಗಳಿದ್ದರೆ ಜನಸಾಮಾನ್ಯರು ದಿನನಿತ್ಯದ ಕೆಲಸಗಳಿಗಾಗಿ ಕಚೇರಿಗಳಿಗೆ ಅಲೆದಾಡುವುದು ತಪ್ಪುತ್ತದೆ. ಸಕಾಲದಲ್ಲಿ ಕೆಲಸ ಮುಗಿಸಿಕೊಂಡು ‘ನಿಮ್ಮ ಹೊಟ್ಟೆ ತಣ್ಣಗಿರಲಿ’ ಎಂದು ಹಾರೈಸಿ ಹೋಗುವವರ ಸಂಖ್ಯೆ ಹೆಚ್ಚುತ್ತದೆ!

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ರಾಜಕಾರಣಿಗಳು ಚಾಣಾಕ್ಷರೆನ್ನುವುದು ‘ಗ್ಯಾರಂಟಿ’!

ಸರ್ಕಾರದ ಸಮರ್ಥನೆ ಏನೇ ಇರಲಿ, ಗ್ಯಾರಂಟಿ ಅನುಷ್ಠಾನ ಸಮಿತಿಯ ರಚನೆ, ಅದಕ್ಕೆ ಆಡಳಿತ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರನ್ನು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನಾಗಿ ನೇಮಕ ಮಾಡಿರುವುದು, ಅದಕ್ಕಾಗಿ ಕೋಟ್ಯಂತರ ರೂಪಾಯಿಯನ್ನು ಬಡ ಬೋರೇಗೌಡನ ತೆರಿಗೆ ಹಣದಿಂದ ಖರ್ಚು ಮಾಡುತ್ತಿರುವುದು ಸಮರ್ಥನೀಯವಲ್ಲ. ಗ್ಯಾರಂಟಿಯೇ ರಾಜ್ಯಕ್ಕೆ ಭಾರ ಎನ್ನುವಂತಹ ಟೀಕೆಗಳಿರುವಾಗ, ಅದರ ಅನುಷ್ಠಾನದ ಹೆಸರಿನಲ್ಲಿ ಇನ್ನಷ್ಟು ಭಾರವನ್ನು ಹೇರುತ್ತಿರುವುದು ಯಾವ ಮಾನದಂಡದಲ್ಲಿ ಸರಿ? ಸಚಿವ ಸಂಪುಟದ ಗಾತ್ರದ ಮೇಲೆ ಮಿತಿ ಹೇರಿದ ಬಳಿಕ ನಮ್ಮ ರಾಜಕಾರಣಿಗಳು ನಿಗಮ, ಮಂಡಳಿ ಅಧ್ಯಕ್ಷಗಿರಿ, ಆರ್ಥಿಕ, ರಾಜಕೀಯ ಕಾರ್ಯದರ್ಶಿಗಳ ನೇಮಕಾತಿ, ಅಭಿವೃದ್ಧಿ ಮಂಡಳಿಗಳ ಮೇಲೆ ಕಣ್ಣಿಡುತ್ತಿದ್ದು, ಗ್ಯಾರಂಟಿ ಅನುಷ್ಠಾನ ಸಮಿತಿ ಈ ಪಟ್ಟಿಗೆ ತೀರಾ ಇತ್ತೀಚಿನ ಸೇರ್ಪಡೆ. ರಾಜಕಾರಣಿಗಳ ಚಾಣಾಕ್ಷತನಕ್ಕೆ ಭೋಪರಾಕ್ ಎನ್ನಲೇಬೇಕು.

ರಮಾನಂದ ಶರ್ಮಾ, ಬೆಂಗಳೂರು

ಬಹುಭಾಷಾ ಕಲಿಕೆ: ಯಾರಿಗೆ ಲಾಭ?

ಬಹುಭಾಷಾ ಕಲಿಕೆಯಿಂದ ಲಾಭವಾಗುತ್ತದೆ ಎಂದಿರುವ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ತ್ರಿಭಾಷಾ ಸೂತ್ರವನ್ನು ಬೆಂಬಲಿಸಿದ್ದಾರೆ (ಪ್ರ.ವಾ., ಮಾರ್ಚ್ 14). ಯಾವುದೇ ಮಗುವಿನ ಪ್ರಾಥಮಿಕ ಶಾಲಾ ಶಿಕ್ಷಣ ಆಯಾ ಮಗುವಿನ ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಇರಬೇಕು, ಪ್ರಾಥಮಿಕ ಶಾಲಾ ಶಿಕ್ಷಣದ ಹಂತದಲ್ಲಿ ನಮ್ಮ ಮಗು ಹಿಂದಿ, ಇಂಗ್ಲಿಷ್‌ನಂತಹ ಅಪರಿಚಿತ ಭಾಷೆಗಳನ್ನು ಕಲಿಯುವುದು ಅನಗತ್ಯ ಹೊರೆ ಎನ್ನುತ್ತಾರೆ ಶಿಕ್ಷಣ ತಜ್ಞರು. ಅಷ್ಟಕ್ಕೂ ತ್ರಿಭಾಷಾ ಸೂತ್ರ ಎಂಬುದು ದಕ್ಷಿಣ ಭಾರತದಲ್ಲಿ ಮಾತ್ರ ಹೇರಿಕೆಯಾಗುತ್ತಿದೆ. ಉತ್ತರ ಭಾರತದಲ್ಲಿ ನಿಜಕ್ಕೂ ದ್ವಿಭಾಷಾ ಸೂತ್ರವೇ ಜಾರಿಯಲ್ಲಿದೆ. ಏಕೆಂದರೆ ಅಲ್ಲಿಯ ಹಲವು ರಾಜ್ಯಗಳಲ್ಲಿ ಹಿಂದಿ ಮಾತೃಭಾಷೆ ಮತ್ತು ಪ್ರಾದೇಶಿಕ ಭಾಷೆಯೂ ಆಗಿದೆ. ಹೀಗಾಗಿ, ಅಲ್ಲಿಯ ಮಕ್ಕಳು ತ್ರಿಭಾಷಾ ಶಿಕ್ಷಣದ ಹೊರೆಯಿಂದ ತಪ್ಪಿಸಿಕೊಂಡು ದ್ವಿಭಾಷಾ ಸೂತ್ರದ ಅನ್ವಯ ಶಿಕ್ಷಣ ಪಡೆದು, ಪ್ರಗತಿ ಸಾಧಿಸಲು ಸಾಧ್ಯವಾಗಿದೆ. ಮಗು ದೊಡ್ಡದಾದ ಮೇಲೆ ಸುಧಾಮೂರ್ತಿ ಅವರು ಹೇಳಿದಂತೆ ಬಹುಭಾಷಾ ಕಲಿಕೆಗೆ ಯಾರ ವಿರೋಧವೂ ಇರುವುದಿಲ್ಲ!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸ್ವಚ್ಛತೆ ಕಾಯ್ದುಕೊಂಡು ಭಕ್ತರಿಗೆ ಸೌಲಭ್ಯ ಒದಗಿಸಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಸುಕ್ಷೇತ್ರ ಯಲ್ಲಮ್ಮನ ಗುಡ್ಡದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ₹18 ಕೋಟಿಯನ್ನು ಪ್ರಸಕ್ತ ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ಸ್ವಾಗತಾರ್ಹ. ಈ ಕ್ಷೇತ್ರದಲ್ಲಿ ಸಾಮಾನ್ಯ ಭಕ್ತರಿಗೆ ಉಳಿದುಕೊಳ್ಳಲು ವಸತಿ ವ್ಯವಸ್ಥೆ, ಪ್ರಸಾದ ಮತ್ತು ಸ್ನಾನ ಸೌಲಭ್ಯದ ಕೊರತೆಗಳಿವೆ. ಯಲ್ಲಮ್ಮನ ಗುಡ್ಡದಲ್ಲಿ ಎಲ್ಲೆಡೆ ಕಸದ ರಾಶಿ, ಗಲೀಜು, ದೇವಸ್ಥಾನದ ಆವರಣದಲ್ಲಿ ಕೆಲವೆಡೆ ಕೊಳಚೆ ನೀರು ಹರಿಯುತ್ತಿರುತ್ತದೆ. ಇಂತಹ ವಾತಾವರಣ ಭಕ್ತರಿಗೆ ಬೇಸರ ತರಿಸುವುದರ ಜೊತೆಗೆ ಕ್ಷೇತ್ರದ ಮಹಿಮೆಯ ಬಗ್ಗೆ ಗೌರವ ಇಟ್ಟುಕೊಂಡವರಿಗೆ ನಿರಾಶೆಯಾಗುತ್ತದೆ. ಈ ಪ್ರದೇಶದಲ್ಲಿ ಸ್ವಚ್ಛತೆ ಕಾಯ್ದುಕೊಂಡು ಭಕ್ತರಿಗೆ ಸೌಲಭ್ಯ ಒದಗಿಸಲು ಸ್ಥಳೀಯ ಶಾಸಕರು, ದೇವಸ್ಥಾನ ಅಭಿವೃದ್ಧಿ ಮಂಡಳಿ ಹಾಗೂ ಸರ್ಕಾರ ಆದ್ಯತೆ ನೀಡಬೇಕು.

ಮಹಾಂತೇಶ ರಾಜಗೋಳಿ, ಬೈಲಹೊಂಗಲ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರ ನೇಮಕ ಸರಿಯೇ?: ಇಬ್ಬರು ಮುಖಂಡರ ಅಭಿಪ್ರಾಯಗಳು

'ಸಂಘ'ನಿಷ್ಠರಿಗೆ ಬಿಜೆಪಿ ನೀಡಿದ್ದು ದುರ್ಬಳಕೆ ಅಲ್ಲವೇ?

ಮಹಾರಾಷ್ಟ್ರದಲ್ಲಿ ಸಚಿವರ ಆಪ್ತ ಸಹಾಯಕರನ್ನಾಗಿ ನೇಮಕ ಮಾಡಿಕೊಂಡಿರುವ ಸಂಘದ ಕಾರ್ಯಕರ್ತರಿಗೆ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳಿಂದ ಪ್ರೇರಿತರಾದವರನ್ನು ಕೇಂದ್ರ ಸರ್ಕಾರದ ಭಾರತೀಯ ನಾಗರಿಕ ಸೇವೆಗಳ ಹುದ್ದೆಗಳಿಗೆ ನೇರ ಪ್ರವೇಶದ (ಲ್ಯಾಟರಲ್ ಎಂಟ್ರಿ) ಮೂಲಕ ತುಂಬಿಸಿಕೊಂಡಿರುವವರಿಗೆ ಪಾವತಿ ಮಾಡುತ್ತಿರುವ ವೇತನ ಸರ್ಕಾರದ್ದೇ? ಅಥವಾ ನಾಗಪುರದ ಹೆಡಗೆವಾರ್ ಭವನದ್ದೇ? ಕೋವಿಡ್ ಸಂದರ್ಭದಲ್ಲಿ ದೇಶದ 25 ರಾಜ್ಯಗಳಲ್ಲಿನ ಆರ್‌ಎಸ್‌ಎಸ್ ತೆಕ್ಕೆಯಲ್ಲಿನ 736 ಸ್ವಯಂಸೇವಾ ಸಂಸ್ಥೆಗಳಿಗೆ ವಿಪತ್ತು ನಿರ್ವಹಣಾ ನಿಧಿಯಿಂದ ಹೇರಳವಾಗಿ ಹಣ ಒದಗಿಸಿದ್ದು ಸಾರ್ವಜನಿಕ ಹಣದ ದುರ್ಬಳಕೆ ಅಲ್ಲವೇ?

• ಪ್ರಿಯಾಂಕ್ ಖರ್ಗೆ

ಸಾರ್ವಜನಿಕ ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು ಮತ್ತು ಸಂಪತ್ತಿನ ಅಸಮಾನ ಹಂಚಿಕೆಯನ್ನು ನಿಭಾಯಿಸಲು ವಿರೋಧಿಗಳ ಟೀಕೆ, ಅಪಪ್ರಚಾರದ ನಡುವೆಯೂ ಸರ್ಕಾರದ ಸಾಮಾಜಿಕ ಬಂಡವಾಳ ಹೂಡಿಕೆಯಾದ 'ಗ್ಯಾರಂಟಿ' ಯೋಜನೆಗಳನ್ನು ಬಸವಣ್ಣ ಹಾಗೂ ಅಂಬೇಡ್ಕರ್ ಅವರ 'ಸಮಬಾಳು-ಸಮಪಾಲು' ಎನ್ನುವ ಆಶಯದಂತೆ ನಮ್ಮ ಸರ್ಕಾರವು ಜಾರಿಗೊಳಿಸಿತು.

ನೋಟು ಅಮಾನ್ಯೀಕರಣ, ಜಿಎಸ್‌ಟಿ ಹೇರಿಕೆ, ಕೋವಿಡ್ ಸಂದರ್ಭದಲ್ಲಿನ ಅವೈಜ್ಞಾನಿಕ ಲಾಕ್‌ಡೌನ್ ಜಾರಿಯೂ ಸೇರಿದಂತೆ ಪ್ರಧಾನಿ ನರೇಂದ್ರ ಮೋದಿಯವರ 'ಮಾಸ್ಟರ್ ಸ್ಟ್ರೋಕ್'ಗಳಿಂದ ಆದಾಯ, ಉದ್ಯೋಗ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಜನರನ್ನು ಸಮಸ್ಯೆಯಿಂದ ಹೊರ ತರುವುದಕ್ಕಾಗಿ ನಮ್ಮ ಸರ್ಕಾರ 'ಗ್ಯಾರಂಟಿ' ಯೋಜನೆಗಳನ್ನು ಜಾರಿಗೆ ತಂದಿರುವುದು.

'ಗ್ಯಾರಂಟಿ' ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಸರ್ಕಾರವು ಸಮಿತಿಗಳನ್ನು ರಚಿಸಿತು. ಗ್ಯಾರಂಟಿ ಯೋಜನೆಗಳ ಲಾಭ ಎಲ್ಲ ಅರ್ಹ ಫಲಾನುಭವಿಗಳಿಗೆ ತಲುಪುವುದನ್ನು ಖಚಿತಪಡಿಸಿಕೊಳ್ಳುವುದು ಈ ಅನುಷ್ಠಾನ ಸಮಿತಿಗಳ ರಚನೆಯ ಉದ್ದೇಶವಾಗಿತ್ತು. ಗ್ಯಾರಂಟಿ ಯೋಜನೆಗಳು ಎಷ್ಟು ಜನಪ್ರಿಯವಾದುವೆಂದರೆ, ಟೀಕಿಸುತ್ತಿದ್ದ ಬಿಜೆಪಿ 'ಮೋದಿ ಕಾ ಗ್ಯಾರಂಟಿ' ಎನ್ನುತ್ತಾ ಕರ್ನಾಟಕ ಮಾದರಿಯನ್ನು ಹೈಜಾಕ್ ಮಾಡಿ ಬಳಸಿಕೊಂಡಿತು. ಒಂದು ಕಾರ್ಯಕ್ರಮವನ್ನು ವಿರೋಧಿಸಿ, ಯಶಸ್ವಿಗೊಂಡ ನಂತರ ಜನಪ್ರಿಯತೆಯನ್ನು ಅಪಹರಿಸುವ ಮೂಲಕ ನೈತಿಕ ಹಾಗೂ ಬೌದ್ಧಿಕ ದಿವಾಳಿತನವನ್ನು ಬಯಲು ಮಾಡಿಕೊಂಡಿದೆ.

ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಲಾಗಿದೆ ಎಂಬ ಆರೋಪವನ್ನು ಮುಂದಿರಿಸಿಕೊಂಡು ಬಿಜೆಪಿ ಹೊಸದೊಂದು ತಕರಾರು ತೆಗೆದಿದೆ. ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದ ಬಿಜೆಪಿಯವರು, ತಮ್ಮ ಶಾಸಕರೇ ಗ್ಯಾರಂಟಿ ಅನುಷ್ಠಾನ ಸಮಿತಿಗಳ ಅಧ್ಯಕ್ಷರಾಗಬೇಕು ಎಂದು ಹೋರಾಟಕ್ಕಿಳಿಯುವ ಮೂಲಕ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಒಪ್ಪಿಕೊಂಡಿದ್ದಾರೆ ಮಾತ್ರವಲ್ಲ; ಇದೀಗ ಗ್ಯಾರಂಟಿ ಯೋಜನೆಯ ಜನಪ್ರಿಯತೆಯನ್ನು ತಮ್ಮದಾಗಿಸಿಕೊಳ್ಳಲು ತವಕಿಸುತ್ತಿದ್ದಾರೆ. ಅನುಷ್ಠಾನ ಸಮಿತಿಯಲ್ಲಿ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಿಕೊಟ್ಟಿರುವ ಬಗ್ಗೆ ಬಿಜೆಪಿ ಆಕ್ಷೇಪ ಎತ್ತಿದೆ. ಸಮಿತಿಯ ಪದಾಧಿಕಾರಿಗಳಿಗೆ ಗೌರವಧನ ನೀಡುವುದರಿಂದ ಸರ್ಕಾರದ ಹಣ ಪೋಲಾಗುತ್ತಿದೆ ಎಂದು ಹೇಳುವ ಆ ಪಕ್ಷ ಮಾಡಿದ್ದೇನು ಗಮನಿಸೋಣ.

ಬಿಜೆಪಿ ಸರ್ಕಾರವಿದ್ದಾಗ 6,000 ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ-ಒನ್ ಸೌಲಭ್ಯಗಳನ್ನು ಆರಂಭಿಸಿ ಅವುಗಳ ಉಸ್ತುವಾರಿಯನ್ನು 'ಸಂಘನಿಷ್ಠ'ರಿಗೆ ನೀಡಿತ್ತು. ರಾಷ್ಟ್ರೋತ್ಥಾನ ಪರಿಷತ್ತಿಗೆ ಹಾಗೂ ಸಂಘದ ಪ್ರಭಾವವಿರುವ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಜಮೀನು ಮಂಜೂರು ಮಾಡಿದಾಗ, ಆರ್‌ಎಸ್‌ಎಸ್ ಸಿದ್ಧಾಂತ ಹೊಂದಿದ್ದ ವ್ಯಕ್ತಿಯನ್ನು ಪಠ್ಯಪುಸ್ತಕ ಪರಿಷ್ಕರಣ ಸಮಿತಿಯಲ್ಲಿ ಕೂರಿಸಿ ಅವಾಂತರಗಳ ಸರಮಾಲೆಯನ್ನೇ ಸೃಷ್ಟಿಸಿದಾಗ, ಪ್ರಯೋಜನವಿಲ್ಲದ ಸಾವಯವ ಕೃಷಿ ಮಿಷನ್ ರಚಿಸಿ, ಸಂಘದವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಿ ಆಕರ್ಷಕ ವೇತನ ನೀಡಿದಾಗ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿ ಸಕಲ ಸವಲತ್ತು ಹಾಗೂ ಕೋಟ್ಯಂತರ ರೂಪಾಯಿ ಮೊತ್ತದ ಅನುದಾನ ನೀಡಿದಾಗ ಜನರ ಹಣ ದುರ್ಬಳಕೆ ಆಗುತ್ತಿದೆ ಎಂದು ಅನಿಸಲಿಲ್ಲವೇ? ತಮ್ಮವರು ಮಾಡಿದರೆ ಸಂತಸ, ಬೇರೆಯವರು ಮಾಡಿದರೆ ಸಂಕಟ ಎನ್ನುವಂತಿದೆ ಬಿಜೆಪಿಯ ವರಸೆ.

ಸಚಿವರ ಆಪ್ತ ಸಹಾಯಕರನ್ನಾಗಿ ನೇಮಕ ಮಾಡಿಕೊಂಡಿರುವ ಸಂಘದ ಕಾರ್ಯಕರ್ತರಿಗೆ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳಿಂದ ಪ್ರೇರಿತರಾದವರನ್ನು ಕೇಂದ್ರ ಸರ್ಕಾರದ ಭಾರತೀಯ ನಾಗರಿಕ ಸೇವೆಗಳ ಹುದ್ದೆಗಳಿಗೆ ನೇರ ಪ್ರವೇಶದ (ಲ್ಯಾಟರಲ್ ಎಂಟ್ರಿ) ಮೂಲಕ ತುಂಬಿಸಿಕೊಂಡಿರುವವರಿಗೆ ಪಾವತಿ ಮಾಡುತ್ತಿರುವ ವೇತನ ಸರ್ಕಾರದ್ದೇ? ಅಥವಾ ನಾಗಪುರದ ಹೆಡಗೆವಾರ್ ಭವನದ್ದೇ? ಕೋವಿಡ್ ಸಂದರ್ಭದಲ್ಲಿ ದೇಶದ 25 ರಾಜ್ಯಗಳಲ್ಲಿನ ಆರ್‌ಎಸ್‌ಎಸ್ ತೆಕ್ಕೆಯಲ್ಲಿನ 736 ಸ್ವಯಂಸೇವಾ ಸಂಸ್ಥೆಗಳಿಗೆ ವಿಪತ್ತು ನಿರ್ವಹಣ ನಿಧಿಯಿಂದ ಹೇರಳವಾಗಿ ಹಣ ಒದಗಿಸಿದ್ದು ಸಾರ್ವಜನಿಕ ಹಣ ದುರ್ಬಳಕೆ ಅಲ್ಲವೇ?

ಬಿಜೆಪಿಯವರು ಸಂಘದವರನ್ನು ತೃಪ್ತಿಪಡಿಸಲು ಕಾನೂನು ಉಲ್ಲಂಘಿಸಿ ಸರ್ಕಾರದ ಹಣ ದುರ್ಬಳಕೆ ಮಾಡಿದ್ದರೆ, ನಾವು ₹51,000 ಕೋಟಿ ವೆಚ್ಚದ ಯೋಜನೆಗಳನ್ನು ಸಮಾಜಕ್ಕೆ ಸಮರ್ಪಕವಾಗಿ ತಲುಪಿಸಲು ಅನುಷ್ಠಾನ ಸಮಿತಿ ರಚಿಸಿದ್ದೇವೆ. ಬಿಜೆಪಿ ಈಗ ಅನುಷ್ಠಾನ ಸಮಿತಿಗಳ ಅಧ್ಯಕ್ಷ ಸ್ಥಾನ ಬಯಸುವುದು; ನರಿಯೊಂದು ಎಟುಕದ ಹಣ್ಣಿಗೆ ನಾಲಗೆ ಚಾಚುತ್ತಿರುವಂತೆ ಭಾಸವಾಗುತ್ತಿದೆ.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಎರಡು ಬಗೆಯಲ್ಲಿ ವಿಪ್ಲವ ಹುಟ್ಟು ಹಾಕಿದವು. ಜನಸಾಮಾನ್ಯರ ಬದುಕಲ್ಲಿ ಹೊಸ ಚೈತನ್ಯ ಮೂಡಿಸಿದರೆ, ರಾಜಕೀಯವಾಗಿ ವಿಪಕ್ಷಗಳನ್ನು ತಲ್ಲಣಗೊಳಿಸಿದವು. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದಾಗ ಬಿಜೆಪಿ ಹಾಗೂ ಜೆಡಿಎಸ್ ಇವು ಅನುಷ್ಠಾನ ಮಾಡಲಾಗದ ಗಾಳಿಗಂಟಿನಂತಹ ಬಿಟ್ಟಿ ಭಾಗ್ಯಗಳೆಂದು ಅಪಹಾಸ್ಯ ಮಾಡಿದ್ದವು. ಯೋಜನೆಗಳನ್ನು ಜಾರಿಗೆ ತಂದ ನಂತರ ಬಿಜೆಪಿಯ ಅಸಹನೆಯ ವರಸೆ ಇನ್ನೊಂದು ದಿಕ್ಕಿಗೆ ಹೊರಳಿ, ಈ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ, ಜನ ಸೋಮಾರಿಗಳಾಗುತ್ತಾರೆ ಎನ್ನುವ ಅಪಪ್ರಚಾರ ಮಾಡಲಾರಂಭಿಸಿತು. ಈಗ ಅದು ಅನುಷ್ಠಾನ ಸಮಿತಿಯತ್ತ ಹೊರಳಿದೆ.

ವಿರೋಧ ಪಕ್ಷಗಳ ಪೊಳ್ಳು ಹೇಳಿಕೆಗಳನ್ನು ಹುಸಿಗೊಳಿಸಿ, ಗ್ಯಾರಂಟಿ ಯೋಜನೆಗಳನ್ನು ನಾಡ ಜನತೆ ಪ್ರೀತಿಯಿಂದ ಅಪ್ಪಿಕೊಂಡರು. ಬಸವಳಿದಿದ್ದ ಕುಟುಂಬಗಳಿಗೆ ಗ್ಯಾರಂಟಿ ಯೋಜನೆಗಳು ಆರ್ಥಿಕ ಸ್ಥಿರತೆ ಹಾಗೂ ಬದುಕುವ ಭರವಸೆಯ ಗ್ಯಾರಂಟಿಯನ್ನೂ ಕೊಟ್ಟಿತು. ಮಕ್ಕಳ ಶಿಕ್ಷಣ, ಸಣ್ಣ ಪುಟ್ಟ ವ್ಯಾಪಾರ, ಸಾಲ ಮರುಪಾವತಿ ಹಾಗೂ ಇನ್ನಿತರ ಅನುಕೂಲಗಳಿಗಾಗಿ ಯೋಜನೆಗಳ ಲಾಭವನ್ನು ಬಳಸಿಕೊಂಡರು. ಖರೀದಿ ಸಾಮರ್ಥ್ಯ ಹೆಚ್ಚಿ ಆರೋಗ್ಯ ಸುಧಾರಣೆ, ಪೌಷ್ಟಿಕ ಆಹಾರ ಸೇವನೆಗೆ ಕಾರಣವಾಯಿತು. ಇದರಿಂದ ಸರ್ಕಾರದ ಆರ್ಥಿಕತೆಯಲ್ಲಿ ಅಭಿವೃದ್ಧಿ ಕಂಡಿತು. ಜನ ಸ್ವಾಭಿಮಾನದ ಬದುಕು ಕಟ್ಟಿಕೊಂಡರು. ಜನಕಲ್ಯಾಣದ ಬದ್ಧತೆ ಹೊಂದಿರುವ ಕಾಂಗ್ರೆಸ್ ಕಾರ್ಯಕರ್ತರ ಮೇಲುಸ್ತುವಾರಿ, ಕಣ್ಗಾವಲು ಇದ್ದ ಕಾರಣದಿಂದಲೇ 'ಗ್ಯಾರಂಟಿ' ಯೋಜನೆಗಳು ಈ ಮಟ್ಟದ ಯಶಸ್ಸು ಗಳಿಸಲು ಸಾಧ್ಯವಾಯಿತು.

ಲೇಖಕ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಕಾಂಗ್ರೆಸ್ ಕಾರ್ಯಕರ್ತರ ಜೇಬು ತುಂಬಿಸುವ ವ್ಯವಸ್ಥೆ

'ಗ್ಯಾರಂಟಿ ಅನುಷ್ಠಾನ ಸಮಿತಿ'ಗಳು ಕಾಂಗ್ರೆಸ್ ಕಾರ್ಯಕರ್ತರಿಂದಲೇ ತುಂಬಿ ತುಳುಕುತ್ತಿವೆ. ಸಮಿತಿಗಳನ್ನು ರಾಜಕೀಯ ನೆಲಗಟ್ಟಿನ ಮೇಲೆ ರಚಿಸಲಾಗಿದೆ. ಇದು ಸಂವಿಧಾನ ವಿರೋಧಿ ಮಾತ್ರವಲ್ಲದೇ, ಬೊಕ್ಕಸಕ್ಕೆ ಹೊರೆಯೂ ಹೌದು. ಈ ಸಮಿತಿಗಳು ಯಾವುದೇ ಸಾರ್ವಜನಿಕ ಸೇವೆಗಾಗಿ ಇರುವಂಥವಲ್ಲ; 'ಕೈ' ಕಾರ್ಯಕರ್ತರ ಜೇಬು ತುಂಬಿಸಲು ರಚಿಸಲಾಗಿದೆ. ಇದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ಮತ್ತು ಪಾರದರ್ಶಕತೆಯ ವಿಶ್ವಾಸಾರ್ಹತೆಯ ಪ್ರಶ್ನೆಗಳು ಉದ್ಭವಿಸುತ್ತವೆ. ಇದು ಪ್ರಜಾಪ್ರಭುತ್ವದ ಅಣಕವಲ್ಲವೇ?

• ಆರ್.ಅಶೋಕ

'ಗ್ಯಾರಂಟಿ'ಗಳೆಂಬ 'ಪಂಚ ಆಮಿಷ'ಗಳನ್ನು ಗಾಳಕ್ಕೆ ಕಟ್ಟಿ ಚುನಾವಣೆಯಲ್ಲಿ ಮತ ಬೇಟೆಯಾಡಿ ಬಂದ ಕಾಂಗ್ರೆಸ್‌ನ ಯೋಜನೆಗಳಿಗೆ ನಮ್ಮ ವಿರೋಧವಿಲ್ಲ. ಬೇಕಿದ್ದರೆ, ಇನ್ನೂ ಹತ್ತಿಪ್ಪತ್ತು ಗ್ಯಾರಂಟಿಗಳನ್ನು ಅನುಷ್ಠಾನ ಮಾಡಲಿ. ಅದಕ್ಕೆ ನಮ್ಮ ತಕರಾರೂ ಇಲ್ಲ. ನಮ್ಮ ಆಕ್ಷೇಪ ಇರುವುದು, ಕಾಂಗ್ರೆಸ್ ಕಾರ್ಯಕರ್ತರಿಗೆ ಅನುಷ್ಠಾನದ ಅಧಿಕಾರ ನೀಡಿರುವ ಬಗ್ಗೆ. ತೆರಿಗೆದಾರರ ಹಣ 'ಯಾರದ್ದೊ ದುಡ್ಡು ಯಲ್ಲಮ್ಮನ ಜಾತ್ರೆ' ಆಗಬಾರದು. ಬೊಕ್ಕಸದ ಹಣವನ್ನು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪಕ್ಷದ ಕಾರ್ಯಕರ್ತರಿಗಾಗಿ ಈ ರೀತಿ ಬೇಕಾಬಿಟ್ಟಿ ಬಳಸುತ್ತಿರುವುದೇ ಅಸಾಂವಿಧಾನಿಕ.

'ಗ್ಯಾರಂಟಿ ಅನುಷ್ಠಾನ ಸಮಿತಿ'ಗಳು ಕಾಂಗ್ರೆಸ್ ಕಾರ್ಯಕರ್ತರಿಂದಲೇ ತುಂಬಿ ತುಳುಕುತ್ತಿವೆ. ಸಮಿತಿಗಳನ್ನು ರಾಜಕೀಯ ನೆಲಗಟ್ಟಿನ ಮೇಲೆ ರಚಿಸಲಾಗಿದೆ. ಇದು ಸಂವಿಧಾನ ವಿರೋಧಿ ಮಾತ್ರವಲ್ಲದೇ, ಬೊಕ್ಕಸಕ್ಕೆ ಹೊರೆಯೂ ಹೌದು. ಈ ಸಮಿತಿಗಳು ಯಾವುದೇ ಸಾರ್ವಜನಿಕ ಸೇವೆಗಾಗಿ ಇರುವಂಥವಲ್ಲ; ಕಾಂಗ್ರೆಸ್ ಕಾರ್ಯಕರ್ತರ ಜೇಬು ತುಂಬಿಸಲು ರಚಿಸಲಾಗಿದೆ. ಇದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ಮತ್ತು ಪಾರದರ್ಶಕತೆಯ ವಿಶ್ವಾಸಾರ್ಹತೆಯ ಪ್ರಶ್ನೆ ಉದ್ಭವಿಸುತ್ತದೆ. ಇದು ಪ್ರಜಾಪ್ರಭುತ್ವದ ಅಣಕವಲ್ಲವೇ; ಕಾಂಗ್ರೆಸ್ ಕಾರ್ಯಕರ್ತರಿಗೆ ಕೂತುಣ್ಣುವ ಒಂದು ವ್ಯವಸ್ಥೆ ಅಷ್ಟೇ.

2024ರ ಜನವರಿ 25ರಂದು ಸರ್ಕಾರಿ ಆದೇಶ ಹೊರಡಿಸಿ ರಾಜ್ಯ ಮಟ್ಟದ ಸಮಿತಿಗೆ ಅಧ್ಯಕ್ಷರು, ಐವರು ಉಪಾಧ್ಯಕ್ಷರು, ಹತ್ತಕ್ಕಿಂತ ಹೆಚ್ಚು ಸದಸ್ಯರನ್ನು ನೇಮಕ ಮಾಡಲಾಯಿತು. ಅಧ್ಯಕ್ಷರಿಗೆ ಸಂಪುಟ ದರ್ಜೆ ಸ್ಥಾನಮಾನ, ವಿಧಾನಸೌಧದಲ್ಲಿ ಕಚೇರಿ, ಐವರು ಉಪಾಧ್ಯಕ್ಷರಿಗೆ ರಾಜ್ಯ ಸಚಿವರ ದರ್ಜೆಯ ಸ್ಥಾನಮಾನ ನೀಡಲಾಗಿದೆ. ಪ್ರತಿ ಜಿಲ್ಲೆಯಿಂದ ಒಬ್ಬರಂತೆ 31 ಸದಸ್ಯರಿದ್ದಾರೆ. ಇವರೆಲ್ಲರಿಗೂ ಆಳು–ಕಾಳು, ವೇತನ, ಭತ್ಯೆ, ವಾಹನ ಮತ್ತು ಇತರ ಸವಲತ್ತುಗಳನ್ನು ಒದಗಿಸಲಾಗಿದೆ. ರಾಜ್ಯ ಮಟ್ಟದ ಸಮಿತಿಗೆ ಕನಿಷ್ಠ ₹50 ಲಕ್ಷ ವೆಚ್ಚವಾಗುತ್ತಿದೆ. ಅಂದರೆ, ವರ್ಷಕ್ಕೆ ₹6 ಕೋಟಿಗೂ ಹೆಚ್ಚು ತೆರಿಗೆ ಹಣ ಬಳಕೆಯಾಗುತ್ತದೆ.

2024ರ ಜುಲೈ 7ರಂದು ಜಿಲ್ಲಾ ಮಟ್ಟದ ಸಮಿತಿ ರಚನೆಗಾಗಿ ಸರ್ಕಾರ ಮತ್ತೊಂದು ಆದೇಶ ಹೊರಡಿಸಿತು. ಜಿಲ್ಲಾ ಮಟ್ಟದಲ್ಲಿ ಸಮಿತಿಗಳು ಅಧ್ಯಕ್ಷ, ಉಪಾಧ್ಯಕ್ಷ ಮತ್ತು 15 ಸದಸ್ಯರನ್ನು ಹೊಂದಿರುತ್ತವೆ. ಜಿಲ್ಲಾ ಅಧ್ಯಕ್ಷರಿಗೆ ತಿಂಗಳಿಗೆ ₹40 ಸಾವಿರ, ಉಪಾಧ್ಯಕ್ಷರಿಗೆ ₹25 ಸಾವಿರದಂತೆ ಸಂಬಳ ನೀಡಲಾಗುತ್ತಿದೆ. ಅಲ್ಲದೆ, ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಪ್ರತಿ ಸಭೆಗೆ ಹಾಜರಾತಿ ಭತ್ಯೆ ತಲಾ ₹1,100 ನೀಡಲಾಗುತ್ತಿದೆ. ಅದೇ ರೀತಿ ತಾಲ್ಲೂಕು ಮಟ್ಟದ ಸಮಿತಿಯ ಅಧ್ಯಕ್ಷರಿಗೆ ₹25 ಸಾವಿರ, ಉಪಾಧ್ಯಕ್ಷರಿಗೆ ₹10 ಸಾವಿರ, ಬಿಬಿಎಂಪಿ ಮಟ್ಟದಲ್ಲಿ ಅಧ್ಯಕ್ಷರಿಗೆ ₹40 ಸಾವಿರ ನಿಗದಿ ಮಾಡಲಾಗಿದೆ. ಸದಸ್ಯರಿಗೆ ಹಾಜರಾತಿ ಭತ್ಯೆ ₹1,100 ನೀಡಲಾಗುತ್ತದೆ. ಅಂದರೆ, 31 ಜಿಲ್ಲೆಗಳ ಅಧ್ಯಕ್ಷರಿಗೆ ತಿಂಗಳಿಗೆ ವೇತನ ರೂಪದಲ್ಲಿ ₹12.40 ಲಕ್ಷ, ಉಪಾಧ್ಯಕ್ಷರಿಗೆ ₹7.75 ಲಕ್ಷ, ಸದಸ್ಯರಿಗೆ ₹5.11 ಲಕ್ಷ, ತಾಲ್ಲೂಕು ಮಟ್ಟದ ಅಧ್ಯಕ್ಷರಿಗೆ (239 ತಾಲ್ಲೂಕು) ₹59.75 ಲಕ್ಷ, ತಾಲ್ಲೂಕು ಸಮಿತಿ ಸದಸ್ಯರಿಗೆ ₹33.46 ಲಕ್ಷ. ಎಲ್ಲ ಸೇರಿ ಪ್ರತಿ ತಿಂಗಳು ಈ ಸಮಿತಿಗಳಿಗಾಗಿ ಸರಿಸುಮಾರು ₹2.47 ಕೋಟಿ ವೆಚ್ಚವಾಗುತ್ತಿದೆ. ವರ್ಷಕ್ಕೆ ಹತ್ತಿರ ಹತ್ತಿರ ₹30 ಕೋಟಿ ಈ ಸಮಿತಿಗಳಲ್ಲಿ ಕೂತಿರುವ ಕಾಂಗ್ರೆಸ್ ಕಾರ್ಯಕರ್ತರ ಜೇಬಿಗೆ ಹರಿದುಹೋಗುತ್ತದೆ. ಎಲ್ಲ ಯೋಜನೆಗಳ ಮೊತ್ತವೂ ನೇರ ನಗದು ವರ್ಗಾವಣೆ (ಡಿಬಿಟಿ) ವ್ಯವಸ್ಥೆ ಮೂಲಕ ಫಲಾನುಭವಿಗಳಿಗೆ ತಲುಪುತ್ತವೆ. ವಿವಿಧ ಇಲಾಖೆಗಳ ಅಧಿಕಾರಿಗಳು ಇದರ ಉಸ್ತುವಾರಿ ನೋಡಿಕೊಳ್ಳುವಾಗ, ಕಾಂಗ್ರೆಸ್ ಕಾರ್ಯಕರ್ತರು ಅನುಷ್ಠಾನ ಸಮಿತಿಯಲ್ಲಿ ಕೂತು ಮಾಡುವುದಾದರೂ ಏನು? ಇವರ ಪಾತ್ರದ ಬಗ್ಗೆ ಸರ್ಕಾರದ ಯಾವುದೇ ಆದೇಶದಲ್ಲೂ ಸ್ಪಷ್ಟ ವಿವರಣೆಗಳಿಲ್ಲ. ವಿಚಿತ್ರವೆಂದರೆ, ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಸದಸ್ಯರಿಗೆ ಹಾಜರಾತಿ ಭತ್ಯೆ ₹200 ಮಾತ್ರ ಕೊಡುತ್ತಾರೆ. ಆದರೆ, ಕಾಂಗ್ರೆಸ್ ಕಾರ್ಯಕರ್ತರಿಗೆ ಹಾಜರಾತಿ ಭತ್ಯೆ ₹1,100 ಸಿಗುತ್ತದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಈ ನಡೆ ಅಪ್ಪಟ ಸ್ವೇಚ್ಛಾಚಾರ, ಸಂವಿಧಾನ ವಿರೋಧಿ ಮತ್ತು ರಾಜಕೀಯ ಪಕ್ಷಪಾತದಿಂದ ಕೂಡಿದೆ. ಈ ಸಮಿತಿಗಳು ಆಡಳಿತಾತ್ಮಕವಾಗಿ ಆಡಳಿತ ಯಂತ್ರಕ್ಕೆ ಎಳ್ಳು ಮೊನೆಯಷ್ಟೂ ಸಹಕಾರಿಯಲ್ಲ. ಆಡಳಿತ ಯಂತ್ರಕ್ಕೆ ಅದರ ಅಗತ್ಯವೂ ಇಲ್ಲ. ಕಾರ್ಯಕರ್ತರನ್ನು ಸರ್ಕಾರಿ ಹಣದ ಫಲಾನುಭವಿಗಳನ್ನಾಗಿ ಸಂತೃಪ್ತರನ್ನಾಗಿ ಇಡಲು ಈ ವ್ಯವಸ್ಥೆ ಅಷ್ಟೇ. ಸರ್ಕಾರಿ ಯೋಜನೆಗಳ ಅನುಷ್ಠಾನ ಸಾಂವಿಧಾನಿಕವಾಗಿ ಕಡ್ಡಾಯವಾಗಿದೆ. ಈ ಕಾರ್ಯ ಮಾಡಲು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳೂ ಇದ್ದಾರೆ. ಈಗ ಇವರ ಮೇಲೆ ಅನುಷ್ಠಾನ ಸಮಿತಿ ತಂದು ಕೂರಿಸಿ ಅಧಿಕಾರಿಗಳಿಗೆ ಇನ್ನಿಲ್ಲದ ಕಿರುಕುಳ ನೀಡುವ ಒಂದು ಕೆಟ್ಟ ಮಾದರಿ. ತಮ್ಮ 'ಇತರ' ಕೆಲಸ ಮಾಡಿಸಿಕೊಳ್ಳಲು, ಹಫ್ತಾ ವಸೂಲಿಗೆ ಮುಕ್ತ ಪರವಾನಗಿಯನ್ನು ಸಿದ್ದರಾಮಯ್ಯ ಸರ್ಕಾರ ಸೃಷ್ಟಿಸಿಕೊಟ್ಟಿದೆ. ಇದೇ ವೇಳೆ ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ತಯಾರಕರು, ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರು ಕಷ್ಟಪಟ್ಟು ದುಡಿದರೂ, ಅವರ ಬೆವರಿಗೆ ಸರ್ಕಾರ ಬೆಲೆ ನೀಡುತ್ತಿಲ್ಲ. ಅತ್ಯಂತ ಕನಿಷ್ಠ 'ಗೌರವ' ಧನ ನೀಡುತ್ತಿದೆ. ಆಶಾ ಕಾರ್ಯಕರ್ತೆಯರು, ಬಿಸಿಯೂಟ ತಯಾರಿಕೆಯವರು, ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ ₹1,000 ಹೆಚ್ಚಿಸಬಹುದಿತ್ತು. ಅತಿಥಿ ಉಪನ್ಯಾಸಕರಿಗೆ 6 ತಿಂಗಳಿಂದ ವೇತನ ಬಿಡುಗಡೆ ಮಾಡಿಲ್ಲ. ಗ್ಯಾರಂಟಿ ಅನುಷ್ಠಾನ ಸಮಿತಿಗೆ ನೀಡುವ ಮೊತ್ತವನ್ನೇ ಈ ವರ್ಗಕ್ಕೆ ನೀಡಿದ್ದರೆ, ಅವರ ಬದುಕು ಹಸನಾಗುತ್ತಿರಲಿಲ್ಲವೇ? ಆರ್ಥಿಕವಾಗಿ ಎಷ್ಟೇ ಸಂಕಷ್ಟವಿದ್ದರೂ ಕಾಂಗ್ರೆಸ್ ಕಾರ್ಯಕರ್ತರಿಗೆ ಪ್ರತಿ ತಿಂಗಳು ತಪ್ಪದೇ ವೇತನ ಮತ್ತು ಭತ್ಯೆ ಪಾವತಿಸಲಾಗುತ್ತಿದೆ.

ಮತ್ತೊಂದು ಗಂಭೀರ ವಿಚಾವೆಂದರೆ, ಸಂವಿಧಾನದ ಕಲಂ 164 (1ಎ) ಅನ್ವಯ ಸಚಿವರ ನೇಮಕದ ಸ್ಪಷ್ಟ ಮಿತಿ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆಯ ಶೇ 15 ಮೀರಬಾರದು. ಕರ್ನಾಟಕದಲ್ಲಿ ಸಚಿವ ಸಂಪುಟ ಸದಸ್ಯರ ಸಂಖ್ಯೆ 34 ದಾಟಬಾರದು. ಆದರೆ, ಪರೋಕ್ಷವಾಗಿ ಈ ಸ್ಥಾನಮಾನಗಳನ್ನು ಬೇಕು ಬೇಕಾದವರಿಗೆ ನೀಡುವ ಮೂಲಕ ಆ ಸಂಖ್ಯೆಯನ್ನು ಮೀರಿಯಾಗಿದೆ. ಇದು ಕಲಂ 164 (1ಎ) ಉಲ್ಲಂಘನೆ. ರಾಜ್ಯ ಮಟ್ಟದ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಸಂಪುಟ ದರ್ಜೆ ಮತ್ತು ರಾಜ್ಯ ದರ್ಜೆ ಸಚಿವ ಸ್ಥಾನ ನೀಡಿರುವುದಕ್ಕೆ ಇದು ಸ್ಪಷ್ಟ ನಿದರ್ಶನ.

ಲೇಖಕ: ವಿಧಾನಸಭೆ ವಿರೋಧ ಪಕ್ಷದ ನಾಯಕ

ನಿರೂಪಣೆ: ಎಸ್. ರವಿಪ್ರಕಾಶ್

ಸಿನಿ ಬಿಟ್ಸ್

ಪತ್ರಕರ್ತನಾದ ನಿರಂಜನ್ ಸುಧೀಂದ್ರ

ನಿರಂಜನ್, ರಚನಾ ಇಂದರ್

ನಟ ಉಪೇಂದ್ರ ಅಣ್ಣನ ಮಗ ನಿರಂಜನ್ ಸುಧೀಂದ್ರ ಅವರ ಹೊಸ ಸಿನಿಮಾದ ಮುಹೂರ್ತ ಇತ್ತೀಚೆಗಷ್ಟೇ ನಡೆಯಿತು. ಡಿ. ಮಹಾಂತೇಶ್ ಹಂದ್ರಾಳ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಸ್ಪಾರ್ಕ್' ಎಂಬ ಸಿನಿಮಾದಲ್ಲಿ ಪತ್ರಕರ್ತನಾಗಿ ಅವರು ಬಣ್ಣ ಹಚ್ಚಿದ್ದಾರೆ.

'ಜೇಮ್ಸ್', 'ಭರಾಟೆ', 'ಕನಕ' ಸೇರಿದಂತೆ 15ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದ ಮಹಾಂತೇಶ್ ಈ ಚಿತ್ರದ ಮೂಲಕ ನಿರ್ದೇಶಕನಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ. ಇದೇ ತಿಂಗಳಾಂತ್ಯಕ್ಕೆ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಬೆಂಗಳೂರಿನಲ್ಲಿಯೇ ಬಹುತೇಕ ಶೂಟಿಂಗ್ ನಡೆಯಲಿದೆ ಎಂದಿದ್ದಾರೆ ಮಹಾಂತೇಶ್.

'ಪತ್ರಕರ್ತರಿಗೆ ಇರುವ ಕಿಡಿ ಬೇರೆಯವರಿಗೆ ಇರುವುದಿಲ್ಲ. ಯಾವುದೇ ವಿಷಯದ ಬಗ್ಗೆ ಮೊದಲು ಬೆಳಕು ಚೆಲ್ಲುವವರು ಇವರೇ. ನಮ್ಮ ಕಥೆಯಲ್ಲೂ ಚಿಕ್ಕ ಕಿಡಿ ಇದೆ. ಅದನ್ನು 'ಸ್ಪಾರ್ಕ್' ಮೂಲಕ ಅದ್ಭುತವಾಗಿ ಹೇಳಲು ಹೊರಟ್ಟಿದ್ದಾರೆ ನಿರ್ದೇಶಕರು. ಸಿನಿಮಾದಲ್ಲಿ ನಾನು 'ಅಭಿರಾಮ್' ಎಂಬ ಪತ್ರಕರ್ತನ ಪಾತ್ರ ಮಾಡುತ್ತಿದ್ದೇನೆ' ಎಂದರು ನಿರಂಜನ್.

ಮಹಾಂತೇಶ್ ಅವರೇ ಈ ಚಿತ್ರಕ್ಕೆ ಆ್ಯಕ್ಷನ್ ಥ್ರಿಲ್ಲರ್ ಕಥೆಯನ್ನು ಹೆಣೆದಿದ್ದಾರೆ. ನೈಜ ಘಟನೆಯಿಂದ ಸ್ಫೂರ್ತಿ ಪಡೆದ ಸಿನಿಮಾ ಇದಾಗಿದೆ ಎಂದಿದೆ ಚಿತ್ರತಂಡ. ಗರಿಮಾ ಅವಿನಾಶ್ ವಸಿಷ್ಠ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಇದು ಈ ಸಂಸ್ಥೆಯ ಚೊಚ್ಚಲ ಚಿತ್ರವಾಗಿದೆ. 'ಲವ್ ಮಾಕ್ಟೇಲ್', 'ಹರಿಕಥೆ ಅಲ್ಲ ಗಿರಿಕಥೆ', 'ಲವ್ 360', 'ಟ್ರಿಬಲ್ ರೈಡಿಂಗ್' ಮುಂತಾದ ಸಿನಿಮಾಗಳಲ್ಲಿ ಬಣ್ಣ ಹಚ್ಚಿರುವ ರಚನಾ ಇಂದರ್ ಈ ಚಿತ್ರದ ನಾಯಕಿ. ಅಶ್ವಿನ್ ಕೆನಡಿ ಛಾಯಾಚಿತ್ರಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಮಧು ಸಂಕಲನ ಚಿತ್ರಕ್ಕಿದೆ. ❖

ಬಿಡುಗಡೆಗೆ ಸಜ್ಜಾದ 'ಬ್ಯಾಡ್'

ಪಿ.ಸಿ.ಶೇಖರ್ ನಿರ್ದೇಶನದ 'ಬ್ಯಾಡ್' ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ. ಚಿತ್ರದ ಮೊದಲ ಹಾಡು 'ನೀ ಬರುವೆ...' ಇತ್ತೀಚೆಗೆ ಬಿಡುಗಡೆಯಾಯಿತು.

ಚಿತ್ರದಲ್ಲಿ 'ಪ್ರೀತಿಯ ರಾಯಭಾರಿ' ಖ್ಯಾತಿಯ ನಕುಲ್ ಗೌಡ ಹಾಗೂ ಮಾನ್ವಿತ ಹರೀಶ್ ಜೋಡಿ ನಟಿಸಿದ್ದು, ಚಿತ್ರವನ್ನು ಎಸ್. ಆರ್. ವೆಂಕಟೇಶ್ ಗೌಡ ನಿರ್ಮಾಣ ಮಾಡಿದ್ದಾರೆ.

'ನೀ ಬರುವೆ..' ಹಾಡಿಗೆ ಕವಿರಾಜ್ ಅವರ ಸಾಹಿತ್ಯವಿದ್ದು, ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ಹಾಡನ್ನು 'ಸರಿಗಮಪ' ಖ್ಯಾತಿಯ ಪೃಥ್ವಿ ಭಟ್ ಹಾಡಿದ್ದಾರೆ. ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳಲ್ಲಿ ಆರು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿರುವುದು ಚಿತ್ರದ ವಿಶೇಷ ಎನ್ನುತ್ತಾರೆ ಪಿ.ಸಿ.ಶೇಖರ್.

ಶೇಖರ್ ಅವರೇ ಚಿತ್ರಕ್ಕೆ ಸಂಕಲನಕಾರರು. ಜಿ.ರಾಜಶೇಖರ್ ಕಲಾ ನಿರ್ದೇಶನ ಹಾಗೂ ಶಕ್ತಿ ಶೇಖರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಸಚಿನ್ ಜಗದೀಶ್ವರ್ ಎಸ್.ಬಿ. ಸಂಭಾಷಣೆ ಬರೆದಿದ್ದಾರೆ. ಸಾಯಿ ಕೃಷ್ಣ, ಅಪೂರ್ವ ಭಾರದ್ವಾಜ್, ಮಂಜುನಾಥ್, ಅಶ್ವಿನಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ನಕುಲ್ ಗೌಡ,ಡ ಮಾನ್ವಿತ ಹರೀಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5982

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಹುತಿಯಾಗುವ ಪ್ರಾಣಿ (4)
3.ಪದಾರ್ಥಗಳನ್ನು ಮಾರುವ ಸ್ಥಳ (3)
4.ಬೆನ್ನೆಲುಬು ಇರುವ ಪ್ರಾಣಿ (4)
6.ಏಳು ದಿನಗಳ ಅವಧಿ (2)
7.ಯಾವ ಕಳಂಕವೂ ಇಲ್ಲದ್ದು (4)
8. ಕಾಡಿನಲ್ಲಿರುವ ಅಡ್ಡೆ! (3)
9.ಪರವಾಗಿ ದಾರ ಹಿಡಿದು ಪೇಚಾಡು! (4)
12.ಒಡಂಬಡಿಕೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (2)
13.ಮರ ಕೊಯ್ಯಲು ಬಳಸುವ ಹಲ್ಲುಗಳುಳ್ಳ ಆಯುಧ (4)
15.ಹರಾಜು ನಡೆಯುವ ಜಾಗದಲ್ಲಿದೆಯಲ್ಲಾಈ ಹಡಗು! (3)
16.ನಿಯಮದಂತೆ ಕನ್ನಡಿಗನು ಮಾಡಿಕೊಂಡ ಎಕ್ಸ್ಚೇಂಜ್ (4)

ಮೇಲಿಂದ ಕೆಳಕ್ಕೆ

1.ಬರದಲ್ಲಿಯೂ ತೋರುತ್ತಿರುವ ಡೌಲು! (4)
2.ಶುನಕದ ಬಳಿ ಹಾರಿದ ಗಿಣಿ (2)
3.ಪಾದದ ಹೆಬ್ಬೆರಳು (3)
5.ಕಲೆಸಿದ ಗೋಧಿ ಹಿಟ್ಟು (3)
7.ಹನ್ನೆರಡು ಅಂಗುಲದ ಅಳತೆ (2)
8.ಕಾದಾಡುತ್ತಲೇ ಪ್ರವೇಶಿಸಿದ ಅರಣ್ಯ (2)
9.ಹೂವಿನ ಹುಡಿಯಿದು (3)
10.ರಾಜ ನಡುವಿದಾಗಲೇ ಈ ಸೋಲು! (4)
11.ಕೋಟೆಯ ಮೇಲಿನ ಕೊತ್ತಳ (3)
14.ಸವಿಸ್ತಾರದಲ್ಲಿರುವ ರುಚಿ! (2)



5981ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ವಸನ
5.ವನಸಂಚಾರ
6.ಶರ 8.ನಾಕ
9.ಅಂಕೆ 10.ಕದ
14.ಗಾಳಿಗೋಪುರ
15.ಕಮರಿ 16.ಹರಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ವಿವಶ
3.ವರಸೆ 4.ನಕ್ಷತ್ರಕ
7.ರಸಿಕೆ 8.ನಾಸಿಕ
9.ಅಂಗಾರಕ 11.ದಬ್ಬಾಳಿಕೆ
12.ನಗಾರಿ 13.ವಿರಹ

ಸುಡೊಕು 6367

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6366 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶನಿವಾರ ಮಾರ್ಚ್ 15, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣಪ್ರತಿಪದ್ ಗಂ. 14-34 ನಕ್ಷತ್ರ: ಉತ್ತರಫಲ್ಗುನಿ ಗಂ. 08-54 ಯೋಗ: ಗಂಡ ಗಂ. 14-00 ಕರಣ: ಕೌಲವ ಗಂ. 14-34, ಮೀನ ಮಾಸದ 01 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-41 **ಸೂರ್ಯಾಸ್ತ :** 06-38
ಮುಸ್ಲಿಂ ದಿನಾಂಕ : 14 ರಂಜಾನ್
ದಿನ ವಿಶೇಷ : ಹೋಲ, ವಸಂತೋತ್ಸವ, ಅದೃಷ್ಟ ಸಂಖ್ಯೆ : 11, 6

ಮೇಷ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ಆದಷ್ಟು ಬೇಗ ದಿನಚರಿಯ ಕೆಲಸ ಮಾಡಬೇಕಾಗಬೇಕಾಗುತ್ತದೆ. ಹಣಕಾಸಿನ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ.

ವೃಷಭ: ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ ನಂತರ ಗುರಿ ಸಾಧಿಸಬೇಕಿದ್ದಲ್ಲಿ ಜನರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳುವುದು ಉತ್ತಮ. ಖರ್ಚು–ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ.

ಮಿಥುನ: ಜಾಣ್ಮೆಗೆ ಸಂಬಂಧಪಟ್ಟವರಿಂದ ಸರಿಯಾದ ಪ್ರೋತ್ಸಾಹ ದೊರೆಯಲಿದ್ದು, ಧ್ಯೇಯದಲ್ಲಿ ಗಂಭೀರ ಬದಲಾವಣೆ ಹೊಂದುವಿರಿ. ಸ್ಥಿರ ಆಸ್ತಿಯನ್ನು ಖರೀದಿಸುವ ಬಗ್ಗೆ ಯೋಚನೆ ಮಾಡುವುದು ಉತ್ತಮ.

ಕರ್ಕಾಟಕ: ಗೊಂದಲದಲ್ಲಿ ಸಿಕ್ಕಿರುವ ನಿಮಗೆ ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದ ಒಳ್ಳೆಯ ಫಲಿತಾಂಶ ಪಡೆಯುವಿರಿ. ಆರಂಭಿಸಿರುವ ಕೆಲಸಗಳನ್ನು ಮುಂದುವರಿಸಲು ಪ್ರಯತ್ನಿಸಿ. ಕಾರ್ಯತಂತ್ರ ಸುಧಾರಣೆ ಬಗ್ಗೆ ಚಿಂತಿಸಿ.

ಸಿಂಹ: ಸಿಬ್ಬಂದಿಯಲ್ಲಿ ಉತ್ಸಾಹ ತುಂಬಿ ನಾಯಕತ್ವದ ಸ್ಥಾನದಲ್ಲಿ ಕೆಲಸ ಕಾರ್ಯಗಳನ್ನು ಪೂರ್ತಿಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಪಿತ್ತ, ಉಷ್ಣ ಪ್ರಕೋಪದಿಂದ ಆರೋಗ್ಯ ಸೂಕ್ಷ್ಮವಾಗುವುದು. ನೀಲಿ ಬಣ್ಣ ಶುಭದಾಯಕ.

ಕನ್ಯಾ: ಸವಾಲಾಗಿರುವ ಮನದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸನ್ನಿವೇಶಗಳು ಅನುಕೂಲವಾಗಲಿವೆ. ಹುಣಸೆ ಹಣ್ಣು ಹಾಗೂ ದ್ರಾಕ್ಷಿ ವ್ಯಾಪಾರಸ್ಥರಿಗೆ ಅನುಕೂಲಕರ ವ್ಯಾಪಾರ ಇರುವುದು.

ತುಲಾ: ವ್ಯಾಪಾರದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶ ನಷ್ಟವನ್ನು ಮತ್ತು ನೋವನ್ನು ತರಲಿದೆ. ಕೆಲಸ ಬದಲಿಸುವ ಯೋಚನೆಯನ್ನು ಮಾಡುವವರಿಗೆ ಇಂದು ಸಕಾಲ. ಆಫೀಸಿನ ಕೆಲಸಗಳನ್ನು ಕೇಳಿ ತಿಳಿದುಕೊಳ್ಳುವುದು ಉತ್ತಮ.

ವೃಶ್ಚಿಕ: ಹೆಚ್ಚಿನ ಪ್ರೀತಿ ಹಾಗೂ ಕಾಳಜಿಯಿಂದ ಬದಲಾದ ಮನೆಯ ವಾತಾವರಣ ಬಹಳ ಸಂತೋಷವಾಗಿರುವುದು. ಆರೋಗ್ಯದ ವಿಚಾರದಲ್ಲಿ ಗಮನವಿರಲಿ.

ಧನು: ಹರಿತವಾದ ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು. ಗಮನವಿಟ್ಟು ಕೆಲಸವನ್ನು ಮಾಡಿ. ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಪಾಡಿಕೊಳ್ಳುವುದು ಒಳ್ಳೆಯದು.

ಮಕರ: ಕೃಷಿಕರು ಮತ್ತು ಉದ್ಯಮಿಗಳು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಅವರಲ್ಲಿನ ಸಾಮರಸ್ಯವನ್ನು ಕಾಪಾಡಿಕೊಳ್ಳುವುದು ಉತ್ತಮ. ಯಾವುದೇ ರೀತಿಯ ಬದಲಾವಣೆಗಳನ್ನು ಮಾಡಲು ಸೂಕ್ತ ಕಾಲವಾಗಿರುತ್ತದೆ.

ಕುಂಭ: ಸತ್ಯದ ಹಾದಿಗೆ ಯಾವಾಗಲೂ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ. ಅಧಿಕ ಒತ್ತಡದಿಂದ ದೇಹದಲ್ಲಿ ಅನಾರೋಗ್ಯ ಸಮಸ್ಯೆಗಳು ಉಂಟಾಗಬಹುದು. ಪ್ರೀತಿಪಾತ್ರರಿಗಾಗಿ ಸಮಯ ಮೀಸಲಿಡಿ.

ಮೀನ: ಏರುಪೇರಾಗಿದ್ದ ಆರ್ಥಿಕ ಪರಿಸ್ಥಿತಿಯನ್ನು ಸರಿದಾರಿಗೆ ತಂದ ನೆಮ್ಮದಿ ಕಾಣಲಿದೆ. ಮಕ್ಕಳ ಜೀವನದ ಕೆಲವು ವಿಚಾರಗಳ ಬಗ್ಗೆ ನಿರ್ಧಾರ ಮಾಡುವ ದಿನ ಇದಾಗಲಿದೆ. ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ.

ಜಾಲಹಳ್ಳಿ ಕ್ರಾಸ್: ಆರು ವರ್ಷಗಳ ಹಿಂದೆ ಆರಂಭವಾದ ಯೋಜನೆ ● ಭೂ ಸ್ವಾಧೀನ ಪ್ರಕ್ರಿಯೆಗೆ ತೊಡಕು

ನನೆಗುದಿಗೆ ಬಿದ್ದ ಅಂಡರ್‌ಪಾಸ್ ಕಾಮಗಾರಿ

● ಗಾಣಧಾಳು ಶ್ರೀಕಂಠ

ಬೆಂಗಳೂರು: ಸಂಚಾರ ದಟ್ಟಣೆಯಿಂದಲೇ 'ಕುಖ್ಯಾತಿ' ಪಡೆದಿರುವ ಜಾಲಹಳ್ಳಿ ಕ್ರಾಸ್‌ನಲ್ಲಿ ಜಾರಿಗೊಳ್ಳಬೇಕಿದ್ದ 'ಗ್ರೇಡ್ ಸೆಪರೇಟರ್' ಯೋಜನೆ ಆರು ವರ್ಷಗಳಿಂದ ನನೆಗುದಿಗೆ ಬಿದ್ದಿದೆ.

ನಿತ್ಯ ಸಾವಿರಾರು ವಾಹನ ಚಾಲಕರು, ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ಕಾಮಗಾರಿ ವಿಳಂಬದಿಂದ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಪಾದಚಾರಿಗಳು ಜೀವಭಯದಲ್ಲೇ ರಸ್ತೆ ದಾಟುತ್ತಿದ್ದಾರೆ.

ದೇವನಹಳ್ಳಿ, ಯಲಹಂಕ, ವಿದ್ಯಾರಣ್ಯಪುರ ಭಾಗದಿಂದ ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆಗೆ ಸಂಪರ್ಕ ಕಲ್ಪಿಸುವ ಜಾಲಹಳ್ಳಿ ಜಂಕ್ಷನ್‌ನಲ್ಲಿ ದಿನವಿಡೀ ದಟ್ಟಣೆ ಇರುತ್ತದೆ. ರಾಜ್ಯದ ಅರ್ಧದಷ್ಟು ಜಿಲ್ಲೆಗಳಿಗೆ ಸಂಪರ್ಕ ಕೊಂಡಿಯಾಗಿರುವ ಈ ವೃತ್ತದಲ್ಲಿ ಬಸ್, ಲಾರಿಗಳ ಸಂಚಾರ ನಿರಂತರವಾಗಿರುತ್ತದೆ. ತುಮಕೂರು, ಉತ್ತರ ಕರ್ನಾಟಕದ ಊರುಗಳಿಗೆ ತೆರಳುವವರು, ಕೆಲಸಕ್ಕೆ ಹೋಗುವ ಕಾರ್ಮಿಕರು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಿಗಾಗಿ ಇಲ್ಲೇ ಕಾಯುತ್ತಾರೆ. ಹೀಗಾಗಿ ಬೆಳಿಗ್ಗೆ ಮತ್ತು ಸಂಜೆ ವೃತ್ತ ದಟ್ಟಣೆಯಿಂದ ಕೂಡಿರುತ್ತದೆ.

ಸಂಚಾರ ದಟ್ಟಣೆ ನಿವಾರಿಸಿ, ಸಿಗ್ನಲ್‌ಮುಕ್ತ ವೃತ್ತವಾಗಿಸಲು ಬಿಬಿಎಂಪಿ 2017–18ನೇ ಸಾಲಿನ ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ ಅಡಿ, ಜಾಲಹಳ್ಳಿ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ (ಅಂಡರ್‌ಪಾಸ್) ನಿರ್ಮಿಸಲು, ₹57 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಲಾಯಿತು.

2019ರಲ್ಲಿ ಕಾಮಗಾರಿ ಆರಂಭಕ್ಕೆ ಕಾರ್ಯಾದೇಶ ನೀಡಲಾಗಿದೆ. 2023, ಮೇ 31ಕ್ಕೆ ಕಾಮಗಾರಿ ಪೂರ್ಣಗೊಳಿಸುವ ಗುರಿ ನೀಡಲಾಗಿತ್ತು.

2023ರ ವಿಧಾನಸಭಾ ಚುನಾವಣೆಗೂ ಮುನ್ನ ಕಾಮಗಾರಿಯ ಭಾಗವಾಗಿ ಅಯ್ಯಪ್ಪಸ್ವಾಮಿ ದೇವಾಲಯ ರಸ್ತೆಯ (ಎಸ್.ಎಂ. ರಸ್ತೆ) ಒಂದು ಬದಿಯಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯ ಆರಂಭವಾಯಿತು. ಆದರೆ, ರಸ್ತೆಯ ಇನ್ನೊಂದು ಬದಿಯಲ್ಲಿದ್ದ ಮಳಿಗೆ ಮಾಲೀಕರು ಹೆಚ್ಚಿನ ಪರಿಹಾರ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದರಿಂದ ಕಾಮಗಾರಿ ವಿಳಂಬವಾಗಿದೆ. ಭೂಸ್ವಾಧೀನ, ಪರಿಹಾರದ ತೊಡಗಕಿನಿಂದಾಗಿ ಜಾಲಹಳ್ಳಿ ಸರ್ಕಲ್‌ನ ಎರಡೂ ಭಾಗದ (ಅಯ್ಯಪ್ಪ ಸ್ವಾಮಿ ದೇವಾಲಯ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶ ಭಾಗ) ಕಾಮಗಾರಿ ಸ್ಥಗಿತಗೊಂಡಿದೆ. ಹೀಗಾಗಿ ದಟ್ಟಣೆಯಿಂದಾಗಿ ವಾಹನ ಸವಾರರು, ಪಾದಚಾರಿಗಳು ಪರದಾಡುವುದು ಮುಂದುವರಿದಿದೆ

ಜಾಲಹಳ್ಳಿ ಕ್ರಾಸ್ ಬಳಿ ನಿರ್ಮಾಣ ಆಗಲಿರುವ ಗ್ರೇಡ್ ಸೆಪರೇಟರ್ ನೀಲನಕ್ಷೆ

'ಪರಿಹಾರ ಕೊಟ್ಟರೆ ಕೆಲಸ ಶುರು'



ಅಂಡರ್‌ಪಾಸ್ ಕಾಮಗಾರಿಗೆ ಕಾರ್ಯಾದೇಶವಾಗಿದೆ. ಭೂಸ್ವಾಧೀನಕ್ಕೆ ₹15 ಕೋಟಿ ಹಣ ಬೇಕಿದೆ. ಕಟ್ಟಡ ಮಾಲೀಕರ ಬಳಿ ಮಾತಾಡಿ ಮನವೊಲಿಸಿದ್ದೇನೆ. ಪರಿಹಾರ ಕೊಟ್ಟರೆ ತಕ್ಷಣ ಕೆಲಸ ಶುರುವಾಗುತ್ತದೆ. ಸರ್ಕಾರಕ್ಕೂ ಈ ಬಗ್ಗೆ ತಿಳಿಸಿದ್ದೇನೆ. ಅವಕಾಶ ಸಿಕ್ಕರೆ ಈ ಅಧಿವೇಶನದಲ್ಲೂ ಮಾತನಾಡುತ್ತೇನೆ. ಅಂಡರ್‌ಪಾಸ್ ನಿರ್ಮಾಣವಾದರೆ, ಸಂಚಾರ ದಟ್ಟಣೆಯ ನರಕದಿಂದ ಜನರನ್ನು ಪಾರು ಮಾಡಿದಂತಾಗುತ್ತದೆ

ಎಸ್.ಮುನಿರಾಜು, ಶಾಸಕ, ದಾಸರಹಳ್ಳಿ ಕ್ಷೇತ್ರ

ಜನರು ಏನಂತಾರೆ..?

'ಸೂಕ್ತ ಪರಿಹಾರ ನೀಡಿ'

ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಕಟ್ಟಡಗಳ ತೆರವಿಗೆ ಅಳತೆ ಮಾಡಲಾಯಿತು. ನಂತರ ನಮ್ಮ ವಾಣಿಜ್ಯ ಮಳಿಗೆಗಳಿಗೆ ಸರಿಯಾದ ನಿಗದಿತ ಬೆಲೆ ನೀಡುತ್ತಿಲ್ಲ. ಕಾಮಗಾರಿ ಕೆಲಸವೂ ಹಾಗೆಯೇ ಉಳಿದಿದೆ. ನಮಗೆ ಈಗಿನ ಮಾರುಕಟ್ಟೆ ಬೆಲೆ ನೀಡಿ, ಅಂಡರ್‌ಪಾಸ್ ಮಾಡಲು ಯಾವುದೇ ಅಭ್ಯಂತರವಿಲ್ಲ.

ಕುಮಾರ್, ವಾಣಿಜ್ಯ ಕಟ್ಟಡ ಮಳಿಗೆಗಳ ಮಾಲೀಕರು

'ರಸ್ತೆ ದಾಟುವುದೇ ಸವಾಲು'



ಜಾಲಹಳ್ಳಿ ಕ್ರಾಸ್ ಬಸ್ ನಿಲ್ದಾಣದಲ್ಲಿ ಬಂದು ಇಳಿಯುವ ಪ್ರಯಾಣಿಕರು ಸಿಗ್ನಲ್‌ಗಳನ್ನೂ ಗಮನಿಸದೇ ಚಲಿಸುತ್ತಾರೆ. ಇದು ಸಮಸ್ಯೆಗೆ ಕಾರಣವಾಗುತ್ತಿದೆ. ಸುರಕ್ಷಿತವಾಗಿ ರಸ್ತೆ ದಾಟುವುದೇ ಸವಾಲಾಗಿದೆ. ಅಂಡರ್‌ಪಾಸ್ ನಿರ್ಮಾಣವಾದರೆ ಜನರು ಸುರಕ್ಷಿತವಾಗಿ ರಸ್ತೆ ದಾಟುತ್ತಾರೆ. ಟ್ರಾಫಿಕ್ ಸಮಸ್ಯೆಗೂ ಪರಿಹಾರ ಸಿಕ್ಕಂತಾಗುತ್ತದೆ.

ಚಿದಾನಂದಮೂರ್ತಿ, ಇನ್‌ಸ್ಪೆಕ್ಟರ್, ಪೀಣ್ಯ ಸಂಚಾರ ಪೊಲೀಸ್ ಠಾಣೆ

'ಕಾಮಗಾರಿ ತ್ವರಿತವಾಗಿ ಮುಗಿಸಿ'

ವಿಧಾನಸಭಾ ಚುನಾವಣೆಗೆ ಮುನ್ನ ರಸ್ತೆ ಪಕ್ಕದ ಕೆಲವು ಕಟ್ಟಡಗಳನ್ನು ತೆರವುಗೊಳಿಸಿದರು. ಕೆಲ ಕಟ್ಟಡಗಳ ಮಾಲೀಕರು ತೆರವಿಗೆ ಅವಕಾಶ ನೀಡಲಿಲ್ಲ. ಚುನಾವಣೆ ಮುಗಿದ ಮೇಲೆ ಮತ್ತೆ ಕೆಲಸ ಮಾಡಲಿಲ್ಲ. ಇತ್ತೀಚೆಗೆ ಒಂದೆರಡು ಕಟ್ಟಡ ತೆರವುಗೊಳಿಸಿದ್ದಾರೆ. ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದೆ. ಅಂಡರ್‌ಪಾಸ್ ಬೇಗ ಪ್ರಯಾಣಕ್ಕೆ ಲಭ್ಯವಾದರೆ, ಕಿರಿಕಿರಿ ತಪ್ಪಬಹುದು.

ವಿನಯ್(ಅನಿಲ್), ಮೆಡಿಕಲ್ ಸ್ಟೋರ್ ನೌಕರ

'ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಿ'

ವಾಹನ ದಟ್ಟಣೆ ನಡುವೆ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡುವ ಸಾವಿರಾರು ಕಾರ್ಮಿಕರು ಜೀವ ಕೈಯಲ್ಲಿ ಹಿಡಿದು ಜಾಲಹಳ್ಳಿ ವೃತ್ತವನ್ನು ದಾಟುತ್ತಾರೆ. ಅಂಡರ್‌ಪಾಸ್ ನಿರ್ಮಾಣವಾದರೆ ದಟ್ಟಣೆ ಕಡಿಮೆಯಾಗುತ್ತದೆ. ಅಂಗಡಿ ಮಾಲೀಕರಿಗೆ ನೋಟಿಸ್ ನೀಡಿ ವರ್ಷ ಗಳೇ ಕಳೆದಿವೆ. ಇನ್ನೂ ಪರಿಹಾರ ನೀಡಿಲ್ಲ. ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಿ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು.

ಎಂ.ಸಿ. ಮುನಿರಾಜು, ರಾಜ್ಯಾಧ್ಯಕ್ಷರು, ಕರ್ನಾಟಕ ಕಾರ್ಮಿಕರ ಹಿತರಕ್ಷಣಾ ಸಮಿತಿ

'ಫುಟ್‌ಪಾತ್‌ಗಳೂ ಅಭಿವೃದ್ಧಿಯಾಗಿಲ್ಲ'

ಅಯ್ಯಪ್ಪಸ್ವಾಮಿ ದೇಗುಲದಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ತೆರಳುವ ರಸ್ತೆಯ ಒಂದು ಬದಿ (ಎಡಭಾಗ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ್ದರೆ, ಬಲಬದಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತದೆ. ಈ ಗಡಿ ಸಮಸ್ಯೆಯಿಂದಾಗಿ, ಇಲ್ಲಿ ಅಂಡರ್‌ಪಾಸ್ ಕಾಮಗಾರಿ ಮಾತ್ರವಲ್ಲದೇ, ರಸ್ತೆ, ಫುಟ್‌ಪಾತ್ ಅಭಿವೃದ್ಧಿಯೂ ನಡೆಯುತ್ತಿಲ್ಲ. ಈ ರಸ್ತೆಯ ಒಂದು ಬದಿಯಲ್ಲಿ ಕಳೆದ ವರ್ಷ ಚರಂಡಿ ತುಂಬಿಕೊಂಡು ಸಮಸ್ಯೆ ಉಂಟಾಗಿತ್ತು. ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯಲಾಗದೇ ಕೊಳಚೆ ನೀರು ರಸ್ತೆಗೆ ಹರಿದು ಸಮಸ್ಯೆಯಾಗಿತ್ತು ಎಂದು ಅಕ್ಕಪಕ್ಕದ ಅಂಡಿಗಳವರು ದೂರುತ್ತಾರೆ.

ಸುದ್ದಿ 2 ನಿಮಿಷ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ; ಅರ್ಜಿ ಆಹ್ವಾನ

ಹುಬ್ಬಳ್ಳಿ: ಬೆಂಗಳೂರಿನ ಜಿನೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಕಾಂಪಿಟೆಟಿವ್ ಎಕ್ಸಾಮ್ಸ್ (ಜೈಸ್) ಸಂಸ್ಥೆಯು ರಾಜ್ಯದ ಎಲ್ಲ ವರ್ಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಐಎಎಸ್, ಕೆಎಸ್, ಗ್ರೂಪ್–ಸಿ, ಪಿಎಸ್‌ಐ, ಬ್ಯಾಂಕಿಂಗ್ ಮತ್ತು ರೈಲ್ವೆ ನೇಮಕಾತಿ ಹುದ್ದೆಗಳಿಗೆ ಉಚಿತ ತರಬೇತಿ ನೀಡಲಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಬೆಂಗಳೂರು ಮತ್ತು ಧಾರವಾಡ ಕೇಂದ್ರದಲ್ಲಿ ತಲಾ 100 ವಿದ್ಯಾರ್ಥಿಗಳಂತೆ ಒಟ್ಟು 200 ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಲಾಗುವುದು. ಅರ್ಜಿ ಸಲ್ಲಿಕೆಗೆ ಮಾರ್ಚ್ 25 ಕೊನೆಯ ದಿನ. ಏಪ್ರಿಲ್ 6ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 7676167901 (ಬೆಂಗಳೂರು ಕೇಂದ್ರ) ಮತ್ತು 9591673505 (ಧಾರವಾಡ ಕೇಂದ್ರ) ಆನ್‌ಲೈನ್ ನೋಂದಣಿಗೆ ವೆಬ್‌ಸೈಟ್ ವಿಳಾಸ: www.jiceias.com

ಕೈವಾರ ನಾರೇಯಣ ತಾತಯ್ಯನವರ ಜಯಂತ್ಯುತ್ಸವ

ಕೆ.ಆರ್.ಪುರ: ಕೈವಾರ ನಾರೇಯಣ ತಾತಯ್ಯನವರ 299ನೇ ಜಯಂತಿ ಪ್ರಯುಕ್ತ ಕೆ.ಆರ್.ಪುರದಲ್ಲಿ ರಥಯಾತ್ರೆ ನಡೆಯಿತು.

ರಥಯಾತ್ರೆಗೆ ಶಾಸಕ ಬೈರತಿ ಬಸವರಾಜ ಚಾಲನೆ ನೀಡಿದರು. ಶ್ರೀ ಮಾರುತಿ ಬಲಿಜ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ರಥಯಾತ್ರೆಯ ಮೆರವಣಿಗೆ ಕೆ.ಆರ್.ಪುರದ ಕೋಟೆ ಶ್ರೀವೆಂಕಟೇಶ್ವರ ದೇವಸ್ಥಾನದಿಂದ ವಾಸವಿ ರಸ್ತೆ, ನ್ಯೂ ಬಜಾರ್ ರಸ್ತೆ ಪ್ರಮುಖ ಮಾರ್ಗಗಳಲ್ಲಿ ರಥಯಾತ್ರೆ ಸಂಚರಿಸಿತು.

ಸುಮಂಗಳೆಯರಿಂದ ಕಳಸಾರಾಧನೆ, ಡೊಳ್ಳು ಕುಣಿತ, ವಾದ್ಯದೊಂದಿಗೆ ತಾತಯ್ಯನವರ ಪಂಚಲೋಹ ಉತ್ಸವಮೂರ್ತಿ ರಥಯಾತ್ರೆ ಸಾಗಿತು. ನೂರಾರು ಜನರು ರಥಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ತುಂಬಾಡಿ ರಾಮಯ್ಯ, ಗುರುಪ್ರಸಾದ್‌ಗೆ ಪ್ರಶಸ್ತಿ ಪ್ರದಾನ

'ಧ್ವನಿ ಹತ್ತಿಕ್ಕಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅನೇಕ ಬಾರಿ ಪುಸ್ತಕಗಳ ಮೇಲೆ ನಿಷೇಧ ಹೇರಲಾಗಿದೆ. ಆದರೆ, ಸಾಹಿತ್ಯದ ಇತಿಹಾಸ ಹೇಳುವುದು ಏನೆಂದರೆ, ಯಾವ ಧ್ವನಿಯನ್ನೂ ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್‌ಪಿ ಕೆ. ಧರಣೀದೇವಿ ಮಾಲಗತ್ತಿ ಹೇಳಿದರು.

ನಗರದಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಶುಕ್ರವಾರ ಏರ್ಪಡಿಸಿದ್ದ ದ್ವಾರನಕುಂಟೆ ಪಾತಣ್ಣ 75ರ ಸಂಭ್ರಮ ಹಾಗೂ ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ಧ್ವನಿ ಹತ್ತಿಕ್ಕಲು ಪ್ರಯತ್ನಿಸಿದರೆ ಎರಡು, ಮೂರು ಪಟ್ಟು ಶಕ್ತಿಯುತವಾಗಿ ಹೊರಬರುತ್ತದೆ. ನಿಷೇಧಕ್ಕೆ ಒಳಗಾದ ಪುಸ್ತಕಗಳು ಪ್ರಚಾರ ಪಡೆದುಕೊಂಡಿರುವುದನ್ನು ನೋಡಿದ್ದೇವೆ. ಉದಾಹರಣೆಗೆ, ತಸ್ಲಿಮಾ ನಸ್ರೀನ್ ಅಥವಾ ಸಲ್ಮಾನ್ ರಶ್ದಿ ಪುಸ್ತಕಗಳು ಇರಬಹುದು. ಇವು ಹೆಚ್ಚು ಪ್ರಚಾರ ಪಡೆದುಕೊಂಡವು. ನಿರ್ಬಂಧ ಎನ್ನುವುದು ನಮ್ಮ ಕಲ್ಪನೆ ಮಾತ್ರ. ಬಂಡಾಯ ಮತ್ತು ದಲಿತ ಸಾಹಿತಿಗಳು ಏನು ಬರೆಯಬೇಕೋ ಅದನ್ನು ಬರೆದರು' ಎಂದು ತಿಳಿಸಿದರು.

'ಜನರ ಸಮಸ್ಯೆಗಳಿಗೆ ಮಿಡಿಯುವ ಮುಖ್ಯವಾದ ಗುಣ ಸಾಹಿತ್ಯಕ್ಕೆ ಇರಬೇಕು. ಆ ಸಾಹಿತ್ಯ ಮಾತ್ರ ಯಶಸ್ವಿಯಾಗುತ್ತದೆ. ತೀರ್ಪುಗಾರರು ಒಳ್ಳೆಯ ಕೃತಿಯನ್ನು ಆಯ್ಕೆ ಮಾಡಿದಾಗ ಅವು ಓದುಗರಿಗೆ ತಲುಪಲು ಸಾಧ್ಯ. ಜನರ ಮನಸ್ಸಿನ ಮೇಲೆ ಪರಿಣಾಮ ಬೀರುವ ಕೃತಿಗಳು ಅಗತ್ಯ' ಎಂದು ಅಭಿಪ್ರಾಯಪಟ್ಟರು.

'ಮೊಬೈಲ್ ಯುಗದಲ್ಲಿ ಓದುವ ಸಂಸ್ಕೃತಿ ಕಡಿಮೆಯಾಗಿದೆ ಎನ್ನುವ ಪರಿಸ್ಥಿತಿ ಇದೆ. ಪುಸ್ತಕಗಳನ್ನು ತಲುಪಿಸುವುದೇ ಸವಾಲಾಗಿದೆ. ಸಾಮಾಜಿಕ ಮಾಧ್ಯಮಗಳಿಗೆ ಇಲ್ಲದ ಅಭಿವ್ಯಕ್ತಿ ಸ್ವಾತಂತ್ರ್ಯ, ಲಿಖಿತ ಮಾಧ್ಯಮಗಳಿಗೆ ಹೇಗೆ ಬರುತ್ತದೆ? ಅನಿಸಿದ್ದನ್ನು ಬರೆಯುವುದಕ್ಕೆ ತೊಂದರೆ ಆಗುವುದಿಲ್ಲ. ಏನು ಬಂದರೂ ಎದುರಿಸುವ ಗುಣ, ಶಕ್ತಿ ಇರಬೇಕು' ಎಂದು ನುಡಿದರು.

ಸಾಹಿತಿಗಳಾದ ತುಂಬಾಡಿ ರಾಮಯ್ಯ ಮತ್ತು ಗುರುಪ್ರಸಾದ್ ಕಂಟಲಗೆರೆ ಅವರಿಗೆ 'ದ್ವಾರನಕುಂಟೆ ಪಾತಣ್ಣ ಕಾದಂಬರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಅಧ್ಯಕ್ಷ ಬಿ.ಎಂ.ಹನೀಫ್ ಅಧ್ಯಕ್ಷತೆ ವಹಿಸಿದ್ದರು. ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ತೀರ್ಪುಗಾರರಾದ ಎಸ್.ಆರ್. ವಿಜಯಶಂಕರ್, ಅನುಪಮಾ ಪ್ರಸಾದ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಗುರುಪ್ರಸಾದ್ ಕಂಟಲಗೆರೆ ಮತ್ತು ತುಂಬಾಡಿ ರಾಮಯ್ಯ ಅವರಿಗೆ ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ದ್ವಾರನಕುಂಟೆ ಪಾತಣ್ಣ, ಬಿ.ಎಂ. ಹನೀಫ್, ಎಸ್‌ಆರ್ ವಿಜಯಶಂಕರ್, ಅನುಪಮಾ ಪ್ರಸಾದ್, ಧರಣೀದೇವಿ ಮಾಲಗತ್ತಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಜಲಮಂಡಳಿಗೆ ₹103 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ 30 ಎಸ್‌ಟಿಪಿಗಳ ಗುಣಮಟ್ಟದ ಬಗ್ಗೆ ಕೇಂದ್ರ ಸರ್ಕಾರದ 'ಜಲ್ ಹಿ ಅಮೃತ್' ಯೋಜನೆ ಶ್ಲಾಘಿಸಿದೆ. 23 ಎಸ್‌ಟಿಪಿಗಳಿಗೆ ಕ್ಲೀನ್ ವಾಟರ್ ಕ್ರೆಡಿಟ್ ಅಡಿಯಲ್ಲಿ ಐದು ಸ್ಟಾರ್ ರೇಟಿಂಗ್ ನೀಡಿದ್ದು ಪ್ರೋತ್ಸಾಹಧನವಾಗಿ ₹103 ಕೋಟಿ ಮಂಜೂರು ಮಾಡಿದೆ.

ನಗರದಲ್ಲಿ 1,450 ಎಂಎಲ್‌ಡಿ ನೀರನ್ನು ಸಂಸ್ಕರಿಸಲಾಗುತ್ತದೆ. ಇದಕ್ಕಾಗಿ ನಗರದ ವಿವಿಧ ಭಾಗಗಳಲ್ಲಿ 34 ಎಸ್‌ಟಿಪಿಗಳನ್ನು ನಿರ್ಮಿಸಲಾಗಿದೆ. ಸಂಸ್ಕರಿಸಿದ ನೀರನ್ನು ಬಳಸಿಕೊಳ್ಳುವುದರಲ್ಲಿ ಏಷ್ಯಾದಲ್ಲೇ ನಗರ ಪ್ರಥಮ ಸ್ಥಾನದಲ್ಲಿದ್ದು, ನೀರನ್ನು ಕೆರೆಗಳಿಗೆ ಹಾಗೂ ಅಕ್ಕಪಕ್ಕದ ಜಿಲ್ಲೆಗಳ ಕೆರೆಗಳಿಗೆ ತುಂಬಿಸಲಾಗುತ್ತಿದೆ.

'ಜಲ್ ಹಿ ಅಮೃತ್' ಯೋಜನೆ ಅಡಿಯಲ್ಲಿ ದೇಶದ ನಗರಗಳಲ್ಲಿನ ಎಸ್‌ಟಿಪಿಗಳ ಗುಣಮಟ್ಟ ಪರಿಶೀಲನೆಗೆ ಅರ್ಜಿ ಸಲ್ಲಿಸಲು ಕೇಂದ್ರ ಸರ್ಕಾರ ಅವಕಾಶ ನೀಡಿತ್ತು. ಉತ್ತಮ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ರೀತಿಯಲ್ಲಿ ನೀರಿನ ಸಂಸ್ಕರಣೆಯನ್ನು ಮಾಡುವಂತಹ ಎಸ್‌ಟಿಪಿಗಳಿಗೆ ಪ್ರೋತ್ಸಾಹಧನ ನೀಡುವ ಯೋಜನೆ ಇದಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರನ್ನು ಉತ್ತಮ ಗುಣಮಟ್ಟದ ತಂತ್ರಜ್ಞಾನವನ್ನು ಬಳಸಿ ಸಂಸ್ಕರಿಸುವುದು ನಮ್ಮ ಆದ್ಯತೆ. ಇದನ್ನ ಪುರಸ್ಕರಿಸಿ ಕೇಂದ್ರ ಸರ್ಕಾರದ ವತಿಯಿಂದ ಪ್ರೋತ್ಸಾಹ ದೊರೆತಿದೆ' ಎಂದು ಶ್ಲಾಘಿಸಿದರು.

'ಬೆಂಗಳೂರು ಜಲಮಂಡಳಿ ಕೊಳಚೆ ನೀರನ್ನು ಸಂಸ್ಕರಿಸುವ ನಿಟ್ಟಿನಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಮಾನದಂಡಗಳನ್ನು ಅಳವಡಿಸಿಕೊಂಡಿದೆ. ಗುಣಮಟ್ಟಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕಳೆದ 8 ತಿಂಗಳಿನಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದೇವೆ. ಪ್ರೋತ್ಸಾಹ ಧನವನ್ನು ಈ ಎಸ್‌ಟಿಪಿಗಳನ್ನು ಇನ್ನಷ್ಟು ಆಧುನಿಕರಿಸಲು ಬಳಸಲಾಗುವುದು' ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಪ್ರತಿಕ್ರಿಯಿಸಿದ್ದಾರೆ.

ವಿಶ್ವ ಕಿಡ್ನಿ ದಿನಾಚರಣೆಯ ಅಂಗವಾಗಿ ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆಯಲ್ಲಿ 'ಕಿಡ್ನಿ ಆರೋಗ್ಯ ಎಲ್ಲರಿಗಾಗಿ' ಅಭಿಯಾನದ ಅಂಗವಾಗಿ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನಡೆದ ಡಯಾಲಿಸಿಸ್ ಕಾರ್ಯಕ್ರಮದಲ್ಲಿ ಮೂತ್ರಪಿಂಡ ದಾನಿಗಳನ್ನು ಸನ್ಮಾನಿಸಲಾಯಿತು

ಹನುಮಗಿರಿ: ಜಾತ್ರಾ ಮಹೋತ್ಸವ

ಕಬ್ಬಾಳಮ್ಮ ದೇವಿಯ ಜಾತ್ರಾಮಹೋತ್ಸವದ ಅಂಗವಾಗಿ ಹೋಮ ನಡೆಯಿತು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಅರೇಹಳ್ಳಿ ಬಳಿಯಲ್ಲಿರುವ ಹನುಮಗಿರಿಯ ತಪೋವನ ಕ್ಷೇತ್ರದಲ್ಲಿ ಕಬ್ಬಾಳಮ್ಮ ದೇವಿಯ ಉತ್ಸವ, ರಥೋತ್ಸವ, ಜಾತ್ರಾಮಹೋತ್ಸವ ಉಯ್ಯಾಲೋತ್ಸವ ಶುಕ್ರವಾರ ನಡೆಯಿತು.

ಕಬ್ಬಾಳಮ್ಮ ದೇವಿಗೆ ವಿಶೇಷ ಪೂಜೆ, ಪುರಸ್ಕಾರ, ಹೋಮ-ಹವನಗಳು ನಡೆದವು. ತಪೋವನ ಕ್ಷೇತ್ರದಲ್ಲಿರುವ ಲಕ್ಷ್ಮೀ ವೆಂಕಟೇಶ್ವರ, ಗಣೇಶ ಸ್ವಾಮಿಗೆ ವಿಶೇಷ ಪೂಜೆ ಪುರಸ್ಕಾರಗಳು ನಡೆದವು. ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ, ಕೋಸಂಬರಿ, ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

'ದೇವಸ್ಥಾನ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು, ಗ್ರಾಮೀಣ ಕಲೆ, ಸಂಸ್ಕೃತಿ ಇತಿಹಾಸವನ್ನು ಯುವ ಜನತೆಗೆ ತಿಳಿಸುವ ಉದ್ದೇಶದಿಂದ ಜಾತ್ರಾ-ಮಹೋತ್ಸವ ಆಯೋಜಿಸುತ್ತಿದ್ದಾರೆ' ಎಂದು ಸಮಿತಿಯ ಅಧ್ಯಕ್ಷ ವಿ.ಅಂಜನಪ್ಪ ತಿಳಿಸಿದರು.

ಶ್ರೀನಿವಾಸ ಸ್ವಾಮಿಯ ಬ್ರಹ್ಮರಥೋತ್ಸವ

ಅಗರ: ಶ್ರೀನಿವಾಸ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಅಗರ ಗ್ರಾಮದ ಶ್ರೀನಿವಾಸ ಸ್ವಾಮಿಯ ಏಳು ದಿನಗಳ ಉತ್ಸವಾದಿಗಳ ಕೊನೆಯ ದಿನವಾದ ಶುಕ್ರವಾರ ಬ್ರಹ್ಮ ರಥೋತ್ಸವ ನಡೆಯಿತು.

ಶ್ರೀನಿವಾಸ ಸ್ವಾಮಿಯ ದೇವಸ್ಥಾನದಲ್ಲಿ ಕಳೆದ ವಾರದಿಂದ ಶೇಷವಾಹನೋತ್ಸವ, ವಸಂತೋತ್ಸವ, ಕೀಲುಕುದುರೆ ಉತ್ಸವ, ತೆಪ್ಪೋತ್ಸವ ಹಾಗೂ ಗರುಡೋತ್ಸವ, ಶಯನೋತ್ಸವ ಮತ್ತು ಮಹಾಭಿಷೇಕ ನಡೆದವು. ಜತೆಗೆ ಹಂಸವಾಹನೋತ್ಸವ, ಪ್ರಹ್ಲಾದೋತ್ಸವ, ಕಲ್ಯಾಣೋತ್ಸವ ಮತ್ತು ಗಜೇಂದ್ರ ಪರಿಪಾಲನೆ ಹಾಗೂ ಗಜವಾಹನೋತ್ಸವಗಳು ನಡೆದವು.

ಶ್ರೀನಿವಾಸ ಸ್ವಾಮಿಯ ಬೆಳ್ಳಿಯ ಮೂರ್ತಿಗೆ ಹೂವಿನ ಅಲಂಕಾರ ಮಾಡಲಾಗಿತ್ತು. ಪ್ರಧಾನ ಅರ್ಚಕ ಎ.ಚಂದ್ರಮೌಳಿ ಅವರ ಮುಂದಾಳತ್ವದಲ್ಲಿ ಪೂಜಾ ವಿಧಿವಿಧಾನಗಳು ಜರುಗಿದವು.

ಶ್ರೀನಿವಾಸ ಸ್ವಾಮಿಯ ರಥೋತ್ಸವವು ಬೆಳಿಗ್ಗೆ ಆರಂಭಗೊಂಡು, ಅಗರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಅಲ್ಲಲ್ಲಿ ನೀರಿನ ಅರವಟಿಕೆ, ಮಜ್ಜಿಗೆ, ಪಾನಕ ವಿತರಿಸಲಾಯಿತು. ಅಗರದ ಬಸವಣ್ಣ ವ್ಯಾಯಾಮ ಶಾಲೆ ವತಿಯಿಂದ ನಡೆದ ಕುಸ್ತಿ ಪ್ರದರ್ಶನವು ಜನರ ಗಮನ ಸೆಳೆಯಿತು. ರಾತ್ರಿ ವಾದ್ಯಗೋಷ್ಠಿ, ಭಜನೆ, ಭಕ್ತಿಗೀತೆಗಳ ಗಾಯನವೂ ನಡೆಯಿತು.

ಧರ್ಮದ ನಡೆಯಿಂದ ಸರ್ವ ಶುದ್ಧಿ: ರಂಭಾಪುರಿ ಶ್ರೀ

ಸುರಗಿ ಸಮಾರಾಧನೆಯೊಂದಿಗೆ ರೇಣುಕಾಚಾರ್ಯ ಜಯಂತಿ ಸಮಾರೋಪ

ಪ್ರಜಾವಾಣಿ ವಾರ್ತೆ

ರಂಭಾಪುರಿ ಪೀಠ (ಬಾಳೆಹೊನ್ನೂರು): ಅಧರ್ಮ ತಾತ್ಕಾಲಿಕವಾಗಿ ಮೇಲೇರಿದರೂ ಅಂತಿಮವಾಗಿ ಬುಡ ಸಹಿತ ಸರ್ವನಾಶವಾಗುತ್ತದೆ. ದೇಹ ಶುದ್ಧಿ, ನುಡಿ ಶುದ್ಧಿ ಮತ್ತು ಮನಃಶುದ್ಧಿ ಇವುಗಳನ್ನು ಸಾಧಿಸಲು ನೆರವಾಗುವುದೇ ನಿಜವಾದ ಧರ್ಮ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

ರಂಭಾಪುರಿ ಪೀಠದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಕೊನೆಯ ದಿನವಾದ ಶುಕ್ರವಾರ ವಸಂತೋತ್ಸವ ಹಾಗೂ ಭದ್ರಾ ನದಿ ತೀರದಲ್ಲಿ ಸುರಗಿ ಸಮಾರಾಧನೆ ಪೂಜೆ ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ಪ್ರಾರ್ಥನೆ ಮತ್ತು ನಂಬಿಕೆ ಎರಡೂ ಕಣ್ಣಿಗೆ ಕಾಣದಿರಬಹುದು. ಆದರೆ ಅಸಾಧ್ಯವಾದುದನ್ನು ಸಾಧಿಸುವ ಶಕ್ತಿ ಇವೆರಡಕ್ಕೂ ಇದೆ. ಆಡಿದ ಮಾತು, ಬಿಟ್ಟ ಬಾಣ, ಕಳೆದುಕೊಂಡ ಸಮಯ, ನಂಬಿಕೆ ಎಂದಿಗೂ ಮರಳಿ ಬರುವುದಿಲ್ಲ. ಕೈತುಂಬ ಕೆಲಸ, ಕಣ್ತುಂಬ ನಿದ್ರೆ, ಮನಸ್ಸಿನ ತುಂಬ ನೆಮ್ಮದಿ, ಹೃದಯದ ತುಂಬ ಪ್ರೀತಿ ಮತ್ತು ಆರೋಗ್ಯ ಭಾಗ್ಯ ಇರುವಂತಹ ಜನರು ಜಗತ್ತಿನಲ್ಲಿ ನಿಜವಾದ ಶ್ರೀಮಂತರು. ಒಳ್ಳೆಯ ಮನಸ್ಸು ಇದ್ದರೆ ಒಳ್ಳೆ ದಿನ ಖಂಡಿತ ಬಂದೇ ಬರುತ್ತದೆ. ಕಾಯುವ ತಾಳ್ಮೆ ಬೇಕು ಎಂದರು.

ಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಸಾವಿಲ್ಲದೆಡೆಗೆ ಮುನ್ನಡೆಯುವ ಗುರಿ ಮನುಷ್ಯನದಾಗಬೇಕು. ಮೌಲ್ಯಾಧಾರಿತ ಜೀವನ ಬದುಕಿಗೆ ಬೆಲೆ ತರುತ್ತದೆ. ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಮನುಷ್ಯನಿಗೆ ಮುಖ್ಯವಾಗಿವೆ ಎಂದರು.

ಭದ್ರಾ ನದಿತೀರದಲ್ಲಿ ಶಿವಲಿಂಗ ಪೂಜೆ, ಇಷ್ಟಲಿಂಗ ಪೂಜೆ, ಹೋಮ, ಹವನಗಳು ನಡೆದವು. ಸಾವಿರಾರು ಜನ ಅನ್ನ ಪ್ರಸಾದ ಸೇವಿಸಿದರು.

ಎಡೆಯೂರು ರೇಣುಕ ಶಿವಾಚಾರ್ಯ, ಮುಕ್ತಿಮಂದಿರ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ, ಸುಳ್ಳ ಶಿವಸಿದ್ಧರಾಮೇಶ್ವರ ಶಿವಾಚಾರ್ಯ, ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ, ಮಳಲಿಮಠದ ನಾಗಭೂಷಣ ಶಿವಾಚಾರ್ಯ, ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯ, ಎಮ್ಮಿಗನೂರು ಮಹಂತ ಶಿವಾಚಾರ್ಯ, ಬಿಳಕಿ ರಾಚೋಟೇಶ್ವರ ಶಿವಾಚಾರ್ಯ, ರಾಯಚೂರು ಶಾಂತಮಲ್ಲ ಶಿವಾಚಾರ್ಯ, ಅಮ್ಮಿನಭಾವಿ ಅಭಿನವ ಶಾಂತಲಿಂಗ ಶಿವಾಚಾರ್ಯ, ನೆಗಳೂರು ಗುರುಶಾಂತೇಶ್ವರ ಶಿವಾಚಾರ್ಯ, ಹಂಪಸಾಗರ ನವಲಿ ಹಿರೇಮಠದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ, ಹರಿಹರದ ಕೊಂಡಜ್ಜಿ ಪಂಚಾಕ್ಷರಿ ಭಾಗವಹಿಸಿದ್ದರು.



ಬಾಳೆಹೊನ್ನೂರಿನ ರಂಭಾಪುರಿ ಪೀಠದಲ್ಲಿ ನಡೆದ ಉತ್ಸವದ ಅಂಗವಾಗಿ ಭದ್ರಾ ನದಿತೀರದಲ್ಲಿ ನೆರವೇರಿದ ಸುರಗಿ ಸಮಾರಾಧನೆ ಸಂದರ್ಭದಲ್ಲಿ ಭದ್ರಾ ನದಿಯಲ್ಲಿರುವ ಶಿವಲಿಂಗಕ್ಕೆ ರಂಭಾಪುರಿ ಸ್ವಾಮೀಜಿ ಪೂಜೆ ಸಲ್ಲಿಸಿದರು

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಬಣ್ಣನೆ

'ವಚನಕಾರ್ತಿಯರು ಕನ್ನಡದ ಅಸ್ಮಿತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಸೆ–ಆಮಿಷವನ್ನು ಧಿಕ್ಕರಿಸುವ ಜತೆಗೆ ಸತ್ಯ ಶುದ್ಧ ಕಾಯಕವನ್ನು ಕೈಗೊಂಡು, ಭಾವಪೂರ್ಣ ದಾಸೋಹ ಮಾಡುತ್ತ ಚೆಂದದ ಬದುಕನ್ನು ನಡೆಸಿದ ವಚನಕಾರ್ತಿಯರು ಕನ್ನಡದ ಅಸ್ಮಿತೆಯಾಗಿದ್ದಾರೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ಬಳಗವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಚನಕಾರ್ತಿಯರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಚನಗಳು ಕನ್ನಡದ ಸ್ವಯಾರ್ಜಿತ ಸಂಪತ್ತಾಗಿದೆ. ಈ ಅಪೂರ್ವ ಸಾಂಸ್ಕೃತಿಕ ಸಿರಿಯನ್ನು ಮಕ್ಕಳಿಗೆ ಪರಿಚಯಿಸಬೇಕಾದ ಅಗತ್ಯವಿದ್ದು, ಬಳಗವು 27 ವರ್ಷಗಳಿಂದ ಮಕ್ಕಳಿಗೆ-ಯುವಜನರಿಗೆ ವಚನ ಚಳವಳಿಯನ್ನು ಪರಿಚಯ ಮಾಡಿಕೊಡುತ್ತಿದೆ' ಎಂದರು.

ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಮುಕ್ತಾಂಬ ಬಸವರಾಜು ಅವರನ್ನು ಇದೇ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಬಳಿಕ ಮಾತನಾಡಿದ ಅವರು, 'ಹೆಣ್ಣಿನ ಅಗತ್ಯತೆ ಮತ್ತು ಸಮರ್ಪಣೆಯನ್ನು ಗುರುತಿಸಿದ ಮೊಟ್ಟ ಮೊದಲ ಗುರು ಬಸವಣ್ಣನವರಾಗಿದ್ದಾರೆ. ಹೆಣ್ಣಿಗೆ ಸಮಾನತೆಯನ್ನು ನೀಡಿದ ಮಹಾತ್ಮರು ಅವರು' ಎಂದು ಬಣ್ಣಿಸಿದರು.

ಮುಕ್ತಾಯಕ್ಕ ಬಳಗ, ಸ್ನೇಹ ವಿಜಯನಗರ, ವಚನ ಕಲಿಕಾ ತರಗತಿ, ಕಲ್ಯಾಣ ಬಡಾವಣೆ ಹಾಗೂ ವೀರಮಾತಾ ಯೋಗಕೇಂದ್ರದ ಸದಸ್ಯರು ವಚನಕಾರ್ತಿಯರ ವೇಷಭೂಷಣ ಧರಿಸಿ, ವಚನಗಳನ್ನು ಹಾಡುವ ಮೂಲಕ ವಚನಕಾರ್ತಿಯರ ಪರಿಚಯ ಮಾಡಿಕೊಟ್ಟರು.

ಸ್ನೇಹ ವಿಜಯನಗರದ ಧರ್ಮದರ್ಶಿ ಶಾಂತ ಕೊಟ್ರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಜಯನಗರ ವಿಕ್ಟರಿ ಲಯನ್ಸ್ ಕ್ಲಬ್ ಖಜಾಂಚಿ ರೂಪಾ ಜಗದೀಶ್, ವಚನಜ್ಯೋತಿ ಬಳಗದ ಪ್ರಭು ಇಸುವನಹಳ್ಳಿ, ರುದ್ರಪ್ಪ ದೇಸಾಯಿ, ರಾಜಾ ಗುರುಪ್ರಸಾದ್, ಟಿ.ಎಂ. ಜಾನಕಿ, ರತ್ನಾ ದೇಸಾಯಿ, ವಿದ್ಯಾವತಿ, ಮಧು, ನಂಜಪ್ಪ, ರುದ್ರೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಕ್ತಾಂಬ ಬಸವರಾಜು ಅವರನ್ನು ಅಭಿನಂದಿಸಲಾಯಿತು. ಪಿನಾಕಪಾಣಿ, ರೇಖಾ ಪ್ರಕಾಶ್, ಶಾಂತ ಕೊಟ್ರೇಶ್, ವಿದ್ಯಾವತಿ, ಮಧು ಉಪಸ್ಥಿತರಿದ್ದರು

ಮಹಾರಾಷ್ಟ್ರದಲ್ಲಿ ಬಸ್‌ಗಳ ಮೇಲೆ ದಾಳಿ ಮಾಡಿದ ಕಿಡಿಗೇಡಿಗಳು

ಬಾಟಲಿ, ಕಲ್ಲು ತೂರಾಟ: ಏಳು ಬಸ್‌ಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗಡಿಗೆಹೊಂದಿಕೊಂಡ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಇಚಲಕರಂಜಿಯಲ್ಲಿ ಶುಕ್ರವಾರ ಕಿಡಿಗೇಡಿಗಳು ಏಳು ಬಸ್‌ಗಳ ಮೇಲೆ ಬಾಟಲಿ ಹಾಗೂ ಕಲ್ಲು ತೂರಾಟ ನಡೆಸಿದ್ದಾರೆ. ಇದರಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರದ ಬಸ್‌ಗಳೂ ಸೇರಿವೆ. ಯಾವುದೇ ಪ್ರಯಾಣಿಕರಿಗೆ ಪೆಟ್ಟು ಬಿದ್ದಿಲ್ಲ.

ಚಿಕ್ಕೋಡಿ ಮಾರ್ಗವಾಗಿ ಸೊಲ್ಲಾಪುರ ಜಿಲ್ಲೆಯ ಇಚಲಕರಂಜಿಗೆ ಬಸ್‌ಗಳು ಹೊರಟಿದ್ದವು. ಇಚಲಕರಂಜಿಯಲ್ಲಿ ಯುವಕರ ದಂಡು ಹೋಳಿಹಬ್ಬದ ಆಚರಣೆಯಲ್ಲಿ ತೊಡಗಿತ್ತು. ಕರ್ನಾಟಕದ ಎರಡು ಬಸ್‌ಗಳನ್ನು ನೋಡುತ್ತಿದ್ದಂತೆಯೇ ಗುಂಪುಗೂಡಿದ 20ಕ್ಕೂ ಹೆಚ್ಚು ಕಿಡಿಗೇಡಿಗಳು ಬಾಟಲಿಗಳನ್ನು ತೂರಿದರು. ಬಾಟಲಿಗಳಲ್ಲಿ ಸುಟ್ಟ ಮಸಿ, ಬಣ್ಣ ಕಲಸಿದ ನೀರು ಹಾಗೂ ಬೂದಿ ತುಂಬಿ ಬಸ್ಸಿನ ಕಿಟಕಿಗಳಿಗೆ, ಮುಂಭಾಗ–ಹಿಂಭಾಗದ ಗಾಜುಗಳಿಗೂ ಎಸೆದರು. ಗಾಜುಗಳು ಪುಡಿಪುಡಿಯಾದವು.

ಏಕಾಏಕಿ ನಡೆದ ಈ ಘಟನೆಯಿಂದ ಪ್ರಯಾಣಿಕರು ತಬ್ಬಿಬ್ಬಾದರು. ಬಸ್‌ಗಳಿಂದ ಇಳಿದು ದಿಕ್ಕಾಪಾಲಾಗಿ ಓಡಿದರು. ಒಂದು ತಾಸಿನ ಅಂತರದಲ್ಲಿ ಏಳೂ ಬಸ್‌ಗಳ ಮೇಲೆ ಬಾಟಲಿ ಹಾಗೂ ಕಲ್ಲು ತೂರಾಟ ನಡೆದಿದೆ ಎಂದು ಪ್ರಯಾಣಿಕರೊಬ್ಬರು ಮಾಹಿತಿ ನೀಡಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, 'ಇದು ಕನ್ನಡ ಮತ್ತು ಮರಾಠಿ ದ್ವೇಷದಿಂದ ನಡೆದ ಘಟನೆ ಅಲ್ಲ. ಹೋಳಿ ಹುಣ್ಣಿಮೆ ಆಚರಣೆ ವೇಳೆ ಕಿಡಿಗೇಡಿಗಳು ಮಾಡಿದ ಕೃತ್ಯ. ಘಟನೆಯಲ್ಲಿ ಮಹಾರಾಷ್ಟ್ರದ ಬಸ್‌ಗಳೂ ಸೇರಿವೆ. ಯಾರೂ ಇದನ್ನು ಭಾಷಾ ವೈಷಮ್ಯ ಎಂದು ತಿಳಿಯಬಾರದು. ಸ್ಥಳದಿಂದಲೇ 20ಕ್ಕೂ ಹೆಚ್ಚು ಕಿಡಿಗೇಡಿಗಳನ್ನು ಬಂಧಿಸಿದ್ದಾರೆ' ಎಂದರು.

ಕಲ್ಲುತೂರಾಟದಿಂದ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆಯ ರಾಯಬಾಗ ಡಿಪೊದ ಬಸ್‌ನ ಗಾಜು ಪುಡಿಪುಡಿಯಾಯಿತು

ಸೌತ್ ಇಂಡಿಯನ್ ಬ್ಯಾಂಕ್‌ನ ನಿರ್ದೇಶಕಿ ಲಕ್ಷ್ಮಿ ರಾಮಕೃಷ್ಣ ಶ್ರೀನಿವಾಸ್ ಅವರು, 'ವುಮೆನ್ ಲೈಕ್ ಯು' ಪುಸ್ತಕವನ್ನು ಬಿಡುಗಡೆಗೊಳಿಸಿದರು

ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ಸೌತ್ ಇಂಡಿಯನ್ ಬ್ಯಾಂಕ್‌ನಿಂದ ಅಂತರ ರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಇದೇ ವೇಳೆ ಬ್ಯಾಂಕ್‌ನ ನಿರ್ದೇಶಕಿ ಲಕ್ಷ್ಮಿ ರಾಮಕೃಷ್ಣ ಶ್ರೀನಿವಾಸ್, 'ವುಮೆನ್ ಲೈಕ್ ಯು' ಪುಸ್ತಕವನ್ನು ಬಿಡುಗಡೆಗೊಳಿಸಿದರು.

ಈ ಪುಸ್ತಕದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ 52 ಮಹಿಳೆಯರ ಸ್ಫೂರ್ತಿದಾಯಕ ಪಯಣದ ವಿವರಗಳಿವೆ. ಮಹಿಳೆಯರಿಗೆ ಅವರ ಕಥೆಗಳು ಪ್ರೇರಣೆ ನೀಡಲಿವೆ ಎಂದು ಬ್ಯಾಂಕ್ ತಿಳಿಸಿದೆ.

ಪ್ಯಾರಾಲಿಂಪಿಕ್ಸ್ ಅಥ್ಲೀಟ್ ಮಾಲತಿ ಹೊಳ್ಳ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಸಾಧನೆಯ ಬಗ್ಗೆ ಅವರು ಅನುಭವ ಹಂಚಿಕೊಂಡರು. ನಿರೂಪಕಿ ಮಧು ಮೈಲಂಕೋಡಿ ಚರ್ಚೆಯ ಉಸ್ತುವಾರಿ ನಿರ್ವಹಿಸಿದರು.

ತತ್ವಮಸಿ ಸ್ಥಾಪಕಿ ಶ್ರೀದೇವಿ ರಾಘವನ್, ಟಾಟಾ ಸೋಲ್‌ಫುಲ್ ಸಹ ಸಂಸ್ಥಾಪಕಿ ರಸಿಕಾ ಅಯ್ಯರ್, ಪೀಕ್ ಆಲ್ಫಾ ಇನ್ವೆಸ್ಟ್‌ಮೆಂಟ್ಸ್ ಸಹ ಸಂಸ್ಥಾಪಕಿ ಪ್ರಿಯಾ ಸುಂದರ್, ಡೆಂಟ್ಸು ಇಂಡಿಯಾದ ಮುಖ್ಯ ಅಧಿಕಾರಿ ಸಿಮಿ ಸಭಾನೆ ಪಾಲ್ಗೊಂಡಿದ್ದರು. ಸ್ಯಾಕ್ಸೋಫೋನ್ ವಾದಕಿ ಸುಬ್ಬಲಕ್ಷ್ಮಿ ನಡೆಸಿಕೊಟ್ಟ ಸಂಗೀತ ಗಾಯನ ಮನಸೆಳೆಯಿತು.

ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ರಾಜ್ಯ ಸಮಿತಿ ಪ್ರತಿಭಟನೆ

ಪ್ರತಿಮೆ ಲೋಕಾರ್ಪಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಯಲಹಂಕ: ತಾಲ್ಲೂಕು ಕಚೇರಿಯ ಮುಂಭಾಗದಲ್ಲಿ ಸ್ಥಾಪಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯನ್ನು ಕೂಡಲೇ ಲೋಕಾರ್ಪಣೆ ಮಾಡಬೇಕೆಂದು ಒತ್ತಾಯಿಸಿ, ಪ್ರಜಾ ವಿಮೋಚನಾ ಚಳವಳಿ (ಸ್ವಾಭಿಮಾನ) ರಾಜ್ಯಸಮಿತಿ ಸದಸ್ಯರು ಪ್ರತಿಮೆಯ ಎದುರು ಪ್ರತಿಭಟನೆ ನಡೆಸಿದರು.

ಸಮಿತಿಯ ರಾಜ್ಯಘಟಕದ ಅಧ್ಯಕ್ಷ ಮುನಿಆಂಜನಪ್ಪ ಮಾತನಾಡಿ, 'ಮಿನಿ ವಿಧಾನಸೌಧದ ಮುಂಭಾಗದಲ್ಲಿ ಅಂಬೇಡ್ಕರ್‌ರವರ ಕಂಚಿನ ಪ್ರತಿಮೆ ಸ್ಥಾಪಿಸಬೇಕೆಂದು ಒತ್ತಾಯಿಸಿ, ವಿವಿಧ ದಲಿತಪರ ಸಂಘಟನೆಗಳು ನಡೆಸಿದ ಹೋರಾಟದ ಫಲವಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ₹1.6 ಕೋಟಿ ಅನುದಾನ ಬಿಡುಗಡೆ ಮಾಡಲಾಯಿತು. ಅದರಂತೆ ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 14 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಿ, ಎರಡು ವರ್ಷಗಳು ಕಳೆದಿದ್ದರೂ ಇದುವರೆಗೂ ಅನಾವರಣಗೊಳಿಸದೆ ನಿರ್ಲಕ್ಷ್ಯ ವಹಿಸಲಾಗಿದೆ. ಇದಕ್ಕೆ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತವೇ ನೇರ ಹೊಣೆ' ಎಂದು ದೂರಿದರು. 'ಎರಡು ವರ್ಷಗಳಿಂದ ಪ್ರತಿಮೆಯನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಲಾಗಿದ್ದು, ಆ ಮೂಲಕ ಅಂಬೇಡ್ಕರ್ ಅವರಿಗೆ ಅವಮಾನ ಮಾಡಲಾಗುತ್ತಿದೆ. ಅನಾವರಣಕ್ಕೆ ಇನ್ನಷ್ಟು ವಿಳಂಬ ಧೋರಣೆ ಅನುಸರಿಸಿದರೆ ದಲಿತಪರ, ಪ್ರಗತಿಪರ ಸಂಘಟನೆಗಳು ಒಗ್ಗೂಡಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು' ಎಂದರು.

ದ.ಸಂ.ಸ ಭೀಮಶಕ್ತಿ ರಾಜ್ಯಘಟದ ಅಧ್ಯಕ್ಷ ಹೆಬ್ಬಾಳ ವೆಂಕಟೇಶ್ ಮಾತನಾಡಿ, 'ಪ್ರತಿಮೆ ಅನಾವರಣಗೊಳಿಸಲು ಸರ್ಕಾರಕ್ಕೆ ಏಪ್ರಿಲ್ 14ರವರೆಗೆ ಗಡುವು ನೀಡಲಾಗಿದ' ಎಂದರು.

ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್.ಟಿ ಹಾಗೂ ತಹಶೀಲ್ದಾರ್(ಗ್ರೇಡ್-2) ವಿ.ಸುಬ್ರಮಣಿ ಅವರಿಗೆ ಪ್ರತಿಭಟನಕಾರರು ಮನವಿಪತ್ರ ಸಲ್ಲಿಸಿದರು. ಪ್ರಜಾವಿಮೋಚನಾ ಚಳವಳಿಯ ಅಯೂಬ್‌ಖಾನ್, ವಸೀಂ ಬೇಗ್, ಕಾಂತರಾಜು, ಥಣಿಸಂದ್ರ ಚಂದ್ರು, ಎಂ.ಅಭಿಲಾಷ್ ಕುಮಾರ್, ಲಘುಮಯ್ಯ, ಕಾರ್ತಿಕ್, ಮುನಿಲಕ್ಷ್ಮಮ್ಮ ನೀಲಮ್ಮ ಉಪಸ್ಥಿತರಿದ್ದರು.

ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯನ್ನು ಕೂಡಲೇ ಲೋಕಾರ್ಪಣೆ ಮಾಡಬೇಕೆಂದು ಒತ್ತಾಯಿಸಿ, ಪ್ರಜಾವಿಮೋಚನಾ ಚಳವಳಿ(ಸ್ವಾಭಿಮಾನ) ರಾಜ್ಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ರಂಗಸೌರಭ–2025 ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಆಚಾರ್ಯ ವಿದ್ಯಾಸಂಸ್ಥೆ ಪ್ರದರ್ಶನ

ಆಚಾರ್ಯ ವಿದ್ಯಾಸಂಸ್ಥೆ ಚಾಂಪಿಯನ್

ಬೆಂಗಳೂರು: ರಂಗಸೌರಭ–2025 ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಆಚಾರ್ಯ ವಿದ್ಯಾಸಂಸ್ಥೆ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಡಾ. ರಾಜಕುಮಾರ್ ರೋಲಿಂಗ್ ಟ್ರೋಫಿ ಪಡೆದಿದೆ. ಸತತ ಎರಡನೇ ವರ್ಷದ ಪ್ರಶಸ್ತಿ ಇದಾಗಿದೆ.

ರಂಗಗೀತೆ ವೃಂದಗಾಯನದಲ್ಲಿ ಪ್ರಥಮ, ನೃತ್ಯ ವಿಭಾಗದಲ್ಲಿ ಚಾಂಪಿಯನ್, ಚರ್ಚಾ ಸ್ಪರ್ಧೆಯಲ್ಲಿ ಆಶ್ರಿತಾ ದ್ವಿತೀಯ, ಜನಪದ ನೃತ್ಯದಲ್ಲಿ ಆದಿತ್ಯ ದ್ವಿತೀಯ, ಶಾಸ್ತ್ರೀಯ ನೃತ್ಯದಲ್ಲಿ ಅನನ್ಯ ಸಂತೋಷ್ ತೃತೀಯ, ಏಕವ್ಯಕ್ತಿ ಅಭಿನಯದಲ್ಲಿ ಪುಣ್ಯ ಭೈರವೀ ತೃತೀಯ ಸ್ಥಾನ, ಅತ್ಯುತ್ತಮ ಅಭಿನಯ– ಸುಧಾನು, ಶ್ರೇಷ್ಠ ನಾಟಕ ತಂಡ, ಶ್ರೇಷ್ಠ ಮೇಕಪ್ ತಂಡ ಪ್ರಶಸ್ತಿಗಳನ್ನು ಪಡೆದಿದೆ ಎಂದು 'ಆಚಾರ್ಯ' ಪ್ರಕಟಣೆ ತಿಳಿಸಿದೆ.

ಕೋದಂಡರಾಮ ಸ್ವಾಮಿ ಜಾತ್ರೆ

ಕೆ.ಆರ್.ಪುರ: ಕಾಡುಗೋಡಿಯ ಕೋದಂಡರಾಮ ಸ್ವಾಮಿಯ ಜಾತ್ರಾ ಮಹೋತ್ಸವವು ಶುಕ್ರವಾರ ನೆರವೇರಿತು.

ದೇವರಿಗೆ ವಿಶೇಷ ಪೂಜೆ, ಹೂವಿನ ಅಲಂಕಾರ ಮಾಡಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಜಾತ್ರೆಯಲ್ಲಿ ಡೊಳ್ಳು ಕುಣಿತ, ಗಾರುಡಿಗೊಂಬೆ, ಕೇರಳ ವಾದ್ಯ ಸೇರಿದಂತೆ ಕಲಾ ತಂಡಗಳ ನೃತ್ಯವು ನೆರೆದಿದ್ದವರ ಮನಸೂರೆಗೊಂಡಿತು.

ದಿನ್ನೂರು, ಮಂಗಲ, ಬೆಳತ್ತೂರು, ಕನ್ನ ಸೀಗೆಹಳ್ಳಿ, ಚನ್ನಸಂದ್ರ ಸೇರಿದಂತೆ ಕಾಡುಗೋಡಿ ಸುತ್ತಮುತ್ತಲಿನ ಊರಿನ ಜನ ಸಮೂಹ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ದೇವಲಯ ಆವರಣದಲ್ಲಿ ಅನ್ನದಾಸೋಹ ಏರ್ಪಡಿಸಲಾಗಿತ್ತು. ಕಲ್ಲಂಗಡಿ ಹಣ್ಣು, ಕೊಸಂಬರಿ, ಮಜ್ಜಿಗೆ, ಪಾನಕ ವಿತರಿಸಲಾಯಿತು.

ಕಾಡುಗೋಡಿಯಲ್ಲಿ ಕೋದಂಡರಾಮ ಸ್ವಾಮಿಯ ರಥೋತ್ಸವ ನಡೆಯಿತು



ರಾಸಾಯನಿಕ ಬಣ್ಣದಿಂದ ಅಸ್ವಸ್ಥಗೊಂಡ, ಲಕ್ಷ್ಮೇಶ್ವರ ತಾಲ್ಲೂಕು ಸುವರ್ಣಗಿರಿ ತಾಂಡಾದ ಬಾಲಕಿಗೆ ಲಕ್ಷ್ಮೇಶ್ವರ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಯಿತು

ಬಣ್ಣ ಎರಚಿದ ಯುವಕರು ವಿದ್ಯಾರ್ಥಿನಿಯರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಹೋಳಿ ಹಬ್ಬದ ಪ್ರಯುಕ್ತ ತಾಲ್ಲೂಕಿನ ಸುವರ್ಣಗಿರಿ ತಾಂಡಾದಲ್ಲಿ ಶುಕ್ರವಾರ ಯುವಕರ ಗುಂಪೊಂದು ರಾಸಾಯನಿಕ ಬಣ್ಣ ಎರಚಿದ ಪರಿಣಾಮ ನಾಲ್ವರು ಬಾಲಕಿಯರು ಅಸ್ವಸ್ಥಗೊಂಡಿದ್ದಾರೆ.

ಲಕ್ಷ್ಮೇಶ್ವರದ ಪುರಸಭೆ ಉಮಾ ವಿದ್ಯಾಲಯ ಪ್ರೌಢಶಾಲೆಗೆ ಹೋಗಲು ಹತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಬಸ್‌ಗಾಗಿ ಕಾಯುತ್ತಿದ್ದರು. ಆಗ ಬಣ್ಣ ಎರಚಲು ಬಂದ ಯುವಕರಿಗೆ, 'ಪರೀಕ್ಷೆ ಇದೆ. ಬಣ್ಣ ಹಾಕಬೇಡಿ' ಎಂದು ವಿದ್ಯಾರ್ಥಿನಿಯರು ಕೋರಿದರು. ಆದರೂ ಯುವಕರು ವಿದ್ಯಾರ್ಥಿನಿಯರ ಮೇಲೆ ಸಗಣಿ, ಮಣ್ಣು, ಮೊಟ್ಟೆ, ಗೊಬ್ಬರ ಇನ್ನೂ ಕೆಲ ರಾಸಾಯನಿಕ ಬಣ್ಣ ಎರಚಿದರು.

ಶಾಲೆ ಬಳಿ ಬರುತ್ತಿದ್ದಂತೆಯೇ ವಿದ್ಯಾರ್ಥಿನಿಯರಾದ ಅಂಕಿತಾ ಲಮಾಣಿ, ತನುಜಾ ಲಮಾಣಿ, ಗೌರಿ ಪೂಜಾರ ಮತ್ತು ದಿವ್ಯಾ ಲಮಾಣಿ ವಾಂತಿ ಮಾಡಿಕೊಂಡು, ಅಸ್ವಸ್ಥಗೊಂಡರು. ಅವರಿಗೆ ಲಕ್ಷ್ಮೇಶ್ವರ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಯಿತು.

'ನಾಲ್ವರು ವಿದ್ಯಾರ್ಥಿನಿಯರಲ್ಲಿ ತೀವ್ರ ಎದೆನೋವು ಮತ್ತು ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಜಿಮ್ಸ್‌ಗೆ ಕಳಿಸಲಾಯಿತು' ಎಂದು ಪುರಸಭೆ ಉಮಾ ವಿದ್ಯಾಲಯದ ಮುಖ್ಯ ಶಿಕ್ಷಕ ಎಸ್.ಎಚ್. ಪೂಜಾರ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಆದೇಶ

ಪೋಕ್ಸೊ: ಬಿಎಸ್‌ವೈ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಾಯ್ದೆ ಅಡಿಯ ದೂರಿಗೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ದೂರನ್ನು, 'ತನಿಖೆಗೆ ಪರಿಗಣಿಸಬಹುದಾದ ಅಪರಾಧ' ಎಂದು ನಿರ್ಧರಿಸಿ, ಬೆಂಗಳೂರಿನ ವಿಶೇಷ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ಪ್ರಶ್ನಿಸಿ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಶುಕ್ರವಾರ ವಿಚಾರಣೆ ನಡೆಸಿದರು.

ಮುಂದಿನ ಮುದ್ದತಿನವರೆಗೆ ವಿಚಾರಣಾ ನ್ಯಾಯಾಲಯದ ಮುಂದೆ ಖುದ್ದು ಹಾಜರಾಗಲು ಯಡಿಯೂರಪ್ಪ ಸೇರಿ ಎಲ್ಲಾ ಅರ್ಜಿದಾರರಿಗೂ ವಿನಾಯಿತಿ ನೀಡಿ ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಮತ್ತು ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಯಡಿಯೂರಪ್ಪ ಮತ್ತು ಇತರರ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಬಾಕಿ ಇರುವ ಪೋಕ್ಸೊ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ-1860ರ ಕಲಂ 354ಎ, 204, 214 ಜೊತೆಗೆ 37ರ ಅಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ತಡೆ ವಿಧಿಸಿ ಆದೇಶಿಸಿತು.

1 ಗುಂಟೆ ಒತ್ತುವರಿ: 1 ವರ್ಷ ಜೈಲು

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕು ಸೂಸಗಡಿ ಹೋಬಳಿಯ ವೆಂಕಟಾಪುರದ ಸರ್ವೆ ನಂ.102ರಲ್ಲಿ ಸರ್ಕಾರಕ್ಕೆ ಸೇರಿದ 1 ಗುಂಟೆ ಜಮೀನನ್ನು ಒತ್ತುವರಿ ಮಾಡಿ ವಾಸದ ಮನೆ ನಿರ್ಮಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಉಲ್ಲಾಸ ಶಿರವಾಡ ನಾಯ್ಕ ಅವರಿಗೆ 'ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ' ಒಂದು ವರ್ಷ ಸಾಧಾರಣ ಜೈಲು ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ಭಟ್ಕಳ ತಾಲ್ಲೂಕು ತಹಶೀಲ್ದಾರ್ ನೀಡಿದ್ದ ದೂರನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಡಿ.ವಿ.ಪಾಟೀಲ್ ಮತ್ತು ಕಂದಾಯ ಸದಸ್ಯ ಎಸ್.ಪಾಲಯ್ಯ ಅವರಿದ್ದ ಪೀಠವು ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಆರೋಪಿ ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಮೀನನ್ನು ಕಾನೂನು ಪ್ರಕಾರ ಸಂರಕ್ಷಣೆ ಮಾಡಿ ವರದಿ ಸಲ್ಲಿಸಿ' ಎಂದು ಭಟ್ಕಳ ತಹಶೀಲ್ದಾರ್ ಅವರಿಗೆ ನಿರ್ದೇಶಿಸಿರುವ ಪೀಠವು, 'ಅಪರಾಧಿ ದಂಡ ಪಾವತಿಸಲು ತಪ್ಪಿದರೆ 3 ತಿಂಗಳ ಜೈಲು ಶಿಕ್ಷೆ ಅನುಭವಿಸಬೇಕು' ಎಂದು ಆದೇಶಿಸಿದೆ.

ಸಾಕ್ಷಿಗಳಿಗೆ ವಿನಯ ಕುಲಕರ್ಣಿ ಬೆದರಿಕೆ ಆರೋಪ

ಬೆಂಗಳೂರು: 'ಧಾರವಾಡದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ತಮ್ಮ ಅಧಿಕಾರ ಬಳಸಿಕೊಂಡು ಪೊಲೀಸರ ಮೂಲಕ ನಮಗೆ ಬೆದರಿಕೆ ಒಡ್ಡುತ್ತಿದ್ದಾರೆ' ಎಂದು ಹತ್ಯೆಯಾಗಿರುವ ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಅವರ ಅಣ್ಣ ಗುರುನಾಥ ಗೌಡರ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮೊದಲ ಆರೋಪಿ ಬಸವರಾಜ ಶಿವಪ್ಪ ಮುತ್ತಗಿಯನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಆರೋಪಿಗಳು ಸಲ್ಲಿಸಿರುವ ರಿಟ್ ಮತ್ತು ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಗುರುನಾಥಗೌಡ ಗೌಡರ್ ಪರ ವಕೀಲರು ಮಧ್ಯಂತರ ಅರ್ಜಿ ಸಲ್ಲಿಸಿ, 'ಈ ಪ್ರಕರಣದಲ್ಲಿ ಯೋಗೀಶ್‌ಗೌಡ ಗೌಡರ್ ಪತ್ನಿ ಮಲ್ಲಮ್ಮ ಪ್ರಾಸಿಕ್ಯೂಷನ್‌ಗೆ ಸಹಕರಿಸುತ್ತಿದ್ದಾರೆ ಎಂದು ಹಾಕಿರುವ ಅರ್ಜಿಯನ್ನು ನ್ಯಾಯಾಲಯ ಪರಿಗಣಿಸಬಾರದು. ಮಲ್ಲಮ್ಮ ಮೊದಲಿನಿಂದಲೂ ಕಾನೂನು ಹೋರಾಟದಲ್ಲಿ ವಿನಯ ಕುಲಕರ್ಣಿ ಪರವಾಗಿಯೇ ಸಹಕರಿಸುತ್ತಿದ್ದಾರೆ. ವಾಸ್ತವದಲ್ಲಿ ಪ್ರಾಸಿಕ್ಯೂಷನ್‌ಗೆ ಸಹಕರಿಸುತ್ತೇನೆ ಎಂದು ಆಕೆಯಿಂದ ಈ ಅರ್ಜಿ ಹಾಕಿಸಿರುವುದೇ ವಿನಯ ಕುಲಕರ್ಣಿ' ಎಂದು ಆರೋಪಿಸಿದರು.

ಸಿಬಿಐ ಪರ ಸುಪ್ರೀಂ ಕೋರ್ಟ್‌ನ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ವಾದ ಮಂಡಿಸಿ, 'ಈ ಪ್ರಕರಣದಲ್ಲಿ ಆರೋಪಿ ಮುತ್ತಗಿ ಸ್ವಯಂ ಸ್ಫೂರ್ತಿಯಿಂದ ಮಾಫಿ ಸಾಕ್ಷಿಯಾಗಲು ಒಪ್ಪಿಗೆ ನೀಡಿದ್ದಾರೆ. ಹೀಗಾಗಿ, ಕೋರ್ಟ್ ಅವರ ಮಾಫಿಯನ್ನು ಒಪ್ಪಿಕೊಳ್ಳುವ ಷರತ್ತುಗಳನ್ನು ವಿಧಿಸಿದ್ದು ಮತ್ತು ಅವುಗಳಿಗೆ ಆರೋಪಿ ಬದ್ಧವಾಗಿಲ್ಲ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಲದೆ, ಈ ಪ್ರಕರಣದಲ್ಲಿ ಯಾವುದೇ ಕಾನೂನಾತ್ಮಕ ಲೋಪಗಳು ಇಲ್ಲ' ಎಂದು ಪ್ರತಿಪಾದಿಸಿದರು.

ವಾದ ಆಲಿಸಿದ ನ್ಯಾಯಪೀಠ, 'ಹೆಚ್ಚಿನ ವಾದಾಂಶಗಳನ್ನು ಲಿಖಿತವಾಗಿ ಸಲ್ಲಿಸಿ' ಎಂದು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ವರ್ಷದ ಹಿಂದೆ ಮಾರಾಟವಾಗಿದ್ದ ಮಗು ಆಂಧ್ರ ಪ್ರದೇಶದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕಳೆದ ವರ್ಷ ಫೆಬ್ರುವರಿಯಲ್ಲಿ ತಾಯಿಯಿಂದಲೇ ₹ 60 ಸಾವಿರಕ್ಕೆ ಮಾರಾಟವಾಗಿದ್ದ 14 ದಿನಗಳ ಗಂಡು ಮಗುವನ್ನು ರಕ್ಷಿಸಿರುವ ಬಳ್ಳಾರಿ ಗ್ರಾಮಾಂತರ ಠಾಣೆಯ ಪೊಲೀಸರು, ಆಂಧ್ರ ಪ್ರದೇಶದ ಆಲೂರಿನಿಂದ ಕರೆ ತಂದಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಮಗುವನ್ನು ಖರೀದಿಸಿದ ನವೀನ್‌ಕುಮಾರ್ ಮತ್ತು ಮಗುವಿನ ತಾಯಿಯನ್ನು ಬಂಧಿಸಲಾಗಿದೆ. ಮಗುವನ್ನು ಸದ್ಯ ತಾಯಿ ಬಳಿಯೇ ಇರಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಹಿಳೆಯು 2024ರ ಫೆಬ್ರುವರಿಯಲ್ಲಿ ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಕಾಲೇಜಿನಲ್ಲಿ (ವಿಮ್ಸ್) ಗಂಡು ಮಗುವಿಗೆ ಜನ್ಮ ನೀಡಿದ್ದಳು. ಅದೇ ತಿಂಗಳ 20ರಂದು 14 ದಿನಗಳ ಮಗುವನ್ನು ಬೇರೊಬ್ಬರಿಗೆ ಮಾರಿದ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಾಯವಾಣಿಗೆ 2024ರ ಆಗಸ್ಟ್ 5ರಂದು ಅನಾಮಧೇಯ ಕರೆ ಬಂದಿತ್ತು. ಕರೆ ಆಧರಿಸಿ ಅಧಿಕಾರಿಗಳು ಪರಿಶೀಲಿಸಿದಾಗ, ಮಗು ಮಾರಾಟವಾಗಿರುವುದು ಖಚಿತವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡೆವು' ಎಂದು ಅವರು ತಿಳಿಸಿದ್ದಾರೆ.

'ನವೀನ್‌ಕುಮಾರ್ ವೃತ್ತಿಯ ಭಾಗವಾಗಿ ದಕ್ಷಿಣದ ರಾಜ್ಯಗಳಲ್ಲಿ ಓಡಾಡುತ್ತಿದ್ದ. ಹೀಗಾಗಿ ಆತನನ್ನು ಪತ್ತೆ ಮಾಡುವುದು ವಿಳಂಬವಾಗಿತ್ತು. ಅನಿವಾರ್ಯ ಕಾರಣಗಳಿಂದ ಮಹಿಳೆಗೆ ಮಗು ಬೇಕಿರಲಿಲ್ಲ. ಮಕ್ಕಳಿರದ ಕಾರಣ ಆತ ಮಗುವನ್ನು ಖರೀದಿಸಿದ್ದ' ಎಂದು ಅವರು ತಿಳಿಸಿದ್ದಾರೆ.

ರಥೋತ್ಸವ ಸಂಭ್ರಮ...

ಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವವು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಶುಕ್ರವಾರ ಬೆಳಗಿನ ಜಾವ ಅಪಾರ ಭಕ್ತರ ಸಮ್ಮುಖದಲ್ಲಿ ನಡೆಯಿತು

ಪ್ರಜಾವಾಣಿ ಚಿತ್ರ: ಉಲ್ಲಾಸ್ ಯು.ವಿ.

ಹೋಳಿ: ಯುವಕ ನೀರು ಪಾಲು

ಪ್ರಜಾವಾಣಿ ವಾರ್ತೆ

ರಾಯಚೂರು: ಹೋಳಿ ಆಚರಣೆಯ ನಂತರ ಸ್ನೇಹಿತರೊಂದಿಗೆ ಕಾಲುವೆಗೆ ಸ್ನಾನಕ್ಕೆ ತೆರಳಿದ್ದ ವ್ಯಕ್ತಿ ನೀರಿನಲ್ಲಿ ಕೊಚ್ಚಿ ಹೋದ ಘಟನೆ ಗಿಲ್ಲೆಸುಗೂರು ಕ್ಯಾಂಪ್ ಬಳಿ ಶುಕ್ರವಾರ ನಡೆದಿದೆ.

ಯರಗೇರಾ ಗ್ರಾಮದ ಕಿರಾಣಿ ಅಂಗಡಿ ವ್ಯಾಪಾರಿ ಮಹಾದೇವ್ (30) ಮೃತರು. ತೆಲಂಗಾಣದ ದೊಡ್ಡಿ ಸಿಂಧನೂರಿನಲ್ಲಿ ಮೃತದೇಹ ಸಿಕ್ಕಿದೆ

ಬಣ್ಣದಾಟದ ನಂತರ ಮೂವರು ಸ್ನೇಹಿತರು ರಾಯಚೂರು ತಾಲ್ಲೂಕಿನ ಗಿಲ್ಲೆಸೂಗುರು ಚೆಕ್‌ಪೋಸ್ಟ್ ಬಳಿಯ ಆರ್‌ಡಿಎಸ್ ಕಾಲುವೆಯಲ್ಲಿ ಈಜಾಡಲು ತೆರಳಿದ್ದರು. ನೀರಿನ ರಭಸದಿಂದ ಮಹಾದೇವ್ ಕೊಚ್ಚಿಹೋಗಿದ್ದರು.

ತಾತಯ್ಯ ಜಯಂತಿಯಲ್ಲಿ ರಾಜಕಾರಣ

ಬಿಜೆಪಿ–ಕಾಂಗ್ರೆಸ್ ಮೇಲಾಟದಲ್ಲಿ ಮರೆಯಾದ ಕಾರ್ಯಕ್ರಮದ ಉದ್ದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ಹಮ್ಮಿಕೊಂಡಿದ್ದ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮವು ರಾಜಕೀಯ ಆಡುಂಬೊಲವಾಗಿ ಬದಲಾಯಿತು. ಬಿಜೆಪಿ, ಕಾಂಗ್ರೆಸ್ ಮೇಲಾಟದಲ್ಲಿ ಜಯಂತಿಯ ಉದ್ದೇಶ ಮರೆಗೆ ಸರಿಯಿತು.

ಕರ್ನಾಟಕ ರಾಜ್ಯ ಬಲಿಜ ಸಂಘಗಳ ಒಕ್ಕೂಟದ ಅಧ್ಯಕ್ಷ ಟಿ. ವೇಣುಗೋಪಾಲ ಅವರು ಉಪನ್ಯಾಸ ನೀಡುತ್ತಾ, 'ಜನರಿಗೆ ತೊಂದರೆಯಾದಾಗ ದೇವರು ಅವತಾರ ತಾಳುತ್ತಾರೆ. ಈಗ ಆಳುತ್ತಿರುವ ನರೇಂದ್ರ ಮೋದಿಯವರು ಶ್ರೀಕೃಷ್ಣನ ಅವತಾರ' ಎಂದು ಬಣ್ಣಿಸಿದರು.

ನಟಿ ತಾರಾ ಅನೂರಾಧ ಮಾತನಾಡುತ್ತಾ, 'ನಾವು ಎಲ್ಲ ಪಕ್ಷದವರು ಇಲ್ಲಿದ್ದೇವೆ. ಇಲ್ಲಿ ಯಾರನ್ನೋ ಹೊಗಳಲು ಇಲ್ಲವೇ ತೆಗಳಲು ಬಂದಿಲ್ಲ. ನಮ್ಮ ಸರ್ಕಾರ ಇರುವಾಗ ತಾತಯ್ಯರ ಜಯಂತಿ ಜಾರಿಗೆ ಬಂದಿದ್ದು ನಿಜ. ಅದಕ್ಕಾಗಿ ಬಸವರಾಜ ಬೊಮ್ಮಾಯಿ, ಯಡಿಯೂರಪ್ಪ ಅವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಈಗಿನ ಸರ್ಕಾರ ಅದನ್ನು ಮುಂದುವರಿಸಿದೆ' ಎಂದರು.

ಆನಂತರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಮಾತನಾಡುವ ವೇಳೆ, 'ನನ್ನ ಹೃದಯದಲ್ಲಿ ಶ್ರೀರಾಮ ಮತ್ತು ಸಿದ್ದರಾಮಯ್ಯ ಇಬ್ಬರೂ ಇದ್ದಾರೆ' ಎಂದು ಹೇಳಿದಾಗ 'ಕೈವಾರ ತಾತಯ್ಯ ಇಲ್ವ' ಎಂದು ಸಭೆಯಲ್ಲಿದ್ದವರು ಪ್ರಶ್ನಿಸಿದರು. 'ನಾನೇ ಕೈವಾರ ತಾತಯ್ಯ, ಈ ಸಮುದಾಯದ ಎಲ್ಲರೂ ಕೈವಾರ ತಾತಯ್ಯ' ಎಂದು ಉತ್ತರಿಸಿದರು.

'ಬಲಿಜ ಸಮಾಜದ ಅನೇಕರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅವರು ಬಲಿಜ ಸಮಾಜದ ಬಡ ಕುಟುಂಬಕ್ಕೆ ಕನಿಷ್ಠ ಎರಡು ಸೀಟು ಮೀಸಲಿಡಬೇಕು. ಸಮಾಜವನ್ನು '2ಎ' ವರ್ಗಕ್ಕೆ ಸೇರಿಸಲು ಹೋರಾಟ ಮಾಡುತ್ತೇನೆ. 25 ವರ್ಷಗಳ ನಂತರ ನಮ್ಮ ಸಮಾಜದವರೊಬ್ಬರು ರಾಜ್ಯವನ್ನು ಆಳಬೇಕು' ಎಂದು ಪ್ರದೀಪ್ ಆಶಯ ವ್ಯಕ್ತಪಡಿಸಿದರು.

'ನೀವು ವೇದಿಕೆಯಲ್ಲಿ ಮಾತನಾಡುತ್ತೀರಿ. ಗ್ರೈನ್ ಮರ್ಚೆಂಟ್ ಬ್ಯಾಂಕ್ ಚುನಾವಣೆ ನಡೆದಾಗ ಬಲಿಜರನ್ನೇ ನನ್ನೆದುರು ನಿಲ್ಲಿಸಿ 2 ಮತಗಳಿಂದ ಸೋಲಿಸಿದ್ದೀರಿ' ಎಂದು ವೇದಿಕೆಯ ಮುಂದಿದ್ದ ಪಿ.ಕೆ. ಸುರೇಶ್ ಆಕ್ಷೇಪ ವ್ಯಕ್ತಪಡಿಸಿದರು.

'ನಾನು ಆಗಿನಿಂದ ನೋಡುತ್ತಾ ಇದ್ದೀನಿ. ಸರ್ಕಾರದ ಕಾರ್ಯಕ್ರಮ ಇದು. ಬಿಜೆಪಿ ಕಾರ್ಯಕ್ರಮವನ್ನಾಗಿ ಮಾಡಲು ಹೊರಟಿದ್ದೀರಿ. ಹಿಂದೆ ಮಾತನಾಡಿದವರೆಲ್ಲ ಬಿಜೆಪಿ ಗುಣಗಾನ ಮಾಡಿದ್ದಾರೆ. ಇಲ್ಲಿರುವುದು ಕಾಂಗ್ರೆಸ್ ಸರ್ಕಾರ. ಸಿದ್ದರಾಮಯ್ಯ ಸರ್ಕಾರ. ಬಾಯಿ ಮುಚ್ಚಿ ಕೂತುಕೊಳ್ಳಿ' ಎಂದು ಏರಿದ ದನಿಯಲ್ಲಿ ಪ್ರದೀಪ್ ಈಶ್ವರ್ ಹೇಳಿದರು.

ಮಧ್ಯ ಪ್ರವೇಶಿಸಿದ ಬಿಜೆಪಿ ಸಂಸದ ಪಿ.ಸಿ. ಮೋಹನ್, 'ನೀವು ಸಿದ್ದರಾಮಯ್ಯನ ಬಗ್ಗೆ ಮಾತನಾಡುತ್ತೀರಿ ಎಂದಾದರೆ ಬಿಜೆಪಿ ಸಂಸದನಾದ ನಾನು ಇರಬೇಕಾ ಬೇಡ್ವಾ? ತಾತಯ್ಯ ಜಯಂತಿ ಆರಂಭಿಸಿದ್ದು ಬೊಮ್ಮಾಯಿ. ಸಮಾಜಕ್ಕೆ ಬೇಕಾದುದನ್ನು ಮಾಡಿದ್ದು ಬಿಜೆಪಿ. ನಿಮ್ಮ ಮಾತನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದರು.

ಸಮರ್ಥಿಸಿಕೊಳ್ಳುವ, ದೂರುವ, ಸಮಾಧಾನಿಸುವ ಮಾತುಗಳಿಂದ ಸಭೆ ಗೊಂದಲದ ಗೂಡಾಯಿತು. ಪ್ರದೀಪ್ ವೇದಿಕೆಯಿಂದ ಹೊರಟರು.

ಬಳಿಕ ಮಾತನಾಡಿದ ಪಿ.ಸಿ. ಮೋಹನ್, 'ಸಣ್ಣತಪ್ಪಾಗಿದೆ. ಇದಕ್ಕೆ ಕ್ಷಮೆ ಕೇಳುತ್ತೇನೆ. ಮುಂದೆ ಹೀಗಾಗದಂತೆ ಎಲ್ಲರೂ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಪ್ರದೀಪ್ ಈಶ್ವರ್ ಏನೋ ಆವೇಶದಲ್ಲಿ ಮಾತನಾಡಿದ್ದಾರೆ. ನಾನೂ ಗಟ್ಟಿಯಾಗಿ ಉತ್ತರ ನೀಡಿದೆ. ಅವರು ಹೋಗಬಾರದಿತ್ತು. ಅವರು ಮಾತನಾಡುವಾಗ ನಾನೂ ಹೋಗಬಹುದಿತ್ತು. ತಾತಯ್ಯ ಜಯಂತಿ ಎಂಬ ಕಾರಣಕ್ಕೆ ಹೋಗಿಲ್ಲ' ಎಂದರು.

ನಗರದಲ್ಲಿ ಶುಕ್ರವಾರ ಯೋಗಿನಾರೇಯಣ ಯತೀಂದ್ರರ ಜಯಂತಿ ಕಾರ್ಯಕ್ರಮದಲ್ಲಿ ತಾತಯ್ಯ ಅವರ ಭಾವಚಿತ್ರಕ್ಕೆ ಪಿ. ಸಿ. ಮೋಹನ್, ಎಂ.ಆರ್. ಸೀತಾರಾಮ್, ಪ್ರದೀಪ್ ಈಶ್ವರ್, ತಾರಾ ಅನೂರಾಧಾ ಪುಷ್ಪಾರ್ಚನೆ ಮಾಡಿದರು

ಪ್ರಜಾವಾಣಿ ಚಿತ್ರ

'ಹಿಂದಿ: ಹೋರಾಟಕ್ಕೆ ಅನುಮತಿ ಬೇಕೆ?'

ಪ್ರಜಾವಾಣಿ ವಾರ್ತೆ

ಕೋಡಿಹಳ್ಳಿ ಚಂದ್ರಶೇಖರ್

ಬಳ್ಳಾರಿ: 'ಹಿಂದಿ ಹೇರಿಕೆ ವಿರುದ್ಧ ದಕ್ಷಿಣದ ರಾಜ್ಯಗಳನ್ನು ಒಗ್ಗೂಡಿಸುವ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹೇಳಿದರೆ, ಪಕ್ಷದ ಹೈಕಮಾಂಡ್‌ನ ಗಮನಕ್ಕೆ ತಂದು ನಿರ್ಧರಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಪ್ರತಿಯೊಂದಕ್ಕೂ ಹೈಕಮಾಂಡ್‌ನ ಅನುಮತಿ ಕೇಳಬೇಕೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ನವ ಕರ್ನಾಟಕ ನಿರ್ಮಾಣ ಆಂದೋಲನದ 'ಜನರ ನಡುವೆ ಜನತಾ ಪ್ರಣಾಳಿಕೆ ಚರ್ಚೆ'ಯಲ್ಲಿ ಮಾತನಾಡಿದ ಅವರು, 'ಪಕ್ಷದ ಹೈಕಮಾಂಡ್ ಎಂದರೆ ಯಾರು? ನವದೆಹಲಿಯ ರಾಜಕಾರಣಿಗಳೇ ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್‌ಗಳು. ಹಿಂದಿ ಹೇರಿಕೆಗೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರಿಂದ ಏನು ಪರಿಹಾರ ನಿರೀಕ್ಷಿಸಲು ಸಾಧ್ಯ? ಅವರಿಂದ ಏನು ಉತ್ತರ ಸಿಗಬಹುದು' ಎಂದು ಪ್ರಶ್ನಿಸಿದರು.

'ರಾಜ್ಯಕ್ಕೆ ಪರ್ಯಾಯ ರಾಜಕಾರಣ ಬೇಕೆ ಹೊರತು ವೃತ್ತಿ ರಾಜಕಾರಣ ಅಲ್ಲ. ದೇವೇಗೌಡ, ಯಡಿಯೂರಪ್ಪ, ಸಿದ್ದರಾಮಯ್ಯ ಅವರಿಂದ ಪರಿವರ್ತನಾ ರಾಜಕಾರಣ ಸಾಧ್ಯವೇ? ಇಷ್ಟು ದಿನ ಅವರು ಮಾಡಿದ ಕೆಲಸಗಳು ಜನರನ್ನು ಸಮಸ್ಯೆಯಿಂದ ಹೊರತಂದಿಲ್ಲ. ಜನರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ' ಎಂದರು.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು –560 052. ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288

No. KREIS/INFR/OTH/132/2024-ADMN /E-160710 Date: 14.03.2025

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಇ–ಪೋರ್ಟಲ್ ಮುಖಾಂತರ ಶುಚಿ ಸಂಭ್ರಮ ಕಿಟ್‌ಗಳನ್ನು ಒದಗಿಸಲು ಕಂದಾಯ ವಿಭಾಗವಾರು ಟೆಂಡರ್ ಸಂಖ್ಯೆ: KREIS/2024-25/IND0048, KREIS/2024-25/IND0049, KREIS/2024-25/IND0050 ಹಾಗೂ KREIS/2024-25/IND0051, ದಿನಾಂಕ:13.03.2025 ರಂದು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ಗಳಿಗೆ ಅಂತಿಮ ದಿನಾಂಕ:11.04.2025 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್ ಸೈಟ್ http://e-procurement.gov.in. ರಲ್ಲಿ ನೋಡಬಹುದಾಗಿದೆ.

ಸಹಿ/–
ಜಂಟಿ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಕವಶಿಸಸಂ, ಬೆಂಗಳೂರು
DIPR/CP/5650/Zen/2024-25

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ
ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು - 560 042. ದೂರವಾಣಿ : 080-25365053.
ಇ-ಮೇಲ್ : kvmegbangalore@gmail.com, ವೆಬ್‌ಸೈಟ್ : megcentre.kvs.ac.in
PM SHRI

ವಾಕ್ – ಇನ್ – ಇಂಟರ್ವ್ಯೂ

ಸಂಖ್ಯೆ : F.13.49/KV/MEG/2024-25/ ದಿನಾಂಕ : 11.03.2025

2025–26 ರ ಶೈಕ್ಷಣಿಕ ಅವಧಿಗೆ ಬೆಂಗಳೂರಿನ **ಪಿ.ಎಂ.ಶ್ರೀ. ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ**ಕ್ಕೆ ಸಂಪೂರ್ಣವಾಗಿ ಅರೆ ಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿ ತಯಾರಿಸಲು, ಅಭ್ಯರ್ಥಿಗಳ ಸಂದರ್ಶನವನ್ನು **ದಿನಾಂಕ : 21.03.2025** ರಂದು ನಡೆಸಲಾಗುವುದು. ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ **ಪಿ.ಎಂ.ಶ್ರೀ. ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ**ದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು, ಜೊತೆಗೆ ಪ್ರಮಾಣ ಪತ್ರಗಳ ಮೂಲ ಮತ್ತು ನಕಲು ಪ್ರತಿಗಳು ಮತ್ತು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದೊಂದಿಗೆ ಹಾಜರಾಗಬೇಕು. ಹುದ್ದೆಗಳಿಗೆ ನೋಂದಣಿಯನ್ನು **ಅದೇ ದಿನ ಬೆಳಗ್ಗೆ 08.00 ರಿಂದ ಬೆಳಗ್ಗೆ 10.00 ರವರೆಗೆ ಮಾಡಲಾಗುತ್ತದೆ.**

ಸಂದರ್ಶನ ದಿನಾಂಕ	ಹುದ್ದೆ	ವಿಷಯ
21-03-2025 ಶುಕ್ರವಾರ	ಪಿ.ಜಿ.ಟಿ.	ವಾಣಿಜ್ಯಶಾಸ್ತ್ರ ಅರ್ಥಶಾಸ್ತ್ರ ಮತ್ತು ಹಿಂದಿ
	ಇತರ ಶಿಕ್ಷಕರು	ಕಂಪ್ಯೂಟರ್ ಇನ್ಸ್‌ಸ್ಟ್ರಕ್ಟರ್, ನೃತ್ಯ ಶಿಕ್ಷಕರು, ಸಂಗೀತ ಶಿಕ್ಷಕರು (ವಾದ್ಯ)

ಗಮನಿಸಿ : ಅರ್ಹತೆ ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್ : www.megcentre.kvs.ac.in ಗೆ ಭೇಟಿ ನೀಡಿ.

ಸಹಿ/- ಪ್ರಾಂಶುಪಾಲರು,
ಪಿ.ಎಂ.ಶ್ರೀ. ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ, ಬೆಂಗಳೂರು

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್:pdrch-hfws@karnataka.gov.in

ಸಂ: LWSTC/STDC/04/2024-25 (e-1387226) ದಿನಾಂಕ: 15.03.2025

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

For Supply of Laboratory Consumables

ರಾಷ್ಟ್ರೀಯ ಆರೋಗ್ಯ ಅಭಿಯಾನವು ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮಕ್ಕೆ ಅವಶ್ಯವಿರುವ **Laboratory Consumables** ಗಳನ್ನು ಸರಬರಾಜು **ಮಾಡಲು** ತಯಾರಕರು/ಅಧಿಕೃತ ವಿತರಕರುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Tender No: NHM/2024-25/IND0027/Call-2

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ **14/03/2025** ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ: **24/03/2025 ಅಪರಾಹ್ನ 5.30ರ** ಒಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 5.30ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/BCPL/5671/2024-25

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ
ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಧಾರವಾಡ–ನವಲಗುಂದ/2024–25 ದಿನಾಂಕ: 11–03–2025

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಮೊರಬ ಹೋಬಳಿ ನವಲಗುಂದ ಗ್ರಾಮದ ಸರ್ವೆ ನಂ.428,429,430,432 ಮತ್ತು 433 ರಲ್ಲಿ ಒಟ್ಟು 20 ಎಕರೆ 06 ಗುಂಟೆ ಜಮೀನಿನಲ್ಲಿ ಶೇಕಡ 60:40ರ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆ ಕೈಗೊಳ್ಳಲು ಉದ್ದೇಶಿಸಿದ್ದು, ಮಂಡಳಿಯ ಪಾಲಿನ ಮಧ್ಯಂತರ ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು **ದಿನಾಂಕ: 15–03–2025** ರಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 09–04–2025.**

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ವಿವರ ಕೆಳಕಂಡಂತಿದೆ.

ಕ್ರ ಸಂ	ವರ್ಗ	ನೋಂದಣಿ ಶುಲ್ಕ (ರೂಗಳಲ್ಲಿ)	ಆರಂಭಿಕ ಠೇವಣಿ (ರೂಗಳಲ್ಲಿ)	ನಿವೇಶನದ ತಾತ್ಕಾಲಿಕ ಬೆಲೆ (ಚದುರ ಅಡಿ, ಚದುರ ಮೀಟರ್‌ಗಳಲ್ಲಿ)
1.	EWS	300/-	25,000/-	ಪ್ರತಿ ಚದರ ಮೀಟರ್‌ಗೆ ರೂ. 5974.02 (ರೂ. 555.00 ಪ್ರತಿ ಚದರಡಿಗೆ)
2.	LIG	500/-	50,000/-	ಪ್ರತಿ ಚದರ ಮೀಟರ್‌ಗೆ ರೂ. 11840.4 (ರೂ. 1,100.00 ಪ್ರತಿ ಚದರಡಿಗೆ)
3.	MIG	1000/-	75,000/-	
4.	HIG	1500/-	1,00,000/-	

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ನೋಂದಣಿ ಮಾಡಿಕೊಳ್ಳಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO5642/AAPL/2024-25

ಅಟಲ್ ಭೂಜಲ್ ಜಲ ಯೋಜನೆ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಯೋಜನಾ ನಿರ್ದೇಶಕರ ಕಛೇರಿ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (SPMU), ಅಟಲ್ ಭೂಜಲ್ ಯೋಜನೆ, ನಂ.1/1, 2ನೇ ಮಹಡಿ, ಕೆಎಸ್‌ಎಫ್‌ಸಿ ಭವನ ತಿಮ್ಮಯ್ಯ ರಸ್ತೆ, ಬೆಂಗಳೂರು–560 052.

No. ABHY/SPMU/PROC/30/2024-25 Date: 14.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಎಸ್.ಪಿ.ಎಂ.ಯು, ಅಟಲ್ ಭೂಜಲ್ ಯೋಜನೆ, ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ **"Construction of wire screen filter injection well for artificial recharge of Groundwater along with 2 year operation and maintenance in Atal Bhujal Yojana, Karnataka in 04 Packages-Call-2"** ಇಲ್ಲಿಗೆ ಸೇವೆಯನ್ನು ಒದಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಅರ್ಹತೆ ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು **https://kppp.karnataka.gov.in** ಗೆ ಲಾಗ್ ಇನ್ ಮಾಡುವ ಮೂಲಕ ಪಡೆಯಬಹುದು. ಡೆಂಡರ್ ಡಾಕ್ಯೂಮೆಂಟ್ ಅನ್ನು **ದಿನಾಂಕ: 14.03.2025** ರಿಂದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.03.2025ರ 5:30 ಗಂಟೆಗಳು** ಆಗಿರುತ್ತದೆ.

ಹೆಚ್ಚಿನ ವಿವರಗಳನ್ನು ಕಚೇರಿ **ಸಮಯದಿಂದ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಗಳ**ವರೆಗೆ ಪಡೆಯಬಹುದು.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಎಸ್.ಪಿ.ಎಂ.ಯು, ಅಟಲ್ ಜಲ್, ಕರ್ನಾಟಕ
DIPR/CP/RO5672/AAPL/2024-25

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್ ಹತ್ತಿರ, ಬಿ.ಎಂ. ರೋಡ್, ಹಾಸನ–573201
Phone & Fax :08172-268296 Email: dcfhassan@yahoo.in.
ಸಂಖ್ಯೆ :ಎ4/ವಅಅ/ಸನಾಸಂ/ಇ–ಹರಾಜು/ವಿವ–28/2024–25
ದಿನಾಂಕ: 11.03.2025

ಟಿಂಬರ್ ಮತ್ತು ಇತರೆ ಅರಣ್ಯ ಉತ್ಪನ್ನಗಳ ಇ–ಹರಾಜು ಪ್ರಕಟಣೆ

ಹಾಸನ ಪ್ರಾದೇಶಿಕ ಅರಣ್ಯ ವಿಭಾಗದ ಗೆಂಡೆಕಟ್ಟೆ ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ 2024– 25ನೇ ಸಾಲಿನಲ್ಲಿ ದಾಸ್ತಾನಿರುವ ಟಿಂಬರ್ & ಇತರೆ ಅರಣ್ಯ ಉತ್ಪನ್ನಗಳನ್ನು ಇ–ಹರಾಜು (www.mstcecommerce.com) ಮೂಲಕ ವಿಲೇವಾರಿ ಮಾಡಲು ದಿನಾಂಕ: 24.03.2025 ರಂದು ನಿಗದಿಪಡಿಸಲಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕರು ಮತ್ತು ಮರ ವ್ಯಾಪಾರಿಗಳ ಗಮನಕ್ಕೆ ಮೇಲ್ಕಂಡ ಇ–ಹರಾಜಿನ ವಿವರವನ್ನು ತಿಳಿಸುವ ಸಂಬಂಧ ಈ ಕಛೇರಿಯ ಸಮಸಂಖ್ಯೆ ದಿನಾಂಕ 11.03.2025 ರಲ್ಲಿ ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನಗಳ ವಿವರಗಳುಳ್ಳ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–(ಸೌರಭ್ ಕುಮಾರ್, ಭಾ.ಅ.ಸೇ,), ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ,
ವಾಸಾಸಂಇ/ಹಿಸನಿ/ಹಾಸನ/1054/ಕೆಎಸ್‌ಎಂಸಿಎ/2024–25

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
Phone: 08232-231003, 222086, 231197, 224040, Fax: 08232-231001
E-Mail Address: mimsmandyasupply@gmail.com, mimsmandya@gmail.com

ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ:ಮಿಮ್ಸ್/ಸರಬ(ಡಿ)/Sutures/Short term/E-T/15A2024-25
ದಿ:12.03.2025

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಭೋಧಕ ಆಸ್ಪತ್ರೆಗೆ **Sutures materials items** ಗಳನ್ನು ಮರು ಇ–ಟೆಂಡರ್ ಮುಖೇನ ಖರೀದಿಸುವ ಸಲುವಾಗಿ ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ Short Term ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಕ್ರ ಸಂ : 01. ವಿವರಗಳು : ಸೂಚರ್ಸ್ ಐಟಂಗಳು. ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ). 98.00. ಇ.ಎಂ.ಡಿ ಮೊತ್ತ : 1,96,000/–. ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ : 12.03.2025. ಅರ್ಜಿ ಸಲ್ಲಿಕೆ ಅಂತಿಮ ದಿನಾಂಖ : 19.03.2025.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/757/2024–25

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ) ಇ–ಮೇಲ್ : ka.chitradurga.dudc@gmail.com
ನಂ. ಜಿ.ನ.ಕೋ/ನಗರೋತ್ಥಾನ ಹಂತ 04/ಸಿ.ಆರ್ 529/2024–25 ದಿನಾಂಕ: 12.03.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ ಪುರಸಭೆ ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯ ಕಾಮಗಾರಿಗಳಿಗೆ ದ್ವಿ ಟೆಂಡರ್ ಡಾಕ್ಯೂಮೆಂಟ್ ಪದ್ಧತಿಯಲ್ಲಿ ಕೆಡಬ್ಲ್ಯೂ 2 & 3 ಟೆಂಡರ್ ದಾಸ್ತವೇಜಿನಂತೆ, ನೋಂದಾಯಿಸಿದ ಅರ್ಹ ದರ್ಜೆಯ (ಎಲೆಕ್ಟ್ರಿಕಲ್) ಗುತ್ತಿಗೆದಾರರಿಂದ / ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **(ರೂ.ಲಕ್ಷಗಳಲ್ಲಿ)**

ಕಾಮಗಾರಿಗಳ ವಿವರ:– ಹೊಸದುರ್ಗ ಪುರಸಭೆ:– (1) ಹೊಸದುರ್ಗ ಪಟ್ಟಣದ ಕೆ.ಎಸ್.ಆರ್.ಟಿ.ಸಿ ನಿಲ್ದಾಣದ ಮುಂಭಾಗದಲ್ಲಿ ಪಿ.ಡಬ್ಲ್ಯೂ.ಡಿ ಇಲಾಖೆಯಿಂದ ನಿರ್ಮಿಸುತ್ತಿರುವ ಡಾಂಬರ್ ರಸ್ತೆಯ ಮಧ್ಯ ಭಾಗದಲ್ಲಿ ರಸ್ತೆ ವಿಭಜಕ ನಿರ್ಮಾಣ ಮಾಡಿ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ರಸ್ತೆಯ ಎರಡು ಬದಿಯಲ್ಲಿ ಇಂಟರ್ ಲಾಕ್ ಪೇವರ್ ಅಳವಡಿಸುವ ಕಾಮಗಾರಿ. DMA/2024-25/EL/WORK_INDENT36481 ಅಂದಾಜು ಮೊತ್ತ:–38.00 ಲಕ್ಷ. ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ):–31.44 ಲಕ್ಷ. ಇ.ಎಂ.ಡಿ ಮೊತ್ತ:–0.32 ಲಕ್ಷ. ಗುತ್ತಿಗೆದಾರರ ದರ್ಜೆ ಮತ್ತು ವರ್ಗ:– 3ನೇ ದರ್ಜೆ ಹಾಗೂ ಮೇಲ್ಪಟ್ಟು (ಎಲೆಕ್ಟ್ರಿಕಲ್) ಪ.ಪಂಗಡ. ಕಾಮಗಾರಿಯ ಅವಧಿ (ಮಳೆಗಾಲ ಸೇರಿ): 4 ತಿಂಗಳು

(2) ಹೊಸದುರ್ಗ ಪಟ್ಟಣದ ವ್ಯಾಪ್ತಿಯಲ್ಲಿ ಪೊಲೀಸ್ ಇಲಾಖೆ ವರದಿಯ ಪ್ರಕಾರ ವಾಹನಗಳ ಚಲನಾ ವಲನಾ ಹಾಗೂ ದುಷ್ಕೃತ್ಯಗಳ ಬಗ್ಗೆ ನಿಗಾವಹಿಸಲು ಮುಖ್ಯ ರಸ್ತೆ, ವೃತ್ತಗಳು ಪ್ರಮುಖ ಸ್ಥಳ ಬಸ್ ನಿಲ್ದಾಣ ಹತ್ತಿರ ಮತ್ತು ಇತರೇ ಆಯ್ಕೆ ಸ್ಥಳಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿ ಕಂಟ್ರೋಲ್ ವ್ಯವಸ್ಥೆಯನ್ನು ಪೊಲೀಸ್ ಠಾಣೆಯಲ್ಲಿ ಸ್ಥಾಪಿಸುವುದು. DMA/2024-25/EL/WORK_IND ENT36525 ಅಂದಾಜು ಮೊತ್ತ:–23.60 ಲಕ್ಷ. ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ):–19.99ಲಕ್ಷ. ಇ.ಎಂ.ಡಿ ಮೊತ್ತ:–0.50 ಲಕ್ಷ. ಗುತ್ತಿಗೆದಾರರ ದರ್ಜೆ ಮತ್ತು ವರ್ಗ:– 3ನೇ ದರ್ಜೆ ಹಾಗೂ ಮೇಲ್ಪಟ್ಟು (ಎಲೆಕ್ಟ್ರಿಕಲ್) ಸಾಮಾನ್ಯ ಕಾಮಗಾರಿಯ ಅವಧಿ (ಮಳೆಗಾಲ ಸೇರಿ):– 4 ತಿಂಗಳು

ನಾಯಕನಹಟ್ಟಿ ಪಟ್ಟಣ ಪಂಚಾಯಿತಿ:– (3) ನಾಯಕನಹಟ್ಟಿ ಪಟ್ಟಣದ ಚಳ್ಳಕೆರೆ ರಸ್ತೆಯ ಹೆಚ್.ಪಿ ಪೆಟ್ರೋಲ್ ಬಂಕ್‌ನಿಂದ ಜಗಳೂರು ರಸ್ತೆಯ ಚಿಕ್ಕಕೆರೆ ಕೋಡಿವರೆಗೆ ಹಾಲಿ ಇರುವ ಡಿವೈಡರ್‌ಗೆ ಮತ್ತು ಚಿಕ್ಕಕೆರೆ ಏರಿಮೇಲೆ ವಿದ್ಯುತ್ ಪೋಲ್ ಅಳವಡಿಸಿ ಎಲ್.ಇ.ಡಿ ಬೀದಿ ದೀಪ ಅಳವಡಿಸುವ ಕಾಮಗಾರಿ ವಾರ್ಡ್ ನಂ. 7,8,9,11 ಮತ್ತು 12. DMA/2024-25/EL/WORK_INDENT36203 ಅಂದಾಜು ಮೊತ್ತ:–90.00ಲಕ್ಷ. ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ):–75.74ಲಕ್ಷ. ಇ.ಎಂ.ಡಿ ಮೊತ್ತ:–0.76 ಲಕ್ಷ. ಗುತ್ತಿಗೆದಾರರ ದರ್ಜೆ ಮತ್ತು ವರ್ಗ:– 2ನೇ ದರ್ಜೆ ಹಾಗೂ ಮೇಲ್ಪಟ್ಟು (ಎಲೆಕ್ಟ್ರಿಕಲ್): ಪ್ರವರ್ಗ–1 ಕಾಮಗಾರಿಯ ಅವಧಿ (ಮಳೆಗಾಲ ಸೇರಿ):– 6 ತಿಂಗಳು

ಹೊಳಲ್ಕೆರೆ ಪುರಸಭೆ:– (4) ಹೊಳಲ್ಕೆರೆ ಪಟ್ಟಣದ ರಾಜ್ಯ ಹೆದ್ದಾರಿ 13 ರಲ್ಲಿ ಚಿತ್ರದುರ್ಗ ಶಿವಮೊಗ್ಗ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಲಿರುವ ರಸ್ತೆಯ ವಿಭಜಕದ ಮಧ್ಯದಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು. DMA/2024-25/EL/WORK_INDENT36169 ಅಂದಾಜು ಮೊತ್ತ:–100.00 ಲಕ್ಷ. ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ):–83.96 ಲಕ್ಷ. ಇ.ಎಂ.ಡಿ ಮೊತ್ತ:–1.68 ಲಕ್ಷ. ಗುತ್ತಿಗೆದಾರರ ದರ್ಜೆ ಮತ್ತು ವರ್ಗ:– 2ನೇ ದರ್ಜೆ ಹಾಗೂ ಮೇಲ್ಪಟ್ಟು(ಎಲೆಕ್ಟ್ರಿಕಲ್) ಸಾಮಾನ್ಯ ಕಾಮಗಾರಿಯ ಅವಧಿ (ಮಳೆಗಾಲ ಸೇರಿ):– 6 ತಿಂಗಳು. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಕೆ.ಪಿ.ಪಿ ಪೋರ್ಟಲ್ ಪ್ಲಾಟ್‌ಫಾರಂ https://www.kppp.karnataka.gov.in ರಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಸಹ ವಿದ್ಯುನ್ಮಾನವಾಗಿಯೇ ಸಲ್ಲಿಸುವುದು.

ಟೆಂಡರ್ ವೇಳಾಪಟ್ಟಿ :– (1) ಟೆಂಡರ್‌ನ ಬಗ್ಗೆ ವಿಚಾರಿಸಲು ಕೊನೆ ದಿನಾಂಕ 19–03–2025 ಸಮಯ 16.30
(2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 27–03–2025 ಸಮಯ 17.00
(3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 28–03–2025 ಸಮಯ 17.00
(4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಟೆಂಡರ್ ಕುರಿತಾದ ಹೆಚ್ಚಿನ ಮಾಹಿತಿಗಳನ್ನು ಮೇಲೆ ತಿಳಿಸಲಾದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಮತ್ತು ದಿನಪತ್ರಿಕೆ ಜಾಹಿರಾತು ಪ್ರಕಟಣೆಯಲ್ಲಿ ನೀಡಲಾಗುವುದಿಲ್ಲ.

DIPR/CTA/KSMCA/706/2024-25 ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಉದ್ಯೋಗಿನಿ ಯೋಜನೆ: ಚರಾಸ್ತಿ ಭದ್ರತೆ ಒದಗಿಸಿದರೆ ಮಾತ್ರ ಬ್ಯಾಂಕ್‌ಗಳ ಸಾಲ ಸೌಲಭ್ಯ

ಲಿಂಗತ್ವ ಅಲ್ಪಸಂಖ್ಯಾತರಿಗೆ 'ಅರ್ಧಚಂದ್ರ'

● ಜಿ.ಬಿ.ನಾಗರಾಜ್

ದಾವಣಗೆರೆ: ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಸ್ವಾಭಿಮಾನಿ ಬದುಕು ಕಟ್ಟಿಕೊಳ್ಳಲೆಂದೇ ಸರ್ಕಾರ ರೂಪಿಸಿರುವ 'ಉದ್ಯೋಗಿನಿ' ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಪೂರ್ಣ ಪ್ರಮಾಣದಲ್ಲಿ ಸಾಲ ಸೌಲಭ್ಯ ನೀಡಲು ಬ್ಯಾಂಕ್‌ಗಳು ಮೀನ–ಮೇಷ ಎಣಿಸುತ್ತಿವೆ.

ಚರಾಸ್ತಿ ಅಡ ಇರಿಸಿ ಭದ್ರತೆ ಒದಗಿಸಿದರೆ ಸಾಲ ಸೌಲಭ್ಯ ಸುಲಭ. ಆದರೆ, ಮನೆ, ಬಂಧು–ಬಳಗ ತೊರೆದು ದೂರವೇ ಇರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಚರಾಸ್ತಿ ಇರುವುದೇ ವಿರಳ. ಅಂಥವರಿಗೆ ಬ್ಯಾಂಕ್‌ಗಳು ಗರಿಷ್ಠ ಮಿತಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಮೊತ್ತದ ಸಾಲ ಮಂಜೂರು ಮಾಡಿ ಕೈತೊಳೆದುಕೊಳ್ಳುತ್ತಿವೆ.

> **ನಿಗಮಕ್ಕೆ ಸಲ್ಲಿಕೆಯಾದ ಅರ್ಜಿ ಪರಿಶೀಲಿಸಿ ಫಲಾನುಭವಿ ಆಯ್ಕೆ ಮಾಡುತ್ತೇವೆ. ಸಾಲದ ಗರಿಷ್ಠ ಮೊತ್ತ ಪಾವತಿಸುವಂತೆ ಬ್ಯಾಂಕ್‌ಗಳಿಗೆ ಕೇಳಿಕೊಂಡಿದ್ದೇವೆ**
> **ಐ.ಟಿ.ಮಂಜುಳಾ**
> ನಿರೀಕ್ಷಕಿ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

> **ಕುರಿ ಸಾಕಣೆಗೆ ₹ 3 ಲಕ್ಷ ಸಾಲಕ್ಕೆ ಅರ್ಜಿ ಸಲ್ಲಿಸಿದ್ದೆ. ಆಸ್ತಿ, ಮನೆಯ ಭದ್ರತೆ ಒದಗಿಸಿಲ್ಲ ಎಂಬ ಕಾರಣಕ್ಕೆ ಬ್ಯಾಂಕ್ ಅರ್ಧದಷ್ಟು ಮೊತ್ತವನ್ನೂ ನೀಡುತ್ತಿಲ್ಲ**
> **ಉಮಾ**
> ಲಿಂಗತ್ವ ಅಲ್ಪಸಂಖ್ಯಾತೆ, ಹದಡಿ, ದಾವಣಗೆರೆ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 'ಉದ್ಯೋಗಿನಿ' ಯೋಜನೆಯಡಿ ಪ್ರತಿ ಜಿಲ್ಲೆಯಿಂದ 3ರಿಂದ 5 ಜನ ಲಿಂಗತ್ವ ಅಲ್ಪಸಂಖ್ಯಾತ ಫಲಾನುಭವಿಗಳನ್ನು ಪ್ರತಿ ವರ್ಷ ಆಯ್ಕೆ ಮಾಡುತ್ತಿದೆ. ಇವರಲ್ಲಿ ಗರಿಷ್ಠ ಮೊತ್ತದ ಸಾಲ ಬಹುತೇಕರಿಗೆ ದೊರೆಯುತ್ತಿಲ್ಲ.

ಕಿರಾಣಿ ಅಂಗಡಿ, ಕುರಿ, ಕೋಳಿ ಸಾಕಣೆ, ಬಟ್ಟೆ ವ್ಯಾಪಾರ, ಹೈನುಗಾರಿಕೆ, ತಿನಿಸುಗಳ ಮಾರಾಟ ಸೇರಿ ಹಲವು ಉದ್ಯೋಗ ಕೈಗೊಳ್ಳುವ ಉದ್ದೇಶದೊಂದಿಗೆ ಸಾಲ ಸೌಲಭ್ಯ ಕೋರಿ ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಿದ್ದಾರೆ. ಪ್ರತಿಯೊಬ್ಬರಿಗೆ ₹1 ಲಕ್ಷದಿಂದ ₹3 ಲಕ್ಷದವರೆಗೆ ಸಾಲ ಸೌಲಭ್ಯ ನೀಡಲು ಅವಕಾಶವಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಸಾಲದ ಮೊತ್ತದಲ್ಲಿ ಶೇ 50 ಹಾಗೂ ಉಳಿದವರಿಗೆ ಶೇ 30ರಷ್ಟು ಸಹಾಯಧನ ಸೌಲಭ್ಯವಿದೆ. ಭದ್ರತೆ ಒದಗಿಸುತ್ತಿಲ್ಲ ಎಂಬ ಕಾರಣಕ್ಕೆ ಬ್ಯಾಂಕ್‌ಗಳು ₹1 ಲಕ್ಷ ಅಥವಾ ₹1.5 ಲಕ್ಷದ ಮೊತ್ತವನ್ನು ಮಾತ್ರ ನೀಡುತ್ತಿವೆ.

'ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಒಂದೂವರೆ ದಶಕ ಹೋರಾಟ ನಡೆಸಿದ್ದೇವೆ. ಉದ್ಯೋಗಿನಿ ಯೋಜನೆಯ ವ್ಯಾಪ್ತಿಗೆ ಲಿಂಗತ್ವ ಅಲ್ಪಸಂಖ್ಯಾತರನ್ನು ಸೇರಿಸಿದಾಗ ಖುಷಿಯಾಗಿದ್ದೆವು. ಆದರೆ, ಈ ಯೋಜನೆಯ ಫಲಾನುಭವಿಗಳಾಗಲು ಏದುಸಿರು ಬಿಡಬೇಕಿದೆ. ಮಹಿಳಾ ಅಭಿವೃದ್ಧಿ ನಿಗಮ ಆಯ್ಕೆ ಪ್ರಕ್ರಿಯೆ ಮುಗಿಸಿದರೂ ಬ್ಯಾಂಕ್‌ಗಳು ಕೇಳಿದಷ್ಟು ಸಾಲ ನೀಡುತ್ತಿಲ್ಲ' ಎಂದು ಅಳಲು ತೋಡಿಕೊಳ್ಳುತ್ತಾರೆ ಅಭಯ ಸ್ಪಂದನಾ ಸಮುದಾಯ ಆಧಾರಿತ ಸಂಘಟನೆ ಅಧ್ಯಕ್ಷೆ ಚೈತ್ರಾ ಎಸ್.ಹೊನ್ನಮರಡಿ.

ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ಉಮಾ, ಕುರಿ ಸಾಕಾಣಿಕೆಗೆ ಸಾಲ ಕೋರಿ 2024–25ನೇ ಆರ್ಥಿಕ ವರ್ಷದಲ್ಲಿ ಅರ್ಜಿ ಸಲ್ಲಿಸಿದ್ದಾರೆ. 'ಭದ್ರತೆ ಒದಗಿಸಬೇಕು' ಎಂಬ ಬ್ಯಾಂಕಿನ ಷರತ್ತುಗಳನ್ನು ಪೂರೈಸಲು ಇವರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ₹1 ಲಕ್ಷ ಸಾಲಕ್ಕೆ ಮಾತ್ರ ರಾಷ್ಟ್ರೀಕೃತ ಬ್ಯಾಂಕ್ ಮಂಜೂರಾತಿ ನೀಡಿದೆ.

'ಲಿಂಗತ್ವ ಅಲ್ಪಸಂಖ್ಯಾತರಾಗಿರುವ ಕಾರಣಕ್ಕೆ ಸಮಾಜ ತಿರಸ್ಕರಿಸಿದೆ. ಕುಟುಂಬದ ಸದಸ್ಯರೂ ಆಶ್ರಯ ನಿರಾಕರಿಸಿದ್ದಾರೆ. ಭಿಕ್ಷಾಟನೆ ತೊರೆದು ಸ್ವಯಂ ಉದ್ಯೋಗ ಕೈಗೊಳ್ಳುವ ಆಸಕ್ತಿಗೂ ಪ್ರೋತ್ಸಾಹ ಸಿಗುತ್ತಿಲ್ಲ. ಬ್ಯಾಂಕುಗಳು ನೀಡುವ ಕನಿಷ್ಠ ಮೊತ್ತದ ಸಾಲದಲ್ಲಿ ವ್ಯಾಪಾರ, ವಹಿವಾಟು ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಚೈತ್ರಾ ತಿಳಿಸುತ್ತಾರೆ.

'ಬ್ಯಾಂಕ್ ಜೊತೆಗೆ ವ್ಯವಹಾರ ಇಟ್ಟುಕೊಳ್ಳದ ಲಿಂಗತ್ವ ಅಲ್ಪಸಂಖ್ಯಾತರಿಗೆ ಏಕಕಾಲಕ್ಕೆ ದೊಡ್ಡ ಮೊತ್ತದ ಸಾಲ ಮಂಜೂರು ಮಾಡುವುದು ಕಷ್ಟ. ವ್ಯಾಪಾರ, ಉದ್ದಿಮೆಯ ಸ್ವರೂಪವನ್ನು ಗಮನಿಸಿ, ಸ್ಥಳ ಪರಿಶೀಲನೆ ನಡೆಸಿ ವ್ಯವಸ್ಥಾಪಕರು ತೀರ್ಮಾನ ಕೈಗೊಳ್ಳುತ್ತಾರೆ. ಉತ್ತಮ ವಹಿವಾಟು ನಡೆಸಿ ಗರಿಷ್ಠ ಮೊತ್ತದ ಸಾಲಕ್ಕೆ ಅರ್ಹತೆ ಪಡೆಯಲು ಅವರಿಗೆ ಅವಕಾಶವಿದೆ' ಎನ್ನುತ್ತಾರೆ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎಸ್.ಎಸ್.ಆಚಾರ್ಯ.

ಸಮುದ್ರ ಸೇರಿದ ಕಡಲಾಮೆ ಮರಿಗಳು

ಪ್ರಜಾವಾಣಿ ವಾರ್ತೆ

ಉಡುಪಿ: ಬೈಂದೂರು ವ್ಯಾಪ್ತಿಯ ಮರವಂತೆಯ ಕಡಲ ತೀರದಲ್ಲಿ ಸಂರಕ್ಷಿಸಲಾಗಿದ್ದ ಆಲಿವ್ ರಿಡ್ಲಿ ಜಾತಿಗೆ ಸೇರಿದ ಕಡಲಾಮೆಯ ಮೊಟ್ಟೆಯಿಂದ ಮರಿಗಳು ಹೊರಬಂದು ಕಡಲು ಸೇರಿವೆ.

ಮರವಂತೆ ಕಡಲ ತೀರದಿಂದ ಗುರುವಾರ ರಾತ್ರಿ 115 ಮರಿಗಳು ಸಮುದ್ರಕ್ಕೆ ಸೇರಿದವು. ಕಡಲ ತೀರದಲ್ಲಿ ಕಡಲಾಮೆಗಳು ಮೊಟ್ಟೆ ಇಟ್ಟಿದ್ದನ್ನು ಗಮನಿಸಿದ್ದ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸ್ಥಳೀಯ ಮೀನುಗಾರರು ಕಡಲಾಮೆಯ ಮರಿಗಳು ಸುರಕ್ಷಿತವಾಗಿ ಸಮುದ್ರ ಸೇರುವಂತೆ ಮಾಡಿದರು.

'ಸಾಮಾನ್ಯವಾಗಿ 42 ರಿಂದ 60 ದಿವಸಗಳಲ್ಲಿ ಕಡಲಾಮೆ ಮರಿಗಳು ಮೊಟ್ಟೆಯೊಡೆದು ಹೊರ ಬರುತ್ತವೆ. ಕಡಲಾಮೆ ಮೊಟ್ಟೆಯಿಟ್ಟ ಸ್ಥಳವನ್ನು ಗುರುತಿಸಿದ ಬಳಿಕ ನಾವು ಮೊಟ್ಟೆಗಳ ಸಂರಕ್ಷಣೆಗಾಗಿ ಗೂಡು ಮುಚ್ಚಿದ್ದೆವು. ಸ್ಥಳೀಯರಾದ ಕೊರಗು ಖಾರ್ವಿ ಮತ್ತಿತರರು ಸಹಕಾರ ನೀಡಿದ್ದಾರೆ' ಎಂದು ಬೈಂದೂರು ವಲಯ ಅರಣ್ಯಾಧಿಕಾರಿ ಸಂದೇಶ್ ಕುಮಾರ್ ತಿಳಿಸಿದರು.

'ಸೆಪ್ಟೆಂಬರ್‌ನಿಂದ ಫೆಬ್ರುವರಿ ವರೆಗೆ ಕಡಲಾಮೆಗಳು ತೀರಕ್ಕೆ ಬಂದು ಮೊಟ್ಟೆ ಇಡುತ್ತವೆ. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯಿಂದ ರಾತ್ರಿ ಕೂಂಬಿಂಗ್ ನಡೆಸಿ ಮೊಟ್ಟೆ ಇಟ್ಟ ಜಾಗವನ್ನು ಗುರುತಿಸಿ ಸಂರಕ್ಷಿಸುತ್ತೇವೆ' ಎಂದೂ ಅವರು ವಿವರಿಸಿದರು.

'ಮೊಟ್ಟೆಗಳಿರುವ ಪ್ರದೇಶದಲ್ಲಿ ಗೂಡಿನಿಂದ ಮುಚ್ಚದಿದ್ದರೆ ನಾಯಿಗಳು ಮೊಟ್ಟೆಗಳಿಗೆ ಹಾನಿ ಉಂಟು ಮಾಡುತ್ತವೆ. ಜನರು ನಡೆದಾಡುವಾಗಲೂ ಮೊಟ್ಟೆಗಳು ಒಡೆದುಹೋಗುವ ಅಪಾಯವಿದೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಡಲಾಮೆ ಮೊಟ್ಟೆ ಇಡುವ ಅವಧಿಯಲ್ಲಿ ನಾವು ಕಡಲ ತೀರದಲ್ಲಿ ನಿಗಾ ಇರಿಸಿದ್ದೆವು' ಎಂದರು.

ಆಲಿವ್ ರಿಡ್ಲಿ ಜಾತಿಗೆ ಸೇರಿದ ಕಡಲಾಮೆಯ ಮೊಟ್ಟೆಯಿಂದ ಹೊರಬಂದ ಮರಿಗಳು ಸುರಕ್ಷಿತವಾಗಿ ಸಮುದ್ರ ಸೇರಿದವು

ಅಪ್ಪು ಸಂಭ್ರಮ

ಪುನೀತ್ ರಾಜ್‌ಕುಮಾರ್ ನಟಿಸಿರುವ ಅಪ್ಪು ಸಿನಿಮಾ ಬೆಂಗಳೂರಿನ ವೀರೇಶ್ ಚಿತ್ರಮಂದಿರಲ್ಲಿ ಶುಕ್ರವಾರ ಮರು ಬಿಡುಗಡೆಯಾಯಿತು. ಈ ವೇಳೆ ಅಪ್ಪು ಅಭಿಮಾನಿಗಳು ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ತಜ್ಞ ವೈದ್ಯರ ನಿವೃತ್ತಿ ವಯಸ್ಸು ಏರಿಕೆಗೆ ಚಿಂತನೆ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಶಿಕ್ಷಣ ಇಲಾಖೆ ಅಧೀನದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಕರ್ತವ್ಯದಲ್ಲಿರುವ ತಜ್ಞ ವೈದ್ಯರ ನಿವೃತ್ತಿ ವಯಸ್ಸನ್ನು 60 ವರ್ಷದಿಂದ 65 ವರ್ಷಕ್ಕೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಅವರು ಹೇಳಿದ್ದಾರೆ.

ಕಲಬುರ್ಗಿಯ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರೊಂದಿಗೆ ನಗರದಲ್ಲಿ ನಡೆದ ಸಂವಾದದಲ್ಲಿ ಸಚಿವರು ಈ ಮಾತು ಹೇಳಿದ್ದಾರೆ.

'ವೈದ್ಯಕೀಯ ಶಿಕ್ಷಣ ಮತ್ತು ತರಬೇತಿ ಪಡೆದ ನಂತರ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ತಜ್ಞರಾಗಿ ಕರ್ತವ್ಯ ನಿರ್ವಹಿಸಲು ಅತ್ಯಂತ ಕಡಿಮೆ ಸೇವಾವಧಿ ಸಿಗುತ್ತದೆ. ಇದನ್ನು ವಿಸ್ತರಿಸಿದರೆ ಅನುಕೂಲವಾಗುತ್ತದೆ' ಎಂದು ವೈದ್ಯರು ಸಂವಾದದ ವೇಳೆ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಸಚಿವರು, 'ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಅನುಭವಿ ವೈದ್ಯರನ್ನು ಉಳಿಸಿಕೊಳ್ಳಲು ನಿವೃತ್ತಿ ವಯಸ್ಸು ವಿಸ್ತರಿಸುವುದನ್ನು ಪರಿಶೀಲಿಸಲಾಗುವುದು' ಎಂದಿದ್ದಾರೆ. ಜತೆಗೆ, 'ಕಲಬುರ್ಗಿ ಜಯದೇವ ಆಸ್ಪತ್ರೆಗೆ ರೊಬೋಟಿಕ್ ಶಸ್ತ್ರಚಿಕಿತ್ಸಾ ಸೌಲಭ್ಯ ಕಲ್ಪಿಸಲು ಹೆಚ್ಚುವರಿ ಹಣ ಮಂಜೂರು ಮಾಡಲಾಗುತ್ತದೆ. ಮಕ್ಕಳ ವಿಭಾಗಕ್ಕೆ ಐದು ಹೆಚ್ಚುವರಿ ಶಸ್ತ್ರಚಿಕಿತ್ಸಾ ಘಟಕ, ಪ್ರತ್ಯೇಕ ಸಂಶೋಧನಾ ವಿಭಾಗ, ದಾಖಲೆಗಳ ಡಿಜಿಟಲೀಕರಣ ವ್ಯವಸ್ಥೆ ಒದಗಿಸಲಾಗುತ್ತದೆ. ಹೊರಗುತ್ತಿಗೆ ಸಿಬ್ಬಂದಿ ವೇತನ ಹೆಚ್ಚಿಸಲಾಗುತ್ತದೆ' ಎಂದಿದ್ದಾರೆ.

ಗುತ್ತಿಗೆ: ₹2 ಕೋಟಿವರೆಗೆ ಮೀಸಲು

ಒಂದನೇ ಪುಟದಿಂದ...

ಇದಕ್ಕೆ ಪೂರಕವಾಗಿ, ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಒಪ್ಪಿಗೆ ನೀಡಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಸೇರಿದ ಗುತ್ತಿಗೆದಾರರಿಗೆ ₹1 ಕೋಟಿ ವೆಚ್ಚದವರೆಗಿನ ಕಾಮಗಾರಿಗಳಿಗೆ ಮಾತ್ರ ಮೀಸಲಾತಿ ಕಲ್ಪಿಸಲು ಅವಕಾಶ ಇತ್ತು. ಈ ಮಿತಿಯನ್ನು ₹2 ಕೋಟಿಗೆ ಹೆಚ್ಚಿಸಲು ಈ ತಿದ್ದುಪಡಿ ಅನುಕೂಲ ಮಾಡಿಕೊಡಲಿದೆ. ಇದು ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೂ ಅನ್ವಯವಾಗಲಿದೆ.

ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳಿಗೆ ಸಾಮಗ್ರಿ, ಸಾಧನ–ಸಲಕರಣೆಗಳು ಹಾಗೂ ಮಾನವ ಸಂಪನ್ಮೂಲದ ಪೂರೈಕೆಯ (ಸಂಗ್ರಹಣೆ) ಟೆಂಡರ್ ಪ್ರಕ್ರಿಯೆಯಲ್ಲಿ ಈವರೆಗೆ ಮೀಸಲಾತಿ ಇರಲಿಲ್ಲ. ಮುಂದೆ, ₹1 ಕೋಟಿವರೆಗಿನ ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಮೀಸಲಾತಿ ಕಲ್ಪಿಸಲು ತಿದ್ದುಪಡಿ ಮಸೂದೆ ದಾರಿ ಮಾಡಿಕೊಡಲಿದೆ.

ಗ್ರಾ.ಪಂ: ಅನಧಿಕೃತ ನಿರ್ಮಾಣಗಳಿಗೆ ಇ–ಖಾತೆ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಮಾಡದೆ, ಅನುಮತಿ ಪಡೆಯದೆ ರೂಪಿಸಲಾದ ಬಡಾವಣೆಗಳಲ್ಲಿ ನಿರ್ಮಿಸಿದ ಕಟ್ಟಡಗಳನ್ನು ಸಕ್ರಮಗೊಳಿಸುವ ಹಾಗೂ ಇ–ಖಾತೆ ಒದಗಿಸಲು ಅವಕಾಶ ಮಾಡಿಕೊಡುವ ಮಸೂದೆಗೆ ಸಂಪುಟವು ಒಪ್ಪಿಗೆ ನೀಡಿದೆ.

ಗ್ರಾಮ ಪಂಚಾಯಿತಿಗಳಿಗೆ ಆಸ್ತಿ ತೆರಿಗೆಯೇ ಪ್ರಧಾನ ಸಂಪನ್ಮೂಲವಾಗಿದ್ದು, ಅನಧಿಕೃತ ಬಡಾವಣೆ ಮತ್ತು ಕಟ್ಟಡಗಳಿಗೆ ಮೂಲಸೌಕರ್ಯ ಒದಗಿಸುವ ಹೊರೆಯೂ ಬಿದ್ದಿದೆ. ಇಂತಹ 96 ಲಕ್ಷ ಸ್ವತ್ತುಗಳು ಇ–ಸ್ವತ್ತು ವ್ಯವಸ್ಥೆಯಿಂದ ಹೊರಗುಳಿದಿವೆ. ಅವುಗಳನ್ನು ಸಕ್ರಮಗೊಳಿಸಿದರೆ ಸಂಪನ್ಮೂಲ ಕ್ರೋಡೀಕರಣ ಸಾಧ್ಯವಾಗುತ್ತದೆ ಎಂದು ಸಭೆಯಲ್ಲಿ ಚರ್ಚೆಯಾಗಿದೆ.

ಇಂತಹ ಸ್ವತ್ತುಗಳಿಗೆ ಆಸ್ತಿತೆರಿಗೆ ಮತ್ತು ಅದರ ಒಂದು ಪಟ್ಟು ದಂಡ ವಿಧಿಸಿ, ಸಕ್ರಮಗೊಳಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಮಸೂದೆ–2025 ಅವಕಾಶ ಮಾಡಿಕೊಡುತ್ತದೆ.

ಮಂಡ್ಯಕ್ಕೆ ಕೃಷಿ ವಿ.ವಿ ಇಲ್ಲ

ಮಂಡ್ಯದಲ್ಲಿ ಕೃಷಿ ವಿಶ್ವ ವಿದ್ಯಾಲಯ ಸ್ಥಾಪನೆಯ ನಿರ್ಧಾರದಿಂದ ಸರ್ಕಾರ ಹಿಂದಕ್ಕೆ ಸರಿದಿದ್ದು, ಅಲ್ಲಿ ಈಗಿರುವಂತೆ ತೋಟಗಾರಿಕಾ ಕಾಲೇಜು ಮುಂದುವರೆಯಲಿದೆ ಎಂದು ಮೂಲಗಳು ಹೇಳಿವೆ.

ಕಿಕ್‌ಬ್ಯಾಕ್ ಆರೋಪ: ಸಚಿವ ಬಾಲಾಜಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಜಾರಿ ನಿರ್ದೇಶನಾಲಯವು (ಇ.ಡಿ) ಮಾಡಿರುವ ₹1,000 ಕೋಟಿ ಅಬಕಾರಿ ಕಿಕ್‌ಬ್ಯಾಕ್ ಆರೋಪವನ್ನು ತಮಿಳುನಾಡು ಅಬಕಾರಿ ಮತ್ತು ಇಂಧನ ಸಚಿವ ವಿ.ಸೆಂಥಿಲ್ ಬಾಲಾಜಿ ಶುಕ್ರವಾರ ತಳ್ಳಿಹಾಕಿದ್ದಾರೆ.

ತ್ರಿಭಾಷಾ ಸೂತ್ರ ವಿಚಾರದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಎದುರಿಸಲು ಸಾಧ್ಯವಾಗದೇ ಕೇಂದ್ರ ಸರ್ಕಾರ 'ಹತಾಶ ಕ್ರಮ'ವನ್ನು ಕೈಗೊಂಡಿದೆ ಎಂದು ಆರೋಪಿಸಿದ್ದಾರೆ.

ಇ.ಡಿ ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಪಡೆದು ಹೊರಗಿರುವ ಸೆಂಥಿಲ್, ನಮ್ಮ ಸರ್ಕಾರವು 'ಇ.ಡಿ'ಯ ವ್ಯಾಪ್ತಿ ಮೀರಿದ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲಿದೆ ಎಂದಿದ್ದಾರೆ.

'ಸರ್ಕಾರಿ ಒಡೆತನದ ತಮಿಳುನಾಡು ರಾಜ್ಯ ಮಾರಾಟ ನಿಗಮ ನಿಯಮಿತವು (ಟಿಎಎಸ್‌ಎಮ್‌ಎಸಿ) ತಮಿಳುನಾಡಿನ ಪ್ರಮುಖ ಮದ್ಯ ಪೂರೈಕೆ ಸಂಸ್ಥೆಯಾಗಿದೆ. ಗುತ್ತಿಗೆ ಸೇರಿದಂತೆ ನಿಗಮದ ಎಲ್ಲ ವ್ಯವಹಾರಗಳೂ ಪಾರದರ್ಶಕವಾಗಿವೆ. ಗುರುವಾರ ರಾತ್ರಿ ಇ.ಡಿ ನೀಡಿರುವ ಹೇಳಿಕೆಯು ದುರುದ್ದೇಶಪೂರಿತ ಮತ್ತು ತಮಿಳುನಾಡು ಸರ್ಕಾರದ ಬಜೆಟ್‌ಅನ್ನು ಮರೆಮಾಚಿಸುವ ಪ್ರಯತ್ನ' ಎಂದು ಆರೋಪಿಸಿದ್ದಾರೆ.

ಉಸಿರುಗಟ್ಟಿಸಿ ಶುಶ್ರೂಷಕಿಯ ಹತ್ಯೆ

ಒಂದನೇ ಪುಟದಿಂದ...

ನಯಾಜ್‌ಗೆ ಬೇರೊಂದು ಯುವತಿ ಜೊತೆ ಮದುವೆ ನಿಶ್ಚಯವಾದ ವಿಷಯ ತಿಳಿದ ಕೂಡಲೇ, ಅವರ ಮನೆಗೆ ತೆರಳಿ ಸ್ವಾತಿ ಗಲಾಟೆ ಮಾಡಿದ್ದರು. ಇದರಿಂದ ಸಿಟ್ಟಿಗೆದ್ದ ನಯಾಜ್, ಸ್ವಾತಿಯ ಕೊಲೆ ಮಾಡಲು ಸಂಚು ರೂಪಿಸಿದ ಎಂಬುದು ಗೊತ್ತಾಗಿದೆ' ಎಂದು ಅವರು ತಿಳಿಸಿದರು.

ಪಾಳು ಬಿದ್ದ ಶಾಲೆಯಲ್ಲಿ ಕೊಲೆ: 'ಮಾತುಕತೆ ನೆಪದಲ್ಲಿ ಸ್ವಾತಿ ಅವರನ್ನು ಮಾರ್ಚ್ 3ರಂದು ರಟ್ಟೀಹಳ್ಳಿಗೆ ಕರೆಸಿದ್ದ ಆರೋಪಿ ನಯಾಜ್, ಬಾಡಿಗೆ ಕಾರಿನಲ್ಲಿ ರಾಣೆಬೆನ್ನೂರಿನಲ್ಲಿರುವ ಸುವರ್ಣ ಉದ್ಯಾನಕ್ಕೆ ಕರೆದೊಯ್ದಿದ್ದ. ಅದೇ ಉದ್ಯಾನಕ್ಕೆ ದುರ್ಗಾಚಾರಿ ಹಾಗೂ ವಿನಾಯಕ ಸಹ ಬಂದಿದ್ದರು. ನಂತರ, ನಾಲ್ವರು ಸೇರಿ ರಟ್ಟೀಹಳ್ಳಿಯ ಕಬ್ಬಿಣಕಂತಿ ಮಠ ಬಳಿಯ ಪಾಳು ಬಿದ್ದ ತರಳಬಾಳು ಶಾಲೆಗೆ ಹೋಗಿದ್ದರು. ಅಲ್ಲಿ ನಯಾಜ್, ಸ್ವಾತಿ ನಡುವೆ ಜಗಳ ತಾರಕಕ್ಕೇರಿತು' ಎಂದು ಪೊಲೀಸರು ತಿಳಿಸಿದರು.

'ಆಗ ಮೂವರು ಆರೋಪಿಗಳು ಸೇರಿ ಸ್ವಾತಿ ಮೇಲೆ ಹಲ್ಲೆ ಮಾಡಿ, ಕುತ್ತಿಗೆಗೆ ಟವಲ್‌ನಿಂದ ಬಿಗಿದು ಉಸಿರುಗಟ್ಟಿಸಿ ಕೊಂದರು. ಶವವನ್ನು ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಕೂಸಗಟ್ಟಿ ನಂದಿಗುಡಿ ಗ್ರಾಮದ ಬಳಿಯ ತುಂಗಭದ್ರಾ ನದಿಗೆ ಎಸೆದಿದ್ದರು. ಅದೇ ಶವ ತೇಲಿ ಹೋಗಿ, ಮಾರ್ಚ್ 6ರಂದು ಪತ್ತೇಪುರ ಬಳಿ ಪತ್ತೆಯಾಗಿತ್ತು' ಎಂದರು.

> **ಮಾರ್ಚ್ 6ರಂದು ಪತ್ತೆಯಾಗಿದ್ದ ಸ್ವಾತಿ ಮೃತದೇಹ ಕಾಯ್ದಿಡುವ ಸ್ಥಿತಿಯಲ್ಲಿ ಇರಲಿಲ್ಲ. ವೈದ್ಯರ ಸಲಹೆಯಂತೆ ಅಂತ್ಯಕ್ರಿಯೆ ಮಾಡಲಾಗಿದೆ**
> **ಅಂಶುಕುಮಾರ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

ತರಾತುರಿ ಅಂತ್ಯಕ್ರಿಯೆ: ಪೊಲೀಸರ ಅಮಾನತಿಗೆ ಆಗ್ರಹ

'ಸ್ವಾತಿ ಅವರ ಮೃತದೇಹ ಪತ್ತೆಯಾದ 24 ಗಂಟೆಯಲ್ಲೇ ಪೊಲೀಸರು ಅಂತ್ಯಕ್ರಿಯೆ ನಡೆಸಿದ್ದಾರೆ. ಶವದ ಗುರುತು ಪತ್ತೆ ಮಾಡದೇ ಮತ್ತು ಪೋಷಕರನ್ನು ಹುಡುಕದೇ ಅಂತ್ಯಕ್ರಿಯೆ ಮಾಡಿ, ಕರ್ತವ್ಯಲೋಪ ಎಸಗಿರುವವರನ್ನು ಅಮಾನತು ಮಾಡಿ' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮಾರ್ಚ್ 6ರಂದು ಸ್ವಾತಿ ಮೃತದೇಹ ಪತ್ತೆಯಾದ ಬಗ್ಗೆ ಸ್ಥಳೀಯರು, ಹಲಗೇರಿ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ನಂತರ, ಮೃತದೇಹವನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಮರುದಿನವಾದ ಮಾ. 7ರಂದು ಅಂತ್ಯಕ್ರಿಯೆ ನಡೆಸಿದ್ದು ಹಲವು ಅನುಮಾನಕ್ಕೆ ಕಾರಣವಾಗಿದೆ.

'ಸ್ವಾತಿ ಕಾಣೆಯಾದ ಬಗ್ಗೆ ಅವರ ತಾಯಿ ಹಿರೇಕೆರೂರು ಠಾಣೆಗೆ ದೂರು ನೀಡಿದ್ದರು. ಆದರೆ, ಸುಳಿವು ಸಿಕ್ಕಿರಲಿಲ್ಲ. ಅಂತ್ಯಕ್ರಿಯೆ ನೆರವೇರಿಸಿದ್ದ ಹಲಗೇರಿ ಠಾಣೆ ಪೊಲೀಸರು, ಮಾರ್ಚ್ 7ರ ಸಂಜೆ ತಾಯಿಗೆ ವಿಷಯ ತಿಳಿಸಿದ್ದರು. ಮೃತದೇಹದ ಚಿತ್ರ ತೋರಿಸಿದಾಗ, ತಾಯಿ ಗುರುತಿಸಿದ್ದರು. ಆದರೆ, ತಾವೇ ಅಂತ್ಯಕ್ರಿಯೆ ನಡೆಸಿರುವುದಾಗಿ ಪೊಲೀಸರು ಹೇಳಿದರು. ಇದರಿಂದ ನೊಂದ ತಾಯಿ, 'ನನ್ನ ಮಗಳ ಮುಖ ನೋಡಲು ಆಗಲಿಲ್ಲವಲ್ಲ' ಎಂದು ಗೋಳಾಡಿದರು.

ಲವ್ ಜಿಹಾದ್ ಜಾಲ ಸಕ್ರಿಯ: ಬೊಮ್ಮಾಯಿ

'ಸ್ವಾತಿ ಅವರ ಹತ್ಯೆ ನಡೆದಿರುವುದು ಖಂಡನೀಯ. ರಾಜ್ಯದಲ್ಲಿ ಪ್ರೀತಿಯ ಹೆಸರಿನಲ್ಲಿ ಲವ್ ಜಿಹಾದ್ ಜಾಲ ಸಕ್ರಿಯವಾಗಿದ್ದು ಪೊಲೀಸರ ಭಯ ಇಲ್ಲದಿರುವುದೇ ಇಂತಹ ಪ್ರಕರಣ ಹೆಚ್ಚಾಗಲು ಕಾರಣ' ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲ. ವಿಶೇಷವಾಗಿ ಪ್ರೀತಿ ಹೆಸರಿನಲ್ಲಿ ಯುವತಿಯರನ್ನು ವಂಚಿಸಿ ಹತ್ಯೆ ಮಾಡುವ ಹೇಯ ಕೃತ್ಯಗಳು ಹೆಚ್ಚಾಗಿರುವುದು ಅತ್ಯಂತ ಆಘಾತಕಾರಿ' ಎಂದು ಹೇಳಿದ್ದಾರೆ.

'ಲವ್ ಜಿಹಾದ್‌ನಂತಹ ಹೇಯ ಕೃತ್ಯ ನಡೆಸುವವರಿಗೆ ಪೊಲೀಸರ ಭಯ ಇಲ್ಲದಿರುವುದು ಇಂತಹ ಪ್ರಕರಣ ಹೆಚ್ಚಾಗಲು ಕಾರಣ. ಪೊಲೀಸರು ಯಾವುದೇ ಒತ್ತಡಕ್ಕೆ ಮಣಿಯದೇ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡಬೇಕು. ಸ್ವಾತಿ ಕುಟುಂಬಕ್ಕೆ ರಾಜ್ಯ ಸರ್ಕಾರ ಸೂಕ್ತ ಪರಿಹಾರ ಕೊಡಬೇಕು ಮತ್ತು ನ್ಯಾಯ ದೊರಕಿಸಿಕೊಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಅರಣ್ಯ ನಾಶ: ಐವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ): ಇಲ್ಲಿಯ ಹಾವನೂರು ಗ್ರಾಮಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿದ್ದ ಗಿಡ, ಮರಗಳನ್ನು ಕಡಿದು ನಾಶಪಡಿಸಿದ ಆರೋಪದಡಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ಗುತ್ತಲ, ಹರಳಹಳ್ಳಿ ಮತ್ತು ಹಾವನೂರ ಗ್ರಾಮಗಳಲ್ಲಿ ಅರಣ್ಯ ನಾಶ ಮಾಡಿರುವ ಕುರಿತು ಮಾರ್ಚ್ 14ರ 'ಪ್ರಜಾವಾಣಿ' ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಹಾವೇರಿ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಅಹ್ಮದ್ ಅಜೀಜ್ ಅವರು ಅಧಿಕಾರಿಗಳ ಸಮೇತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅರಣ್ಯ ನಾಶಪಡಿಸಿದ ಐವರ ವಿರುದ್ಧ ಪ್ರಕರಣ ದಾಖಲಿಸುವಂತೆ ಸೂಚಿಸಿದರು. ಅದರಂತೆ ಅರಣ್ಯ ಇಲಾಖೆ ಅಧಿಕಾರಿಗಳು, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

'ಜೆಸಿಬಿ ಬಳಸಿ ಗಿಡಗಳನ್ನು ಕಡಿದು ನೆಲವನ್ನು ಸಮ ಮಾಡಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪಹಣಿಯ 9ನೇ ಕಾಲಂನಲ್ಲಿ ಅರಣ್ಯ ಹೆಸರಿದೆ. ಸಸಿ ನೆಡಲು ಈ ಜಾಗವನ್ನು ಮೀಸಲಿಡಲಾಗಿದೆ. 114 ಎಕರೆ ಪೈಕಿ ಹಲವು ಎಕರೆಗಳು ಒತ್ತುವರಿ ಆಗಿರುವ ಅನುಮಾನವಿದೆ. ಈ ಬಗ್ಗೆ ಸಮಿತಿಯಿಂದ ವಿಚಾರಣೆ ನಡೆಯುತ್ತಿದೆ' ಎಂದು ಅಹಮದ್ ಅಜೀಜ್ ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀನಾಥ ಮನೋಹರ ಕರಲೋಕರ್ ಹಾಜರಿದ್ದರು.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052 ದೂ:080–22263479.

ಸಂಖ್ಯೆ: ಬಿಎಂಆರ್‌ಡಿಎ/ಸಿಬ್ಬಂದಿ/31/2024–25 ದಿನಾಂಕ: 10.03.2025

ಟೆಂಡರ್ ಪ್ರಕಟಣೆ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ **Scanning & Digitalisation of 14,000 files & 15.00 lakh pages** ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, **ದಿನಾಂಕ: 14.03.2025 ರಿಂದ ದಿನಾಂಕ: 02.04.2025 ರವರೆಗೆ ಸಂಜೆ 5.30 ಗಂಟೆಯೊಳಗೆ** ದಾಖಲಿಸಲು ಅವಕಾಶವಿರುತ್ತದೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿ/ವಿವರಗಳನ್ನು ವೆಬ್‌ಸೈಟ್ ವಿಳಾಸ: **https://kppp.karnataka.gov.in**ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಜಂಟಿ ಮಹಾನಗರ ಆಯುಕ್ತರು(ಪ್ರಭಾರ),
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

Infosys®
Navigate your next
Infosys Limited
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Wednesday and Thursday, April 16 and 17, 2025 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter and financial year ending March 31, 2025;
2. Approve and take on record the audited standalone financial results of the Company as per INDAS for the quarter and financial year ending March 31, 2025;
3. Approve and take on record the audited financial statements of the Company and its subsidiaries as per INDAS and IFRS for the quarter and financial year ending March 31, 2025;
4. Approve and take on record the audited financial statements of the Company and its subsidiaries as per INDAS for the financial year ending March 31, 2025;
5. Approve and take on record the audited financial statements of the Company as per INDAS for the financial year ending March 31, 2025;
6. Recommend a final dividend, if any for the financial year ending March 31, 2025.

The financial results will be presented to the Board of Directors on April 17, 2025 for their approval.

The details will be made available on the website of the Company- www.infosys.com.

For **Infosys Limited**
Sd/-
A.G.S. Manikantha
Company Secretary

March 14, 2025
Bengaluru, India

Infosys
Navigate your next
Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
First Holder - U J DESAI (Claimant) Joint Holder - JAYENDRA DESAI (Deceased)	ITL011200	145946	832503	833102	600
		150197	266670951	266672750	1800

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue **Letter of Confirmation in lieu of duplicate share certificate(s)** to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

March 14, 2025
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.14/2024–25 KW-3&KW-4, (ದ್ವಿ ಲಕೋಟೆ)
ದಿನಾಂಕ: 11.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 11.03.2025

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ: ಅಟಲ್ ಭೂಜಲ್ ಯೋಜನೆ, 4702– ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು ಮತ್ತು 4702– ಅಣೆಕಟ್ಟು ಮತ್ತು ಪಿಕಪ್ ಪ್ರಧಾನ ಕಾಮಗಾರಿಗಳ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 14/2024–25, ದಿ: 11–03–2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 12–03–2025 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 17–03–2025 ಬೆಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 20–03–2025 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 21–03–2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 24–03–2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

DIPR/TUM/703/KSMCA/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ,
ಬೃಬೆಂಮಪಾಲಿಕೆ ಕಚೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು
ಸಂಖ್ಯೆ:ಕಾಪಾಅ/ಪುಲಿಕೇಶಿನಗರ/ಟೆಂಡರ್/15/2024–25 ದಿನಾಂಕ: 14.03.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಪುಲಿಕೇಶಿನಗರ ವಿಭಾಗ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4)**

ಕ್ರ ಸಂ.	ಕಾಮಗಾರಿಗಳ ಹೆಸರು
1	ವಾರ್ಡ್ ಸಂಖ್ಯೆ–69, ಕಾವಲ್‌ಭೈರಸಂದ್ರದ 1ನೇ ಅಡ್ಡರಸ್ತೆ, 2ನೇ ಅಡ್ಡರಸ್ತೆ, 5ನೇ ಎ ಅಡ್ಡರಸ್ತೆ, ಆತ್ಮಾನಂದ ಕಾಲೋನಿ, ಎಂ.ಎಂ ಬಡಾವಣೆ 2, 3, 4ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲ ಪ್ರದೇಶ, ರಂಕಾನಗರ 1, 2, 3, 4 & 5ನೇ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶ, ಕಾವೇರಿನಗರ 4ನೇ ಮುಖ್ಯರಸ್ತೆ, 2ನೇ, 3ನೇ, 4ನೇ & 5ನೇ ಅಡ್ಡರಸ್ತೆಗಳು, ಸಾಕಮ್ಮ ಹನುಮಂತಪ್ಪ ಬಡಾವಣೆ, ಮುನಿನಾಗಪ್ಪ ಬಡಾವಣೆಯಲ್ಲಿ ರಸ್ತೆಗಳು, ಚರಂಡಿಗಳನ್ನು ಸಮಗ್ರ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗಳನ್ನು ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.400.00 ಲಕ್ಷಗಳು, ಇಎಂಡಿ ಮೊತ್ತ: ₹.6,00,000/–
2	ವಾರ್ಡ್ ಸಂಖ್ಯೆ–72, ಮೋದಿ ಗಾರ್ಡನ್ & ಸುತ್ತಮುತ್ತಲ ಪ್ರದೇಶ, ವಾರ್ಡ್ ಸಂಖ್ಯೆ–75 ಡಿ.ಜೆ ಹಳ್ಳಿ ಮುರುಗೇಶ್ ಮೊದಲಿಯಾರ್ ರಸ್ತೆ, ಮುನೇಶ್ವರ ದೇವಸ್ಥಾನ ಸ್ಟ್ರೀಟ್, ಮೂರೆ ರಸ್ತೆ ಅಡ್ಡ ರಸ್ತೆಗಳು, ವಾರ್ಡ್ ಸಂಖ್ಯೆ–73, ಎಸ್.ಕೆ ಗಾರ್ಡನ್‌ನ ಪುಲಿಕೇಶಿನಗರ, ಐಟಿಐ ಬಡಾವಣೆ & ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳನ್ನು ಸಮಗ್ರ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗಳನ್ನು ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.500.00 ಲಕ್ಷಗಳು, ಇಎಂಡಿ ಮೊತ್ತ: ₹.7,50,000/–
3	ವಾರ್ಡ್ ಸಂಖ್ಯೆ–69, ಕಾವಲ್‌ಭೈರಸಂದ್ರದ ಸುಲ್ತಾನಪಾಳ್ಯದ 2ನೇ, 3ನೇ, 4ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಮತ್ತು ಡಾಂಬರೀಕರಣ ಕಾಮಗಾರಿಗಳನ್ನು ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.100.00 ಲಕ್ಷಗಳು, ಇಎಂಡಿ ಮೊತ್ತ: ₹.2,00,000/–
4	ವಾರ್ಡ್ ಸಂಖ್ಯೆ–80, ಪುಲಿಕೇಶಿನಗರದ ಇ–ಸ್ಟ್ರೀಟ್, ಎಫ್–ಸ್ಟ್ರೀಟ್, ಕ್ಲೀವ್‌ಲ್ಯಾಂಡ್ ಟೌನ್, ವೀರಣ್ಣ ಗಾರ್ಡನ್, ವ್ಹೀಲರ್ಸ್ ರಸ್ತೆ, ತುಳಸಿಮಠ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.300.00 ಲಕ್ಷಗಳು, ಇಎಂಡಿ ಮೊತ್ತ: ₹.4,50,000/–
5	ವಾರ್ಡ್ ಸಂಖ್ಯೆ–69, ಕಾವಲ್‌ಭೈರಸಂದ್ರದ ಎಸ್‌ಹೆಚ್ ಬಡಾವಣೆ, ಮುನಿವೀರಪ್ಪ ಬಡಾವಣೆ, ಗಣೇಶ ಬ್ಲಾಕ್, ಮುನಿನಾಗಪ್ಪ ಬಡಾವಣೆ, ನಂದ ಗೋಕುಲ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.400.00 ಲಕ್ಷಗಳು, ಇಎಂಡಿ ಮೊತ್ತ: ₹.6,00,000/–
6	ವಾರ್ಡ್ ಸಂಖ್ಯೆ–69, ಕಾವಲ್‌ಭೈರಸಂದ್ರದ ಕಾವಲ್‌ಭೈರಸಂದ್ರ ಸರ್ಕಾರಿ ಶಾಲೆ ಹತ್ತಿರ, ಭೀಮಣ್ಣ ಬಡಾವಣೆ, ಸಿ.ಎಲ್ ರಾಮಯ್ಯ ಬಡಾವಣೆ & ಎಂ.ಎಂ ಬಡಾವಣೆ & ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಕಾಮಗಾರಿಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. ಕಾಮಗಾರಿಯ ಅಂದಾಜು ಮೊತ್ತ: ₹.300.00 ಲಕ್ಷಗಳು, ಇಎಂಡಿ ಮೊತ್ತ: ₹.4,50,000/–

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **19.03.2025**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **28.03.2025**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **21.03.2025**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **29.03.2025**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪುಲಿಕೇಶಿನಗರ ವಿಭಾಗ

ಕಾರ್ಮಿಕರಿಗೆ ಕಿಟ್; ₹70 ಕೋಟಿ ಅಕ್ರಮ

₹900 ಕಿಟ್‌ಗೆ ₹2,600ರಂತೆ 12.39 ಲಕ್ಷ ಕಿಟ್‌ಗಳ ಖರೀದಿ • ದಾಖಲೆ ಸಮೇತ ಬಿಜೆಪಿಯ ರವಿಕುಮಾರ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವ ಕಟ್ಟಡ ಕಾರ್ಮಿಕರಿಗೆ ವಿತರಿಸಿದ ರೋಗ ನಿರೋಧಕ ಆಯುರ್ವೇದ ಔಷಧಗಳ ಕಿಟ್ ಖರೀದಿಯಲ್ಲಿ ₹70 ಕೋಟಿಗೂ ಅಧಿಕ ಮೊತ್ತದ ಅವ್ಯವಹಾರ ನಡೆದಿದೆ ಎಂದು ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಆರೋಪಿಸಿದರು.

ವಿಧಾನಪರಿಷತ್‌ನಲ್ಲಿ ಶುಕ್ರವಾರ ಈ ಕುರಿತು ಕೇಳಲಾದ ಪ್ರಶ್ನೆಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಉತ್ತರದಿಂದ ತೃಪ್ತರಾಗದ ಅವರು, ಕಾರ್ಮಿಕ ಇಲಾಖೆ ವಿತರಿಸಿದ್ದ ಕಿಟ್‌ನಲ್ಲಿದ್ದ ಆಯುರ್ವೇದ ಔಷಧ ಪದಾರ್ಥಗಳು ಹಾಗೂ ಅವುಗಳ ಮೇಲೆ ನಿಗದಿ ಮಾಡಿದ್ದ ದರವನ್ನು (ಎಂಆರ್‌ಪಿ) ಪ್ರದರ್ಶಿಸಿದರು.

ಕಿಟ್‌ನಲ್ಲಿರುವ ಎಲ್ಲ ಸಾಮಗ್ರಿಗಳ ಕನಿಷ್ಠ ಮಾರಾಟ ದರ ₹900 ಇದೆ, ಸಗಟು ಮಾರಾಟ ಬೆಲೆ ₹600 ಇದೆ.


ದಾಖಲೆ ಪ್ರದರ್ಶಿಸಿದ ಎನ್. ರವಿಕುಮಾರ್

ಕಾರ್ಮಿಕ ಇಲಾಖೆ ಪ್ರತಿ ಕಿಟ್‌ಗೆ ₹2,600 ನೀಡಿ ಖರೀದಿಸಿದೆ. ಪ್ರತಿ ಜಿಲ್ಲೆಗೂ 34 ಸಾವಿರ ಕಿಟ್‌ಗಳಂತೆ ರಾಜ್ಯದ ಎಲ್ಲೆಡೆ 12.39 ಲಕ್ಷ ಕಿಟ್ ವಿತರಣೆ ಮಾಡಿದೆ. ಇದೊಂದು ಹಗಲುದರೋಡೆ. ಈ ಕುರಿತು ಸೂಕ್ತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಪೂರೈಕೆಯಲ್ಲೂ ಅವ್ಯವಹಾರ

ಒಂದೇ ಕಂಪನಿಗೆ ಕಿಟ್‌ಗಳ ಪೂರೈಕೆಯ ಹೊಣೆ ನೀಡಲಾಗಿದೆ. ಎರಡು ಮೂರು ಜಿಲ್ಲೆಗಳಿಗೆ ಒಂದು ಟೆಂಡರ್‌ನಂತೆ ತಲಾ ₹6.72 ಕೋಟಿಯ 11 ಟೆಂಡರ್ ಕರೆಯಲಾಗಿದ್ದರೂ ಒಂದೇ ಕಂಪನಿ ಎಲ್ಲ ಟೆಂಡರ್ ಪಡೆದಿದೆ. ಪ್ರತಿ ಜಿಲ್ಲೆಗೂ 34 ಸಾವಿರ ಕಿಟ್ ನಿಗದಿ ಮಾಡಲಾಗಿದೆ. ಆದರೆ, ಎರಡು ಸಾವಿರ ಕಿಟ್ ಸಹ ಪೂರೈಸಿಲ್ಲ. ದೊಡ್ಡ ವಂಚನೆ ನಡೆದಿದೆ ಎಂದು ರವಿಕುಮಾರ್ ದೂರಿದರು.

‘ನಿಯಮದ ಪ್ರಕಾರವೇ ಖರೀದಿ’

ಕಾರ್ಮಿಕರ ವೈದ್ಯಕೀಯ ತಪಾಸಣೆ ವರದಿ ಪ್ರಕಾರ ಶೇ 16.6ರಷ್ಟು ಕಾರ್ಮಿಕರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅಂಥವರ ರೋಗನಿರೋಧಕ ಶಕ್ತಿ ಹೆಚ್ಚಿಸಲು ಹಿಂದಿನ ಸರ್ಕಾರದ ಅವಧಿಯಲ್ಲಿ ಔಷಧಗಳ ಕಿಟ್ ವಿತರಿಸಲು ಸಮ್ಮತಿ ನೀಡಲಾಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ಟೆಂಡರ್ ನಿಯಮಗಳ ಪ್ರಕಾರವೇ ನಿಗದಿತ ಬೆಲೆಗೆ ಕಿಟ್ ಖರೀದಿಸಲಾಗಿದೆ. ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಸಚಿವ ಸಂತೋಷ್ ಲಾಡ್ ಸಮರ್ಥಿಸಿಕೊಂಡರು.

ಶಾಮನೂರು ಶುಗರ್ಸ್: ಸಿಟ್ಟಿಗೆದ್ದ ಹರೀಶ್

ಶಾಮನೂರು ಶುಗರ್ಸ್ ಕಾರ್ಖಾನೆಗೆ ಜಮೀನು ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ವಿಧಾನ ಮಂಡಲದ ಮೂರನೇ ಅಧಿವೇಶನದಲ್ಲೂ ಉತ್ತರ ನೀಡದೇ ಇರುವುದಕ್ಕೆ ಬಿಜೆಪಿಯ ಬಿ.ಪಿ. ಹರೀಶ್ ಅವರು ವಿಧಾನಸಭೆಯಲ್ಲಿ ಶುಕ್ರವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ಕಲಾಪದ ಮಧ್ಯೆಯೇ ವಿಷಯ ಪ್ರಸ್ತಾಪಿಸಿದ ಅವರು, ‘ಸಭಾಧ್ಯಕ್ಷರೇ ನಾನು ಸತತ ಮೂರನೇ ಅಧಿವೇಶನದಲ್ಲಿ ಈ ಪ್ರಶ್ನೆ ಕೇಳಿದ್ದೇನೆ. ಈವರೆಗೆ ಉತ್ತರ ನೀಡಿಲ್ಲ. ಪ್ರಶ್ನೆಗಳ ಪಟ್ಟಿಯಲ್ಲೂ ಇಲ್ಲ. ಯಾವ ಕಾರಣದಿಂದ ಹೀಗೆ ಮಾಡಲಾಗುತ್ತಿದೆ? ಉತ್ತರ ಕೊಡದಂತೆ ತಡೆಯುತ್ತಿರುವವರು ಯಾರು’ ಎಂದು ಕೇಳಿದರು.

‘ಶಾಮನೂರು ಸಕ್ಕರೆ ಕಾರ್ಖಾನೆಗೆ 50 ಎಕರೆ ಜಮೀನು ಮಂಜೂರು ಮಾಡಲಾಗಿದೆ. 20 ಎಕರೆ ಜಮೀನಿನಿಂದ ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸಲಾಗಿದೆ. ಸರ್ಕಾರಿ ಜಮೀನು ಕೂಡ ಅಲ್ಲಿದೆ. ₹3.5 ಕೋಟಿ ಪಾವತಿಸುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸಕ್ಕರೆ ಕಾರ್ಖಾನೆಗೆ ಸೂಚಿಸಿತ್ತು. ಈವರೆಗೆ ಅವರು ಹಣ ಪಾವತಿಸಿಲ್ಲ. ರೈತರ ಜಮೀನು ಕಿತ್ತು ಕಾರ್ಖಾನೆಗೆ ಕೊಡಲಾಗುತ್ತಿದೆ’ ಎಂದು ದೂರಿದರು.

ತನಿಖಾ ಸಮಿತಿ ರಚನೆ: ಪ್ರತಿಕ್ರಿಯೆ ನೀಡಿದ ಸಭಾಧ್ಯಕ್ಷ ಯು.ಟಿ. ಖಾದರ್, ‘ಈ ವಿಷಯದ ಬಗ್ಗೆ ನೀವು ಈಗಾಗಲೇ ನನ್ನನ್ನು ಭೇಟಿಮಾಡಿ ಚರ್ಚಿಸಿದ್ದೀರಿ. ಪ್ರಶ್ನೆಗಳಿಗೆ ಉತ್ತರ ನೀಡದೇ ಇರುವುದರ ಹಿಂದಿನ ಕಾರಣಗಳ ಕುರಿತು ತನಿಖೆ ನಡೆಸಲು ಉಪ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದೇನೆ. ಅವರು ನೀಡುವ ವರದಿ ಆಧರಿಸಿ ಕ್ರಮ ಕೈಗೊಳ್ಳುತ್ತೇನೆ’ ಎಂದರು.

‘ನಿಮ್ಮ ಪ್ರಶ್ನೆಗೆ ತ್ವರಿತವಾಗಿ ಉತ್ತರ ಕೊಡಿಸುತ್ತೇನೆ. ನನ್ನ ಕಚೇರಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಕರೆಸಿ ನಿಮ್ಮ ಎದುರಿನಲ್ಲೇ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಭೂ ಮಂಜೂರು ಸಾಧ್ಯವಿಲ್ಲ: ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು: ರಾಜ್ಯದ ಎಲ್ಲ ಪುರಸಭೆಗಳು ಮತ್ತು ಪಟ್ಟಣ ಪಂಚಾಯತ್‌ಗಳ 3 ಕಿ.ಮೀ ವ್ಯಾಪ್ತಿಯ ಅಂತರದಲ್ಲಿರುವ ಯಾವುದೇ ಭೂಮಿಯನ್ನು ಅರ್ಜಿ ನಮೂನೆ 50, 53 ಮತ್ತು 57ರ ಅಡಿ ಮಂಜೂರು ಮಾಡಲು ಅವಕಾಶವಿಲ್ಲ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರ ಗಮನ ಸೆಳೆಯುವ ಸೂಚನೆಯಡಿ ಪ್ರಶ್ನೆಗೆ ಉತ್ತರಿಸಿ ಅವರು ಈ ವಿಷಯ ತಿಳಿಸಿದರು. ಈ ಕಾಯ್ದೆ 40 ವರ್ಷಗಳ ಹಿಂದೆಯೇ ಆಗಿತ್ತು.2021ರಲ್ಲಿ ಈ ಕುರಿತು ಮತ್ತೊಮ್ಮೆ ಸುತ್ತೋಲೆ ಹೊರಡಿಸಲಾಗಿತ್ತು ಎಂದರು.

ಹೀಗಾಗಿ ಯಾರಾದರೂ ಅರ್ಜಿ ಹಾಕಿದರೆ ಸಹಜವಾಗಿ ತಿರಸ್ಕೃತವಾಗುತ್ತದೆ. ಈ ಜಾಗಗಳಲ್ಲಿ ಯಾರಾದರೂ ಸಾಗುವಳಿ ಮಾಡುತ್ತಿದ್ದರೆ, ಒಕ್ಕಲೆಬ್ಬಿಸುವುದಿಲ್ಲ. ಒಂದು ವೇಳೆ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭ ಬಂದಾಗ ಪರಿಹಾರವನ್ನು ಯಾವ ರೀತಿ ನೀಡಬೇಕು ಎಂಬ ವಿಚಾರವಾಗಿ ಮುಖ್ಯಮಂತ್ರಿ ಅವರ ಜತೆ ಚರ್ಚಿಸಲಾಗುವುದು ಎಂದು ಕೃಷ್ಣಬೈರೇಗೌಡ ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು, ‘ನಾನು ಹಿಂದೆ ಕಂದಾಯ ಸಚಿವನಾಗಿದ್ದೆ. ನಾನೇ ಆಗಲಿ, ಕೃಷ್ಣ ಬೈರೇಗೌಡರೇ ಆಗಲಿ ಕಾನೂನು ಬದಲಾವಣೆ ಮಾಡಲು ಸಾಧ್ಯವಿಲ್ಲ’ ಎಂದು ವಿವರಿಸಿದರು.

ಊರುಗೋಲಿನಲ್ಲೇ ಶುಭಾಶಯ ವಿನಿಮಯ

ಬೆಂಗಳೂರು: ಅನಾರೋಗ್ಯದ ಕಾರಣದಿಂದ ಊರುಗೋಲು ಹಿಡಿದು ವಿಧಾನಸಭೆಯ ಕಲಾಪದಲ್ಲಿ ಭಾಗಿಯಾಗುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರು ಶುಕ್ರವಾರ ಸದನದಲ್ಲಿ ಪರಸ್ಪರ ಊರುಗೋಲು ಎತ್ತಿ ತೋರಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

ಸುರೇಶ್ ಕುಮಾರ್ ಮೊದಲೇ ಸದನಕ್ಕೆ ಬಂದಿದ್ದರು. ಮುಖ್ಯಮಂತ್ರಿಯವರು ಊರುಗೋಲು ಹಿಡಿದು ನಿಧಾನವಾಗಿ ನಡೆದು ಬಂದು ತಮ್ಮ ಆಸನದಲ್ಲಿ ಕುಳಿತರು. ಆಗ ಸುರೇಶ್ ಕುಮಾರ್ ಅವರು ಚೀಟಿಯೊಂದರಲ್ಲಿ, ‘ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಮಸ್ಕಾರ. ನಾವಿಬ್ಬರೂ ಸಮಾನ ದುಃಖಿಗಳು! ನಾವಿಬ್ಬರೂ ವಾಕಿಂಗ್ ಸ್ಟಿಕ್ ಸ್ನೇಹಿತರು’ ಎಂದು ಬರೆದು ಸಿದ್ದರಾಮಯ್ಯ ಅವರಿಗೆ ಕಳುಹಿಸಿದರು.

ಚೀಟಿಯನ್ನು ಓದಿದ ಸಿದ್ದರಾಮಯ್ಯ ಅವರು ತಮ್ಮ ಊರುಗೋಲನ್ನು ಎತ್ತಿ ಸುರೇಶ್ ಕುಮಾರ್ ಅವರಿಗೆ ತೋರಿಸಿದರು. ಇತ್ತ ಸುರೇಶ್ ಕುಮಾರ್ ಅವರೂ ತಮ್ಮ ಊರುಗೋಲನ್ನು ಎತ್ತಿ ಸಿದ್ದರಾಮಯ್ಯ ಅವರಿಗೆ ತೋರಿಸಿದರು.

‘7 ವಿ.ವಿ ಮುಚ್ಚುವುದಿಲ್ಲ’

ಬೆಂಗಳೂರು: ಹೊಸದಾಗಿ ಸ್ಥಾಪನೆಯಾಗಿರುವ ಏಳು ವಿಶ್ವವಿದ್ಯಾಲಯಗಳನ್ನು ಮುಚ್ಚುವುದಿಲ್ಲ. ಸರ್ಕಾರ ಅಂತಹ ಯಾವುದೇ ತೀರ್ಮಾನ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿ ಶುಕ್ರವಾರ ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ

ಈ ವಿಷಯ ಕುರಿತು ಬಿಜೆಪಿಯ ಡಾ.ಸಿ.ಎನ್.ಅಶ್ವತ್ಥನಾರಾಯಣ ನಿಲುವಳಿ ಸೂಚನೆ ಮಂಡಿಸಲು ಮುಂದಾದರು. ಆಗ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ, ‘ವಿಶ್ವವಿದ್ಯಾಲಯಗಳನ್ನು ಮುಚ್ಚುವುದಾಗಿ ನಾವು ಎಲ್ಲಿಯೂ ಹೇಳಿಲ್ಲ. ಯಾವುದೇ ಆತಂಕ ಬೇಡ’ ಎಂದರು.

‘ಏಳು ಹೊಸ ವಿ.ವಿ.ಗಳನ್ನು ಮುಂದುವರಿಸಬೇಕೋ? ಬೇಡವೋ ಎಂಬುದನ್ನು ಪರಿಶೀಲಿಸಲು ಉಪ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದೆ. ವರದಿ ಸಲ್ಲಿಸಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಅವರು ಹೇಳಿದರು.

‘ಸರ್ಕಾರದಲ್ಲೇ ದ್ವಂದ್ವ’: ಆ ಗವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ ಹೊಸ ವಿ.ವಿಗಳನ್ನು ಮುಚ್ಚುವುದಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಸಿ.ಎಂ ಇಲ್ಲ ಎನ್ನುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರದಲ್ಲೇ ದ್ವಂದ್ವ ನಿಲುವು ಇದೆ’ ಎಂದು ಎಂದು ಛೇಡಿಸಿದರು.

‘ಹಲ್ಲು ಕೀಳುವ ವೈದ್ಯರ ಕಂಡು ಹೆದರಿಕೆ’

ಚರ್ಚೆಯ ಮಧ್ಯೆ ಪತ್ರಿಕಾ ತುಣುಕೊಂದನ್ನು ಪ್ರದರ್ಶಿಸಿದ ಅಶ್ವತ್ಥನಾರಾಯಣ, ‘ಉನ್ನತ ಶಿಕ್ಷಣ ಸಚಿವರು ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಾಗಿ ಸಂದರ್ಶನದಲ್ಲೇ ಹೇಳಿದ್ದಾರೆ’ ಎಂದರು.

ಆಗ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ‘ಅಶ್ವತ್ಥನಾರಾಯಣ ಅವರ ಅವಧಿಯಲ್ಲೇ ಈ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದು. ಅದಕ್ಕಾಗಿ ಅವರು ಈ ವಿಷಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ’ ಎಂದು ಕಾಲೆಳೆದರು.

ಮಧ್ಯ ಪ್ರವೇಶಿಸಿದ ಆರ್. ಅಶೋಕ, ‘ಸುಧಾಕರ್ ದಂತ ವೈದ್ಯ. ಅವರಿಗೆ ಹಲ್ಲು ಕೀಳುವುದಷ್ಟೇ ಗೊತ್ತು, ಜೋಡಿಸುವುದು ಗೊತ್ತಿಲ್ಲ. ಅದಕ್ಕಾಗಿ ನಮಗೆ ಹೆದರಿಕೆ’ ಎಂದು ತಮಾಷೆ ಮಾಡಿದರು.

‘ನಾನು ಹಲ್ಲು ಕಿತ್ತು ಜೋಡಿಸುವ ತಜ್ಞ ದಂತ ವೈದ್ಯ (ಪ್ರೊಸ್ಥೊಡಾಂಟಿಸ್ಟ್)’ ಎಂದು ಸುಧಾಕರ್ ಹೇಳಿದರು.

ಪರಿಷತ್ತಿನಲ್ಲಿ ಬಿಜೆಪಿ–ಜೆಡಿಎಸ್ ಪಟ್ಟು, ಗದ್ದಲ • 2 ಬಾರಿ ಕಲಾಪ ಮುಂದೂಡಿಕೆ

‘ಗ್ಯಾರಂಟಿ’ಗೆ ಪರಿಶಿಷ್ಟರ ಹಣ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಹಣ ಬಳಸಿಕೊಳ್ಳುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಬಿಜೆಪಿ–ಜೆಡಿಎಸ್ ಸದಸ್ಯರು ವಿಧಾನಪರಿಷತ್ತಿನಲ್ಲಿ ಪಟ್ಟುಹಿಡಿದರು. ಈ ವಿಷಯವು ಆಡಳಿತ–ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ವಾಗ್ವಾದಕ್ಕೂ ಕಾರಣವಾಯಿತು.

ಬಿಜೆಪಿಯ ಹೇಮಲತಾ ನಾಯಕ್ ಪ್ರಶ್ನೆಗೆ ಉತ್ತರ ನೀಡಲು ಮುಂದಾದ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಮಾತಿಗೆ ತೃಪ್ತರಾಗದ ವಿರೋಧ ಪಕ್ಷಗಳ ಸದಸ್ಯರು, ಪರಿಶಿಷ್ಟರ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್, ಅವೇ ಸಮುದಾಯಗಳ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನವನ್ನು ದುರ್ಬಳಕೆ ಮಾಡುತ್ತಿದೆ ಎಂದು ದೂರಿದರು.

ವಿರೋಧ ಪಕ್ಷಗಳ ಆಕ್ಷೇಪವನ್ನೂ ಲೆಕ್ಕಿಸದೆ 2023–24ನೇ ಸಾಲಿನಲ್ಲಿ ಐದು ಗ್ಯಾರಂಟಿ ಯೋಜನೆಗಳಿಗೆ ₹10,287 ಕೋಟಿ ಬಳಕೆ ಮಾಡಲಾಗಿತ್ತು. 2024–25ನೇ ಸಾಲಿನಲ್ಲಿ ಫೆಬ್ರುವರಿವರೆಗೆ ₹9,798 ಕೋಟಿ ಬಳಸಿಕೊಳ್ಳಲಾಗಿದೆ. ಗ್ಯಾರಂಟಿ ಯೋಜನೆಯಲ್ಲಿ ಎಲ್ಲ ವರ್ಗದ ಜನರೂ ಇದ್ದಾರೆ. ಅದಕ್ಕೆ ಪ್ರತ್ಯೇಕ ಅನುದಾನ ಮೀಸಲಿಡಲಾಗಿದೆ. ಆದರೂ, ಪರಿಶಿಷ್ಟರ ಹಣ ಏಕೆ ಬೇಕು ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಆಡಳಿತ–ವಿರೋಧ ಪಕ್ಷಗಳ ಸದಸ್ಯರ ವಾಗ್ವಾದ, ಗದ್ದಲದ ಕಾರಣ ಸಭಾಪತಿ ಬಸವರಾಜ ಹೊರಟ್ಟಿ ಎರಡು ಬಾರಿ ಕಲಾಪ ಮುಂದೂಡಿದರು. ಈ ಕುರಿತು ಸುದೀರ್ಘ ಚರ್ಚೆಗೆ ಅವಕಾಶ ನೀಡುವುದಾಗಿ ಭರವಸೆ ನೀಡಿದರು.

ಎಸ್‌ಸಿಎಸ್‌ಪಿ, ಎಸ್‌ಟಿಪಿ ಕಾಯ್ದೆ ರೂಪಿಸಲಿ: ಮಹದೇವಪ್ಪ

ಕೇಂದ್ರ ಹಾಗೂ ಬಿಜೆಪಿ ಅಧಿಕಾರದಲ್ಲಿ ಇರುವ ಯಾವ ರಾಜ್ಯದಲ್ಲೂ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಜಾರಿಗೆ ತಂದಿಲ್ಲ. ಪರಿಶಿಷ್ಟರ ಕಲ್ಯಾಣಕ್ಕೆ ಪ್ರತ್ಯೇಕ ಅನುದಾನ ಮೀಸಲಿಟ್ಟಿಲ್ಲ. ಅಂತಹ ಅವಕಾಶ ಕಲ್ಪಿಸಿರುವುದೇ ಕಾಂಗ್ರೆಸ್. ಅದನ್ನು ಸಹಿಸದೆ ಬಿಜೆಪಿ–ಜೆಡಿಎಸ್ ಟೀಕೆ ಮಾಡುತ್ತಿವೆ ಎಂದು ಸಮಾಜಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಮೊದಲ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಜಾರಿಗೆ ತರಲಾಗಿತ್ತು. ಈ ದೇಶದ ಮೂಲ ನಿವಾಸಿಗಳಾದ ಪರಿಶಿಷ್ಟ ಜಾತಿ, ಪಂಗಡದ ಜನರ ಕಲ್ಯಾಣಕ್ಕೆ ಬಿಜೆಪಿಯಿಂದ ಕಾಂಗ್ರೆಸ್ ಪಾಠ ಕಲಿಯಬೇಕಿಲ್ಲ. ಅಷ್ಟೊಂದು ಕಾಳಜಿ ಇದ್ದರೆ ದೇಶದ ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಮೀಸಲಿಡಬೇಕಿತ್ತು. ಇಂತಹ ಕೆಲಸ ಮಾಡಲು ರಾಜ್ಯ ಬಿಜೆಪಿ ನಾಯಕರು ಸಲಹೆ ನೀಡದೇ, ಮೋದಿ ಅವರಂತೆ ಕಾಂಗ್ರೆಸ್ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಅವರು ಟೀಕಿಸಿದರು.

ಅನ್ಯ ಉದ್ದೇಶಕ್ಕೆ ಬಳಸಿದ್ದೇ ಬಿಜೆಪಿ: ಪ್ರಿಯಾಂಕ್

ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ಅನ್ಯ ಯೋಜನೆಗಳಿಗೆ ಬಳಸಿಕೊಂಡಿತ್ತು. ಅದನ್ನು ತಡೆಯಲು ವರ್ಷದ ಹಿಂದೆ ಕಾಯ್ದೆಗೆ ತಿದ್ದುಪಡಿ ತಂದೆವು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪರಿಶಿಷ್ಟರು ಫಲಾನುಭವಿಗಳಲ್ಲದ ಅನ್ಯ ಯೋಜನೆಗಳಿಗೆ ಬಿಜೆಪಿ ನೇತೃತ್ವದ ಸರ್ಕಾರ ಹಣ ಬಳಸಿಕೊಂಡಿತ್ತು. ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರಾಗಿದ್ದ ಗೋವಿಂದ ಕಾರಜೋಳ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದರು. ಬಿಜೆಪಿ ಅಧಿಕಾರದಲ್ಲಿರುವ ಬೇರೆ ರಾಜ್ಯಗಳಲ್ಲೂ ಪರಿಶಿಷ್ಟರಿಗೆ ಹೆಚ್ಚಿನ ಅನುದಾನ ನೀಡುತ್ತಿಲ್ಲ ಎಂದ ಪ್ರಿಯಾಂಕ್, ಈ ಕುರಿತು ಪ್ರಕಟವಾದ ಪತ್ರಿಕಾ ವರದಿಗಳನ್ನು ಪ್ರದರ್ಶಿಸಿದರು.

ಡಿಕ್ಕಿ: ರುದ್ರಪ್ಪ ಲಮಾಣಿಗೆ ಗಂಭೀರ ಗಾಯ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ಜವನಗೊಂಡನಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ– 48ರ ಸರ್ವೀಸ್ ರಸ್ತೆಯಲ್ಲಿ ಶುಕ್ರವಾರ ಮೂತ್ರ ವಿಸರ್ಜನೆಗಾಗಿ ಕಾರ್‌ನಿಂದ ಕೆಳಗಿಳಿದಿದ್ದ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನಿಂದ ಕುಮಾರ ಪಟ್ಟಣ ಸಮೀಪದ ತಮ್ಮ ಸ್ವಗ್ರಾಮಕ್ಕೆ ರುದ್ರಪ್ಪ ತೆರಳುತ್ತಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಅಪಾಯದಿಂದ ಪಾರಾಗಿದ್ದಾರೆ. ಬೈಕ್ ಚಾಲಕ ನಾಪತ್ತೆಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಿಯಾಂಕ್ ಕೆರಳಿಸಿದ ‘ಹಾಲು–ನೀರು’ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಸೇರಿದಂತೆ ವಿವಿಧ ಸೇವೆಗಳಿಗೆ ಪಾವತಿಸಿದ್ದ ಹಣದ ಮಾಹಿತಿ ಬಹಿರಂಗಪಡಿಸದ ಸರ್ಕಾರದ ನಡೆ ಶುಕ್ರವಾರವೂ ವಿಧಾನಪರಿಷತ್‌ನಲ್ಲಿ ಕೋಲಾಹಲ ಸೃಷ್ಟಿಸಿತು.

ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಟಿ.ಎಸ್. ಶರವಣ, ಗ್ಯಾರಂಟಿ ಯೋಜನೆಯ ಮೌಲ್ಯಮಾಪನಕ್ಕೆ ಹಲವು ಸಂಸ್ಥೆಗಳನ್ನು ಬಳಸಿಕೊಳ್ಳಲಾಗಿದೆ. ಆದರೆ, ಎರಡು ಸಂಸ್ಥೆಗಳ ಮಾಹಿತಿಯನ್ನು ನೀಡದೆ ಮುಚ್ಚಿಟ್ಟಿದೆ. ರೈಟ್ ಪೀಪಲ್ ಸಂಸ್ಥೆಗೆ ನಿಡಿದ ₹9.25 ಕೋಟಿಯ ಮಾಹಿತಿಯನ್ನೂ ನೀಡಿಲ್ಲ. ಸಾರ್ವಜನಿಕರ ಹಣ ದುರ್ಬಳಕೆ ಮಾಡಲಾಗಿದೆ ಎಂದರು.

ಶರವಣ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಪುಟ್ಟಣ್ಣ, ಯಾವ ವಿಷಯದ ಮಾಹಿತಿ ಬೇಕು ಎನ್ನುವ ಕುರಿತು ಸ್ಪಷ್ಟಪಡಿಸುವಂತೆ ಆಗ್ರಹಿಸಿದರು.

ಈ ವಾಗ್ವಾದದಲ್ಲಿ ಮಧ್ಯ ಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ ಕುರಿತು ಶರವಣ ಹೇಳಿದ ಮಾತು ಸದನದ ಚರ್ಚೆಯ ದಿಕ್ಕನ್ನೇ ಬದಲಾಯಿಸಿತು. ‘ನೀವು ನಮಗಿಂತ ಬುದ್ಧಿವಂತರು. ನೀವು ಹಾಲು ಕುಡಿದಷ್ಟು, ನಾನು ನೀರು ಕುಡಿದಿಲ್ಲ’ ಎಂಬ ಶರವಣ ಮಾತಿಗೆ ಪ್ರಿಯಾಂಕ್ ಖರ್ಗೆ ಕೆರಳಿದರು.

‘ಕೆಲವರಿಗೆ ದಲಿತರೊಬ್ಬರು ಶಾಸಕ, ಸಚಿವರಾಗುವುದು, ಕಂಪನಿ ತೆರೆಯುವುದು, ವ್ಯವಹಾರ ಮಾಡುವುದನ್ನು ಸಹಿಸಲು ಆಗುತ್ತಿಲ್ಲ. ಇದು ಅವರ ಅಸೂಯೆ, ಅಸಹನೆ ತೋರಿಸುತ್ತಿದೆ. ಇಂತಹ ಅಪಮಾನವನ್ನು ನಮ್ಮ ಕುಟುಂಬದ ವಿರುದ್ಧ ನಿರಂತರವಾಗಿ ಜೆಡಿಎಸ್–ಬಿಜೆಪಿ ಮಾಡುತ್ತಿವೆ’ ಎಂದರು.

ಪ್ರಿಯಾಂಕ್ ಪರವಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಸದಸ್ಯರು ಬೆಂಬಲಕ್ಕೆ ನಿಂತರು. ‘ನಾನು ಬೇರೆ ಅರ್ಥದಲ್ಲಿ ಹೇಳಿಲ್ಲ. ಒಳ್ಳೆಯ ಭಾವನೆಯಿಂದ ಹೋಲಿಕೆ ಮಾಡಿದೆ’ ಎಂದು ಶರವಣ ಹೇಳಿದರೂ, ಮಾತಿನ ಚಕಮಕಿ ನಿಲ್ಲಲಿಲ್ಲ. ಕೊನೆಗೆ ಸಭಾಪತಿ ಪೀಠದಲ್ಲಿದ್ದ ಎಸ್.ಎಲ್. ಬೋಜೇಗೌಡ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ದಿನ ವಿಸ್ಕಿ ಕುಡಿತೇವೆ, ನಿಮಗೇನು?: ಡಿಕೆಶಿ

‘ಪ್ರಿಯಾಂಕ್ ಖರ್ಗೆ ಹಾಲು ಕುಡಿದರೆ ನಿಮಗೇನು? ನಾವು ದಿನಾ ಬೆಳಿಗ್ಗೆ ವಿಸ್ಕಿ ಕುಡಿಯುತ್ತೇವೆ. ಅದನ್ನು ಯಾರಾದರೂ ಏಕೆ ಪ್ರಶ್ನಿಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲಘುಧಾಟಿಯಲ್ಲಿ ಶರವಣ ಅವರಿಗೆ ತಿರುಗೇಟು ಕೊಟ್ಟರು.

‘ನೀವು ಚಿನ್ನದ ವ್ಯಾಪಾರ ಮಾಡುತ್ತೀರಿ, ಅದರಲ್ಲಿ ಬೆಳ್ಳಿ, ತಾಮ್ರ ಹೆಚ್ಚು ಹಾಕುವಿರಿ ಎಂದು ಟೀಕೆ ಮಾಡಲು ಆಗುತ್ತದೆಯೇ? ಎಲ್ಲರ ಬಗ್ಗೆ ಗೌರವ ಇರಬೇಕು. ಯಾರು–ಯಾರಿಗೂ ಚುಚ್ಚುವ ಕೆಲಸ ಮಾಡಬಾರದು’ ಎಂದು ಶರವಣ ಅವರಿಗೆ ಕಿವಿಮಾತು ಹೇಳಿದರು.

‘ಹೊಟ್ಟೆ ಪಾಡು, ವೃತ್ತಿಧರ್ಮ’ದ ಬಗ್ಗೆ ಪ್ರಸ್ತಾಪಿಸಿದ್ದಕ್ಕೆ ವಿರೋಧ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಆಪ್ತ ಮಾತುಕತೆ...

ವಿಧಾನ ಪರಿಷತ್‌ನಲ್ಲಿ ಶನಿವಾರ ಸದಸ್ಯ ದಿನೇಶ್ ಗೂಳಿಗೌಡ ಮೊಬೈಲ್‌ನತ್ತ ದೃಷ್ಟಿ ನೆಟ್ಟರೆ, ಸದಸ್ಯೆ ಬಲ್ಕೀಸ್ ಬಾನು ಅವರು ಸಚಿವ ದಿನೇಶ್ ಗುಂಡೂರಾವ್ ಜೊತೆ ಮಾತಿನಲ್ಲಿ ತೊಡಗಿದ್ದರು. ಸಚಿವ ಪ್ರಿಯಾಂಕ್ ಖರ್ಗೆ ಅವರ ಕತ್ತು ಹಿಡಿದು ಉಮಾಶ್ರೀ ಅವರು ಕಿಚಾಯಿಸಿದರು. ಸಚಿವರಾದ ಬೋಸರಾಜು, ಮಹಾದೇವಪ್ಪ, ಸದಸ್ಯ ಸಲೀಂ ಅಹ್ಮದ್ ಅವರು ಪರಸ್ಪರ ಮಾತಿನಲ್ಲಿ ತೊಡಗಿದ್ದರು

–ಪ್ರಜಾವಾಣಿ ಚಿತ್ರ ಎಸ್.ಕೆ.ದಿನೇಶ್

14 ಜಿಲ್ಲೆಗಳಲ್ಲಿ ತೆಂಗಿಗೆ ಬಿಳಿನೊಣದ ಕೀಟಬಾಧೆ

ಬೆಂಗಳೂರು: ‘ರಾಜ್ಯದ 14 ಜಿಲ್ಲೆಗಳ ವ್ಯಾಪ್ತಿಯಲ್ಲಿ 1,48,448 ಹೆಕ್ಟೇರ್ ವಿಸ್ತೀರ್ಣದಲ್ಲಿ ತೆಂಗಿನ ಮರಗಳಲ್ಲಿ ಬಿಳಿನೊಣದ ಕೀಟಬಾಧೆ ಕಂಡುಬಂದಿದೆ. ಈ ಕೀಟಬಾಧೆ ತಡೆಗೆ ₹15.31 ಕೋಟಿ ಅನುದಾನ ಒದಗಿಸಲಾಗಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಜೆಡಿಎಸ್‌ನ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಅವರ ಪ್ರಶ್ನೆಗೆ ತೋಟಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಅವರು, ‘ತುಮಕೂರು ಜಿಲ್ಲೆಯಲ್ಲಿ 64,457, ಹಾಸನ ಜಿಲ್ಲೆಯಲ್ಲಿ 34,530, ಚಿಕ್ಕಮಗಳೂರು ಜಿಲ್ಲೆಯಲ್ಲಿ 20,746 ಮತ್ತು ಮಂಡ್ಯ ಜಿಲ್ಲೆಯಲ್ಲಿ 19,957 ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿಳಿನೊಣದ ಬಾಧೆ ಇದೆ’ ಎಂದರು.

ತೆಂಗು ಅಭಿವೃದ್ಧಿ ಮಂಡಳಿ ಮೂಲಕ ಕೀಟಬಾಧೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮಣ್ಣಿನಲ್ಲಿನ ಪೋಷಕಾಂಶಗಳ ವೃದ್ಧಿ ಮತ್ತು ಔಷಧಿ ಸಿಂಪಡಣೆ ಮೂಲಕ ಸಮಸ್ಯೆ ನಿಯಂತ್ರಣಕ್ಕೆ ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

‘ತೆಂಗು ಬೆಳೆಗಾರರಿಗೆ ಪ್ರತಿ ಎಕರೆಗೆ ₹90,000 ನಷ್ಟವಾಗುತ್ತಿದೆ. ಪ್ರತಿ ಎಕರೆಗೆ ಕನಿಷ್ಠ ₹50,000ದವರೆಗೆ ಪರಿಹಾರ ನೀಡಬೇಕು’ ಎಂದು ಸುರೇಶ್ ಬಾಬು ಆಗ್ರಹಿಸಿದರು.

‘ತೋಟಗಾರಿಕಾ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ. ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ರೈತರಿಗೆ ಪರಿಹಾರ ಒದಗಿಸಲು ಪ್ರಯತ್ನಿಸಲಾಗುವುದು’ ಎಂದು ಭರವಸೆ ನೀಡಿದರು.

‘ಟೌನ್‌ಶಿಪ್: ವರ್ಷದಲ್ಲಿ ಕಾಮಗಾರಿ ಶುರು’

ಕೆಜಿಎಫ್‌ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ‘ಇಂಟಿಗ್ರೇಟೆಡ್ ಟೌನ್‌ಶಿಪ್ ಕಾಮಗಾರಿಯನ್ನು ವರ್ಷದೊಳಗೆ ಆರಂಭಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಕಾಂಗ್ರೆಸ್‌ನ ಎಂ. ರೂಪಕಲಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಕೆಜಿಎಫ್, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಬುರಗಿ, ಬಳ್ಳಾರಿ ಮತ್ತು ತುಮಕೂರಿನ ವಸಂತನರಸಾಪುರದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಇಂಟಿಗ್ರೇಟೆಡ್ ಟೌನ್‌ಶಿಪ್‌ಗಳನ್ನು ನಿರ್ಮಿಸುವುದಾಗಿ 2024–25ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಕೆಜಿಎಫ್‌ನ ಬಂಗಾರದ ಗಣಿ ಗ್ರಾಮದಲ್ಲಿ ಈ ಉದ್ದೇಶಕ್ಕೆ 294 ಎಕರೆ ಜಮೀನು ಕಾಯ್ದಿರಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ’ ಎಂದರು.

ಟೌನ್‌ಶಿಪ್‌ನಲ್ಲಿ ಸಾಫ್ಟ್‌ವೇರ್, ಹಾರ್ಡ್‌ವೇರ್ ಕಂಪನಿಗಳು, ಆಸ್ಪತ್ರೆ, ಶಾಲಾ- ಕಾಲೇಜುಗಳನ್ನು ಒಂದೇ ಕಡೆ ಸ್ಥಾಪಿಸಲಾಗುವುದು. ಚೆನ್ನೈ-ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ ಸಮೀಪದಲ್ಲೇ ಈ ಟೌನ್‌ಶಿಪ್ ನಿರ್ಮಾಣವಾಗಲಿದೆ ಎಂದು ತಿಳಿಸಿದರು.

‘ಜೆಜೆಎಂ ಟೆಂಡರ್‌ನಲ್ಲಿ ಅಕ್ರಮ ಪತ್ತೆ’

ಬೆಂಗಳೂರು: ‘ತುಮಕೂರು ಜಿಲ್ಲೆಯಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ದೃಢಪಟ್ಟಿದೆ. ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ವಿರುದ್ಧ ದೋಷಾರೋಪ ನಿಗದಿಗೆ ಅನುಮತಿ ನೀಡಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಅವರ ಗಮನ ಸೆಳೆಯುವ ಸೂಚನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಪರವಾಗಿ ವಿಧಾನಸಭೆಯಲ್ಲಿ ಶುಕ್ರವಾರ ಉತ್ತರಿಸಿದ ಅವರು, ‘571 ಕಾಮಗಾರಿಗಳ ಕುರಿತು ತನಿಖೆಗೆ ಆದೇಶಿಸಲಾಗಿದೆ. 183 ಕಾಮಗಾರಿಗಳ ಪರಿಶೀಲನೆ ನಡೆಸಿದ್ದು, 25 ಅನರ್ಹ ಗುತ್ತಿಗೆದಾರರಿಗೆ 69 ಗುತ್ತಿಗೆ ನೀಡಿ, ಕಾರ್ಯಾದೇಶ ಹೊರಡಿಸಿರುವುದು ಪತ್ತೆಯಾಗಿದೆ’ ಎಂದರು.

ಟೆಂಡರ್ ಪ್ರಕ್ರಿಯೆ ನಡೆಯುವಾಗ ಕಾರ್ಯಪಾಲಕ ಎಂಜಿನಿಯರ್ ಹುದ್ದೆಯಲ್ಲಿದ್ದ ಎಸ್. ರವೀಶ್ ತಪ್ಪೆಸಗಿರುವುದು ಕಂಡುಬಂದಿದೆ. ಅವರು ನಿವೃತ್ತರಾಗಿದ್ದಾರೆ. ರವೀಶ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದಕ್ಕೂ ಅನುಮತಿ ನೀಡಲಾಗಿದೆ ಎಂದು ತಿಳಿಸಿದರು.

ವಿಷಯ ಪ್ರಸ್ತಾಪಿಸಿದ ಜಯಚಂದ್ರ, ‘ಗುತ್ತಿಗೆದಾರರೇ ಅಲ್ಲದವರು, ಪೈಪ್ ಪೂರೈಕೆದಾರರು, ಮಾನವ ಸಂಪನ್ಮೂಲ ಒದಗಿಸುವವರಿಗೂ ಜೆಜೆಎಂ ಕಾಮಗಾರಿಯ ಟೆಂಡರ್ ನೀಡಲಾಗಿದೆ’ ಎಂದು ಆರೋಪಿಸಿದರು. ‘ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಬೇಕು’ ಎಂದು ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿ ಮೊಟಕು: ಬಿಜೆಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟ ಹಣ ಬಳಕೆಯ ಚರ್ಚೆಗೆ ವಿಧಾನ ಪರಿಷತ್ ಕಲಾಪದ ಸಾಕಷ್ಟು ಸಮಯ ವ್ಯರ್ಥವಾದ ಕಾರಣ ಸಭಾಪತಿ ಬಸವರಾಜ ಹೊರಟ್ಟಿ ಪ್ರಶ್ನೋತ್ತರ ಅವಧಿಯನ್ನು ಮೊಟಕುಗೊಳಿಸಿದರು.

ಪರಿಷತ್‌ನಲ್ಲಿ ಧರಣಿ

ಇದರಿಂದ ಆಕ್ರೋಶಗೊಂಡ ಬಿಜೆಪಿಯ ಸಿ.ಟಿ. ರವಿ, ಸಿ.ಎನ್. ಮಂಜೇಗೌಡ, ತಳವಾರ ಸಾಬಣ್ಣ, ಶಾಂತರಾಮ್ ಬುಡ್ನ ಸಿದ್ಧಿ ಮತ್ತಿತರರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

‘ಕಲಾಪ ಆರಂಭವಾದ ಸಮಯದಿಂದಲೂ ಎಲ್ಲ ಚರ್ಚೆಗಳನ್ನೂ ಮೌನವಾಗಿ ಕೇಳಿಸಿಕೊಂಡಿದ್ದೇನೆ. ಸಮಯ ವ್ಯರ್ಥದಲ್ಲಿ ನಮ್ಮ ಪಾತ್ರವೇನು ಇಲ್ಲ. ವಿಳಂಬದ ಕಾರಣಕ್ಕೆ ನಮಗೆ ಇರುವ ಅವಕಾಶ ಏಕೆ ಮೊಟಕು ಮಾಡುವಿರಿ. ನಾವೇನು ಸದನಕ್ಕೆ ದನಕಾಯಲು ಬರುತ್ತೇವೆಯೇ’ ಎಂದು ಸಿ.ಟಿ. ರವಿ ಆಕ್ರೋಶ ವ್ಯಕ್ತಪಡಿಸಿದರು. ಒತ್ತಡಕ್ಕೆ ಮಣಿದ ಸಭಾಪತಿ ಪಟ್ಟಿಯಲ್ಲಿದ್ದ ಎಲ್ಲ ಪ್ರಶ್ನೆಗಳಿಗೂ ಉತ್ತರ ಪಡೆಯಲು ಮತ್ತೆ ಅವಕಾಶ ಮಾಡಿಕೊಟ್ಟರು.

‘ಖಾತ್ರಿ’: ₹20 ಕೋಟಿ ದುರುಪಯೋಗ

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೈಗೊಂಡ 2022–23ನೇ ಸಾಲಿನ 20,863 ಕಾಮಗಾರಿಗಳ ಅನುಷ್ಠಾನದಲ್ಲಿ ₹20.79 ಕೋಟಿ ದುರುಪಯೋಗವಾಗಿದೆ. ಸೆಪ್ಟೆಂಬರ್ 2024ರಲ್ಲಿ ಮಂಡನೆಯಾದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ನಿಯಮಾನುಸಾರ ಕ್ರಮಕೈಗೊಳ್ಳಲಾಗಿದೆ.

ಅದೇ ಸಾಲಿನಲ್ಲಿ ಸತ್ತವರ ಹೆಸರಿಗೆ, ಅನರ್ಹ ವ್ಯಕ್ತಿಗಳಿಗೆ ಕೆಲಸಕ್ಕೆ ಗೈರುಹಾಜರಾದವರಿಗೆ ₹2.62 ಕೋಟಿ ಹಣ ಪಾವತಿಸಿದ ಪ್ರಕರಣಗಳು ವರದಿಯಾಗಿದ್ದವು. ದುರುಪಯೋಗದ ಹಣವನ್ನು ವಸೂಲಾತಿ ಮಾಡಲು ಕ್ರಮಕೈಗೊಳ್ಳಲಾಗಿದೆ.

ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರ

ಜೆಜೆಎಂ ಅನುದಾನ ಬಿಡುಗಡೆ

ಮನೆಮನೆಗೆ ನಲ್ಲಿ ಸಂಪರ್ಕ ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಗೆ ಕೇಂದ್ರದ ₹11,760 ಕೋಟಿ, ರಾಜ್ಯದ ಪಾಲು ₹20,617 ಕೋಟಿ ಸೇರಿಸಿ ಒಟ್ಟು ₹32,377 ಕೋಟಿ ಬಿಡುಗಡೆಯಾಗಿದೆ. ಬಿಡುಗಡೆಯಾದ ಶೇ 50ರಷ್ಟು ಅನುದಾನದಲ್ಲಿ ಶೇ 90ರಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ.

ಬಿಜೆಪಿಯ ಸಿ.ಡಿ. ರವಿ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರ

ಕೆಐಒಸಿಎಲ್‌ನಿಂದ ಗಣಿಗಾರಿಕೆ– ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟನೆ

ನಿಬಂಧನೆ ಪಾಲಿಸಿದರಷ್ಟೆ ಗಣಿಗಾರಿಕೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುದುರೆಮುಖ ಕಬ್ಬಿಣದ ಅದಿರು ಕಂಪನಿಯು (ಕೆಐಒಸಿಎಲ್) ನಿಬಂಧನೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸಿದರೆ, ಸಂಡೂರು, ದೇವದರಿಯಲ್ಲಿ ಗಣಿಗಾರಿಕೆಗೆ ಅನುಮತಿ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಸಭೆಯಲ್ಲಿ ಶುಕ್ರವಾರ ಬಿಜೆಪಿಯ ಡಾ.ಭರತ್ ಶೆಟ್ಟಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿ ಈ ಭರವಸೆ ನೀಡಿದರು.

2022ರ ಡಿಸೆಂಬರ್ 16ರಂದು ಸಲ್ಲಿಕೆಯಾಗಿರುವ ಉನ್ನತಾಧಿಕಾರ ಸಮಿತಿಯ ಶಿಫಾರಸು ಮತ್ತು ಸೂಚನೆಗಳನ್ನು ಪಾಲನೆ ಮಾಡಬೇಕು ಎಂಬ ಷರತ್ತಿಗೆ ಒಳಪಟ್ಟು ದೇವದರಿಯಲ್ಲಿ ಗಣಿಗಾರಿಕೆ ನಡೆಸಲು ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಕೆಐಒಸಿಎಲ್ ಈ ಹಿಂದೆ ರಾಜ್ಯದಲ್ಲಿ ಗಣಿಗಾರಿಕೆ ನಡೆಸುವಾಗ ಹಲವು ನಿಯಮಗಳನ್ನು ಉಲ್ಲಂಘನೆ ಮಾಡಿತ್ತು. ಆ ಸಂಬಂಧ ಕಂಪನಿಗೆ ನೋಟಿಸ್ ನೀಡಲಾಗಿತ್ತು. ಮುಖ್ಯವಾಗಿ ಲಕ್ಯಾ ಅಣೆಕಟ್ಟೆ ಎತ್ತರವನ್ನು ಹೆಚ್ಚಿಸಿ 340 ಹೆಕ್ಟೇರ್ ಅರಣ್ಯಕ್ಕೆ ಹಾನಿ ಮಾಡಿದ್ದಾರೆ ಎಂದು ಖಂಡ್ರೆ ಹೇಳಿದರು.

ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಕೊಳವೆ ಮಾರ್ಗ ಅಳವಡಿಸುವುದೂ ಸೇರಿ 465.73 ಹೆಕ್ಟೇರ್ ಪ್ರದೇಶವನ್ನು ಅನುಮತಿ ಇಲ್ಲದೇ ಅರಣ್ಯೇತರ ಉದ್ದೇಶಕ್ಕೆ ಬಳಕೆ ಮಾಡಿದ್ದಾರೆ. ಈ ಪರಿಸರ ಹಾನಿಗೆ ₹142 ಕೋಟಿ ಪಾವತಿಸಬೇಕಿದೆ. ಅಲ್ಲದೇ, ಎನ್‌ಪಿವಿ ಶುಲ್ಕ ₹628 ಕೋಟಿ ಹಾಗೂ ಬಡ್ಡಿ ಸೇರಿ ಒಟ್ಟಾರೆ ₹3,000 ಕೋಟಿಯನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿದೆ. ಈ ಎಲ್ಲ ನಿಬಂಧನೆ ಸಂಪೂರ್ಣವಾಗಿ ಪಾಲನೆ ಮಾಡಿದರೆ, ಅರಣ್ಯಭೂಮಿಯನ್ನು ಗಣಿಗಾರಿಕೆಗೆ ಹಸ್ತಾಂತರ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಕೆಐಒಸಿಎಲ್ ಕಾರ್ಖಾನೆ

ಕೆಐಒಸಿಎಲ್ ಮತ್ತೆ ಆರಂಭಿಸುವುದರಿಂದ ಮಂಗಳೂರಿನಲ್ಲಿ ಒಂದು ಸಾವಿರ ಕಾರ್ಮಿಕರಿಗೆ ಜೀವದಾನ ಸಿಕ್ಕಿದಂತಾಗುತ್ತದೆ. ಈ ಕುರಿತು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ, ಕಂಪನಿಯ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಭೆಯನ್ನು ಕರೆದು, ನ್ಯಾಯಾಲಯದಿಂದ ಹೊರಗೆ ವಿಷಯವನ್ನು ಇತ್ಯರ್ಥಗೊಳಿಸಬೇಕು ಎಂದು ಡಾ.ಭರತ್ ಶೆಟ್ಟಿ ಮನವಿ ಮಾಡಿದರು.

ಬಂಡೀಪುರ: ಬೇಲದಕುಪ್ಪೆ ದೇವಸ್ಥಾನಕ್ಕೆ ಭಕ್ತರಿಗೆ ಅನುಮತಿ

ಬಂಡೀಪುರ ಹುಲಿಸಂರಕ್ಷಿತ ಪ್ರದೇಶದಲ್ಲಿರುವ ಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಭಕ್ತರಿಗೆ ಪ್ರತಿ ದಿನ ಪ್ರವೇಶಕ್ಕೆ ಅನುಮತಿ ನೀಡಲು ಹುಲಿ ಸಂರಕ್ಷಿತ ಪ್ರದೇಶ ನಿಯಮಗಳಿಗೆ ಅನುಸಾರ ಕ್ರಮ ಕೈಗೊಳ್ಳುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ಕಾಂಗ್ರೆಸ್‌ನ ಚಿಕ್ಕಮಾದು ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ಈ ಪ್ರದೇಶ ಅತ್ಯಂತ ಸೂಕ್ಷ್ಮವಾಗಿದೆ. ಎರಡು ವರ್ಷಗಳ ಹಿಂದೆ ಈ ದೇವಸ್ಥಾನವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ನೀಡಲಾಗಿದೆ. ಅಲ್ಲಿ ಜಾತ್ರೆ ವೇಳೆ ಲಕ್ಷಾಂತರ ಭಕ್ತರು ಬರುತ್ತಾರೆ. ಹುಲಿ ಸಂರಕ್ಷಿತ ಪ್ರದೇಶ ನಿಯಮಾವಳಿ ಪ್ರಕಾರ ಭಕ್ತರ ಭೇಟಿಗೆ ಅವಕಾಶ ನೀಡಲಾಗಿದೆ. ಖಾಸಗಿ ವಾಹನಗಳಿಗೆ ಅವಕಾಶ ನೀಡದೇ, ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕ ಭಕ್ತರನ್ನು ಕರೆದೊಯ್ಯಲಾಗುತ್ತಿದೆ ಎಂದು ಹೇಳಿದರು.

ವಿಚಾರಣಾಧೀನ ಕೈದಿಗಳ ಕುರಿತು ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು

ಪ್ರತ್ಯೇಕ ‘ಬಂಧನ ಕೇಂದ್ರ’ದಲ್ಲಿರಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಠಿಣ ಶಿಕ್ಷೆಗೆ ಒಳಗಾಗಿರುವ ಅಪರಾಧಿಗಳೊಂದಿಗೆ ವಿಚಾರಣಾಧೀನ ಕೈದಿಗಳಿಗೆ ಸೆರೆವಾಸ ವಿಧಿಸಬಾರದು. ಅಲ್ಲದೆ, ವಿಚಾರಣಾಧೀನ ಕೈದಿಗಳನ್ನು ಪ್ರತ್ಯೇಕವಾದ ‘ಬಂಧನ ಕೇಂದ್ರ’ಗಳಲ್ಲಿರಿಸಬೇಕು ಹಾಗೂ ಈ ‘ಕೇಂದ್ರ’ಗಳನ್ನು ಜೈಲು ಎಂದು ಕರೆಯಬಾರದು.

– ಇದು, ಗೃಹ ಸಚಿವಾಲಯ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಕೇಂದ್ರ ಗೃಹ ಸಚಿವಾಲಯಕ್ಕೆ ಸಲ್ಲಿಸಿರುವ ‘ಅನುದಾನಗಳ ಬೇಡಿಕೆ’ (2025–26) ಕುರಿತ ವರದಿಯಲ್ಲಿನ ಶಿಫಾರಸು.

ಬಿಜೆಪಿ ಸಂಸದ ರಾಧಾಮೋಹನ್ ದಾಸ ಅಗ್ರವಾಲ್ ನೇತೃತ್ವದ ಸ್ಥಾಯಿ ಸಮಿತಿಯು ಹಲವು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಸಚಿವಾಲಯಕ್ಕೆ ಇದೇ ವಾರ ಸಲ್ಲಿಸಿದೆ.

‘ಘೋರ ಅಪರಾಧಗಳನ್ನು ಎಸಗಿ, ಶಿಕ್ಷೆ ಅನುಭವಿಸುತ್ತಿರುವವರನ್ನು ಇರಿಸಿರುವ ಜೈಲಿನಲ್ಲಿಯೇ ವಿಚಾರಣಾಧೀನ ಕೈದಿಗಳನ್ನು ಇರಿಸುವುದು ಸೂಕ್ತವಲ್ಲ. ವಿಚಾರಣಾಧೀನ ಕೈದಿಗಳು ಕೂಡ ಅವರ ಪ್ರಭಾವಕ್ಕೆ ಒಳಗಾಗಿ ಘೋರ ಅಪರಾಧಿಗಳಾಗುವುದನ್ನು ತಡೆಯುವುದು ಅಗತ್ಯ’ ಎಂಬುದು ಸೇರಿದಂತೆ ಹಲವು ಶಿಫಾರಸುಗಳು ವರದಿಯಲ್ಲಿವೆ.

‘2016ರ ಮಾದರಿ ಬಂದೀಖಾನೆ ಕೈಪಿಡಿ’ ಹಾಗೂ ‘ಮಾದರಿ ಬಂದೀಖಾನೆಗಳು ಹಾಗೂ ಪರಿಹಾರಾತ್ಮಕ ಸೇವೆಗಳ ಕಾಯ್ದೆ’ ಪ್ರಕಾರ, ವಿಚಾರಣಾಧೀನ ಕೈದಿಗಳು ಹಾಗೂ ಶಿಕ್ಷೆಗೆ ಗುರಿಯಾದ ಅಪರಾಧಿಗಳನ್ನು ಪ್ರತ್ಯೇಕವಾಗಿಯೇ ಇರಿಸಲಾಗುತ್ತದೆ ಎಂದು ಗೃಹ ಸಚಿವಾಲಯವು ಸಮಿತಿಗೆ ತಿಳಿಸಿದೆ.

‘ಸಂವಿಧಾನದ ಪ್ರಕಾರ, ಬಂದೀಖಾನೆಯು ರಾಜ್ಯಗಳ ವಿಷಯ. ಹೀಗಾಗಿ, ಸಮಿತಿ ನೀಡಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದಾಗಿದೆ’ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ವರದಿಯಲ್ಲಿನ ಪ್ರಮುಖ ಅಂಶಗಳು

- ದೇಶದಲ್ಲಿ ಜೈಲುಗಳಲ್ಲಿರುವ ಕೈದಿಗಳ ಪೈಕಿ ವಿಚಾರಣಾಧೀನ ಕೈದಿಗಳ ಸಂಖ್ಯೆ ಶೇ 75ರಷ್ಟಿದೆ. ಅವರ ವಿರುದ್ಧ ಪ್ರಕರಣಗಳು ಬಹುದಿನಗಳಿಂದಲೂ ಬಾಕಿ ಉಳಿದಿವೆ ಎಂಬುದನ್ನು ಈ ಅಂಶವು ತೋರಿಸುತ್ತದೆ.
- ಅನೇಕ ಪ್ರಕರಣಗಳಲ್ಲಿ, ಸುದೀರ್ಘ ಕಾಲ ಸೆರೆವಾಸ ಅನುಭವಿಸಿದ ನಂತರ ವಿಚಾರಣಾಧೀನ ಕೈದಿಗಳು ಖುಲಾಸೆಗೊಂಡಿರುವ ನಿದರ್ಶನಗಳಿವೆ
- ಕಠಿಣ ಶಿಕ್ಷೆಗೆ ಗುರಿಯಾಗಿ, ಸೆರೆವಾಸ ಅನುಭವಿಸು-ತ್ತಿರುವ ಅಪರಾಧಿಗಳಿಗೂ ಹಾಗೂ ಜೈಲುಗಳಲ್ಲಿ ಇರುವ ವಿಚಾರಣಾಧೀನ ಕೈದಿಗಳಿಗೂ ಸಂಬಂಧಿಸಿದ ನಿಯಮಗಳಲ್ಲಿ ಅಂತಹ ವ್ಯತ್ಯಾಸ ಇಲ್ಲ
- ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಗಳು ಹಾಗೂ ವಿಚಾರಣಾಧೀನ ಕೈದಿಗಳು ಜೈಲುಗಳಲ್ಲಿ ಒಟ್ಟಿಗೆ ಇರುವುದು ಸರಿಯಲ್ಲ. ಸಣ್ಣಪುಟ್ಟ ಅಪರಾಧ ಎಸಗಿರುವ ವಿಚಾರಣಾಧೀನ ಕೈದಿಗಳು ನಂತರ ಘೋರ ಕೃತ್ಯಗಳನ್ನು ಎಸಗುವುದಕ್ಕೆ ತರಬೇತಿ ನೀಡಿ, ಪೋಷಿಸುವ ಕೇಂದ್ರಗಳಾಗಿ ಜೈಲುಗಳು ಪರಿವರ್ತನೆಗೊಳ್ಳುತ್ತಿವೆ
- ವಿಚಾರಣಾಧೀನ ಕೈದಿಗಳು ಖುಲಾಸೆಗೊಂಡ ನಂತರವೂ, ‘ಜೈಲಿನಲ್ಲಿ ಇದ್ದು ಬಂದವ’ ಎಂಬ ಕಳಂಕ ಹೊರಬೇಕಾಗುತ್ತದೆ. ಇದನ್ನು ತಪ್ಪಿಸಲು ವಿಚಾರಣಾಧೀನ ಕೈದಿಗಳಿಗಾಗಿ ಪ್ರತ್ಯೇಕ ‘ಬಂಧನ ಕೇಂದ್ರ’ಗಳನ್ನು ಸ್ಥಾಪಿಸಬೇಕು

ಮಣಿಪುರ: ನಾಲ್ವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): ಇಂಫಾಲ್ ಕಣಿವೆಯಲ್ಲಿ ವಿವಿಧೆಡೆ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ನಿಷೇಧಿತ ಸಂಘಟನೆಗಳ ನಾಲ್ವರು ಉಗ್ರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಪೀಪಲ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಸದಸ್ಯೆ ತೊಕ್ಚೋಮ್ ಒಂಗ್ಬಿ ಅನಿತಾ ದೇವಿಯನ್ನು (46) ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ಬಂಧಿಸಿದ್ದು, ಆಕೆಯಿಂದ 33 ಜೀವಂತ ಗುಂಡುಗಳು, 5 ಸಿಮ್ ಕಾರ್ಡ್, 6 ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಯುಎನ್‌ಎಲ್‌ಎಫ್– ಕೆ ಸದಸ್ಯ ಮೊಯಿರಾಂಗ್ತಮ್ ರಿಕಿ ಸಿಂಗ್‌ನನ್ನು (22), ಪ್ರೆಪಾಕ್ ಸಂಘಟನೆಯ ಲೈಶ್ರಾಮ್ ಬಿಶೋರ್ಜಿತ್ ಮೈತೇಯಿ (33), ಕಮ್ಯುನಿಸ್ಟ್ ಪಾರ್ಟಿಯೊಂದಿಗೆ ನಂಟು ಹೊಂದಿರುವ ಯುಮ್ನಮ್ ಪ್ರೇಮ್‌ಜಿತ್ ಮೈತೇಯಿಯನ್ನು (55) ಬಂಧಿಸಲಾಗಿದೆ.

ರೈಲಿನ ಮೇಲೆ ದಾಳಿ: ಪಾಕ್ ಆರೋಪ ನಿರಾಧಾರ–ಭಾರತ

ರಣಧೀರ ಜೈಸ್ವಾಲ್

ನವದೆಹಲಿ(ಪಿಟಿಐ): ಬಲೂಚಿಸ್ತಾನ ಪ್ರಾಂತ್ಯದಲ್ಲಿ ರೈಲೊಂದರ ಮೇಲೆ ನಡೆದ ದಾಳಿಗೆ ಸಂಬಂಧಿಸಿ ತನ್ನ ವಿರುದ್ಧ ಪಾಕಿಸ್ತಾನ ಮಾಡಿರುವ ಆರೋಪಗಳನ್ನು ಭಾರತ ಶುಕ್ರವಾರ ಸಾರಾಸಗಟಾಗಿ ತಳ್ಳಿಹಾಕಿದೆ.

‘ತನ್ನ ವೈಫಲ್ಯಗಳಿಗೆ ಸಂಬಂಧಿಸಿ ಇತರರ ಮೇಲೆ ಆರೋಪಿಸುವ ಮುನ್ನ ಪಾಕಿಸ್ತಾನ ತನ್ನ ಮನೆ ಸರಿ ಮಾಡಿಕೊಳ್ಳಬೇಕು’ ಎಂದೂ ಭಾರತ ತಿರುಗೇಟು ನೀಡಿದೆ.

ರೈಲೊಂದರ ಮೇಲೆ ಬಲೂಚಿಸ್ತಾನ ಲಿಬರೇಷನ್ ಆರ್ಮಿ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ, ‘ಭಾರತವು ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ’ ಎಂದು ಪಾಕಿಸ್ತಾನ ಗುರುವಾರ ಟೀಕಿಸಿತ್ತು.

‘ಜಾಗತಿಕ ಭಯೋತ್ಪಾದನೆಯ ಕೇಂದ್ರ ಯಾವ ದೇಶದಲ್ಲಿದೆ ಎಂಬುದು ಇಡೀ ವಿಶ್ವಕ್ಕೇ ಗೊತ್ತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಆಧಾರರಹಿತ ಆರೋಪಗಳನ್ನು ನಾವು ಖಂಡಿಸುತ್ತೇವೆ. ಪಾಕಿಸ್ತಾನ ತನ್ನ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಬದಲು ಇತರರ ಮೇಲೆ ಗೂಬೆ ಕೂರಿಸುವುದನ್ನು ನಿಲ್ಲಿಸಬೇಕು’ ಎಂದು ಹೇಳಿದ್ದಾರೆ.

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತು ಚರ್ಚಿಸಲು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಚೆನ್ನೈನಲ್ಲಿ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ (ಮಧ್ಯದಲ್ಲಿ) ಅವರಿಗೆ ಶುಕ್ರವಾರ ಆಹ್ವಾನ ನೀಡಲಾಯಿತು ಪಿಟಿಐ ಚಿತ್ರ

ತುಷಾರ್ ಗಾಂಧಿ ಬಂಧನಕ್ಕೆ ಆಗ್ರಹ

ತಿರುವನಂತಪುರ/ ಕೊಚ್ಚಿ (ಪಿಟಿಐ): ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ತಾನು ಈಚೆಗೆ ನೀಡಿದ್ದ ಹೇಳಿಕೆಗಳನ್ನು ಹಿಂಪಡೆಯುವುದಿಲ್ಲ ಎಂದು ಮಹಾತ್ಮ ಗಾಂಧಿ ಅವರ ಮೊಮ್ಮಗ ತುಷಾರ್ ಗಾಂಧಿ ಹೇಳಿದ್ದಾರೆ. ಈ ಮಧ್ಯೆ, ತಮ್ಮ ವಿರುದ್ಧ ಹೇಳಿಕೆ ನೀಡಿರುವ ತುಷಾರ್ ಅವರನ್ನು ಬಂಧಿಸುವಂತೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಒತ್ತಾಯಿಸಿವೆ.

ತಿರುವನಂತಪುರದ ನೆಯ್ಯಾಟಿಂಕರದಲ್ಲಿ ಈಚೆಗೆ ಗಾಂಧಿವಾದಿ ಗೋಪಿನಾಥನ್ ನಾಯರ್ ಪ್ರತಿಮೆ ಅನಾವರಣ ವೇಳೆ ಮಾತನಾಡಿದ್ದ ತುಷಾರ್, ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ‘ಅಪಾಯಕಾರಿ ಮತ್ತು ಕಪಟಿ’ ಎಂದಿದ್ದರು. ‘ಆರ್‌ಎಸ್‌ಎಸ್ ವಿಷ ಇದ್ದಂತೆ, ಎಚ್ಚರಿಕೆ ಅಗತ್ಯ’ ಎಂದು ವಾಗ್ದಾಳಿ ನಡೆಸಿದ್ದರು.

ಕೊಚ್ಚಿ ಸಮೀಪದ ಆಲುವಾದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ತುಷಾರ್, ‘ಆರ್‌ಎಸ್‌ಎಸ್ ಬಗ್ಗೆ ಒಮ್ಮೆ ಆಡಿದ ಮಾತುಗಳನ್ನು ಹಿಂತೆಗೆದುಕೊಳ್ಳುವ ಅಥವಾ ಕ್ಷಮೆಯಾಚಿಸುವುದರಲ್ಲಿ ನನಗೆ ನಂಬಿಕೆ ಇಲ್ಲ’ ಎಂದು ಹೇಳಿದರು.

‘ಈ ಘಟನೆಯು ದೇಶದ್ರೋಹಿಗಳನ್ನು ಬಯಲಿಗೆಳೆಯುವ ನನ್ನ ಸಂಕಲ್ಪಕ್ಕೆ ಇನ್ನಷ್ಟು ಬಲ ತುಂಬಿದೆ. ಸ್ವಾತಂತ್ರ್ಯ ಹೋರಾಟಕ್ಕಿಂತಲೂ ಅತ್ಯಗತ್ಯವಾದ ಹೋರಾಟ ಇದಾಗಿದೆ. ಆರ್‌ಎಸ್‌ಎಸ್ ಎಂಬ ಶತ್ರುವನ್ನು ಬಯಲಿಗೆಳೆಯಬೇಕಾಗಿದೆ’ ಎಂದರು.

ತುಷಾರ್ ಗಾಂಧಿ ಅವರು ಮಹಾತ್ಮ ಗಾಂಧಿ ಅವರ ಹೆಸರನ್ನು ತಮ್ಮ ಲಾಭಕ್ಕೆ ಬಳಸಲು ಹಲವಾರು ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರದ ಮಾಜಿ ಸಚಿವ ಮತ್ತು ಬಿಜೆಪಿ ನಾಯಕ ವಿ.ಮುರಳೀಧರನ್ ಆರೋಪಿಸಿದ್ದಾರೆ.

ಸಮಗ್ರ ಶಿಕ್ಷಣಕ್ಕೆ ₹2,152 ಕೋಟಿ

ತಮಿಳುನಾಡು ಬಜೆಟ್

ಪ್ರಜಾವಾಣಿ ವಾರ್ತೆ

ಚೆನ್ನೈ: ತನ್ನ ದ್ವಿಭಾಷಾ ನೀತಿಯಲ್ಲಿ ಯಾವುದೇ ಬದಲಾವಣೆಯಿಲ್ಲ ಎಂಬುದನ್ನು ಪ್ರತಿಪಾದಿಸಿರುವ ತಮಿಳುನಾಡು ಸರ್ಕಾರ, ಶುಕ್ರವಾರ ಮಂಡಿಸಿದ 2025–26ರ ಬಜೆಟ್‌ನಲ್ಲಿ ಸಮಗ್ರ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ) ಯೋಜನೆಗೆ ₹2,152 ಕೋಟಿ ತೆಗೆದಿರಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹಾಗೂ ತ್ರಿಭಾಷಾ ಸೂತ್ರವನ್ನು ತಮಿಳುನಾಡು ಸರ್ಕಾರವು ಅನುಷ್ಠಾನಕ್ಕೆ ತರದೇ ಇದ್ದರೆ ಎಸ್‌ಎಸ್‌ಎ ಅಡಿಯಲ್ಲಿ ಕೊಡಲಾಗುವ ಅನುದಾನವನ್ನು ನಿರಾಕರಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಕೇಂದ್ರ ಸರ್ಕಾರವು ತಡೆಹಿಡಿದಿರುವ ₹2,152 ಕೋಟಿ ಮೊತ್ತವನ್ನು ಸರಿದೂಗಿಸಲು ತನ್ನ ಬೊಕ್ಕಸದಿಂದಲೇ ಹಣ ತೆಗೆದಿರಿಸಿದೆ.

ಕೇಂದ್ರ ಸರ್ಕಾರದಿಂದ ಬರಬೇಕಾದ ಹಣವನ್ನು ಬಿಟ್ಟುಕೊಟ್ಟರೂ ತ್ರಿಭಾಷಾ ಸೂತ್ರವನ್ನು ಜಾರಿಗೆ ತರಲು ಸಿದ್ಧವಿಲ್ಲ ಎಂಬ ತನ್ನ ನಿಲುವನ್ನು ರಾಜ್ಯ ಸರ್ಕಾರ ಈ ಮೂಲಕ ಸ್ಪಷ್ಟಪಡಿಸಿದೆ.

ಡಿಎಂಕೆ ಸರ್ಕಾರದ ಹಾಲಿ ಅವಧಿಯ ಕೊನೆಯ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಿದ ಹಣಕಾಸು ಸಚಿವ ತಂಗಂ ತೆನರಸು, 2026ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಲವು ಜನಪ್ರಿಯ ಯೋಜನೆ ಪ್ರಕಟಿಸಿದರು. ಮಹಿಳೆಯರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಯೋಜನೆಗಳನ್ನು ಘೋಷಿಸಲಾಗಿದೆ.

ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಾದ್ಯಂತ 20 ಲಕ್ಷ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್‌ಅನ್ನು ಒದಗಿಸುವ ಘೋಷಣೆ ಮಾಡಲಾಗಿದೆ. ಡಿಎಂಕೆ 2021ರ ಚುನಾವಣೆಗೂ ಮುನ್ನ ಈ ಭರವಸೆ ನೀಡಿತ್ತು.

ಸುರಂಗ ಕುಸಿತ ನಿರಂತರ ಶೋಧ

ನಾಗರ್‌ಕರ್ನೂಲ್ (ತೆಲಂಗಾಣ) (ಪಿಟಿಐ): ಇಲ್ಲಿನ ಶ್ರೀಶೈಲಂ ಎಡದಂಡೆ ಕಾಲುವೆಯ ಸುರಂಗದಡಿ ಸಿಲುಕಿರುವ ಏಳು ಮಂದಿಯ ಪತ್ತೆಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಕಾರ್ಯಾಚರಣೆ ಶುಕ್ರವಾರ 21ನೇ ದಿನ ಪೂರೈಸಿದೆ. ಫೆ. 22ರಂದು ಸುರಂಗ ಭಾಗಶಃ ಕುಸಿದ ಪರಿಣಾಮ ಎಂಟು ಮಂದಿ ಒಳಗೆ ಸಿಲುಕಿದ್ದರು. ಅದರಲ್ಲಿ ಗುರುಪ್ರೀತ್ ಸಿಂಗ್ ಎಂಬವರ ಮೃತದೇಹ ಮಾರ್ಚ್ 9ರಂದು ಪತ್ತೆಯಾಗಿತ್ತು.

ಎ.ಸಿ.ಯೇತರ ರೈಲು ಪ್ರಯಾಣಿಕರಿಗೂ ಸಬ್ಸಿಡಿ ಸೇವೆ ಮುಂದುವರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಎ.ಸಿ.ಸೇವೆ ರಹಿತ ಬೋಗಿಗಳ ಪ್ರಯಾಣಿಕರಿಗೆ ರಿಯಾಯಿತಿ ಸೇವೆ ಮುಂದುವರಿಸಬೇಕು ಎಂದು ರೈಲ್ವೆ ಕುರಿತ ಸಂಸತ್ತಿನ ಸ್ಥಾಯಿ ಸಮಿತಿಯು ಸರ್ಕಾರಕ್ಕೆ ಸಲಹೆ ನೀಡಿದೆ.

ಬಿಜೆಪಿ ಸದಸ್ಯ ಸಿ.ಎಂ. ರಮೇಶ್ ಅಧ್ಯಕ್ಷತೆಯ ಸಮಿತಿ, ರೈಲ್ವೆ ಸಚಿವಾಲಯದ ಬೇಡಿಕೆಗಳಿಗೆ ಸಂಬಂಧಿಸಿದ ಕಾರ್ಯಪಾಲನಾ ವರದಿಯಲ್ಲಿ ಈ ಸಲಹೆಯನ್ನು ಕೊಟ್ಟಿದೆ.

ಕಾಲಕ್ರಮೇಣದಲ್ಲಿ ಎ.ಸಿ ಮತ್ತು ಎ.ಸಿ. ಯೇತರ ವರ್ಗದ ನಡುವಿನ ಪ್ರಯಾಣ ದರಗಳು ಕೈಗೆಟುಕುವಂತೆ ನಿಯಮಿತವಾಗಿ ಪ್ರಯಾಣದರದ ಸಮಗ್ರ ಪರಿಶೀಲನೆ ಆಗಬೇಕು ಎಂದೂ ಹೇಳಿದೆ.

2020 ಮತ್ತು 2022ರಲ್ಲಿ ಪ್ರಯಾಣ ದರದ ಸಮಗ್ರ ಪರಿಷ್ಕರಣೆ ನಂತರವೂ ಭಾರತೀಯ ರೈಲ್ವೆ ಇಲಾಖೆಯು ಪ್ರಯಾಣಿಕರಿಗೆ ಸಬ್ಸಿಡಿ ದರದಲ್ಲಿ ಹೆಚ್ಚಿನ ಸೇವೆಗಳನ್ನು ಒದಗಿಸುತ್ತಿದೆ ಎಂದೂ ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.

ಸಾಮಾನ್ಯ ರೈಲು ಪ್ರಯಾಣಿಕರ ಸೇವೆಯಿಂದ ಶೇ 30ರಷ್ಟು ಹಾಗೂ ಹವಾ ನಿಯಂತ್ರಿತಯೇತರ ಪ್ರಯಾಣಿಕರ ಸೇವೆಯಿಂದ ಶೇ 39 ವೆಚ್ಚ ತುಂಬಿಕೊಳ್ಳಲಾಗುತ್ತಿದೆ ಮತ್ತು ಹವಾ ನಿಯಂತ್ರಿತ ಪ್ರಯಾಣಸೇವೆಯಿಂದ ಕೇವಲ ಶೇ 3.5ರಷ್ಟು ಆದಾಯವಿದೆ ಎಂದು ಸಮಿತಿ ಉಲ್ಲೇಖಿಸಿದೆ.

ಇಲಾಖೆಯು ಕಡಿಮೆ ಆದಾಯ ವರ್ಗದವರಿಗೆ ಕೈಗೆಟುಕುವ ದರದಲ್ಲಿ ಸೇವೆ ಒದಗಿಸಲು ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಸಮಿತಿಯು ಸಲಹೆ ಮಾಡಿದೆ.

‘ಎನ್‌ಸಿಪಿಯಲ್ಲಿ ಭೂಕಂಪ’

ಮುಂಬೈ (ಪಿಟಿಐ): ಎನ್‌ಸಿಪಿ (ಎಸ್‌ಪಿ) ರಾಜ್ಯ ಘಟಕದ ಅಧ್ಯಕ್ಷ ಜಯಂತ್ ಪಾಟೀಲ್ ಅವರು ಶರದ್ ಪವಾರ್ ಅವರ ಪಕ್ಷ ತ್ಯಜಿಸಿ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಸೇರಲಿದ್ದಾರೆ ಎಂದು ಶಿವಸೇನಾ ನಾಯಕರೂ ಆಗಿರುವ ಮಹಾರಾಷ್ಟ್ರದ ಸಚಿವ ಸಂಜಯ್ ಶಿರ್ಸತ್ ತಿಳಿಸಿದರು.

‘ಈ ಹಿಂದೆಯೂ ನಾನು ಇದನ್ನು ಹೇಳಿದ್ದೇನೆ. ಎನ್‌ಸಿಪಿಯಲ್ಲಿ (ಎಸ್‌ಪಿ) ಹೆಚ್ಚು ಕಾಲ ಮುಂದುವರಿಯುವ ಮನಸ್ಸು ಜಯಂತ್ ಅವರಿಗಿಲ್ಲ. ಹೀಗಾಗಿಯೇ ಶರದ್ ಪವಾರ್ ಪಕ್ಷದಲ್ಲಿ ಭೂಕಂಪ ಸೃಷ್ಟಿಯಾಗಲಿದೆ. ಸದ್ಯದಲ್ಲಿಯೇ ಜಯಂತ್ ಅವರು ಅಜಿತ್ ನೇತೃತ್ವದ ಎನ್‌ಸಿಪಿ ಸೇರುವುದನ್ನು ನಾವೆಲ್ಲ ನೋಡಬಹುದು’ ಎಂದರು.

‘ನನ್ನ ನಡೆ ಏನು ಎಂಬುದು ಸ್ಪಷ್ಟವಿಲ್ಲ’ ಎಂದು ಜಯಂತ್ ಹೇಳಿಕೆ ನೀಡಿದ ಬೆನ್ನಲ್ಲೇ, ಅವರು ಪಕ್ಷ ತೊರೆಯಬಹುದು ಎಂಬ ವದಂತಿ ಹರಡಿದೆ.

‘ಪಾಟೀಲ್ ಈಚಿನ ದಿನಗಳಲ್ಲಿ ಅಸಮಾಧಾನಗೊಂಡಿರುವುದು ಸ್ಪಷ್ಟವಾಗಿದೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್ ಪ್ರತಿಕ್ರಿಯಿಸಿದರು.

‘ಎಂಟು ಬಾರಿ ಶಾಸಕರಾಗಿರುವ ಪಾಟೀಲರು ಹಿರಿಯ ರಾಜಕಾರಣಿ. ಅವರು ಏನು ಹೇಳಬಯಸಿದ್ದಾರೆ ಎಂಬುದನ್ನು ಅವರ ಹೇಳಿಕೆಗಳಿಂದ ಊಹಿಸಬಹುದು. ಆದರೆ ಅವರ ತೀರ್ಮಾನ ಏನಾಗಿರುತ್ತದೆ ಎಂಬುದನ್ನು ಹೇಳಲಾಗದು’ ಎಂದು ಅವರು ಹೇಳಿದ್ದಾರೆ.

ಕೇರಳ: ಹಾಸ್ಟೆಲ್‌ನಲ್ಲೇ ಗಾಂಜಾ ಮಾರಾಟ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೊಚ್ಚಿಯ ಹಾಸ್ಟೆಲ್ ಮೇಲೆ ದಾಳಿ ಮಾಡಿದ ಪೊಲೀಸರು ಚಿಲ್ಲರೆ ಮಾರಾಟಕ್ಕೆ ಸಂಗ್ರಹಿಸಿದ್ದ ಸುಮಾರು 2 ಕೆ.ಜಿ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಕಲಾಮಸ್ಸೇರಿ ಸರ್ಕಾರಿ ಪಾಲಿಟೆಕ್ನಿಕ್‌ನ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ದಾಳಿ ಮಾಡಿ, ಗಾಂಜಾ ವಶಕ್ಕೆ ಪಡೆಯಲಾಗಿತ್ತು. ಆಕಾಶ್, ಅಭಿರಾಜ್ ಮತ್ತು ಆದಿತ್ಯ ಎಂಬುವರನ್ನು ಪೊಲೀಸರು ಬಂಧಿಸಿದ್ದರು.

ಆಡಳಿತಾರೂಢ ಸಿಪಿಎಂ ಬೆಂಬಲಿತ ಎಸ್‌ಎಫ್‌ಐ ಸ್ಥಳೀಯ ನಾಯಕ ಅಭಿರಾಜ್ ಪ್ರಕರಣದಲ್ಲಿ ಭಾಗಿಯಾಗಿರುವ ಕಾರಣಕ್ಕೆ ಇದು ರಾಜಕೀಯ ತಿರುವು ಪಡೆದಿದೆ.

ಅಭಿರಾಜ್ ತನ್ನ ಮೇಲಿನ ಆರೋಪ ತಳ್ಳಿಹಾಕಿದ್ದು ಕಾಂಗ್ರೆಸ್ ವಿದ್ಯಾರ್ಥಿ ಸಂಘಟನೆಯ(ಕೆಎಸ್‌ಯು) ಕಾರ್ಯಕರ್ತರು ನನ್ನ ಕೊಠಡಿಯಲ್ಲಿ ಗಾಂಜಾ ತಂದಿಟ್ಟಿದ್ದಾರೆ ಎಂದು ಹೇಳಿದ್ದರು. ಆದರೆ, ಕೆಎಸ್‌ಯು ಇದನ್ನು ನಿರಾಕರಿಸಿದೆ.

ಕೇರಳದಲ್ಲಿ ವಿದ್ಯಾರ್ಥಿಗಳು ಮಾದಕ ವ್ಯಸನದಿಂದಾಗಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಈ ಸಂಬಂಧ ಕುಲಪತಿಗಳ ಸಭೆ ಕರೆದಿದ್ದ ಕುಲಾಧಿಪತಿಯೂ ಆದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ವಿಶೇಷ ಕಾರ್ಯಾಚರಣೆಗೆ ಸೂಚಿಸಿದ್ದರು. 3 ವಾರದಲ್ಲಿ ವಿದೇಶಿಯರು ಸೇರಿ 4000ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿದ್ದ ಪೊಲೀಸರು, ಬಹುತೇಕ ವಿದ್ಯಾರ್ಥಿಗಳು ಗಾಂಜಾ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿದ್ದರು.

ಸಂಕ್ಷಿಪ್ತ ಸುದ್ದಿ

ಮಾಜಿ ಶಾಸಕ ಬಂಬರ್ ಮೇಲೆ ಗುಂಡಿನ ದಾಳಿ

ಬಿಲಾಸ್‌ಪುರ (ಹಿಮಾಚಲ ಪ್ರದೇಶ) (ಪಿಟಿಐ): ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ ಬಂಬರ್ ಠಾಕೂರ್ ಅವರ ಮೇಲೆ ದುಷ್ಕರ್ಮಿಗಳು ಶುಕ್ರವಾರ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಠಾಕೂರ್ ಅವರ ಪತ್ನಿಗೆ ಸರ್ಕಾರವು ಬಿಲಾಸ್‌ಪುರದಲ್ಲಿ ನೀಡಿದ್ದ ನಿವಾಸದ ಆವರಣದಲ್ಲಿ ಹೋಳಿಹಬ್ಬ ಆಚರಿಸುತ್ತಿದ್ದ ಸಂದರ್ಭದಲ್ಲಿ, ನಾಲ್ವರು ಏಕಾಏಕಿ ಪ್ರವೇಶಿಸಿ ಗುಂಡಿನ ದಾಳಿ ನಡೆಸಿದರು. ದಾಳಿಯಿಂದ ಠಾಕೂರ್ ಮತ್ತು ಅವರ ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಠಾಕೂರ್ ಅವರ ಮೇಲೆ 12 ಬಾರಿ ಗುಂಡಿನ ದಾಳಿ ನಡೆಸಲಾಯಿತು ಎಂದು ಪ್ರತ್ಯಕ್ಷದರ್ಶಿ ಹೇಳಿದರು ಎಂದು ಪೊಲೀಸರು ತಿಳಿಸಿದರು.

‘ದುಷ್ಕರ್ಮಿಗಳ ಪತ್ತೆಗಾಗಿ ಶೋಧ ನಡೆಯುತ್ತಿದೆ’ ಎಂದು ಬಿಲಾಸ್‌ಪುರದ ಎಸ್‌ಪಿ ಸಂದೀಪ್ ಧಾವಲ್ ತಿಳಿಸಿದರು.

ಶಿವಸೇನಾ ನಾಯಕನ ಹತ್ಯೆ

ಮೋಗಾ (ಪಿಟಿಐ): ಪಂಜಾಬ್‌ನ ಮೋಗಾದಲ್ಲಿ ಶಿವಸೇನಾ ನಾಯಕರೊಬ್ಬರನ್ನು ದುಷ್ಕರ್ಮಿಗಳು ಗುಂಡಿಟ್ಟು ಹತ್ಯೆ ಮಾಡಿದ ಘಟನೆ ಗುರುವಾರ ತಡರಾತ್ರಿ ನಡೆದಿದೆ. ಗುಂಡಿನ ದಾಳಿಯಿಂದ ಬಾಲಕನೊಬ್ಬ ಗಾಯಗೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಗತ್ ರಾಯ್ ಅಲಿಯಾಸ್ ಮಂಗ (50) ಮೃತರು. ಇವರು ಏಕನಾಥ ಶಿಂದೆ ನೇತೃತ್ವದ ಶಿವಸೇನಾದ ಮೋಗಾ ಜಿಲ್ಲಾ ಅಧ್ಯಕ್ಷರಾಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಿನಸಿ ತರಲು ಹೋಗಿದ್ದ ಮಂಗತ್ ರಾಯ್ ಮೇಲೆ ರಾತ್ರಿ 10 ಗಂಟೆ ಸುಮಾರಿಗೆ ಅಪರಿಚಿತ ವ್ಯಕ್ತಿಗಳು ಗುಂಡು ಹಾರಿಸಿದ್ದಾರೆ. ಆದರೆ, ಅದು ಗುರಿ ತಪ್ಪಿ, ಸಮೀಪದಲ್ಲೇ ನಡೆದುಹೋಗುತ್ತಿದ್ದ ಬಾಲಕನಿಗೆ ತಲುಲಿದೆ. ಮಂಗತ್ ರಾಯ್ ತಕ್ಷಣವೇ ಬೈಕನ್ನೇರಿ ಪಾರಾಗಲು ಪ್ರಯತ್ನಿಸಿದ್ದಾರೆ. ಆದರೆ, ಶೂಟರ್‌ಗಳು ಬೆನ್ನಟ್ಟಿ ಹೋಗಿ ಗುಂಡು ಹಾರಿಸಿ, ಪರಾರಿಯಾಗಿದ್ದಾರೆ.

ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಬದುಕುಳಿಯಲಿಲ್ಲ. ಬಾಲಕನಿಗೆ ಮೋಗಾ ಸಿವಿಲ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮತ್ತೊಂದು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಮೃತರ ಪತ್ನಿ ನೀಡಿದ ದೂರಿನ ಮೇಲೆ ಆರು ಆರೋಪಿಗಳು ಮತ್ತು ಕೆಲವು ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವೈಯಕ್ತಿಕ ದ್ವೇಷಕ್ಕೆ ಹತ್ಯೆ ನಡೆಸಿರಬಹುದು ಎಂದು ಪೊಲೀಸರು ಶಂಕಿಸಿದ್ದರೆ, ಯಾರೊಂದಿಗೂ ದ್ವೇಷ ಇರಲಿಲ್ಲವೆಂದು ಮೃತರ ಕುಟುಂಬದವರು ಹೇಳಿದ್ದಾರೆ.

ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಕೆಲವು ಸಂಘಟನೆಗಳು ಮತ್ತು ಮೃತರ ಕುಟುಂಬ ಸದಸ್ಯರು ಪ್ರತಿಭಟನೆ ನಡೆಸಿದರು.

ವಡೋದರ: ಕಾರು ಚಲಾಯಿಸುತ್ತಿದ್ದ ವಿದ್ಯಾರ್ಥಿ ಮದ್ಯಪಾನ ಮಾಡಿರುವ ಶಂಕೆ

ಎರಡು ಸ್ಕೂಟರ್‌ಗಳಿಗೆ ಕಾರು ಡಿಕ್ಕಿ, ಮಹಿಳೆ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ವಡೋದರ: ನಗರದಲ್ಲಿ ವಿದ್ಯಾರ್ಥಿಯೊಬ್ಬ ವೇಗವಾಗಿ ಚಲಾಯಿಸುತ್ತಿದ್ದ ಕಾರು, ಎರಡು ಸ್ಕೂಟರ್‌ಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಒಬ್ಬ ಮಹಿಳೆ ಸ್ಥಳದಲ್ಲಿಯೇ ಮೃತಪಟ್ಟು, ಇತರ ಏಳು ಮಂದಿ ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ.

ಮೃತ ಮಹಿಳೆಯನ್ನು ಹೇಮಾಲಿ ಪಟೇಲ್ ಎಂದು ಗುರುತಿಸಲಾಗಿದೆ. ಅಪಘಾತ ಸಂಭವಿಸಿದ ವೇಳೆ ಅವರು ಸ್ಕೂಟರ್ ಓಡಿಸುತ್ತಿದ್ದರು. ಅವರು ಹೋಳಿ ಹಬ್ಬದ ನಿಮಿತ್ತ ಸಾಮಗ್ರಿಗಳ ಖರೀದಿಗೆ ಹೊರಟಿದ್ದರು.

ಕಾರು ಚಲಾಯಿಸುತ್ತಿದ್ದ ವಿದ್ಯಾರ್ಥಿ ಮದ್ಯಪಾನ ಮಾಡಿದ್ದನೆಂದು ಶಂಕಿಸಲಾಗಿದೆ. ಆತ, ಫೋಕ್ಸ್ ವ್ಯಾಗನ್ ವರ್ಟಸ್ ಕಾರು ಚಲಾಯಿಸುತ್ತಿದ್ದ. ವೇಗವಾಗಿ ಚಲಿಸುತ್ತಿದ್ದ ಕಾರು, ಎರಡು ಸ್ಕೂಟರ್‌ಗಳಿಗೆ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ಇತರ ಸವಾರರನ್ನು ಕೆಲ ದೂರದವರೆಗೆ ಕಾರು ಎಳೆದುಕೊಂಡು ಹೋದ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಗಂಭೀರವಾಗಿ ಗಾಯಗೊಂಡಿರುವ ನಾಲ್ವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



‘ತಡರಾತ್ರಿ 12.30ರ ವೇಳೆಗೆ, ನಗರದ ಕರೇಲಿಬಾಗ್‌ನ ಮುಕ್ತಾನಂದ ಕ್ರಾಸ್ ಬಳಿ ಅಪಘಾತ ಸಂಭವಿಸಿದೆ. ಕಾರು ಚಲಾಯಿಸುತ್ತಿದ್ದ, 20 ವರ್ಷದ ಕಾನೂನು ವಿದ್ಯಾರ್ಥಿ ರಕ್ಷಿತ್ ಚೌರಾಸಿಯಾ ಹಾಗೂ ಕಾರಿನಲ್ಲಿದ್ದ ಮತ್ತೊಬ್ಬ ಪ್ರಯಾಣಿಕ ಪ್ರಾಂಶು ಚೌಹಾಣ್‌ನನ್ನು ಬಂಧಿಸಲಾಗಿದೆ’ ಎಂದು ಡಿಸಿಪಿ ಪನ್ನಾ ಮೋಮಾಯಾ ಹೇಳಿದ್ದಾರೆ.

‘ಮೂಲತಃ ವಾರಾಣಸಿಯ ಚೌರಾಸಿಯಾ ನಗರದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಓದುತ್ತಿದ್ದು, ಪಿ.ಜಿಯಲ್ಲಿದ್ದಾನೆ’ ಎಂದು ತಿಳಿಸಿದ್ದಾರೆ.

‘ಕೆಲ ಪ್ರತ್ಯಕ್ಷದರ್ಶಿಗಳ ಪ್ರಕಾರ, ಚೌರಾಸಿಯಾ ಕುಡಿದ ಮತ್ತಿನಲ್ಲಿ ಇದ್ದಂತೆ ತೋರುತ್ತಿತ್ತು. ನಾವು ಅತನನ್ನು ಹಿಡಿದೆವು. ಕಾರಿನಿಂದ ಇಳಿಯುವ ವೇಳೆ ಆತ, ‘ಮತ್ತೊಂದು ರೌಂಡ್, ಮತ್ತೊಂದು ರೌಂಡ್’ ಎಂಬುದಾಗಿ ಕಿರುಚುತ್ತಿದ್ದುದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ’ ಎಂದು ಡಿಸಿಪಿ ಹೇಳಿದ್ದಾರೆ.

‘ಚೌರಾಸಿಯಾ ಮದ್ಯಪಾನ ಮಾಡಿದ್ದನೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು’ ಎಂದು ತಿಳಿಸಿದ್ದಾರೆ.

ಮುರಿದು ಹೋಗಿರುವ ಕಾರಿನ ಮುಂಭಾಗದಿಂದ ತೂರಿ, ಚೌಹಾಣ್ ಹೊರಗೆ ಬರುತ್ತಿದ್ದ. ಕಾರನ್ನು ಅಪಘಾತಕ್ಕೀಡು ಮಾಡಿದ್ದಕ್ಕಾಗಿ ಚೌರಾಸಿಯಾನನ್ನು ಆತ ಬೈಯುತ್ತಿದ್ದ ದೃಶ್ಯಗಳು ವಿಡಿಯೊವೊಂದರಲ್ಲಿ ಸೆರೆಯಾಗಿವೆ.

‘ಮತ್ತೊಂದು ರೌಂಡ್, ಮತ್ತೊಂದು ರೌಂಡ್’ ಎಂಬುದಾಗಿ ಕಿರುಚುತ್ತಿದ್ದ ಚೌರಾಸಿಯಾನನ್ನು ಕೆಲವರು ಥಳಿಸುತ್ತಿರುವುದು, ನಂತರ ಆತನನ್ನು ಪೊಲೀಸರಿಗೆ ಒಪ್ಪಿಸುತ್ತಿರುವ ದೃಶ್ಯಗಳು ಕೂಡ ವಿಡಿಯೊದಲ್ಲಿವೆ.

ಪೊಲೀಸ್ ಇಲಾಖೆ

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ. ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು,
ನಂ.1, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು – 560 001.

ಸಂಖ್ಯೆ: 1/ಸಿಬ್ಬಂದಿ–1/ಸಿಐಡಿ/2023–24 (ಫೈ.ಅ) ದಿನಾಂಕ : 13.03.2025

ಪ್ರಕಟಣೆ

ಸಿಐಡಿ ಘಟಕದಲ್ಲಿ ಕೈಗೊಳ್ಳುವ ತನಿಖಾ ಪ್ರಕರಣಗಳಾದ ಹಣಕಾಸು ದುರುಪಯೋಗ, ಕೆ.ಪಿ.ಐ.ಡಿ & ಬಡ್ಸ್ ಪ್ರಕರಣ, ಆರ್ಥಿಕ ಅಪರಾಧಗಳು, ಖಾಸಗಿ ಕಂಪನಿಗಳಲ್ಲಿ ದಾಖಲಾಗುವ ವಂಚನೆ ಪ್ರಕರಣಗಳು, ಷೇರುಗಳು ಮತ್ತು ಡಿಬೆಂಚರ್‌ಗಳಿಗೆ ಸಂಬಂಧಿಸಿದ ಸ್ಟಾಕ್ ಬ್ರೋಕಿಂಗ್ ವ್ಯವಸ್ಥೆ, ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ಪ್ರಕರಣಗಳಲ್ಲಿ ಖಾತೆಗಳು ತಖ್ತೆ ಪುಸ್ತಕಗಳ (Books of Accounts) ಪರಿಶೋಧನೆ ಮತ್ತು ಆರ್ಥಿಕ ವಿಶ್ಲೇಷಣೆ ನಡೆಸಿ ತನಿಖಾಧಿಕಾರಿಗಳಿಗೆ ಸಲಹೆ ಮತ್ತು ಅಭಿಪ್ರಾಯಗಳನ್ನು ನೀಡುವ ಸಂಬಂಧ ಒಬ್ಬ ಆರ್ಥಿಕ ವಿಶ್ಲೇಷಕರನ್ನು (Financial Analyst) ಹೊರಗುತ್ತಿಗೆ ಆಧಾರದ ಮೇಲೆ ಫೈನಾನ್ಸಿಯಲ್ ಅನಾಲಿಸಿಸ್, ಫೋರೆನ್ಸಿಕ್ ಆಕೌಂಟಿಂಗ್ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ವಿಶೇಷವಾಗಿ ಕಾನೂನು ಜಾರಿಗೆ ಸಂಬಂಧಿಸಿದಂತೆ 03 ವರ್ಷ ಕಡಿಮೆ ಇಲ್ಲದಂತೆ ಕರ್ತವ್ಯ ನಿರ್ವಹಿಸಿರುವ ಅನುಭವವನ್ನು (Chartered Accountant with an experience of three years at least) ಹೊಂದಿರುವವರನ್ನು ಉತ್ತಮ ಸಂಭಾವನೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಹತೆ ಮತ್ತು ಹುದ್ದೆಯ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

Sl. No	Particulars	Vacancy	Last Date for Submission of application
1	Financial Analyst on outsource basis for providing opinion on accounts matter to investigating officers and other work assigned by superior officers	01	01.04.2025 ರ ಸಂಜೆ 5.00 ಗಂಟೆಗೆ

ಹೆಚ್ಚಿನ ವಿವರಗಳಿಗೆ ಕರ್ನಾಟಕ ರಾಜ್ಯ ಪೊಲೀಸ್ ವೆಬ್‌ಸೈಟ್ ksp.gov.in ನೋಡಲು ಸೂಚಿಸಲಾಗಿದೆ. ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 01.04.2025ರ ಸಂಜೆ 5–00 ಗಂಟೆ ಆಗಿರುತ್ತದೆ. ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಪೊಲೀಸ್ ಉಪ ಮಹಾನಿರೀಕ್ಷಕರು, ಆರ್ಥಿಕ ಅಪರಾಧಗಳು, ನಂ.01. ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560001 ರವರ ಕಛೇರಿಗೆ ಸಲ್ಲಿಸುವುದು. ನಿಗದಿತ ದಿನಾಂಕ ಮತ್ತು ಸಮಯವನ್ನು ಮೀರಿದ ನಂತರದ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ, ಯಾವುದೇ ತಿದ್ದುಪಡಿಗಳಿದ್ದಲ್ಲಿ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ https://ksp.gov.in ಅಥವಾ ದೂರವಾಣಿ ಸಂಖ್ಯೆ: 080–22094455 ಕ್ಕೆ ಕಛೇರಿ ಕರ್ತವ್ಯ ನಿರ್ವಹಿಸುವ ವೇಳೆ ಸಂಪರ್ಕಿಸಬಹುದು.

ಸಹಿ/–
ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಮತ್ತು ಸಮಿತಿಯ ಅಧ್ಯಕ್ಷರುರವರ ಪರವಾಗಿ

DIPR/CP/5652/Zen/2024-25

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ವನ್ಯಜೀವಿ ಉಪ ವಿಭಾಗ, ಅಣಶಿ–581187

email: acfanshiwl@gmail.com

ಸಂಖ್ಯೆ:ಎ4/ಹೊ.ಗು/ಟೆಂಡರ್//2024–25 ದಿನಾಂಕ: 06–03–2025

ಮರು ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2025–26 ನೇ ಸಾಲಿನಲ್ಲಿ ಕೆನರಾ ವೃತ್ತ ವ್ಯಾಪ್ತಿಯಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಂಪ್ಯೂಟರ್ ಆಪರೇಟರ್, ಲಿಪಿಕ ಸಹಾಯಕರು, ವಾಹನ ಚಾಲಕರು, ಕಾವಲುಗಾರರು (ಡಿ ಗ್ರೂಪ್) ಹಾಗೂ ವಲಯ ವ್ಯಾಪ್ತಿ ಕಳ್ಳಬೇಟೆ ಶಿಬಿರಗಳಿಗೆ ಹಾಗೂ ಅರಣ್ಯ ರಕ್ಷಣಾ ಶಿಬಿರಗಳಿಗೆ ಕೆಲಸ ನಿರ್ವಹಿಸಲು ಕಾವಲುಗಾರರ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯವರಿಂದ ಪಡೆಯಲು 2025–26 ನೇ ಸಾಲಿಗೆ ಮೇಲ್ಕಂಡಂತೆ ಹೊರಗುತ್ತಿಗೆ ಸೇವೆಯನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವೀ ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24–03–2025 ರಂದು ಸಾಯಂಕಾಲ 4.00 ಗಂಟೆ ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಪೂರೈಸಬೇಕಾದ ಹೊರಸಂಪನ್ಮೂಲ ಸೇವೆಗಳ ವಿವರಗಳನ್ನು ಕೆಳಕಂಡಂತಿರುತ್ತದೆ.

ಅನುಸೂಚಿ

ಕ್ರ ಸಂ.	ವಿವರಗಳು	ಪರಿಮಾಣ ಸಂಖ್ಯೆ	ಕಾಮಗಾರಿ ಮೊತ್ತ	ಇ.ಎಂ.ಡಿ
1	ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ದೈನಂದಿನ ಅರಣ್ಯ ಹಾಗೂ ವನ್ಯಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ಅವಶ್ಯಕತೆ ಇರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡುವುದು. (1) ಕುಶಲ (Skilled) ಕೆಲಸಗಾರರು– 160 ಸಂಖ್ಯೆ (2) ಅರೆಕುಶಲ (Un Skilled) ಕೆಲಸಗಾರರು–133 ಸಂಖ್ಯೆ	293 ಸಂಖ್ಯೆ	79117991.00	791000.00

(1) ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣ ಕೊನೆಯ ದಿನಾಂಕ: 21–03–2025 ಸಾಯಕಾಲ 04.00 ಗಂಟೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–03–2025 ಬೆಳಿಗ್ಗೆ 11.30 ಗಂಟೆಗೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 25–03–2025 ಬೆಳಿಗ್ಗೆ 11.35 ಗಂಟೆಗೆ (4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 26–03–2025 ಬೆಳಿಗ್ಗೆ 11.30 ಗಂಟೆಗೆ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ, ಅಣಶಿ

DIPR/KWR/KSMCA/983/24-25 Dt.13.03.2025

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001.
website: www.kiadb.in, ಇ–ಮೇಲ್: cdoce1@kiadb.in or jdtp@kiadb.in

ನಂ. ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–20/ಕ.ಸಂ89/532/2024–25 ದಿನಾಂಕ:14–03–2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(c) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಅರ್ಹ ಸಂಸ್ಥೆಗಳು NABL Accredited Consultant/ NABET consultancy MoU with NABL Accredited Consultant ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕೆಲಸದ ಹೆಸರು : ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮರುಗಮಲ್ಲ ಹೋಬಳಿ, ಕನಿಶೆಟ್ಟಹಳ್ಳಿ ಗ್ರಾಮ, ಕಸಬಾ ಹೋಬಳಿ, ಬಡಗವಾರಹಳ್ಳಿ, ಮ್ಯಕಲದೊಣ್ಣೇನಹಳ್ಳಿ, ಕೊಂಗತಿಮ್ಮನಹಳ್ಳಿ ಗ್ರಾಮಗಳು ಮತ್ತು ಕಾಗತಿ ಗ್ರಾಮಗಳ ವಿವಿಧ ಸರ್ವೇ ನಂಬರ್‌ಗಳ ಒಟ್ಟು 958ಎ–10ಗು ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸುತ್ತಿರುವ ಚಿಂತಾಮಣಿ ಕೈಗಾರಿಕಾ ಪ್ರದೇಶಕ್ಕೆ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. (2ನೇ ಕರೆ) ಇ.ಎಂ.ಡಿ ರೂ.(ಲಕ್ಷಗಳಲ್ಲಿ) : 2.00.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

1. ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: 18–03–2025 ರಂದು ಸಂಜೆ 5.00 ಘಂಟೆಯವರೆಗೆ.
2. ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ: 19–03–2025 ರಂದು ಬೆಳಿಗ್ಗೆ 11.30 ಘಂಟೆಗೆ.
3. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 27–03–2025 ರಂದು ಸಂಜೆ 4.00 ಘಂಟೆಯವರೆಗೆ.
4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 28–03–2025 ರಂದು ಸಂಜೆ 4.30 ಘಂಟೆ ನಂತರ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/5674/Zen/2024-25

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,800
ಮಧ್ಯಮ	₹800-1,200
ಸಣ್ಣ	₹400-800

ಮುಂಬೈ ಧಾರಣೆ (ಶೇಂಗಾ)

14-03-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1368 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1375 (1375)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹88,500 (86,400)

ಬೆಳ್ಳಿ ಕೆ.ಜಿ ₹1,01,000 (98,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ	
ಬೆಟ್ಟೆ	46099-56309
ಗೊರಬಲು	16829-27199
ರಾಶಿ	32669-52689
ಸರಕು	50199-87640
ಯಲ್ಲಾಪುರ	
ಅಪಿ	67695-67695
ಬಿಳಿಗೋಟು	12399-27319
ಚಾಲಿ	28099-39099
ಕೋಕ	4612-18612
ಕೆಂಪುಗೋಟು	14899-27969
ರಾಶಿ	39209-58600
ತಟ್ಟಿಬೆಟ್ಟೆ	27701-37609
ಭದ್ರಾವತಿ	
ರಾಶಿ	37199-52399

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹444-647

ದ್ವಿತಳಿ (ಬಿ.ವಿ) ₹390-800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹192

ಆರ್‌ಎಸ್‌ಎಸ್-5 ₹187

ಗುಡ್ ಲಾಟ್ ₹180

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1320 (1320)
ಸೂರ್ಯಕಾಂತಿ (ರಿಫೈನ್ಡ್)	₹1410 (1410)
ಪಾಮೋಲಿನ್	₹1370 (1370)

ವಿನಿಮಯ ದರ

$ ಡಾಲರ್	86.94
£ ಪೌಂಡ್	112.48
€ ಯುರೊ	94.56
¥ ಯೆನ್ (100ಕ್ಕೆ)	58

ಸುಧಾ, ಮಯೂರ ಓದಿ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಕೇಂದ್ರಕ್ಕೆ ಶಿಫಾರಸು ಸಲ್ಲಿಸಲು ಟ್ರಾಯ್ ಸಿದ್ಧತೆ • 20 ವರ್ಷ ಅನುಮತಿ ಕೋರಿದ ಮಸ್ಕ್ ಕಂಪನಿ

ಸ್ಟಾರ್‌ಲಿಂಕ್‌ಗೆ 5 ವರ್ಷ ಪರವಾನಗಿ?

ನವದೆಹಲಿ (ರಾಯಿಟರ್ಸ್): ದೇಶದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಒದಗಿಸಲು ಸ್ಟಾರ್‌ಲಿಂಕ್ ಕಂಪನಿಗೆ ಐದು ವರ್ಷವಷ್ಟೇ ಪರವಾನಗಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕದ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಯು ಭಾರತಕ್ಕೆ ಪ್ರವೇಶಿಸಲು ಸಿದ್ಧತೆ ನಡೆಸಿದೆ. ಟವರ್‌ರಹಿತ ಅತಿವೇಗದ ಇಂಟರ್‌ನೆಟ್ ಸೇವೆ ಒದಗಿಸುವಲ್ಲಿ ಈ ಕಂಪನಿಯು ಮುಂಚೂಣಿಯಲ್ಲಿದೆ.

20 ವರ್ಷದವರೆಗೆ ಪರವಾನಗಿ ಪಡೆಯಲು ನಿರ್ಧರಿಸಿದ್ದು, ಈ ಸಂಬಂಧ ಕೇಂದ್ರಕ್ಕೆ ಮನವಿ ಸಲ್ಲಿಸಲು ಮುಂದಾಗಿದೆ. ಆದರೆ, ಇದಕ್ಕೆ ಟ್ರಾಯ್‌ನಿಂದ ಅಸಮ್ಮತಿ ವ್ಯಕ್ತವಾಗಿದೆ ಎಂದು ಹೇಳಿವೆ.

ಭಾರತದಲ್ಲಿ ಸ್ಟಾರ್‌ಲಿಂಕ್‌ಗೆ ಎಷ್ಟು ವರ್ಷದವರೆಗೆ ಪರವಾನಗಿ ನೀಡಬೇಕು. ಇದಕ್ಕೆ ಹಂಚಿಕೆ ಮಾಡುವ ತರಂಗಾಂತರ ಬ್ಯಾಂಡ್‌ಗಳಿಗೆ ಎಷ್ಟು ಬೆಲೆ ನಿಗದಿಪಡಿಸಬೇಕು ಎಂಬ ಬಗ್ಗೆ ಆಡಳಿತಾತ್ಮಕವಾಗಿ ಶಿಫಾರಸು ಮಾಡಲು ಟ್ರಾಯ್ ಸಿದ್ಧತೆ ನಡೆಸಿದೆ.

ಸ್ಟಾರ್‌ಲಿಂಕ್‌ನ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಒದಗಿಸುವ ಸಂಬಂಧ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್‌ನೊಂದಿಗೆ ಭಾರ್ತಿ ಏರ್‌ಟೆಲ್ ಮತ್ತು ಜಿಯೊ ಕಂಪನಿಯು ಒಪ್ಪಂದ ಮಾಡಿಕೊಂಡಿವೆ.

ಅಲ್ಲದೆ, ರಿಲಯನ್ಸ್ ಮಳಿಗೆಗಳಲ್ಲಿ ಸ್ಟಾರ್‌ಲಿಂಕ್ ಇಂಟರ್‌ನೆಟ್ ಒದಗಿಸುವ ಉಪಕರಣಗಳ ಮಾರಾಟಕ್ಕೆ ಸಂಬಂಧಿಸಿದಂತೆ ಮಸ್ಕ್ ಮತ್ತು ಮುಕೇಶ್ ಅಂಬಾನಿ ನಡುವೆ ಒಪ್ಪಂದವಾಗಿದೆ ಎಂದು ಹೇಳಲಾಗಿದೆ. ಈ ಮೊದಲು ಉಪಗ್ರಹ ತರಂಗಾಂತರ ಹಂಚಿಕೆ ಕುರಿತು ಈ ಇಬ್ಬರ ನಡುವೆ ತಿಕ್ಕಾಟ ನಡೆದಿತ್ತು.

ದೇಶದಲ್ಲಿ ಕೈಗೆಟಕುವ ದರದಲ್ಲಿ ದೀರ್ಘಕಾಲದವರೆಗೆ ಇಂಟರ್‌ನೆಟ್ ಸೇವೆ ಒದಗಿಸಲು ಸ್ಟಾರ್‌ಲಿಂಕ್ ಮುಂದಾಗಿದೆ. ಇದಕ್ಕಾಗಿ ಎರಡು ದಶಕದವರೆಗೆ ಪರವಾನಗಿ ನೀಡುವಂತೆ ಕೋರಲು ಮುಂದಾಗಿದೆ. ಆದರೆ, ರಿಲಯನ್ಸ್ ಕಂಪನಿಯು ಮೂರು ವರ್ಷದವರೆಗೆ ನೀಡಬೇಕು. ಬಳಿಕ ಆ ಕಂಪನಿಯ ಸೇವೆಯನ್ನು ಮರುಮೌಲ್ಯಮಾಪನ ಮಾಡಬೇಕು ಎಂದು ಜಿಯೊ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಮತ್ತೊಂದೆಡೆ ಭಾರ್ತಿ ಏರ್‌ಟೆಲ್ 3ರಿಂದ 5 ವರ್ಷ ಪರವಾನಗಿ ನೀಡುವಂತೆ ಮನವಿ ಸಲ್ಲಿಸಿದೆ ಎಂದು ಮೂಲಗಳು ಹೇಳಿವೆ.

ಟ್ರಾಯ್ ನಿಲುವೇನು?: 'ಐದು ವರ್ಷದವರೆಗಷ್ಟೇ ಪರವಾನಗಿ ನೀಡಲು ಟ್ರಾಯ್ ಒಪ್ಪಿಗೆ ಸೂಚಿಸುವ ಸಾಧ್ಯತೆಯಿದೆ. ಈ ಅವಧಿಯ ಬಳಿಕ ಸ್ಟಾರ್‌ಲಿಂಕ್ ಮಾರುಕಟ್ಟೆಯ ಸ್ಥಿತಿಗತಿ ಅವಲೋಕಿಸಿ ಪರವಾನಗಿ ವಿಸ್ತರಣೆಗೆ ಮುಂದಿನ ಕ್ರಮವಹಿಸಲಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರ್ಕಾರ ಕೂಡ ಟ್ರಾಯ್ ಸೂಚಿಸಿದ ಅವಧಿವರೆಗೆ ಪರವಾನಗಿ ನೀಡಲಿದೆ. ಬಳಿಕ ತರಂಗಾಂತರ ಹಂಚಿಕೆಯ ದರ ಪರಿಷ್ಕರಿಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಟ್ರಾಯ್ ಒಂದು ತಿಂಗಳೊಳಗೆ ಶಿಫಾರಸು ಸಿದ್ಧಪಡಿಸಿ ಸಲ್ಲಿಸಲಿದೆ. ಈ ಬಗ್ಗೆ ಕೇಂದ್ರ ಟೆಲಿಕಾಂ ಸಚಿವಾಲಯವು ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಜಿಯೊ ಆತಂಕ ಏನು?

ಮುಕೇಶ್ ಅಂಬಾನಿ ಒಡೆತನದ ಜಿಯೊ ಟೆಲಿಕಾಂ ಕಂಪನಿಯು ತರಂಗಾಂತರ ಖರೀದಿಗಾಗಿ ₹1.65 ಲಕ್ಷ ಕೋಟಿ ವೆಚ್ಚ ಮಾಡಿದೆ. ದೇಶದಲ್ಲಿ ಸ್ಟಾರ್‌ಲಿಂಕ್ ಸೇವೆ ಆರಂಭಗೊಂಡರೆ ತನ್ನ ಬ್ರಾಡ್‌ಬ್ಯಾಂಡ್ ಚಂದಾದಾರರನ್ನು ಕಳೆದುಕೊಳ್ಳುವ ಆತಂಕ ಅದಕ್ಕಿದೆ ಎಂದು ಮೂಲಗಳು ಹೇಳಿವೆ.

ಜಾಗತಿಕ ವೃತ್ತಿಪರ ಸೇವಾ ನೆಟ್‌ವರ್ಕ್ಸ್ ಕಂಪನಿಯಾದ ಕೆಪಿಎಂಜಿ ಅಂದಾಜಿನ ಪ್ರಕಾರ 2028ರ ವೇಳೆಗೆ ಭಾರತದ ಉಪಗ್ರಹ ಸಂವಹನ ವಲಯದ ಬೆಳವಣಿಗೆಯು 10 ಪಟ್ಟು ಏರಿಕೆಯಾಗಲಿದೆ. ಇದರ ಮಾರುಕಟ್ಟೆ ಮೌಲ್ಯವು ₹2.17 ಲಕ್ಷ ಕೋಟಿಗೆ ತಲುಪಲಿದೆ ಎಂದು ಹೇಳಿದೆ.

24, 25ರಂದು ಬ್ಯಾಂಕ್ ನೌಕರರ ಹೋರಾಟ

ಕೋಲ್ಕತ್ತ (ಪಿಟಿಐ): ವಾರದಲ್ಲಿ ಐದು ದಿನ ಕೆಲಸದ ನಿಯಮ ಜಾರಿಗೊಳಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ 24 ಮತ್ತು 25ರಂದು ದೇಶದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ (ಯುಎಫ್‌ಬಿಯು) ತಿಳಿಸಿದೆ.

ನೌಕರರ ಬೇಡಿಕೆಗೆ ಸಂಬಂಧಿಸಿದಂತೆ ಭಾರತೀಯ ಬ್ಯಾಂಕ್‌ಗಳ ಒಕ್ಕೂಟದ (ಐಬಿಎ) ಜೊತೆಗೆ ಮಾತುಕತೆ ನಡೆಸಲಾಗಿತ್ತು. ಆದರೆ, ಸಕಾರಾತ್ಮಕ ಫಲಿತಾಂಶ ಹೊರಬಂದಿಲ್ಲ. ಹಾಗಾಗಿ, ಹೋರಾಟ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಯುಎಫ್‌ಬಿಯು ಪ್ರಧಾನ ಕಾರ್ಯದರ್ಶಿ ಎಲ್. ಚಂದ್ರಶೇಖರ್ ತಿಳಿಸಿದ್ದಾರೆ.

ಎಲ್ಲಾ ಕೇಡರ್‌ಗಳಿಗೆ ನೇಮಕಾತಿ ಮಾಡಬೇಕು ಎಂದು ಒಕ್ಕೂಟದ ಜೊತೆಗೆ ನಡೆದ ಸಭೆಯಲ್ಲಿ ಒತ್ತಾಯಿಸಲಾಗಿದೆ. ಆದರೆ, ಈ ಬಗ್ಗೆ ಗಮನಹರಿಸಿಲ್ಲ ಎಂದು ಹೇಳಿದ್ದಾರೆ. ಸರ್ಕಾರಿ ನೌಕರರಿಗೆ ಗ್ರಾಚ್ಯುಟಿ ಮೊತ್ತದ ಮಿತಿಯನ್ನು ₹25 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಈ ಸೌಲಭ್ಯವನ್ನು ಬ್ಯಾಂಕ್ ನೌಕರರಿಗೂ ಕಲ್ಪಿಸಬೇಕಿದೆ. ಇದಕ್ಕೆ ಪೂರಕವಾಗಿ ಗ್ರಾಚ್ಯುಟಿ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಒತ್ತಾಯಿಸಿದ್ದಾರೆ.

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ, ರಾಷ್ಟ್ರೀಯ ಬ್ಯಾಂಕ್ ನೌಕರರ ಒಕ್ಕೂಟ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘವು ಯುಎಫ್‌ಬಿಯು ಅಡಿ ಬರುತ್ತವೆ.

8ನೇ ವರ್ಷದ ಪುಣ್ಯಸ್ಮರಣೆ

ಎಂ.ಜಿ. ನೀಲಾಂಬಿಕೆ

ಜನನ: 29-12-1942

ಮರಣ: 15-03-2017

ನಿಮ್ಮ ಚಿರಸ್ಮರಣೆಯೊಂದಿಗೆ ಕುಟುಂಬ ಸದಸ್ಯರು ಮಲ್ಲೇಶ್ವರಂ, ಬೆಂಗಳೂರು-3

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹೂಡಿಕೆಗೆ ನೆದರ್ಲೆಂಡ್ಸ್ ಕಂಪನಿಗಳು ಒಲವು

ಎಂ.ಬಿ. ಪಾಟೀಲ

ಬೆಂಗಳೂರು (ಪಿಟಿಐ): 'ಕರ್ನಾಟಕದ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್ ಡಿ) ವಲಯದಲ್ಲಿ ನಮ್ಮ ದೇಶದ ಕಂಪನಿಗಳು ಬಂಡವಾಳ ಹೂಡಿಕೆಗೆ ಹೆಚ್ಚಿನ ಆಸಕ್ತಿ ಹೊಂದಿವೆ' ಎಂದು ಭಾರತದ ನೆದರ್ಲೆಂಡ್ಸ್ ರಾಯಭಾರ ಕಚೇರಿಯ ಕಾನ್ಸುಲ್ ಜನರಲ್ ಇವೋಟ್ ಡಿ. ವಿಟ್ಸರ್ಸ್ ಹೇಳಿದ್ದಾರೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ್ದ ಕಾನ್ಸುಲ್ ಜನರಲ್ ಅವರು, ಡಚ್ ಕಂಪನಿಗಳು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿರುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಸಚಿವ ಎಂ.ಬಿ. ಪಾಟೀಲ ಅವರು ರಾಜ್ಯಕ್ಕೆ ಹೂಡಿಕೆ ಆಕರ್ಷಿಸಲು ನೆದರ್ಲೆಂಡ್ಸ್‌ಗೆ ಭೇಟಿ ನೀಡಿ, ರೋಡ್ ಷೋ ಕೂಡ ನಡೆಸಿದ್ದರು.

ಎನ್‌ಎಕ್ಸ್‌ಪಿ ಸೆಮಿಕಂಡಕ್ಟರ್ ಕಂಪನಿಯು ಆರ್ ಆ್ಯಂಡ್ ಡಿ ಕ್ಷೇತ್ರದಲ್ಲಿ ₹8,693 ಕೋಟಿ ಬಂಡವಾಳ ಹೂಡಿಕೆಗೆ ಒಲವು ತೋರಿದೆ ಎಂದು ಸಚಿವರು ಹೇಳಿದ್ದಾರೆ.

ದೇಶದ ಒಟ್ಟು ಹೂಡಿಕೆಯಲ್ಲಿ ಡಚ್ ಕಂಪನಿಗಳ ಪಾಲು ಶೇ 9ರಷ್ಟಿದೆ. ಬೆಂಗಳೂರಿನ ಯಲಹಂಕದ ಕ್ಯಾಂಪಸ್ ವಿಸ್ತರಣೆಗೆ ಫಿಲಿಪ್ಸ್ ಕಂಪನಿಯು ಹೆಚ್ಚುವರಿಯಾಗಿ ₹474 ಕೋಟಿ ಹೂಡಿಕೆ ಮಾಡಲಿದೆ ಎಂದು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಂಡಸ್ ಇಂಡ್ ಬ್ಯಾಂಕ್ ಲೆಕ್ಕಪತ್ರ ವ್ಯತ್ಯಾಸ: ಐಸಿಎಐ ಪರಿಶೀಲನೆ ಸಾಧ್ಯತೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಇಂಡಸ್ ಇಂಡ್ ಬ್ಯಾಂಕ್‌ನ ವಾಯಿದೆ ವಹಿವಾಟಿನ ಲೆಕ್ಕಪತ್ರದಲ್ಲಿ ಕಂಡುಬಂದಿರುವ ವ್ಯತ್ಯಾಸದ ಬಗ್ಗೆ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯು (ಐಸಿಎಐ) ಪರಿಶೀಲನೆ ನಡೆಸುವ ಸಾಧ್ಯತೆ ಇದೆ.

ಐಸಿಎಐನ ಹಣಕಾಸು ವರದಿ ಪರಿಶೀಲನಾ ಮಂಡಳಿಯು ಬ್ಯಾಂಕ್‌ನ ಹಣಕಾಸು ದಾಖಲೆಗಳ ತಪಾಸಣೆ ನಡೆಸಲಿದೆ ಎಂದು ಹೇಳಲಾಗಿದೆ.

ಕಳೆದ ವರ್ಷದ ಸೆಪ್ಟೆಂಬರ್–ಅಕ್ಟೋಬರ್ ಅವಧಿಯಲ್ಲಿ ಬ್ಯಾಂಕ್‌ನ ವಾಯಿದೆ ವಹಿವಾಟಿನಲ್ಲಿ ಸುಮಾರು ₹2,100 ಕೋಟಿ ವ್ಯತ್ಯಾಸ ಕಂಡುಬಂದಿತ್ತು. ಈ ಬಗ್ಗೆ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತು ಷೇರುಪೇಟೆಗೆ ಮಾಹಿತಿ ನೀಡಿತ್ತು.

'ಬ್ಯಾಂಕ್‌ನ ಹಣಕಾಸು ದಾಖಲೆಗಳನ್ನು ಪರಿಶೀಲನೆ ನಡೆಸ ಬಹುದಾಗಿದೆ' ಎಂದು ಐಸಿಎಐ ಅಧ್ಯಕ್ಷ ಚರಣಜೋತ್ ಸಿಂಗ್ ನಂದಾ ಪಿಟಿಐಗೆ ತಿಳಿಸಿದ್ದಾರೆ.

'ಲೆಕ್ಕಪತ್ರ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಬಾಹ್ಯ ಸಂಸ್ಥೆಯಿಂದ ತನಿಖೆ ನಡೆಸಲಾಗುತ್ತಿದೆ. ಏಪ್ರಿಲ್ ಆರಂಭದಲ್ಲಿ ಅಂತಿಮ ವರದಿ ಸಲ್ಲಿಸಲಿದೆ' ಎಂದು ಬ್ಯಾಂಕ್ ಹೇಳಿದೆ.

₹4 ಸಾವಿರ ಕೋಟಿ ಸಂಗ್ರಹಕ್ಕೆ ಕೆನರಾ ಬ್ಯಾಂಕ್ ನಿರ್ಧಾರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, ಟೈರ್ 2 ಬಾಂಡ್‌ಗಳ ವಿತರಣೆ ಮೂಲಕ ₹4 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಈ ಬಾಂಡ್‌ಗಳ ಅವಧಿಯು 10 ವರ್ಷವಾಗಿದೆ.

Canara Bank

2024–25ನೇ ಆರ್ಥಿಕ ವರ್ಷದಲ್ಲಿ ಹೆಚ್ಚುವರಿಯಾಗಿ ಟೈರ್ 1 ಬಾಂಡ್‌ಗಳ ವಿತರಣೆ ಮೂಲಕ ₹4 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಬ್ಯಾಂಕ್‌ನ ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ ಟೈರ್ 1 ಬಾಂಡ್‌ಗಳ ವಿತರಣೆ ಮೂಲಕ ಬ್ಯಾಂಕ್, ₹3 ಸಾವಿರ ಕೋಟಿ ಸಂಗ್ರಹಿಸಿತ್ತು.

ಟೈರ್ 1 ಬಾಂಡ್‌ಗಳು ಮುಕ್ತಾಯ ಅವಧಿ (ಮೆಚ್ಯುರಿಟಿ ಪಿರಿಯಡ್) ಹೊಂದಿಲ್ಲದ ಶಾಶ್ವತ ಬಾಂಡ್‌ಗಳಾಗಿವೆ. ಇವುಗಳಿಗೆ ಬ್ಯಾಂಕ್ ಬಡ್ಡಿ ನೀಡುತ್ತದೆ.

ಮೀಡಿಯಾ ಅವಾರ್ಡ್ಸ್

ಸೇಂಟ್ ಪಾಲ್ಸ್ ಕಾಲೇಜು ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿಯು ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಿರೀಶ್ ಲಿಂಗಣ್ಣ, ಎಸ್. ಎಚ್. ಮಾರುತಿ, ಬಿ. ಶೈಲಶ್ರೀ, ರಶ್ಮಿ ಆರ್. ರಾವ್, ಚೇತನ್ ಕುಮಾರ್, ಎಚ್.ವಿ. ಕಿರಣ್, ಬಾಲ ಚೌಹಾನ್, ಅರವಿಂದ್ ಗೌಡ, ಸುನೀತಾ ರಾವ್ ಮತ್ತು ರವೀಂದ್ರ ಭಟ್ಟ ಅವರಿಗೆ 'ಸೇಂಟ್ ಪಾಲ್ಸ್ ನ್ಯಾಷನಲ್ ಮೀಡಿಯಾ ಅವಾರ್ಡ್ಸ್–2025' ನೀಡಿ ಗೌರವಿಸಲಾಯಿತು. (ನಿಂತವರು) ತೃಪ್ತಿ ಶರ್ಮಾ, ಮೃದುಲಾ ಎ. ಕುಲಕರ್ಣಿ, ವಿ. ಪ್ರಕಾಶ್, ಎಂ ಶೈಲಜಾ, ವಿ. ಬಾಬು, ಎಂ.ಜೆ. ಥಾಮಸ್, ಬಿ.ಕೆ. ರವಿ, ಆಯೇಷಾ ಖಾನುಂ, ಬಿ.ಆರ್. ಮಮತಾ, ಶೈಜು ಜೋಸೆಫ್, ವಿ. ಪ್ರಶಾಂತ್ ಮತ್ತು ಎನ್.ಕೆ. ಅನನ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಭಾರತದ 6 ಸ್ಥಳ: ಯುನೆಸ್ಕೊ ತಾತ್ಕಾಲಿಕ ಪಟ್ಟಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಹಲವು ರಾಜ್ಯಗಳೊಂದಿಗೆ ಹರಡಿಕೊಂಡಿರುವ ಸಾಮ್ರಾಟ ಅಶೋಕನ ಶಿಲಾ ಶಾಸನಗಳಿರುವ ಸ್ಥಳಗಳು ಮತ್ತು ಚೌಸತ್ ಯೋಗಿನಿ ದೇವಾಲಯಗಳಿರುವ ಸ್ಥಳಗಳು ಸೇರಿದಂತೆ ಆರು ಸ್ಥಳಗಳು ಯುನೆಸ್ಕೊದ ವಿಶ್ವ ಪಾರಂಪರಿಕ ತಾಣಗಳ ಭಾರತದ ತಾತ್ಕಾಲಿಕ ಪಟ್ಟಿಯಲ್ಲಿ ಸೇರ್ಪಡೆಯಾಗಿವೆ.

ಈ ಸ್ಥಳಗಳನ್ನು ಮಾರ್ಚ್ 7ರಂದು ಸಂಭಾವ್ಯ ಪಟ್ಟಿಗೆ ಸೇರಿಸಲಾಗಿದೆ ಎಂದು ಯುನೆಸ್ಕೊದಲ್ಲಿನ ಭಾರತದ ಶಾಶ್ವತ ನಿಯೋಗವು ತಿಳಿಸಿದೆ. ಈ ಕುರಿತ ಹೇಳಿಕೆಯನ್ನು ತಡರಾತ್ರಿ 'ಎಕ್ಸ್'ನಲ್ಲಿ ಅದು ಪ್ರಕಟಿಸಿದೆ.

ಆರು ತಾಣಗಳ ಸೇರ್ಪಡೆಯಿಂದ ತಾತ್ಕಾಲಿಕ ಪಟ್ಟಿಯಲ್ಲಿರುವ ಭಾರತದ ತಾಣಗಳ ಸಂಖ್ಯೆ 62ಕ್ಕೆ ಏರಿದಂತಾಗಿದೆ. ಯುನೆಸ್ಕೊ ವಿಶ್ವ ಪಾರಂಪರಿಕ ತಾಣವನ್ನು ಘೋಷಿಸಲು ಈ ಪಟ್ಟಿಯಲ್ಲಿರುವ ತಾಣಗಳನ್ನು ಪರಿಶೀಲನೆ ನಡೆಸುತ್ತದೆ.

ತಾತ್ಕಾಲಿಕ ಪಟ್ಟಿಗೆ ಸೇರಿದ ತಾಣಗಳು: ಛತ್ತೀಸಗಢದ ಕಾಂಗರ್ ಕಣಿವೆ ರಾಷ್ಟ್ರೀಯ ಉದ್ಯಾನ, ತೆಲಂಗಾಣದ ಮುದುಮಲ್‌ನಲ್ಲಿ ಇರುವ ಶಿಲಾಯುಗದ 'ಮೆನ್‌ಹಿರ್ಸ್', ಮೌರ್ಯರು ಆಡಳಿತ ನಡೆಸಿದ ಪ್ರದೇಶಗಳುದ್ದಕ್ಕೂ ಕಂಡುಬಂದಿರುವ ಅಶೋಕನ ಶಾಸನಗಳಿರುವ ಸ್ಥಳಗಳು (ಬಹು ರಾಜ್ಯಗಳಲ್ಲಿ ಹರಡಿದೆ), 'ಚೌಸತ್ ಯೋಗಿನಿ' ದೇಗುಲಗಳ ಸ್ಥಳಗಳು (ಬಹು ರಾಜ್ಯಗಳಲ್ಲಿ ಹರಡಿದೆ), ಉತ್ತರ ಭಾರತದಲ್ಲಿನ ಗುಪ್ತರ ಕಾಲದ ದೇಗುಲಗಳು (ಬಹು ರಾಜ್ಯಗಳಲ್ಲಿ ಹರಡಿದೆ) ಮತ್ತು ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿನ ಬುಂದೇಲರ ಅರಮನೆ– ಕೋಟೆಗಳ ಸರಣಿಯು ತಾತ್ಕಾಲಿಕ ಪಟ್ಟಿಯಲ್ಲಿ ನಾಮನಿರ್ದೇಶನಗೊಂಡಿವೆ ಎಂದು ಪ್ರಕಟಣೆ ತಿಳಿಸಿದೆ.

ಈ ಸ್ಥಳಗಳ ಸೇರ್ಪಡೆಯೊಂದಿಗೆ ಭಾರತದ ತಾತ್ಕಾಲಿಕ ಪಟ್ಟಿಯಲ್ಲಿರುವ ತಾಣಗಳ ಸಂಖ್ಯೆ 62ಕ್ಕೆ ಏರಿದಂತಾಗಿದೆ. ಪ್ರಸ್ತುತ ಭಾರತದಲ್ಲಿ 43 ತಾಣಗಳು ಯುನೆಸ್ಕೊ ವಿಶ್ವ ಪಾರಂಪರಿಕ ತಾಣದ ಗರಿಮೆ ಪಡೆದಿವೆ. ಇವುಗಳಲ್ಲಿ 35 ಸಾಂಸ್ಕೃತಿಕ, ಏಳು ನೈಸರ್ಗಿಕ ಮತ್ತು ಒಂದು ಮಿಶ್ರ ವರ್ಗದಲ್ಲಿ ಬರುತ್ತವೆ.

ಅಮರಾವತಿ ವಿಮಾನ ನಿಲ್ದಾಣ ಕಾರ್ಯಾಚರಣೆಗೆ ಡಿಜಿಸಿಎ ಅನುಮತಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಅಮರಾವತಿ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಅನುಮತಿ ನೀಡಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಅಮರಾವತಿ ವಿಮಾನ ನಿಲ್ದಾಣಕ್ಕೆ ಅನುಮತಿ ದೊರೆತಿರುವುದರಿಂದ ವಾಣಿಜ್ಯ ವಿಮಾನಗಳ ಹಾರಾಟ ಶುರುವಾಗಲಿದೆ. ಇದು ಪ್ರಾದೇಶಿಕ ಸಂಪರ್ಕ ಮತ್ತು ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡಲಿದೆ. ಅಲೈಯನ್ಸ್ ಏರ್ ವಿಮಾನಯಾನ ಕಂಪನಿಯು ಇದೇ ತಿಂಗಳ ಅಂತ್ಯದೊಳಗೆ ಅಮರಾವತಿ–ಮುಂಬೈ ನಡುವೆ ಸಂಚಾರ ಆರಂಭಿಸಲಿದೆ ಎಂದು ಸಾಮಾಜಿ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಸಾಹಿತಿ ಪಂಚಾಕ್ಷರಿ ಹಿರೇಮಠ



ಧಾರವಾಡ: ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ ಪಂಚಾಕ್ಷರಿ ಹಿರೇಮಠ (92) ಶುಕ್ರವಾರ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ ಶಾಂತಾದೇವಿ, ಪುತ್ರರಾದ ಜಯದೇವ, ಮೃತ್ಯುಂಜಯ ಹಾಗೂ ಪುತ್ರಿ ವಿಜಯಶ್ರೀ ಇದ್ದಾರೆ.

ಪಂಚಾಕ್ಷರಿ ಅವರು ಕೊಪ್ಪಳ ಜಿಲ್ಲೆಯ ಬಿಸರಹಳ್ಳಿಯವರು. ಕವಿ, ಕಥೆಗಾರ, ವಿಮರ್ಶಕ, ಅನುವಾದಕ ಮತ್ತು ಬಹುಭಾಷಾ ವಿದ್ವಾಂಸರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿದ್ದರು.

ಉರ್ದು, ಹಿಂದಿ, ಗುಜರಾತಿ ಸಹಿತ ವಿವಿಧ ಭಾಷೆಗಳ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ ಹಲವು ಕೃತಿಗಳು ಭಾರತದ ಇತರ ಭಾಷೆಗಳು ಹಾಗೂ ವಿದೇಶಿ ಭಾಷೆಗಳಿಗೆ ಅನುವಾದವಾಗಿವೆ.

'ಮಿತ್ರ ದೇಶದ ಕವಿತೆಗಳು', 'ರೂಪಾಂತರ', 'ಚೈತ್ಯಾಕ್ಷಿ' ಸಹಿತ 19 ಕಾವ್ಯ ಸಂಕಲನ, 'ಎನ್ನಾಲೇಕ', 'ಬಸಿರಿಲ್ಲದ ತಾಯಿ', 'ಕಾಶ್ಮೀರದ ಹೂ' (ಉರ್ದು ಅನುವಾದ) ಸಹಿತ 11 ಕಥಾ ಸಂಕಲನ, ಜೀವನ ಚರಿತ್ರೆಗಳು, ಪ್ರಬಂಧಗಳು, ವಿಮರ್ಶೆಗಳು, ನಾಟಕಗಳು (ಅನುವಾದ), ಸಂಪಾದನೆ, ಪತ್ರ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯ ಸಹಿತ 100ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಸಹಿತ ಹಲವು ಪುರಸ್ಕಾರಗಳು ಅವರಿಗೆ ಸಂದಿವೆ.

ಕೊಪ್ಪಳ ಜಿಲ್ಲೆಯ ಬಿಸರಹಳ್ಳಿಯಲ್ಲಿ ಮಾರ್ಚ್ 15ರಂದು ಮಧ್ಯಾಹ್ನ 4.30ಕ್ಕೆ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಜಯ್ ಹಸ್ತಾಂತರ: ಮೇಲ್ಮನವಿಗೆ ಅನುಮತಿ ಕೋರಿದ ಭಾರತ



ಲಂಡನ್(ಪಿಟಿಐ): ಹಣ ಅಕ್ರಮ ವರ್ಗಾವಣೆ ಹಾಗೂ ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಶಸ್ತ್ರಾಸ್ತ್ರ ವಿತರಕ ಸಂಜಯ್ ಭಂಡಾರಿ ಅವರನ್ನು ಹಸ್ತಾಂತರ ರದ್ದುಗೊಳಿಸಿದ ಕ್ರಮವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅನುಮತಿ ನೀಡುವಂತೆ ಲಂಡನ್ ಹೈಕೋರ್ಟ್‌ಗೆ ಭಾರತ ಅರ್ಜಿ ಸಲ್ಲಿಸಿದೆ.

ಲಂಡನ್ ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪ್ರಕ್ರಿಯೆಯು ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಜಯ ಸಿಕ್ಕಲ್ಲಿ, ಸಂಜಯ್ ಭಂಡಾರಿ ಹಸ್ತಾಂತರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಭಾರತ ಸರ್ಕಾರ ವಾದ ಮುಂದುವರಿಸಬಹುದಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್

Accommodation Available

Commercial

COMMERCIAL SPACE FOR RENT/LEASE
LOCATION-GANDHI CHOWK AREA,
OPP.: OLD AMRAPALI THEATRE, YADGIRI
CARPET AREA = 60X30 = 1800 sft
Ground Floor sufficient Parking Area available
Monthly Rent as per the prevailing rent

PREFERANCE WILL BE GIVEN TO BANKS, OFFICES, SUPER BAZAR AND HARDWARE SHOPS
CONTACT NO.: 8008572455

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Devanahalli

PLOT FOR SALE @ Jangammakote 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

House

Multiple Locations

ಮಲ್ಲೇಶ್ವರಂ 10TH ಕ್ರಾಸಿನಲ್ಲಿ ಬಿಲ್ಡಿಂಗ್ ಖಾಲಿ ಇದೆ. ಶೇಷಾದ್ರಿಪುರಂನಲ್ಲಿ 2BHK ಮನೆ ಖಾಲಿಇದೆ ದೊಡ್ಡಕಲ್ಲಸಂದ್ರದಲ್ಲಿ ಸೈಟ್ ಮಾರಾಟಕ್ಕಿದೆ Ph: 9019626612

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

ತಕ್ಷಣ ಬೇಕಾಗಿದ್ದಾರೆ

ಬೆಂಗಳೂರಿನ ದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎಲೆಕ್ಟ್ರಾನಿಕ್ಸ್ MNC ಕಂಪನಿಗೆ 18-36 ವರ್ಷದೊಳಗಿನ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.

ವಿದ್ಯಾರ್ಹತೆ : 8th, 10th, ಪಿಯುಸಿ, ಐಟಿಐ, ಡಿಪ್ಲೋಮಾ, ಬಿ ಇ, ಬಿ ಟೆಕ್ ಹಾಗೂ ಯಾವುದೇ ಪದವಿ.

ಮೂಲ ವೇತನ : ರೂ.15000/- ಕೊಡಡಿ ವೇತನ ರೂ.5000/- ಅಥವಾ ಉಚಿತ PG ಸೇರಿದಂತೆ ಒಟ್ಟು ಟೇಕ್ ಹೋಮ್ ವೇತನ ರೂ. 20000/-

ಕಂಪನಿಯು ಉಚಿತ ಊಟ ಮತ್ತು ವಸತಿಯನ್ನು ಒದಗಿಸುತ್ತದೆ.

ಉಚಿತ ಕ್ಯಾಬ್ ಸೌಲಭ್ಯವಿರುವ ಸ್ಥಳಗಳು : ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ. ಗೌರಿಬಿದನೂರು, ವಿಜಯಪುರ, ವೇಮಗಲ್, ಕೋಲಾರ, ತುಮಕೂರು, ದೊಡ್ಡಬಳ್ಳಾಪುರ, ದಾಬಸ್ ಪೇಟೆ, ನೆಲಮಂಗಲ, ಮಾಲೂರು, ಹೊಸಕೋಟೆ, ದೇವನಹಳ್ಳಿ ಹಾಗೂ ಬೆಂಗಳೂರಿನಾದ್ಯಂತ.

PF ಮತ್ತು ESI ಸೌಲಭ್ಯವಿದೆ. 3 ಶಿಫ್ಟ್ ಕೆಲಸ ಕಡ್ಡಾಯ.

ಸಂಪರ್ಕಿಸಿ : Southern Supplies HR Solutions Pvt. Ltd.
ಅರ್ಪಿತಾ : 9035076512 / ಮನೋಜ್ : 9035076511
ಮೇಘನ : 90350 84928 / ಅನನ್ಯ : 9035084925

ಪ್ರವಾಸ

Travel

21.04.2025 10ದಿನಗಳು ದೆಹಲಿ,ಅಗ್ರ,ಅಲಹಾಬಾದ್, ಕಾಶಿ,ಗಯಾ,ಅಯೋಧ್ಯಾ ಹರಿದ್ವಾರ,ಇತ್ಯಾದಿ (ಕೆಲವೇ ಸೀಟುಗಳಿವೆ). 12.05.2025 6ದಿನಗಳು ಕಾಶಿ,ಗಯಾ ಅಯೋಧ್ಯಾ ಅಲಹಾಬಾದ್.9.06.2025 ಮತ್ತು 16.09.2025 13/17ದಿನಗಳು ರೈಲು ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ. 12.07.2025 13/17ದಿನಗಳು ಅಮರನಾಥ್ ವೈಷ್ಣೋದೇವಿ ಕಾಶ್ಮೀರ ದೆಹಲಿ ಇತ್ಯಾದಿ. ಏಪ್ರಿಲ್/ಮೇನಲ್ಲಿ ಅಂಡಮಾನ್ ಹವಳದ್ವೀಪ. "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

8.4.2025 ರಿಂದ 6 ದಿನಗಳು- ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂಡ್ರಂ, ಆಲಪಿಬೋಟಿಂಗ್, ಕೋವಲಂಬೀಚ್,10.4.2025 ರಿಂದ 4ದಿನಗಳು- ಧರ್ಮಸ್ಥಳ, ಮುರುಡೇಶ್ವರ, ಹೊರನಾಡು, ಕೊಲ್ಲೂರು ಮುಕಾಂಬಿಕಾ, ಶೃಂಗೇರಿ,24.4.2025 ರಿಂದ 8ದಿನಗಳು- 6ಜ್ಯೋತಿರ್ಲಿಂಗ ಪ್ರವಾಸ- ಓಂಕಾರೇಶ್ವರ, ಶಿರಡಿ, ಭೀಮಾಶಂಕರ, ತುಳಜಾಪುರ, ಯಲ್ಲೋರ, ತ್ರೈಂಬುಕೇಶ್ವರ,26.4.2025 ರಿಂದ 9ದಿನಗಳು- ಕಾಶಿ, ನೇಪಾಳ, ಪ್ರಯಾಗ್ ರಾಜ್, ಆಯೋಧ್ಯ, ಮನೋಕಾಮ, ಸೀತಾಮುಡಿ, ಗಯಾ,7.5.2025 ರಿಂದ 5ದಿನಗಳು- ಕಾಶಿ, ಆಯೋಧ್ಯ, ಪ್ರಯಾಗ್ ರಾಜ್, ಗಯಾ,12.05.2025 ರಿಂದ 7ದಿನಗಳು- ಸಿಂಗಾಪೂರ್, ಮಲೇಷಿಯಾ21.05.2025 ರಿಂದ 11ದಿನಗಳು- ಕೇದಾರನಾಥ್, ಗಂಗೋತ್ರಿ, ಬದರೀನಾಥ, ಯಮುನೋತ್ರಿ, ಶ್ರೀ ಗುರುರಾಜ ಟ್ರಾವೆಲ್ಸ್, ಕೋಲಾರ- 9611082432, 9449652555, 8123099913

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ,ಬಾಲಿ ಪ್ರವಾಸಗಳು. 8 ದಿನಗಳ ನೇಪಾಳ (ಶ್ರೀಮುಕ್ತಿನಾಥ).9 ದಿನಗಳ ಕಾಶಿ ಅಯೋಧ್ಯೆ,ಗಯಾ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

ಚಾರ್ ಧಾಮ್ ಸ್ಪೆಷಲ್ ಯಾತ್ರೆ: 28.5.2025 ರಿಂದ 14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಕೆಲವೇ ಸೀಟುಗಳಿವೆ. ಸಂಪರ್ಕಿಸಿ:ಕೆಪಿ.ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.

20.03.2025 ಕಾಶಿ ಅಯೋಧ್ಯ ಅಲಹಾಬಾದ್,ಬುದ್ಧಗಯಾ. 14.04.2025 ವೈಷ್ಣೋದೇವಿ ಕಾಶ್ಮೀರ್,ಜ್ವಾಲಾಮುಖಿ ಕುಲುಮನಾಲಿ. 28.04.2025 12.05.2025 ಚಾರ್‌ಧಾಮ್ ಸಮೇತಪ್ರವಾಸ. 26.06.2025 10.07.2025 ಅಮರನಾಥ್ ಅಮೃತ್‌ಸರ್ ಕುರುಕ್ಷೇತ್ರ ಗುಲ್ ಮಾರ್ಗ. 14.04.2025 ಸೋಮನಾಥ್,ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. ಇತ್ಯಾದಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಬೆಂಗಳೂರು.4. 26574131 8431888138 8317446683 9686708171

ಭವಿಷ್ಯ

Astrology

★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ,ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ,ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು.9845005009

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್

ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

@ 2244/-* FOR 15 WORDS

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9845114560| +91 9901641752
+91 9886213331
+91 9731810277 | +91 9900428036
080-45557163/164

*Conditions apply

22ರಿಂದ ಐಪಿಎಲ್ ಟೂರ್ನಿ: ರಿಷಭ್ ಪಂತ್ ಸ್ಥಾನ ತುಂಬಲಿರುವ ಆಲ್‌ರೌಂಡ್ ಆಟಗಾರ

ಅಕ್ಷರ್ ಪಟೇಲ್‌ಗೆ ಕ್ಯಾಪಿಟಲ್ಸ್ ಸಾರಥ್ಯ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರನ್ನು ಇದೇ 22 ರಿಂದ ನಡೆಯುವ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ನಾಯಕರನ್ನಾಗಿ ಶುಕ್ರವಾರ ನೇಮಕ ಮಾಡಲಾಗಿದೆ.

ಈ ವರ್ಷ ಡೆಲ್ಲಿ ತಂಡಕ್ಕೆ ಸೇರ್ಪಡೆಗೊಂಡಿದ್ದ ಹಿರಿಯ ಆಟಗಾರ ಕೆ.ಎಲ್. ರಾಹುಲ್ ಅವರು ರೇಸ್‌ನಿಂದ ಹಿಂದೆ-ಸರಿದಿದ್ದರು. ಹೀಗಾಗಿ ಅನುಭವಿ ಅಕ್ಷರ್ ಪಟೇಲ್ ಅವರು ನಾಯಕರಾಗುವ ನಿರೀಕ್ಷೆಯಿತ್ತು.

2019ರಿಂದ ಡೆಲ್ಲಿ ತಂಡದಲ್ಲಿರುವ, 31 ವರ್ಷ ವಯಸ್ಸಿನ ಅಕ್ಷರ್ ಪಟೇಲ್ ಅವರನ್ನು ಕಳೆದ ಮೆಗಾ ಹರಾಜಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ₹16.50 ಕೋಟಿ ಮೊತ್ತಕ್ಕೆ ತನ್ನಲ್ಲೇ ಉಳಿಸಿಕೊಂಡಿತ್ತು. ಡೆಲ್ಲಿ ತಂಡಕ್ಕೆ 82 ತಂಡಗಳನ್ನು ಆಡಿರುವ ಪಟೇಲ್, 967 ರನ್ ಗಳಿಸಿದ್ದು, 62 ವಿಕೆಟ್‌ಗಳನ್ನು ಪಡೆದಿದ್ದಾರೆ. ಇಕಾನಮಿ ದರ 7ರ ಅಸುಪಾಸಿನಲ್ಲಿದೆ.

ಒಟ್ಟಾರೆ ಮೂರು ತಂಡಗಳ ಪರ 150 ಐಪಿಎಲ್ ಪಂದ್ಯಗಳನ್ನು ಆಡಿರುವ ಅಕ್ಷರ್ 1,653 ರನ್ ಗಳಿಸಿದ್ದು, 123 ವಿಕೆಟ್‌ಗಳನ್ನು ಪಡೆದಿದ್ದಾರೆ. 2016ರಲ್ಲಿ ಪಂಜಾಬ್ ಪರ ಐದು ಎಸೆತಗಳಲ್ಲಿ ಹ್ಯಾಟ್ರಿಕ್ ಸೇರಿದಂತೆ ನಾಲ್ಕು ವಿಕೆಟ್‌ಗಳನ್ನು ಪಡೆದಿದ್ದರು.

ಅಕ್ಷರ್ ಅವರು ದೇಶೀಯ ಕ್ರಿಕೆಟ್‌ನಲ್ಲಿ 2024–25ನೇ ಸಾಲಿಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಮತ್ತು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್‌ನಲ್ಲಿ ಗುಜರಾತ್ ತಂಡವನ್ನು ಮುನ್ನಡೆಸಿದ್ದರು.

ಈ ವರ್ಷದ ಆರಂಭದಲ್ಲಿ ಭಾರತ ಟಿ20 ತಂಡಕ್ಕೆ ಉಪ ನಾಯಕರಾಗಿದ್ದ-ರು. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅವರು 4.35ರ ಇಕಾನಮಿಯಲ್ಲಿ 5 ವಿಕೆಟ್‌ಗಳನ್ನು ಪಡೆದಿದ್ದರು. 27.25ರ ಸರಾಸರಿಯಲ್ಲಿ 109 ರನ್ ಹೊಡೆದಿದ್ದರು.

‘ಡೆಲ್ಲಿ ಕ್ಯಾಪಿಟಲ್ಸ್ ನಾಯಕತ್ವ ದೊರಕಿರುವುದು ನನಗೊದಗಿದ ಗೌರವ. ನನ್ನ ಮೇಲೆ ವಿಶ್ವಾಸವಿಟ್ಟ ಫ್ರಾಂಚೈಸಿ ಮಾಲೀಕರಿಗೆ ಮತ್ತು ನೆರವು ಸಿಬ್ಬಂದಿಗೆ ಕೃತಜ್ಞನಾಗಿದ್ದೇನೆ’ ಎಂದು ಮಾಧ್ಯಮ ಪ್ರಕಟಣೆಯಲ್ಲಿ ಅಕ್ಷರ್ ತಿಳಿಸಿದ್ದಾರೆ.

ಈ ಹಿಂದಿನ ಐಪಿಎಲ್‌ನಲ್ಲಿ ಡೆಲ್ಲಿ ತಂಡವನ್ನು ರಿಷಭ್ ಪಂತ್ ಅವರು ಮುನ್ನಡೆಸಿದ್ದರು. ಆದರೆ ಮೆಗಾ ಆಕ್ಷನ್‌ನಲ್ಲಿ ಅವರನ್ನು ಲಖನೌ ಸೂಪರ್ ಜೈಂಟ್ಸ್ ಖರೀದಿಸಿತ್ತು. ಡೆಲ್ಲಿ ತಂಡದಲ್ಲಿ ಅನುಭವಿಗಳಾದ ಕೆ.ಎಲ್.ರಾಹುಲ್, ಫಾಫ್ ಡುಪ್ಲೆಸಿ, ಮಿಚೆಲ್ ಸ್ಟಾರ್ಕ್ ಮೊದಲಾದ ಆಟಗಾರರಿದ್ದಾರೆ. ಇಂಥ ಆಟಗಾರರಿಂದ ಉತ್ತಮ ಆಟ ಪಡೆಯುವ ಸವಾಲು ಅಕ್ಷರ್ ಮುಂದಿದೆ. ಐಪಿಎಲ್‌ನಲ್ಲಿ ಇನ್ನೂ ಪ್ರಶಸ್ತಿ ಗೆಲ್ಲದೇ ಇರುವ ಮೂರು ತಂಡಗಳಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಒಂದಾಗಿದೆ. ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಇನ್ನೆರಡು ತಂಡಗಳಾಗಿವೆ.

ಅಕ್ಷರ್ ನೇಮಕದ ಮೂಲಕ ಐದು ತಂಡಗಳಿಗೆ ನಾಯಕರ ನೇಮಕ ಪೂರ್ಣಗೊಂಡಂತೆ ಆಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ರಜತ್ ಪಾಟೀದಾರ್, ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಅಜಿಂಕ್ಯ ರಹಾನೆ, ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ರಿಷಭ್ ಪಂತ್ ಮತ್ತು ಪಂಜಾಬ್ ಕಿಂಗ್ಸ್‌ಗೆ ಶ್ರೇಯಸ್ ಅಯ್ಯರ್ ಈ ಮೊದಲು ನಾಯಕರಾಗಿ ನೇಮಕಗೊಂಡಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ತನ್ನ ಮೊದಲ ಪಂದ್ಯವನ್ನು ವಿಶಾಖಪಟ್ಟಣದಲ್ಲಿ ಮಾರ್ಚ್ 24ರಂದು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆಡಲಿದೆ.

ಅಕ್ಷರ್ ಪಟೇಲ್

ಮೊದಲ ಕೆಲ ಪಂದ್ಯಗಳಿಗೆ ಬೂಮ್ರಾ ಅಲಭ್ಯ?

ನವದೆಹಲಿ (ಪಿಟಿಐ): ಭಾರತದ ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಬೆನ್ನಿನ ಕೆಳಭಾಗದ ನೋವಿನಿಂದಾಗಿ ಈ ಬಾರಿಯ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಆರಂಭದ ಕೆಲವು ಪಂದ್ಯಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಆಸ್ಟ್ರೇಲಿಯಾ ಪ್ರವಾಸದ ಅಂತಿಮ ಟೆಸ್ಟ್‌ನ ಎರಡನೇ ದಿನದಾಟದ ವೇಳೆ ಕಾಣಿಸಿಕೊಂಡ ಈ ಗಾಯದ ಸಮಸ್ಯೆಯಿಂದಾಗಿ ಬೂಮ್ರಾ ಅವರು ಜನವರಿಯಿಂದ ಈಚೆಗೆ ಯಾವುದೇ ಪಂದ್ಯದಲ್ಲಿ ಆಡಿಲ್ಲ. ಆ ಸರಣಿಯಲ್ಲಿ, 30 ವರ್ಷ ವಯಸ್ಸಿನ ಬೂಮ್ರಾ 32 ವಿಕೆಟ್ ಪಡೆದಿದ್ದರು.

‘ಅವರು ಪುನಶ್ಚೇತನ ಶಿಬಿರದಲ್ಲಿದ್ದಾರೆ. ತಮ್ಮ ಫಿಟ್ನೆಸ್‌ನ ಉತ್ತುಂಗಕ್ಕೆ ತಲುಪಲು ಅವರಿಗೆ ಇನ್ನೂ ಕೆಲವು ಸಮಯ ಹಿಡಿಯಬಹುದು. ಜೂನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ಟೆಸ್ಟ್ ಸರಣಿ ಆಡಲಿರುವುದನ್ನು ಗಮನ-ದಲ್ಲಿಟ್ಟುಕೊಂಡು ಅವರಿಗೆ ವಿಶ್ರಾಂತಿ ನೀಡಬಹುದು’ ಎಂದು ಈ ಬೆಳವಣಿಗೆಯ ಮಾಹಿತಿ ಇರುವ ಮೂಲವೊಂದು ಪಿಟಿಐಗೆ ತಿಳಿಸಿದೆ.

ಮಾರ್ಚ್ 22ರಂದು ಆರಂಭವಾಗುವ ಐಪಿಎಲ್ ಮೇ 25ರವರೆಗೆ ನಡೆಯಲಿದೆ. ಬಿಸಿಸಿಐ ಶ್ರೇಷ್ಠತಾ ಕೇಂದ್ರದ ತಜ್ಞ ವೈದ್ಯರು ಅವರ ಪುನರಾಗಮನಕ್ಕೆ ನಿರ್ದಿಷ್ಟ ದಿನಾಂಕ ನಿಗದಿಪಡಿಸಿಲ್ಲ.

ಕೆಲವು ಪಂದ್ಯಗಳಿಗೆ ಬೂಮ್ರಾ ಅವರ ಅಲಭ್ಯತೆಯು ಮುಂಬೈಗೆ ದೊಡ್ಡ ಹಿನ್ನಡೆಯಾಗುವ ಸಾಧ್ಯತೆಯಿದೆ. 2024ರ ಐಪಿಎಲ್‌ನಲ್ಲಿ ಮುಂಬೈ ತಂಡ ಹತ್ತನೇ ಸ್ಥಾನ ಗಳಿಸಿತ್ತು. ಬೂಮ್ರಾ ಅಲಭ್ಯತೆಯಿಂದಾಗಿ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡ, ಈ ಬಾರಿ ಟ್ರೆಂಟ್ ಬೌಲ್ಟ್, ಕಾರ್ಬಿನ್ ಬಾಷ್ ಮತ್ತು ದೀಪಕ್ ಚಾಹರ್ ಅವರನ್ನು ಅವಲಂಬಿಸಬೇಕಾಗಿದೆ. ಇವರ ಜೊತೆ ಸ್ವತಃ ಹಾರ್ದಿಕ್ ಕೂಡ ಹೊಣೆ ಹೊರಬೇಕಾಗಿದೆ. ಮುಂಬೈ ಇಂಡಿಯನ್ಸ್, ಐಪಿಎಲ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಮಾರ್ಚ್ 23ರಂದು ಚೆನ್ನೈನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆಡಲಿದೆ. ಮೊದಲ ಐದು ಪಂದ್ಯಗಳಲ್ಲಿ ಬೂಮ್ರಾ ಆಡುವುದು ಅನುಮಾನ ಎನ್ನಲಾಗಿದೆ.

ಹೊಸ ಕೇಶ ವಿನ್ಯಾಸದಲ್ಲಿ ವಿರಾಟ್ ಕೊಹ್ಲಿ

ಬೆಂಗಳೂರು: ದುಬೈನಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ತಂಡದ ಆಟಗಾರರು ಐಪಿಎಲ್ ಟೂರ್ನಿಗೆ ಸಿದ್ಧತೆ ನಡೆಸುತ್ತಿದ್ದಾರೆ. ಈ ಮಧ್ಯೆ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಹೊಸ ಕೇಶ ವಿನ್ಯಾಸ (ಹೇರ್ ಸ್ಟೈಲ್) ಗಮನ ಸೆಳೆದಿದೆ.

ಕೇಶ ವಿನ್ಯಾಸಕಾರ ಆಲಿಮ್ ಹಕೀಂ ಅವರು ಕೊಹ್ಲಿಯ ಹೊಸ ಕೇಶ ವಿನ್ಯಾಸದ ಫೋಟೊವನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. ಅದಕ್ಕೆ ‘ಸಾರ್ವಕಾಲಿಕ ಶ್ರೇಷ್ಠ ಶಕ್ತಿ!, ವಿರಾಟ್ ಕೊಹ್ಲಿಗಾಗಿ ಫ್ರೆಶ್ ಸ್ನಿಪ್’ ಎಂದು ಶೀರ್ಷಿಕೆ ಕೊಟ್ಟಿದ್ದಾರೆ.

ತಲೆಯ ಎರಡೂ ಬದಿಗಳಲ್ಲಿ ಮತ್ತು ಹಿಂಭಾಗದಲ್ಲಿ ಸಣ್ಣದಾಗಿ ಟ್ರಿಮ್ ಮಾಡಲಾಗಿದ್ದು, ರೇಜರ್ ಶಾರ್ಪ್ ಹೇರ್‌ಕಟ್‌ನಲ್ಲಿ ಕೊಹ್ಲಿ ಕಾಣಿಸಿಕೊಂಡಿದ್ದಾರೆ.

ಐಪಿಎಲ್ ಇದೇ 22ರಂದು ಆರಂಭವಾಗಲಿದೆ. 36 ವರ್ಷ ವಯಸ್ಸಿನ ಕೊಹ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ದ್ರಾವಿಡ್ ಪ್ರಭಾವ ಗಾಢ: ಸ್ಯಾಮ್ಸನ್

ಜೈಪುರ (ಪಿಟಿಐ): ರಾಹುಲ್ ದ್ರಾವಿಡ್ ಅವರ ನಾಯಕತ್ವ ತಮ್ಮ ವೃತ್ತಿ ಜೀವನದ ಮೇಲೆ ಗಾಢ ಪ್ರಭಾವ ಬೀರಿದೆ ಎಂದು ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಐದನೇ ಬಾರಿಗೆ ಮುನ್ನಡೆಸುತ್ತಿರುವ ಸಂಜು ಸ್ಯಾಮ್ಸನ್ ಹೇಳಿದ್ದಾರೆ.

ಭಾರತ ತಂಡದ ಹೆಡ್ ಕೋಚ್ ಆಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಬಳಿಕ ದ್ರಾವಿಡ್ ಈ ಋತುವಿಗೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ಮರಳಿದ್ದಾರೆ. ದ್ರಾವಿಡ್ ಈ ತಂಡದ ಜೊತೆ ದೀರ್ಘಕಾಲದ ನಂಟು ಹೊಂದಿದ್ದಾರೆ. 2012–13ರಲ್ಲಿ ಅವರು ರಾಜಸ್ಥಾನ ರಾಯಲ್ಸ್ ತಂಡದ ನಾಯಕತ್ವ ವಹಿಸಿದ್ದರು. ಅದೇ ವೇಳೆ ಭಾರತದ ಈ ದಿಗ್ಗಜ ಆಟಗಾರ ಟ್ರಯಲ್ಸ್ ವೇಳೆ ಸ್ಯಾಮ್ಸನ್ ಅವರನ್ನು ಗುರುತಿಸಿ ತಂಡದಲ್ಲಿ ಆಡುವ ಅವಕಾಶ ನೀಡಿದ್ದರು.

ದ್ರಾವಿಡ್ ಅವರು 2014–15ರಲ್ಲಿ ತಂಡದ ರಾಜಸ್ಥಾನ ರಾಯಲ್ಸ್ ನಿರ್ದೇಶಕ ಹಾಗೂ ಮೆಂಟರ್ ಆದರು.

ಯುವ ಪ್ರತಿಭೆಯಾಗಿ ಸೇರ್ಪಡೆಯಾದ ದಿನದಿಂದ ತಂಡಕ್ಕೆ ನಾಯಕನಾಗುವವರೆಗಿನ ತಮ್ಮ ಪಯಣದ ಮೇಲೆ ದ್ರಾವಿಡ್ ಅವರ ಮಾರ್ಗದರ್ಶನ ಸಾಕಷ್ಟು ಪ್ರಭಾವ ಬೀರಿದೆ ಎಂದು ಅವರು ಶುಕ್ರವಾರ ಜಿಯೊ ಹಾಟ್‌ಸ್ಟಾರ್‌ಗೆ ತಿಳಿಸಿದ್ದಾರೆ.

‘ನಾನು ಮೊದಲ ಬಾರಿ ಐಪಿಎಲ್ ಋತು ಆರಂಭವಾಗುವ ಸಂದರ್ಭದಲ್ಲಿ, ಟ್ರಯಲ್ಸ್ ವೇಳೆ ರಾಹುಲ್ ಸರ್ ನನ್ನ ಆಟವನ್ನು ಗುರುತಿಸಿದರು’ ಎಂದರು.

ಜಯದ ಛಲ ಬಿತ್ತಿದ ಐಪಿಎಲ್

‘ಇಂಡಿಯನ್ ಸ್ಪೋರ್ಟ್ಸ್ ಸಮಿಟ್’ನಲ್ಲಿ ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಕ್ರಿಕೆಟಿಗರಲ್ಲಿ ಪ್ರಸ್ತುತ ಪ್ರತಿಷ್ಠಿತ ಟೂರ್ನಿಗಳಲ್ಲಿ ವಿಜಯ ಸಾಧಿಸುವ ಛಲ ಎದ್ದು ಕಾಣುತ್ತಿದೆ. ಇದಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಪ್ರಭಾವವೇ ಕಾರಣ ಎಂದು ಮಾಜಿ ವಿಕೆಟ್‌ಕೀಪರ್ ಬ್ಯಾಟರ್ ದಿನೇಶ್ ಕಾರ್ತಿಕ್ ಅಭಿಪ್ರಾಯಪಟ್ಟರು.

ಶುಕ್ರವಾರ ಪಡುಕೋಣೆ–ದ್ರಾವಿಡ್ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ಆರ್‌ಸಿಬಿ ಇನೋವೇಷನ್ ಲ್ಯಾಬ್ ಆಯೋಜಿಸಿರುವ ‘ಇಂಡಿಯನ್ ಸ್ಪೋರ್ಟ್ಸ್ ಸಮಿಟ್’ನಲ್ಲಿ ಅವರು ಮಾತನಾಡಿದರು.

‘ಭಾರತ ಕ್ರಿಕೆಟ್ ತಂಡವು ಈಗ ಪ್ರತಿಷ್ಠಿತ ಟೂರ್ನಿಗಳಲ್ಲಿ ಸ್ಪರ್ಧಿಸುವುದಷ್ಟೇ ಅಲ್ಲ; ಗೆದ್ದೇ ತೀರಬೇಕು ಎಂಬ ಮನೋಭಾವ ಬೆಳೆಸಿಕೊಂಡಿದೆ. ಅದರ ಫಲವಾಗಿ ಕಳೆದ ಒಂಬತ್ತು ತಿಂಗಳಲ್ಲಿ ಎರಡು ಐಸಿಸಿ ಟ್ರೋಫಿಗಳನ್ನು ಜಯಿಸಿದೆ’ ಎಂದರು.

‘ಐಪಿಎಲ್ ಮತ್ತು ದೇಶಿ ಕ್ರಿಕೆಟ್ ಕ್ಷೇತ್ರವು ಪ್ರತಿಭಾನ್ವಿತ ಕ್ರಿಕೆಟಿಗರನ್ನು ಸಿದ್ಧಗೊಳಿಸುವ ಕಾರ್ಖಾನೆಗಳಾಗಿವೆ. ಇಲ್ಲಿ ಹೊರಹೊಮ್ಮುತ್ತಿರುವ ಪ್ರತಿಭೆಗಳ ಸಂಖ್ಯೆಯನ್ನು ಗಮನಿಸಿದರೆ ಮುಂದಿನ ಕೆಲವು ದಶಕಗಳವರೆಗೆ ಭಾರತದಲ್ಲಿ ಕ್ರಿಕೆಟಿಗರ ಕೊರತೆಯಾಗುವುದಿಲ್ಲ’ ಎಂದು ಕಾರ್ತಿಕ್ ಹೇಳಿದರು.

ತಮ್ಮ ಐಪಿಎಲ್ ಅನುಭವದ ಕುರಿತು ಮಾತನಾಡಿದ ಅವರು, ‘ಟೂರ್ನಿಯಲ್ಲಿ ಆಡಿದ ಮೊದಲ ವರ್ಷದಲ್ಲಿ ನಾನು ಗ್ಲೆನ್ ಮೆಕ್‌ಗ್ರಾ (ಆಸ್ಟ್ರೇಲಿಯಾ ಆಟಗಾರ) ಅವರೊಂದಿಗೆ ಒಡನಾಡುವ ಅವಕಾಶ ನನಗೆ ಸಿಕ್ಕಿತ್ತು. ಅಭ್ಯಾಸ ಮಾಡುವಾಗ ಹೆಚ್ಚು ಕಾಲ ಅವರೊಂದಿಗೆ ಇರುತ್ತಿದ್ದೆ. ಇದರಿಂದಾಗಿ ಅವರನ್ನು ಹೆಚ್ಚು ಅರ್ಥ ಮಾಡಿ ಕೊಳ್ಳಲು ಸಾಧ್ಯವಾಯಿತು. ಇದು ನನ್ನಲ್ಲಿ ಶ್ರೇಷ್ಠ ಆಟ ಗಾರರೊಂದಿಗೆ ಮತ್ತು ಅವರ ವಿರುದ್ಧ ಆಡುವ ಆತ್ಮವಿಶ್ವಾಸವನ್ನು ಬೆಳೆಸಿತು’ ಎಂದರು.

‘ನಾನು ಆರ್‌ಸಿಬಿಗೆ ಕೃತಜ್ಞ. ಏಕೆಂದರೆ ಈ ತಂಡದಲ್ಲಿ ಆಡಿದ್ದರಿಂದ ಅಪಾರ ಅಭಿಮಾನಿಗಳ ಬಳಗವನ್ನು ಹೊಂದಿದ್ದೇನೆ. ಆದರೆ ಅದು ವೃತ್ತಿಜೀವನದ ಒಂದು ಭಾಗವಷ್ಟೇ. ಇಂದಿನ ಯುವಜನತೆಯು ಸಾಮಾಜಿಕ ಜಾಲತಾಣಗಳ ಆಕರ್ಷಣೆಯಿಂದ ಅಂತರ ಕಾಯ್ದುಕೊಳ್ಳಬೇಕು. ಬೆಳವಣಿಗೆಗೆ ಪೂರಕವಾಗಿ ಈ ಜಾಲತಾಣ ಬಳಸುವುದನ್ನು ರೂಢಿಸಿಕೊಳ್ಳಿ’ ಎಂದು ಉದಯೋನ್ಮುಖ ಆಟಗಾರರಿಗೆ ಕಿವಿಮಾತು ಹೇಳಿದರು.

‘ಹ್ಯಾಂಡ್‌ಬುಕ್ ಆಫ್ ಕ್ರಿಕೆಟ್ ಸೈಕಾಲಜಿ’ ಕೃತಿ ಬಿಡುಗಡೆ

ವೈಫಲ್ಯ ಅವಮಾನವಲ್ಲ: ರಾಮನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಫಲ್ಯಗಳನ್ನು ಅವಮಾನವೆಂದು ಬಿಂಬಿಸುವ ಧೋರಣೆಯನ್ನು ಸಮಾಜವು ಬಿಡಬೇಕು ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಡಬ್ಲ್ಯು.ವಿ. ರಾಮನ್ ಅಭಿಪ್ರಾಯಪಟ್ಟರು.

ಕ್ರೀಡಾ ಮನೋವಿಶ್ಲೇಷಕ ಎಂ.ಎನ್. ವಿಶ್ವನಾಥ್ ಮತ್ತು ಮಾಜಿ ರಣಜಿ ಕ್ರಿಕೆಟಿಗ ಕೆ. ಶ್ರೀನಾಥ್ ಅವರು ರಚಿಸಿರುವ ‘ಹ್ಯಾಂಡ್‌ಬುಕ್ ಆಫ್ ಕ್ರಿಕೆಟ್ ಸೈಕಾಲಜಿ’ ಕೃತಿ ಬಿಡುಗಡೆ ಸಮಾರಂಭದಲ್ಲಿ ನಡೆದ ಸಂವಾದದಲ್ಲಿ ಅವರು ಹೇಳಿದರು.

‘ಕೇವಲ ಅಂಕಿ ಸಂಖ್ಯೆಗಳ ಮೂಲಕ ಯಶಸ್ಸನ್ನು ಅಳೆಯಲಾಗದು. ತಂಡದ ಯಶಸ್ಸಿನಲ್ಲಿ ಕೆಲವೊಮ್ಮೆ ಸಣ್ಣ ಕಾಣಿಕೆ ನೀಡಿದವರ ಪಾತ್ರವೂ ದೊಡ್ಡದಿರು-ತ್ತದೆ. ಅಂತಹ ಸಾಧನೆಗಳನ್ನು ಗುರುತಿಸದಿದ್ದರೆ ಅವರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.ಇದನ್ನು ತಪ್ಪಿಸಬೇಕು’ ಎಂದು ಅಭಿಪ್ರಾಯಪಟ್ಟರು.

‘ಇವತ್ತು ಕ್ರಿಕೆಟ್ ಅಗಾಧವಾಗಿ ಬೆಳೆದಿದೆ. ಸಾವಿರಾರು ಮಕ್ಕಳು, ಯುವಕರು ಕ್ರಿಕೆಟ್ ಆಟವನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಯಶಸ್ಸು ಸಾಧಿಸಲೇಬೇಕು ಎಂಬ ಒತ್ತಡ ಅವರ ಮೇಲೆ ಬೀಳುತ್ತಿದೆ. ವೈಫಲ್ಯಗಳನ್ನು ಸಹಿಸುವ ಶಕ್ತಿ ಕುಂಠಿತವಾಗುತ್ತಿವೆ. ಅವರನ್ನು ಮಾನಸಿಕವಾಗಿ ಸಶಕ್ತಗೊಳಿಸಬೇಕು ಎಂಬ ಉದ್ದೇಶದಿಂದ ನಾನು ಮತ್ತು ಶ್ರೀನಾಥ್ ಸೇರಿ ಈ ಪುಸ್ತಕ ಬರೆದಿದ್ದೇವೆ’ ಎಂದು ಲೇಖಕ ಎಂ.ಎನ್. ವಿಶ್ವನಾಥ್ ಹೇಳಿದರು.

ಈ ಸಂದರ್ಭದಲ್ಲಿ ಕೆ. ಶ್ರೀನಾಥ್, ಕ್ರಿಕೆಟ್ ಲೇಖಕ ಆರ್. ಕೌಶಿಕ್, ಮಾಜಿ ಕ್ರಿಕೆಟಿಗರಾದ ರಘುನಾಥ್ ಬಿರಾಲಾ, ಸುಧಾಕರ್ ರಾವ್, ದೊಡ್ಡ ಗಣೇಶ್, ಎಸ್. ಅರವಿಂದ್, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್ ಹಾಜರಿದ್ದರು. ಕ್ರೀಡಾ ಪತ್ರಕರ್ತ ಸತೀಶ್ ವಿಶ್ವನಾಥ್ ಕಾರ್ಯಕ್ರಮ ನಿರ್ವಹಿಸಿದರು

ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ‘ಹ್ಯಾಂಡ್‌ಬುಕ್ ಆಫ್ ಸೈಕಾಲಜಿ’ ಪುಸ್ತಕ ಬಿಡುಗಡೆ ಮಾಡಲಾಯಿತು. (ಎಡದಿಂದ) ಕ್ರಿಕೆಟಿಗ ರಘುನಾಥ್ ಬಿರಾಲಾ, ಕೆ. ಶ್ರೀನಾಥ್ (ಲೇಖಕ), ಸುಧಾಕರ್ ರಾವ್, ದೊಡ್ಡ ಗಣೇಶ್ (ಕ್ರಿಕೆಟಿಗರು), ಎಂ.ಎನ್. ವಿಶ್ವನಾಥ್ (ಲೇಖಕ), ಎಸ್. ಅರವಿಂದ್ (ಕ್ರಿಕೆಟಿಗ), ಶಾವೀರ್ ತಾರಾಪುರ್ (ಮಾಜಿ ಅಂತರರಾಷ್ಟ್ರೀಯ ಅಂಪೈರ್) ಹಾಗೂ ಡಬ್ಲ್ಯು.ವಿ. ರಾಮನ್ (ಕ್ರಿಕೆಟಿಗ)

ಟೆನಿಸ್: ಸೆಮಿಗೆ ಅಲ್ಕರಾಜ್, ಮೆಡ್ವೆಡೆವ್

ಇಂಡಿಯನ್ ವೆಲ್ಸ್ (ಅಮೆರಿಕ), (ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು.

ಗುರುವಾರ ನಡೆದ ಎಂಟರ ಘಟ್ಟದ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಸ್ಪೇನ್ ಆಟಗಾರ 6-3, 7-6 (7/4) ರಿಂದ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ಅವರನ್ನು ಹಿಮ್ಮೆಟ್ಟಿಸಿದರು.

2023 ಮತ್ತು 2024ರಲ್ಲಿ ಪ್ರಶಸ್ತಿ ಗೆದ್ದಿರುವ 21 ವರ್ಷ ವಯಸ್ಸಿನ ಅಲ್ಕರಾಜ್ ಮತ್ತೆ ಚಾಂಪಿಯನ್ ಆದರೆ ಸತತ ಮೂರು ಇಂಡಿಯನ್ ವೆಲ್ಸ್ ಪ್ರಶಸ್ತಿ-ಗಳನ್ನು ಗೆದ್ದ ವಿಶ್ವದ ಮೂರನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು. ಈ ಮೊದಲು ಸ್ವಿಟ್ಜ-ರ್ಲೆಂಡ್‌ನ ರೋಜರ್ ಫೆಡರರ್ (2004–2006) ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ (2014–2016) ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

ಸೆಮಿಫೈನಲ್‌ನಲ್ಲಿ ಅಲ್ಕರಾಜ್‌ಗೆ ಬ್ರಿಟನ್‌ನ ಜ್ಯಾಕ್ ಡ್ರೇಪರ್ ಎದುರಾಳಿಯಾಗಿದ್ದಾರೆ. ಡ್ರೇಪರ್ ಇದೇ ಮೊದಲ ಬಾರಿ ಎಟಿಪಿ 1000ರಲ್ಲಿ ನಾಲ್ಕರ ಘಟ್ಟ ತಲುಪಿದ್ದಾರೆ. 13ನೇ ಶ್ರೇಯಾಂಕದ ಅವರು ಕ್ವಾರ್ಟರ್ ಫೈನಲ್‌ನಲ್ಲಿ 6-4, 7-5ರಿಂದ 11ನೇ ಶ್ರೇಯಾಂಕದ ಬೆನ್ ಶೆಲ್ಟನ್ (ಅಮೆರಿಕ) ಅವರನ್ನು ಸೋಲಿಸಿದರು.

ಕಳೆದ ಎರಡು ಆವೃತ್ತಿಗಳ ರನ್ನರ್ ಅಪ್ ಡೇನಿಯಲ್ ಮೆಡ್ವೆಡೆವ್ (ರಷ್ಯಾ) ಅವರು ಮತ್ತೊಂದು ಪಂದ್ಯದಲ್ಲಿ 6-4, 2-6, 7-6 (9/7) ರಿಂದ 20ನೇ ಶ್ರೇಯಾಂಕದ ಆರ್ಥರ್ ಫಿಲ್ಸ್ (ಫ್ರಾನ್ಸ್) ಅವರನ್ನು ಸೋಲಿಸಿ ಸೆಮಿಫೈನಲ್ ತಲುಪಿದರು.

ತಮಿಳುನಾಡಿನ ಅನಿಕೇತ್‌ಗೆ ಸಿಂಗಲ್ಸ್ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ಅನಿಕೇತ್ ವೆಂಕಟರಾಮನ್ ಅವರು ಇಲ್ಲಿನ ಟೆನಿಸ್ ಅಡ್ವಾಂಟೇಜ್ ಕೋರ್ಟ್‌ನಲ್ಲಿ ನಡೆದ ಎಐಟಿಎ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಅನಿಕೇತ್ 6-1, 1-6, 6-4ರ ಮೂರು ಸೆಟ್‌ಗಳ ಹೋರಾಟದಲ್ಲಿ ಕರ್ನಾಟಕದ ಚಂದನ್ ಶಿವರಾಜ್ ಅವರನ್ನು ಸೋಲಿಸಿದರು. ಟೂರ್ನಿಯು ಒಟ್ಟು ₹1 ಲಕ್ಷ ಬಹುಮಾನ ಮೊತ್ತ ಒಳಗೊಂಡಿತ್ತು. ಚಾಂಪಿಯನ್ ಅನಿಕೇತ್ 20 ಎಐಟಿಎ ಪಾಯಿಂಟ್ಸ್‌ಗಳ ಜೊತೆ ₹12,500 ಗೆದ್ದರೆ, ಚಂದನ್ 15 ಅಂಕಗಳೊಂದಿಗೆ ₹8400 ಗೆದ್ದರು. ಪುರುಷರ ಡಬಲ್ಸ್‌ನಲ್ಲಿ ಕರ್ನಾಟಕದ ರಶೀನ್ ಸ್ಯಾಮ್ಯುಯೆಲ್ ಮತ್ತು ತಮಿಳುನಾಡಿನ ಇರ್ಫಾನ್ ಹುಸೇನ್ ಜೋಡಿಯು ಪ್ರಶಸ್ತಿ ಗೆದ್ದಿತು. ಫೈನಲ್‌ನಲ್ಲಿ ಈ ಜೋಡಿ 6-1,6-2 ರಿಂದ ಪಾರ್ಥ್ ಡಿ ಮತ್ತು ಜೇ ಪವಾರ್ ಅವರನ್ನು ಹಿಮ್ಮೆಟ್ಟಿಸಿತು.

ಕೈದಿಗಳ ಮೇಲೆ ಅತ್ಯಾಚಾರ: ವಿಶ್ವಸಂಸ್ಥೆ ವರದಿಯಲ್ಲಿ ಬಹಿರಂಗ

ಇಸ್ರೇಲ್ ಸೇನೆಯಿಂದ ಲೈಂಗಿಕ ದೌರ್ಜನ್ಯ

ಜಿನೀವಾ (ಎಪಿ): ಇಸ್ರೇಲ್ ಸೇನೆಯು ಹಮಾಸ್ ವಿರುದ್ಧದ ಯುದ್ಧದ ವೇಳೆ ಗಾಜಾದಲ್ಲಿ ‘ಲೈಂಗಿಕ ದೌರ್ಜನ್ಯ ಮತ್ತು ಇತರ ಲಿಂಗ ಆಧಾರಿತ ಹಿಂಸಾಚಾರವನ್ನು ವ್ಯವಸ್ಥಿತವಾಗಿ ನಡೆಸಿದೆ’ ಎಂದು ವಿಶ್ವಸಂಸ್ಥೆ ಬೆಂಬಲಿತ ಮಾನವ ಹಕ್ಕುಗಳ ತಜ್ಞರು ಆರೋಪಿಸಿದ್ದಾರೆ.

ಇಸ್ರೇಲ್–ಹಮಾಸ್ ಯುದ್ಧ ಆರಂಭವಾದ ಬಳಿಕ (2023ರ ಅಕ್ಟೋಬರ್ 7) ಇಸ್ರೇಲ್ ಸೇನೆಯ ಕೃತ್ಯಗಳ ಬಗ್ಗೆ ಬಿಡುಗಡೆಯಾದ ಅತ್ಯಂತ ವಿವರವಾದ ವರದಿಯಲ್ಲಿ ಈ ಆರೋಪ ಕೇಳಿಬಂದಿದೆ. ವಿಶ್ವಸಂಸ್ಥೆ ನೇಮಿಸಿದ ಸ್ವತಂತ್ರ ತಜ್ಞರನ್ನೊಳಗೊಂಡ ಮಾನವ ಹಕ್ಕುಗಳ ಆಯೋಗವು ಸಿದ್ಧಪಡಿಸಿರುವ ವರದಿ ಗುರುವಾರ ಬಿಡುಗಡೆಗೊಂಡಿದೆ.

ಇಸ್ರೇಲ್ ದಾಳಿಯಿಂದ ಗಾಜಾದಲ್ಲಿ ಆಗಿರುವ ವ್ಯಾಪಕ ನಾಶ, ಜನವಸತಿ ಪ್ರದೇಶಗಳಲ್ಲಿ ಭಾರಿ ಸ್ಫೋಟಕಗಳ ಬಳಕೆ ಮತ್ತು ಆಸ್ಪತ್ರೆಗಳು ಹಾಗೂ ಆರೋಗ್ಯ ಸೌಲಭ್ಯಗಳ ಮೇಲಿನ ದಾಳಿಗಳಿಂದ ಆಗಿರುವ ಅನಾಹು-ತಗಳನ್ನು ತಂಡವು ಪರಿಶೀಲಿಸಿದೆ. ‘ಇಸ್ರೇಲ್ ಸೇನೆಯ ಇಂತಹ ಕೃತ್ಯಗಳು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಕಾರಣವಾಯಿತು’ ಎಂದು ವರದಿ ತಿಳಿಸಿದೆ.

ಪ್ಯಾಲೆಸ್ಟೀನ್‌ನ ಮಹಿಳೆಯರು, ಪುರುಷರು, ಬಾಲಕಿಯರು ಮತ್ತು ಬಾಲಕರ ವಿರುದ್ಧ ನಡೆದಿರುವ ಹಲವಾರು ದೌರ್ಜನ್ಯ ಪ್ರಕರಣಗಳನ್ನು ಆಯೋಗವು ದಾಖಲಿಸಿದೆ. ಬಂಧಿತ ಪ್ಯಾಲೆಸ್ಟೀನಿಯರ ಮೇಲೆ ಇಸ್ರೇಲ್ ಭದ್ರತಾ ಪಡೆಗಳು ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ನಡೆಸಿದೆ ಎಂದೂ ಆರೋಪಿಸಿದೆ. ಆದರೆ, ಕೈದಿಗಳ ಮೇಲಿನ ದೌರ್ಜನ್ಯವನ್ನು ಇಸ್ರೇಲ್ ನಿರಾಕರಿಸುತ್ತ-ಲೇ ಬಂದಿದೆ.

‘ಹೆರಿಗೆ ಆಸ್ಪತ್ರೆ, ನವಜಾತ ಶಿಶುಗಳ ಆರೈಕೆ ಕೇಂದ್ರಗಳು ಒಳಗೊಂಡಂತೆ ಸಂತಾನೋತ್ಪತ್ತಿಗೆ ಸಂಬಂಧಿಸಿದ ಆರೋಗ್ಯ ಸೌಲಭ್ಯಗಳನ್ನು ವ್ಯವಸ್ಥಿತವಾ-ಗಿ ನಾಶಪಡಿಸುವ ಮೂಲಕ ಇಸ್ರೇಲ್, ನರಮೇಧದ ಕೃತ್ಯಗಳನ್ನು ನಡೆಸಿದೆ’ ಎಂದು ಆಯೋಗದ ಸದಸ್ಯ ಕ್ರಿಸ್ ಸಿಡೊತಿ ಹೇಳಿದ್ದಾರೆ.

ಗಾಜಾಪಟ್ಟಿಯ ಅಲ್ ಶಿಫಾ ಆಸ್ಪತ್ರೆಯ ಅವಶೇಷಗಳಡಿ ದೊರೆತ ಮೃತದೇಹವನ್ನು ಪ್ಯಾಲೆಸ್ಟೀನ್ ನಾಗರಿಕ ರಕ್ಷಣಾ ತಂಡದ ಸದಸ್ಯರು ಸಾಗಿಸಿದರು –ಎಎಫ್‌ಪಿ ಚಿತ್ರ

ಜನ್ಮದತ್ತ ಪೌರತ್ವಕ್ಕೆ ನಿರ್ಬಂಧ: ಭಾಗಶಃ ಜಾರಿಗೆ ಅನುಮತಿ– ‘ಸುಪ್ರೀಂ’ಗೆ ಮನವಿ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ನೆಲಸಿರುವ ವಲಸಿಗರ ಮಕ್ಕಳಿಗೆ ಜನ್ಮ-ದತ್ತವಾಗಿ ಸಿಗುವ ಪೌರತ್ವ ಹಕ್ಕಿನ ಮೇಲೆ ವಿಧಿಸಿರುವ ನಿರ್ಬಂಧಗಳ ಭಾಗಶಃ ಅನುಷ್ಠಾನಕ್ಕೆ ಅನುಮತಿ ನೀಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಈ ಕುರಿತು ಟ್ರಂಪ್ ಆಡಳಿತವು ಸುಪ್ರೀಂ ಕೋರ್ಟ್‌ಗೆ ಗುರುವಾರ ತುರ್ತು ಮೇಲ್ಮನವಿ ಸಲ್ಲಿಸಿದೆ.

ಟ್ರಂಪ್ ಆಡಳಿತ ಹೊರಡಿಸಿರುವ ಆದೇಶದ ಪ್ರಕಾರ, ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿರುವವರಿಗೆ ಫೆಬ್ರುವರಿ 19ರ ನಂತರ ಜನಿಸುವ ಮಕ್ಕಳಿಗೆ ಜನ್ಮದತ್ತವಾಗಿ ಸಿಗುವ ಪೌರತ್ವದ ಹಕ್ಕನ್ನು ನೀಡಲಾಗುವುದಿಲ್ಲ.

ಕೆನಡಾ ಪ್ರಧಾನಿಯಾಗಿ ಕಾರ್ನಿ ಅಧಿಕಾರ ಸ್ವೀಕಾರ

ಟೊರೊಂಟೊ (ಎ.ಪಿ): ಕೆನಡಾದ ನೂತನ ಪ್ರಧಾನಿಯಾಗಿ ಮಾರ್ಕ್ ಕಾರ್ನಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. ಪ್ರಧಾನಿಯಾಗಿದ್ದ ಜಸ್ಟಿನ್ ಟ್ರುಡೊ ಅವರು ಕಳೆದ ಜನವರಿ ತಿಂಗಳಲ್ಲಿ ರಾಜೀನಾಮೆ ನೀಡಿದ್ದರು. ಆಡಳಿತಾರೂಢ ಲಿಬರಲ್ ಪಾರ್ಟಿ ನಾಯಕರಾಗಿ ಕಾರ್ನಿ ಇತ್ತೀಚೆಗೆ ಆಯ್ಕೆಯಾಗಿದ್ದರು.



ಕಾರ್ನಿ ಈ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷದ ಸಾರಥ್ಯ ವಹಿಸುವುದರ ಜೊತೆಗೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮುಂದಿಟ್ಟಿರುವ ವಾಣಿಜ್ಯ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ದೇಶವನ್ನು ಮುನ್ನಡೆಸಲಿದ್ದಾರೆ.

59 ವರ್ಷ ವಯಸ್ಸಿನ ಕಾರ್ನಿ ಅವರು, ‘ನಾವು ಎಂದಿಗೂ ಅಮೆರಿಕ ಸಂಯುಕ್ತ ಸಂಸ್ಥಾನದ ಭಾಗವಾಗುವುದಿಲ್ಲ. ಅಮೆರಿಕ, ಕೆನಡಾ ಅಲ್ಲ. ಕೆನಡಾ ಎಂದಿಗೂ ಮೂಲಭೂತವಾಗಿ ವಿಭಿನ್ನವಾದ ರಾಷ್ಟ್ರ’ ಎಂದು ಘೋಷಿಸಿದರು.

ಕೆನಡಾವು ಅಮೆರಿಕ ಸಂಯುಕ್ತ ಸಂಸ್ಥಾನದ 51ನೇ ರಾಜ್ಯವಾಗಬೇಕು ಎಂದು ಪ್ರತಿಪಾದಿಸುತ್ತಿರುವ ಡೊನಾಲ್ಡ್ ಟ್ರಂಪ್ ಅವರು, ಕೆನಡಾ ವಿರುದ್ಧ ಆರ್ಥಿಕ ಯುದ್ಧ ಸಾರಿದ್ದಾರೆ. ಇದನ್ನು ಎದುರಿಸಬೇಕಾದ ಸವಾಲು ಲಿಬರಲ್ ಪಾರ್ಟಿಯ ಹೊಸ ನಾಯಕತ್ವದ ಮುಂದಿದೆ.

ನರೇಂದ್ರ ಮೋದಿಗೆ ಧನ್ಯವಾದ ಸಲ್ಲಿಸಿದ ಪುಟಿನ್

ಮಾಸ್ಕೊ (ಪಿಟಿಐ): ಉಕ್ರೇನ್ ವಿರುದ್ಧದ ಯುದ್ಧವನ್ನು ಕೊನೆಗಾಣಿಸಲು ಪ್ರಯತ್ನಿಸು ತ್ತಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಜಾಗತಿಕ ನಾಯಕರಿಗೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಧನ್ಯವಾದ ಸಲ್ಲಿಸಿದ್ದಾರೆ.

ಉಕ್ರೇನ್ ಮುಂದಿಟ್ಟಿರುವ ಕದನ ವಿರಾಮ ಪ್ರಸ್ತಾಪದ ಕುರಿತು ತಮ್ಮ ಮೊದಲ ಪ್ರತಿಕ್ರಿಯೆ ನೀಡುವಾಗ ಅವರು ಈ ಮಾತುಗಳನ್ನಾಡಿದ್ದಾರೆ.

ಕದನ ವಿರಾಮದ ಬಗ್ಗೆ ಚರ್ಚಿಸಲು ರಷ್ಯಾ ಸಿದ್ಧವಾಗಿದೆ. ಆದರೆ, ಅದಕ್ಕೂ ಮುನ್ನ ಕದನ ವಿರಾಮದ ಷರತ್ತುಗ-ಳನ್ನು ಸ್ಪಷ್ಟಪಡಿಸಬೇಕು ಎಂದು ಪುಟಿನ್ ಗುರುವಾರ ಹೇಳಿದ್ದರು.

‘ಕದನ ವಿರಾಮಕ್ಕಾಗಿ ಉಕ್ರೇನ್ ತೋರಿರುವ ಸನ್ನದ್ಧತೆಯನ್ನು ನಾನು ಯಾವ ರೀತಿ ನೋಡುತ್ತೇನೆ ಎಂಬುದನ್ನು ನಿರ್ಣಯಿಸುವ ಮೊದಲು, ಯುದ್ಧವನ್ನು ಕೊನೆ ಗೊಳಿಸಲು ಗಮನ ಹರಿಸಿದ್ದಕ್ಕಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ’ ಎಂದಿದ್ದಾರೆ.

‘ನಮಗೆಲ್ಲರಿಗೂ ಬಗೆಹರಿಸಲು ಸಾಕಷ್ಟು ಸಮಸ್ಯೆಗಳಿವೆ. ಆದರೆ, ಅನೇಕ ದೇಶಗಳ ನಾಯಕರು ಅದರಲ್ಲೂ ಮುಖ್ಯವಾಗಿ ಚೀನಾದ ಅಧ್ಯಕ್ಷರು, ಭಾರತದ ಪ್ರಧಾನಿ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷರು ಈ ಸಮಸ್ಯೆಗೆ (ರಷ್ಯಾ–ಉಕ್ರೇನ್ ಯುದ್ಧ) ಅಂತ್ಯ ಹಾಡಲು ಸಾಕಷ್ಟು ಸಮಯ ಮೀಸಲಿಡುತ್ತಿ-ದ್ದಾರೆ. ನಾವು ಅವರೆಗಲ್ಲರಿಗೂ ಕೃತಜ್ಞರಾಗಿರುತ್ತೇ-ವೆ. ಏಕೆಂದರೆ, ಇದು ಉದಾತ್ತ ಧ್ಯೇಯವೊಂದನ್ನು ಸಾಧಿಸುವ ಗುರಿಯನ್ನು ಹೊಂದಿದೆ’ ಎಂದು ಹೇಳಿದ್ದಾರೆ.

ಯುದ್ಧ ಆರಂಭವಾದ ಬಳಿಕ ಪ್ರಧಾನಿ ಮೋದಿ ಅವರು ರಷ್ಯಾ ಅಧ್ಯಕ್ಷ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜತೆ ಹಲವು ಸಲ ಮಾತುಕತೆ ನಡೆಸಿದ್ದಾರೆ

ವ್ಲಾದಿಮಿರ್ ಪುಟಿನ್ ಹಾಗೂ ನರೇಂದ್ರ ಮೋದಿ

2ನೇ ಕಿರೀಟದ ಮೇಲೆ ಮುಂಬೈ ಕಣ್ಣು

ಫೈನಲ್ ಇಂದು: ಕೌರ್ ಬಳಗಕ್ಕೆ ಬ್ರಂಟ್–ಹೇಯ್ಲಿ ಬಲ ● ಡೆಲ್ಲಿ ತಂಡದಲ್ಲಿ ಬಲಾಢ್ಯ ಬೌಲರ್‌ಗಳು

ಮುಂಬೈ ಇಂಡಿಯನ್ಸ್ ನಾಯಕಿ ಹರ್ಮನ್‌ಪ್ರೀತ್ ಕೌರ್ ಪಿಟಿಐ ಚಿತ್ರ

ಮುಂಬೈ (ಪಿಟಿಐ): ನ್ಯಾಟ್ ಶಿವರ್ ಬ್ರಂಟ್ ಮತ್ತು ಹೇಯ್ಲಿ ಮ್ಯಾಥ್ಯೂಸ್ ಅವರಂತಹ ಉತ್ತಮ ಆಲ್‌ರೌಂಡರ್‌ಗಳ ಬಲ ಇರುವ ಮುಂಬೈ ಇಂಡಿಯನ್ಸ್ ತಂಡವು ಎರಡನೇ ಬಾರಿ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಪಟ್ಟಕ್ಕೇರುವ ಉತ್ಸಾಹದಲ್ಲಿದೆ.

ಶನಿವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ಬಳಗವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೆಣಸಲಿದೆ.

2023ರಲ್ಲಿ ಪ್ರಶಸ್ತಿ ಜಯಿಸಿದ್ದ ಮುಂಬೈ ತಂಡವು ಈಗ ಮತ್ತೊಮ್ಮೆ ಗೆಲುವಿನ ನೆಚ್ಚಿನ ತಂಡವಾಗಿದೆ. ಬ್ರಂಟ್ (493 ರನ್ ಮತ್ತು 9 ವಿಕೆಟ್) ಮತ್ತು ಮ್ಯಾಥ್ಯೂಸ್ (18 ವಿಕೆಟ್ ಮತ್ತು 304 ರನ್) ಅವರು ಟೂರ್ನಿಯುದ್ದಕ್ಕೂ ಮುಂಬೈನ ಬಲವರ್ಧನೆ ಮಾಡಿದ್ದಾರೆ. ಆದರೆ ಮೆಗ್ ಲ್ಯಾನಿಂಗ್ ನಾಯಕತ್ವದ ಡೆಲ್ಲಿ ತಂಡದ ಎದುರು ಜಯಿಸುವುದು ಸುಲಭವೇನಲ್ಲ.

ಏಕೆಂದರೆ; ಈ ಟೂರ್ನಿಯಲ್ಲಿ ನೇರವಾಗಿ ಫೈನಲ್ ಪ್ರವೇಶಿಸಿರುವ ತಂಡ ಡೆಲ್ಲಿ. 2008ರಿಂದ ನಡೆಯುತ್ತಿರುವ ಐಪಿಎಲ್‌ನಲ್ಲಿ ಪುರುಷರ ತಂಡವು ಮತ್ತು ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಡಬ್ಲ್ಯುಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮಹಿಳೆಯರ ತಂಡವು ಪ್ರಶಸ್ತಿ ಗಳಿಸಿಲ್ಲ. ಈಗ ಪ್ರಶಸ್ತಿ ಗೆಲ್ಲುವ ಅವಕಾಶ ಒದಗಿಬಂದಿದೆ. ಆದ್ದರಿಂದ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡಲು ಲ್ಯಾನಿಂಗ್ ಬಳಗ ಸಿದ್ಧಗೊಂಡಿದೆ.

ಡೆಲ್ಲಿ ತಂಡದ ಬೌಲಿಂಗ್ ಬಳಗವು ಅತ್ಯಂತ ಸಮರ್ಥ ಆಟಗಾರ್ತಿಯರನ್ನು ಒಳಗೊಂಡಿದೆ. ಸ್ಪಿನ್ನರ್ ಜೆಸ್ ಜೊನಾಸೆನ್ ಮತ್ತು ಭಾರತ ತಂಡದಲ್ಲಿ ಆಡುವ ಅನುಭವಿ ಮಧ್ಯಮವೇಗಿ ಶಿಖಾ ಪಾಂಡೆ ಅವರು ಈ ಟೂರ್ನಿಯಲ್ಲಿ ತಲಾ 11 ವಿಕೆಟ್ ಗಳಿಸಿದ್ದಾರೆ. ಎಕಾನಮಿ ಕೂಡ ಉತ್ತಮವಾಗಿದೆ.

ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಮುಂಬೈ ತಂಡವು ಡೆಲ್ಲಿಯನ್ನು ಸಾಧಾರಣ ಮೊತ್ತಕ್ಕೆ (9ಕ್ಕೆ123) ನಿಯಂತ್ರಿಸಲಾಯಿತು. ಶಿಖಾ ಮತ್ತು ಜೊನಾಸೆನ್ ಅವರು ಸೇರಿ 4 ವಿಕೆಟ್

ಮಹಿಳಾ ಪ್ರೀಮಿಯರ್ ಲೀಗ್

ಹಂಚಿಕೊಂಡಿದ್ದರು. ಆ ಪಂದ್ಯದಲ್ಲಿ ಡೆಲ್ಲಿ 9 ವಿಕೆಟ್‌ಗಳಿಂದ ಜಯಿಸಿತ್ತು. ಅದೊಂದೇ ಪಂದ್ಯದಲ್ಲಿ ಮುಂಬೈ ತಂಡದ ಬ್ರಂಟ್ ಅವರು ವೈಫಲ್ಯ ಅನುಭವಿಸಿದ್ದರು.

ಉಳಿದಂತೆ ಬ್ರಂಟ್ ಅವರು ಎಲ್ಲ ಪಂದ್ಯಗಳಲ್ಲಿಯೂ ಮೆರೆದಿದ್ದರು. ಬ್ಯಾಟಿಂಗ್ ಅಷ್ಟೇ ಅಲ್ಲ ತಮ್ಮ ಮಧ್ಯಮ ವೇಗದ ಬೌಲಿಂಗ್ ಮೂಲಕವೂ ಮಿಂಚಿದ್ದಾರೆ.

ಹೇಯ್ಲಿ ಮ್ಯಾಥ್ಯೂಸ್ ಕೂಡ ತಮ್ಮ ಆಫ್‌ಬ್ರೇಕ್ ಬೌಲಿಂಗ್ ಮೂಲಕ ಬ್ಯಾಟರ್‌ಗಳನ್ನು ಕಟ್ಟಿ ಹಾಕಿದ್ದರು. ಇವರಿಬ್ಬರೂ ಎಲಿಮಿನೇಟರ್ ಪಂದ್ಯದಲ್ಲಿಯೂ ಮಿಂಚಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್, ಅಮೆಲಿಯಾ ಕೆರ್, ಯಷ್ಟಿಕಾ ಭಾಟಿಯಾ ಮತ್ತು ಮಧ್ಯಮವೇಗಿ ಶಬ್ನೀಂ ಇಸ್ಮಾಯಿಲ್ ಅವರೂ ಉತ್ತಮ ಲಯದಲ್ಲಿದ್ದಾರೆ.



ಡೆಲ್ಲಿ ಕ್ಯಾಪಿಟಲ್ಸ್ ತಂಡ ನಾಯಕಿ ಮೆಗ್ ಲ್ಯಾನಿಂಗ್

ಡಬ್ಲ್ಯುಪಿಎಲ್ 2025: ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ತಂಡ	ಪಂದ್ಯ	ಸರಾಸರಿ	ಒಟ್ಟು ರನ್
ನ್ಯಾಟ್ ಶಿವರ್ ಬ್ರಂಟ್	ಮುಂಬೈ ಇಂಡಿಯನ್ಸ್	9	70.42	493
ಎಲಿಸ್ ಪೆರಿ	ರಾಯಲ್ ಚಾಲೆಂಜರ್ಸ್ ಬೆಂಗಳೂರು	8	93.00	372
ಹೇಯ್ಲಿ ಮ್ಯಾಥ್ಯೂಸ್	ಮುಂಬೈ ಇಂಡಿಯನ್ಸ್	9	33.77	304
ಶಫಾಲಿ ವರ್ಮಾ	ಡೆಲ್ಲಿ ಕ್ಯಾಪಿಟಲ್ಸ್	8	42.85	300
ಮೆಗ್ ಲ್ಯಾನಿಂಗ್	ಡೆಲ್ಲಿ ಕ್ಯಾಪಿಟಲ್ಸ್	8	37.57	263

ಡಬ್ಲ್ಯುಪಿಎಲ್ 2025: ಗರಿಷ್ಠ ವಿಕೆಟ್ ಪಡೆದವರು

ಬೌಲರ್	ತಂಡ	ಪಂದ್ಯ	ಎಕಾನಮಿ	ವಿಕೆಟ್
ಹೇಯ್ಲಿ ಮ್ಯಾಥ್ಯೂಸ್	ಮುಂಬೈ ಇಂಡಿಯನ್ಸ್	9	8.10	17
ಅಮೆಲಿಯಾ ಕೆರ್	ಮುಂಬೈ ಇಂಡಿಯನ್ಸ್	9	7.93	16
ಜಾರ್ಜಿಯಾ ವೇರ್‌ಹ್ಯಾಮ್	ರಾಯಲ್ ಚಾಲೆಂಜರ್ಸ್	8	8.79	12
ಜೆಸ್ ಜೊನಾಸೆನ್	ಡೆಲ್ಲಿ ಕ್ಯಾಪಿಟಲ್ಸ್	7	8.19	11
ಕಶ್ವಿ ಗೌತಮ್	ಗುಜರಾತ್ ಜೈಂಟ್ಸ್	9	6.45	11
ಶಿಖಾ ಪಾಂಡೆ	ಡೆಲ್ಲಿ ಕ್ಯಾಪಿಟಲ್ಸ್	8	7.06	11

ತಂಡಗಳು

ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಅಕ್ಷಿತಾ ಮಹೇಶ್ವರಿ, ಅಮನದೀಪ್ ಕೌರ್, ಅಮನ್ಜೋತ್ ಕೌರ್, ಅಮೆಲಿಯಾ ಕೆರ್, ಕ್ಲಾಯ್ ಟ್ರೈಯಾನ್, ಹೇಯ್ಲಿ ಮ್ಯಾಥ್ಯೂಸ್, ಜಿಂತಿಮಣಿ ಕಲಿತಾ, ಕೀರ್ತನಾ ಬಾಲಕೃಷ್ಣನ್, ನಡೈನ್ ಡಿ ಕ್ಲರ್ಕ್, ನಥಾಲಿ ಶಿವರ್ ಬ್ರಂಟ್, ಪರುಣಿಕಾ ಸಿಸೊಡಿಯಾ, ಸಜೀವನ್ ಸಜನಾ, ಸಂಸ್ಕೃತಿ ಗುಪ್ತಾ, ಜಿ. ಕಮಲಿನಿ (ವಿಕೆಟ್‌ಕೀಪರ್), ಯಷ್ಟಿಕಾ ಭಾಟಿಯಾ (ವಿಕೆಟ್‌ಕೀಪರ್), ಸೈಕಾ ಇಶಾಕ್, ಶಬ್ನಿಂ ಇಸ್ಮಾಯಿಲ್.

ಡೆಲ್ಲಿ ಕ್ಯಾಪಿಟಲ್ಸ್: ಮೆಗ್ ಲ್ಯಾನಿಂಗ್ (ನಾಯಕಿ), ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಸ್ನೇಹ ದೀಪ್ತಿ, ಅಲೈಸ್ ಕ್ಯಾಪ್ಸಿ, ಅನಾಬೆಲ್ ಸದರ್ಲೆಂಡ್, ಅರುಂಧತಿ ರೆಡ್ಡಿ, ಜೆಸ್ ಜೊನಾಸೆನ್, ಮರಿಝಾನ್ ಕಾಪ್, ಮಿನ್ನು ಮಣಿ, ಎನ್. ಚಾರಿಣಿ, ನಿಕಿ ಪ್ರಸಾದ್, ರಾಧಾ ಯಾದವ್, ಶಿಖಾ ಪಾಂಡೆ, ನಂದಿನಿ ಕಶ್ಯಪ್ (ವಿಕೆಟ್‌ಕೀಪರ್), ತಾನಿಯಾ ಭಾಟಿಯಾ (ವಿಕೆಟ್‌ಕೀಪರ್), ಸಾರಾ ಬ್ರೈಸ್ (ವಿಕೆಟ್‌ಕೀಪರ್), ತಿತಾಸ್ ಸಾಧು.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಜಿಯೊ ಹಾಟ್‌ಸ್ಟಾರ್

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಭಾರತದ ಸವಾಲು ಅಂತ್ಯ

ಎಂಟರ ಘಟ್ಟದಲ್ಲಿ ಸೋತ ಸೇನ್

ಭಾರತದ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ಎದುರಾಳಿಯೆದುರು ಶುಕ್ರವಾರ ಸೋಲನುಭವಿಸಿದರು. ಮಹಿಳೆಯರ ಡಬಲ್ಸ್ ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಕೂಡ ಎಂಟರ ಘಟ್ಟದ ಪಂದ್ಯದಲ್ಲಿ ಚೀನಾ ಜೋಡಿಯ ಎದುರು ಸೋತು ಹೊರಬಿತ್ತು.

ಇದರೊಂದಿಗೆ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದ ಲ್ಲಿರುವ ಸೇನ್ ಅವರು ಆರನೇ ಕ್ರಮಾಂ ಕದ ಲಿ ಶಿ ಫೆಂಗ್ ಅವರಿಗೆ ನೇರ ಗೇಮ್‌ಗಳಿಂದ ಸೋತರು. 2022ರಲ್ಲಿ ಇದೇ ಟೂರ್ನಿಯ ಫೈನಲ್ ಮತ್ತು 2024ರಲ್ಲಿ ಸೆಮಿಫೈನಲ್ ತಲುಪಿದ್ದ ಲಕ್ಷ್ಯ 45 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 10–21, 16–21 ರಲ್ಲಿ ಮಣಿದರು.

ಈ ಪಂದ್ಯದ ನಂತರ ಟ್ರೀಸಾ-ಗಾಯತ್ರಿ ಜೋಡಿ 14–21, 10–21 ರಲ್ಲಿ ಎರಡನೇ ಶ್ರೇಯಾಂಕ ಪಡೆದ ಲಿಯು ಶೆಂಗ್‌ಶು–ತಾನ್ ನಿಂಗ್ ಜೋಡಿಯೆದುರು 14–21, 10–21ರಲ್ಲಿ ಸೋಲನ್ನು ಕಾಣಬೇಕಾಯಿತು.

ಭಾರತದ ಆಟಗಾರ್ತಿಯರು ಉತ್ತಮ ಆರಂಭ ಮಾಡುವಂತೆ ಕಂಡಿತ್ತು. ಆದರೆ ಸ್ವಲ್ಪ ನಿಧಾನವಾಗಿ ಕುದುರಿಕೊಂಡ ಚೀನಾ ಆಟಗಾರ್ತಿಯರನ್ನು ನಂತರ ತಡೆಯುವುದು ಭಾರತದ ಆಟಗಾರ್ತಿಯರಿಗೆ ಕಷ್ಟವಾಯಿತು. ಲಿಯು– ನಿಂಗ್ ಜೋಡಿ ಎಲ್ಲ ಸವಾಲುಗಳನ್ನು ಮೀರಿನಿಂತಿತು.

ಫೆಂಗ್‌ಮೇಲುಗೈ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ವಲ್ಪದರಲ್ಲೇ ಪದಕ ಕಳೆದುಕೊಂಡಿದ್ದ ಸೇನ್ ಅವರಿಗೆ ಲಿ ಅವರು ಪರಿಚಿತ ಎದುರಾಳಿಯೇ. 2018ರ ಜೂನಿಯರ್ ಮಟ್ಟದಿಂದಲೇ ಪರಸ್ಪರ ಎದುರಾಗಿದ್ದವರು. ಥಾಮಸ್ ಕಪ್ ಸೇರಿದಂತೆ ಕೊನೆಯ ಎರಡು ಮುಖಾಮುಖಿಗಳಲ್ಲಿ ಭಾರತದ ಆಟಗಾರ, ಚೀನಾ ಎದುರಾಳಿಯನ್ನು ಸೋಲಿಸಿದ್ದರು.

ಶುಕ್ರವಾರದ ಪಂದ್ಯದಲ್ಲಿ ಸೇನ್ ಆರಂಭದಿಂದಲೇ ಪರದಾಡಿದರು. ಇನ್ನೊಂದೆಡೆ ಶಾಂತಚಿತ್ತದಿಂದ, ರಿಸ್ಕ್ ಗಳಿಗೆ ಕೈಹಾಕದೇ ಆಡಿದ ಫೆಂಗ್ ಮೇಲುಗೈ ಸಾಧಿಸಿ 17 ನಿಮಿಷಗಳಲ್ಲಿ ಮೊದಲ ಗೇಮ್ ಗೆದ್ದರು. ಪ್ರಬಲ ಸ್ಮ್ಯಾಶ್‌ಗಳ ಸಹಾಯದಿಂದ ಅವರು 9–4 ಹಾಗೂ ನಂತರ 11–4ರಲ್ಲಿ ಮುನ್ನಡೆ ಸಾಧಿಸಿದರು. ಸೇನ್ ಸ್ವಲ್ಪಮಟ್ಟಿಗೆ ಚೇತರಿಸಿ ಹಿನ್ನಡೆಯನ್ನು 7–12ಕ್ಕೆ ಇಳಿಸಿದರು. ಆದರೆ ಫೆಂಗ್ ವೇಗದ ಆಟದ ಜೊತೆಗೆ ತಂತ್ರಗಾರಿಕೆ ಬೆರೆಸಿ ಗೇಮ್‌ಅನ್ನು 21–10ರಲ್ಲಿ ಪಡೆದರು.

ಫೆಂಗ್ ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ, ಸ್ವದೇಶದ ಶಿ ಯು ಕಿ ಅವರನ್ನು ಎದುರಿಸಲಿದ್ದಾರೆ. ಶಿ ಯು ಇನ್ನೊಂದು ಕ್ವಾರ್ಟರ್‌ಫೈನಲ್‌ಲ್ಲಿ ಸಿಂಗಪುರದ ಲೋಹ್ ಕೀನ್ ಯೆವ್ ಅವರನ್ನು 21-18, 21-16 ರಿಂದ ಸೋಲಿಸಿದರು. ಭಾರತದ ಇತರ ಬ್ಯಾಡ್ಮಿಂಟನ್ ಪಟುಗಳು ಎರಡನೇ ಸುತ್ತಿನಲ್ಲೇ ಸೋಲನುಭವಿಸಿದ್ದರು.

ಸಂಕ್ಷಿಪ್ತ ಸುದ್ದಿ

ವಯೋಮಿತಿ ವಂಚನೆ ತಡೆ: ಕಠಿಣ ಕ್ರಮಕ್ಕೆ ಸಿದ್ಧತೆ

ನವದೆಹಲಿ (ಪಿಟಿಐ): ಕ್ರೀಡಾಕ್ಷೇತ್ರವನ್ನು ದೀರ್ಘಕಾಲದಿಂದ ಕಾಡುತ್ತಿರುವ ವಯೋಮಿತಿ ವಂಚನೆ ಪಿಡುಗು ತಡೆಗಟ್ಟಲು ಕೇಂದ್ರ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ. ಕ್ರೀಡಾನೀತಿಯಲ್ಲಿ ಬದಲಾವಣೆ ತರುತ್ತಿರುವ ಕ್ರೀಡಾ ಮತ್ತು ಯುವಜನ ವ್ಯವಹಾರಗಳ ಸಚಿವಾಲಯವು ಕ್ರೀಡೆಯಲ್ಲಿ ವಯೋಮಿತಿ ವಂಚನೆ ವಿರುದ್ಧ ರಾಷ್ಟ್ರೀಯ ಸಂಹಿತೆಯನ್ನು ಪರಿಷ್ಕರಿಸಲು ಮುಂದಾಗಿದೆ.

ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕ್ರೀಡಾ ಸಚಿವಾಲಯವು ಗುರುವಾರ ತನ್ನ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದೆ. ಕ್ರೀಡಾ ಪಟುಗಳು ವಯಸ್ಸು ಮರೆಮಾಚಿದ್ದು ದೃಢಪಟ್ಟರೆ ಮೊದಲ ಉಲ್ಲಂಘನೆಗೆ ಎಲ್ಲ ಮಾದರಿಯ ಸ್ಪರ್ಧೆಗಳಿಗೆ ಎರಡು ವರ್ಷಗಳ ನಿಷೇಧ ಹೇರಲಾಗುವುದು. ಎರಡನೇ ಬಾರಿ ಉಲ್ಲಂಘಿಸಿದರೆ ಆಜೀವ ನಿಷೇಧದ ಜೊತೆಗೆ ಎಫ್‌ಐಆರ್ ದಾಖಲಿಸುವ ಕ್ರಮಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ತರಬೇತುದಾರರು ಮತ್ತು ಸಿಬ್ಬಂದಿ ಸಹ ವಂಚನೆ ಎಸಗಿದಲ್ಲಿ ಕಠಿಣ ಶಿಕ್ಷೆ ಎದುರಿಸಬೇಕಾಗುತ್ತದೆ.

ಯುನೈಟೆಡ್‌ಗೆ ಭರ್ಜರಿ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡ 6–0 ಗೋಲುಗಳಿಂದ ಎ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಯಂಗ್ ಚಾಲೆಂಜರ್ಸ್ ಎಫ್‌ಸಿ ವಿರುದ್ಧ ಭರ್ಜರಿ ಗೆಲುವು ಪಡೆಯಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ಕೆ. ಲಾಲ್ರಿನ್‌ಫೆಲಾ, ಲೊಂಡೂಪ್ ಲೆಪ್ಕಾ ಜೇರ್ ಹರಿ ಬರ್ಮನ್, ರಿತಿಕ್ ಸಿಂಗ್ (55ನೇ ನಿ.), ಜೆ.ಪಿ.ನೀರಜ್ (59ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಜವಾಹರ್ ಯುನಿ ಯನ್ ಎಫ್‌ಸಿ 1–1 ಗೋಲಿನಿಂದ ಡಿವೈಇಎಸ್ ಎಫ್‌ಸಿ ತಂಡ ವಿರುದ್ಧ ಡ್ರಾ ಸಾಧಿಸಿತು.

ಐಎಂಎಲ್: ಫೈನಲ್‌ಗೆ ವಿಂಡೀಸ್ ಮಾಸ್ಟರ್ಸ್

ರಾಯಪುರ: ಟಿನೊ ಬೆಸ್ಟ್ (27ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ವೆಸ್ಟ್ ಇಂಡೀಸ್ ಮಾಸ್ಟರ್ಸ್ ತಂಡವು ಶುಕ್ರವಾರ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್‌ನ ರೋಚಕ ಸೆಮಿಫೈನಲ್‌ನಲ್ಲಿ 6 ರನ್‌ಗಳಿಂದ ಶ್ರೀಲಂಕಾ ಮಾಸ್ಟರ್ಸ್ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಭಾನುವಾರ ನಡೆಯುವ ಚೊಚ್ಚಲ ಟೂರ್ನಿಯ ಫೈನಲ್‌ನಲ್ಲಿ ವಿಂಡೀಸ್ ತಂಡವು ಸಚಿನ್ ತೆಂಡೂಲ್ಕರ್ ನಾಯಕತ್ವದ ಇಂಡಿಯಾ ಮಾಸ್ಟರ್ಸ್ ತಂಡವನ್ನು ಎದುರಿಸಲಿದೆ. ಗುರುವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಇಂಡಿಯಾ ತಂಡವು 94 ರನ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿತ್ತು.

ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್‌ಇಂಡೀಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗೆ 179 ರನ್ ಗಳಿಸಿತ್ತು. ಗುರಿಯನ್ನು ಬೆನ್ನಟ್ಟಿದ ಶ್ರೀಲಂಕಾ ತಂಡವು 9 ವಿಕೆಟ್‌ಗೆ 173 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಹಾಕಿ ವಿಶ್ವಕಪ್ ವಿಜಯ ಅವಿಸ್ಮರಣೀಯ: ಅಜಿತ್ ಪಾಲ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವಕಪ್ ಜಯಿಸಿದ ಸಾಧನೆಗೆ ಈಗ 50 ವರ್ಷ ತುಂಬಿದೆ. ಈ ಸುವರ್ಣ ಸಂಭ್ರಮವನ್ನು ನೋಡಲು ನಾವು ಬದುಕಿದ್ದೇವೆ. ಇದು ಆ ದೇವರ ಕೃಪೆ’–

1975ರಲ್ಲಿ ಹಾಕಿ ವಿಶ್ವಕಪ್ ಜಯಿಸಿದ್ದ ಭಾರತ ತಂಡದ ನಾಯಕ ಅಜಿತ್ ಪಾಲ್ ಸಿಂಗ್ ಅವರ ನುಡಿಗಳಿವು. ಅವರ ನಾಯಕತ್ವದಲ್ಲಿ ಭಾರತವು ಮೊದಲ ಬಾರಿಗೆ ವಿಶ್ವಕಪ್ ವಿಜಯ ಸಾಧಿಸಿದ ಆ ದಿನಕ್ಕೆ ಶನಿವಾರ 50 ವರ್ಷ ತುಂಬಲಿದೆ.

‘ಹಾಕಿ ಕ್ರೀಡೆಯಲ್ಲಿ ನಮ್ಮದು ಅಗ್ರಮಾನ್ಯ ತಂಡವಾಗಿತ್ತು. ಕಟ್ಟಾ ಎದುರಾಳಿಯಾಗಿದ್ದ ಪಾಕಿಸ್ತಾನವನ್ನು ಸೋಲಿಸುವುದು ನಮ್ಮ ಗುರಿಯಾಗಿತ್ತು. ಫೈನಲ್‌ನಲ್ಲಿ ಅದನ್ನು ಸಾಧಿಸಿದೆವು. ಭಾರತಮತ್ತು ಪಾಕ್ ನಡುವಣ ಪಂದ್ಯವೆಂದರೆ ಕಠಿಣ ಪೈಪೋಟಿ ತಾರಕಕ್ಕೇರುವುದು ಸಹಜ. ಆ ಫೈನಲ್‌ನಲ್ಲಿಯೂ ಅಂತಹ ಒತ್ತಡ, ಬಿಸಿ, ವಾಗ್ವಾದಗಳೆಲ್ಲವೂ ಇದ್ದವು. ಅದೊಂದು ಐತಿಹಾಸಿಕ ಪಂದ್ಯ’ ಎಂದು ಸಿಂಗ್ ಸ್ಮರಿಸಿದರು.

ಆ ಪಂದ್ಯದಲ್ಲಿ ಕರ್ನಾಟಕದ ಇಬ್ಬರು ಹಾಕಿ ಆಟಗಾರರೂ ಆಡಿದ್ದರು. ಕೊಡಗಿನವರಾದ ಬಿ.ಪಿ. ಗೋವಿಂದ ಮತ್ತು ಪಿ.ಇ. ಕಾಳಯ್ಯ ಅವರು ತಂಡವನ್ನು ಪ್ರತಿನಿಧಿಸಿದ್ದರು.

ಬಿ.ಪಿ. ಗೋವಿಂದ

‘ಆ ಟೂರ್ನಿಯಲ್ಲಿ ನಮ್ಮ ಅಭಿಯಾನವು ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಸೋಲಿನೊಂದಿಗೆ ಆರಂಭವಾಗಿತ್ತು. ನಂತರದ ಪಂದ್ಯಗಳಲ್ಲಿ ಪುಟಿದೆದ್ದು ಫೈನಲ್ ತಲುಪಿದೆವು. ಪಾಕ್ ಎದುರು ಜಯಿಸಿದೆವು. ಭಾರತಕ್ಕೆ ಮರಳಿದಾಗ ಒಂದು ವಿಚಿತ್ರ ಸಂಗತಿ ನಡೆಯಿತು. ನಮ್ಮನ್ನು ಚೆನ್ನೈಗೆ ಕರೆಸಿಕೊಳ್ಳಲಾಯಿತು. ನಂತರ ಅಲ್ಲಿಂದ ದೆಹಲಿಗೆ ವಿಮಾನ ಮೂಲಕ ಕಳುಹಿಸಲಾಯಿತು. ಆ ದಿನಗಳಲ್ಲಿ ವಿಮಾನ ನಿಲ್ದಾಣಗಳಲ್ಲಿ ಹೆಚ್ಚು ಭದ್ರತೆ ಇರುತ್ತಿರಲಿಲ್ಲ. ಪಾಲಂ ವಿಮಾನ ನಿಲ್ದಾಣದಲ್ಲಿ ನಮ್ಮ ವಿಮಾನದತ್ತಲೇ ಬಂದ ಅಭಿಮಾನಿಗಳು ಎಲ್ಲ ಆಟಗಾರರನ್ನು ಎತ್ತಿ ಮೆರವಣಿಗೆ ಹೊರಟರು. ನಿಲ್ಧಾಣದಿಂದ ಹೊರ ಬಂದ ನಂತರ ಮತ್ತೆ ಎಲ್ಲ ಆಟಗಾರರೂ ಜೊತೆಗೂಡಿದೆವು. ಅದೊಂದು ಅವಿಸ್ಮರಣೀಯ ಕ್ಷಣ’ 1973 ರಿಂದ 76ರ ಅವಧಿಯಲ್ಲಿದ್ದ ತಂಡವು ಶ್ರೇಷ್ಠವಾಗಿತ್ತು’ ಎಂದು ಬಿ.ಪಿ. ಗೋವಿಂದ ನೆನಪಿಸಿಕೊಳ್ಳುತ್ತಾರೆ.

‘ಬಲ್‌ಬೀರ್ ಸಿಂಗ್ ನಮ್ಮ ಮ್ಯಾನೇಜರ್ ಆಗಿದ್ದರು. ಟೂರ್ನಿಗೂ ಮುನ್ನ 3 ತಿಂಗಳು ಚಂಡೀಗಡದಲ್ಲಿ ತರಬೇತಿ ಶಿಬಿರ ನಡೆದ್‌ತು. ಅವರು ನಮ್ಮನ್ನೆಲ್ಲ ಬಹಳಚೆನ್ನಾಗಿ ನೋಡಿಕೊಂಡಿದ್ದರು. ಅಜಿತ್ ಬಹಳ ಉತ್ತಮವಾದ ನಾಯಕ. ಆ ದಿನ ನಾವು ಅಮೋಘ ಸಾಧನೆ ಮಾಡಿದೆವು’ ಎಂದು ಕಾಳಯ್ಯ ಸಂತಸ ವ್ಯಕ್ತಪಡಿಸಿದರು.

— ಇವರ ಮೂಲಕ ಒಂದು ಉಪಕ್ರಮ —

Horlicks Women's PLUS & Apollo DIAGNOSTICS®

ಆಗಾಗ್ಗೆ ಬೆನ್ನಿನಲ್ಲಿ ಅಸಹನೀಯ ಎನಿಸುತ್ತದೆಯೇ?

ದುರ್ಬಲ ಮೂಳೆಗಳಾಗಿರಬಹುದು.

ಪಡೆಯಿರಿ ವಿಟಮಿನ್ ಡಿ ಪರೀಕ್ಷೆ

~~₹1850~~ ಕೇವಲ ₹199 ನಲ್ಲಿ

ಯಾವುದೇ ಅಪೊಲೊ ಡಯಾಗ್ನೋಸ್ಟಿಕ್ಸ್ ಪೇಶೆಂಟ್ ಕೇರ್ ಸೆಂಟರ್‌ಗೆ ಹೋಗಿ

ಅಪೊಲೊ 24|7 ನಲ್ಲಿ ನಿಮ್ಮ ಪರೀಕ್ಷೆಯನ್ನು ಬುಕ್ ಮಾಡಲು ಸ್ಕ್ಯಾನ್ ಮಾಡಿ

ಹೆಚ್ಚಿನ ವಿವರಗಳಿಗಾಗಿ 040 4444 2424 ಅನ್ನು ಡಯಲ್ ಮಾಡಿ

Creative Visualization. Terms and Conditions Apply. New Packaging Design as compared to the old pack. ^Garg R et al. Int J Reprod Contracept Obstet Gynecol. 2018 Jun;7 (6):2222-2225. Applicable for women over age 30. Refer to pack for details. *Applicable for walk-in tests at all Apollo Diagnostic Centers. Additional ₹50 to be charged for home sample collections. Price may vary across cities. Offer valid from 1st March 2025 to 30th April 2025.